ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 5
ಸಂಚಿಕೆ 3
ಜುಲೈ - ಸೆಪ್ಟೆಂಬರ್ 1976

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 5 No. 3, July–September 1976

Chief Editor : Dr. G. S. Sivarudrappa

ವಾರ್ಷಿಕ ಚಂದಾ : ರೂ. 8–00
ರೂ. 5–00 (ವಿದ್ಯಾರ್ಥಿಗಳಿಗೆ)

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಕರು :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560056

ಪರಿವಿಡಿ

ಮಂಥನ

ಬೆಟ್ಟಕ್ಕೆ ಕಲ್ಲು

ಜಯಸುದರ್ಶನ

ಚುರುಕುಗಣ್ಣಿನ ಬಾಲ್ಯ
ದೂರ ಬೆಟ್ಟವ ಕಾಣುತ್ತದೆ
ಕಂಡದ್ದೆ ಸಾಕು, ಸುಮ್ಮನಿರುತ್ತದೆ.

ಯಾಕೆಂದರೆ ಕಣ್ತೆರೆದಾಗ
ಆಟಕ್ಕೆ ಕಾದು ಕುಳಿತಿರುವ
ಹಗಲು, ಮನೆ ಮಂದಿ, ಗೆಳೆತನ,
ಮಿಕ್ಕವರು, ನಾಯಿ ಬೆಕ್ಕು.

ಉಂಡು ದಣಿದಾಗ ನಿದ್ದೆಗೊದಗುವ
ಕತ್ತಲು, ಪಕ್ಕಕ್ಕೆ ಚಾಚು ತಪ್ಪದ
ತಾಯಿ, ಕನಸಿನಲ್ಲಿ ಎತ್ತೋ ಜಾರಿ
ಹೋಗದ ಹಾಗೆ ಕೈಗವಳ ಮೊಲೆ ಹಿಡಿತ.
(ಮೈಯಲಿ ಅವಳ ಹಾಲಿನ ಚಲನಚರಿತ.)

ಪಶು ಪಕ್ಷಿ ಹಸಿರು ಚಡ್ಡಿ ಲಂಗ
ಸೀರೆ ಚರಂಡಿ ದೋಣಿ
ಆಕಾಶ ಕಡಲು ತಾರೆ ಕೂದಲು
ಬೇಸರ ಆಗಾಗ್ಗೆ ದಂಡಪಾಣಿ.

ನೋಡನೋಡುತ್ತ ಮಿಕ್ಕ
ಹೆಂಗಸರು ತಾಯಿಗಿಂತ ಬೇರೆ,
('ವಾರೆ ಬೈತಲೆಯ ನೀನು ಯಾರೆ ?')
ಆಗ ಹುಡುಗನಿಗೆ ಅಂಗಾಂಗದ ಜೋಮು
ಕಳೆದು, ಬೆಟ್ಟ ಹತ್ತಿರ ಸರಿದು,
ನುಣ್ಣಗೆ ಕಣ್ಣು ಮುಚ್ಚುತ್ತದೆ.

ಎಳೆಗಣ್ಣಿಗಾಗ ಕಂಡದ್ದೆಲ್ಲ ಹೊಸತು
ಬಲಿತವನಿಗೀಗ ಕಂಡಕಂಡಲ್ಲಿ
ಹಳೇ ಹಸಿವು ಹೂತು, ತೋಳಿಗೆ
ಸಿಕ್ಕಷ್ಟಕ್ಕೇ ಜೀವ ಜೋತು,
ಬೆಟ್ಟಕ್ಕೆ ಕಲ್ಲು ಹೊತ್ತು
ಅಂತೂ ಇಂತೂ ಪ್ರಬುದ್ಧನಾದೆ.

ದಣಿವು ಅಡಗಿದ ಬಳಿಕ ಬೆಟ್ಟದ
ಬಿಸಿಲುಗುದುರೆ ಅಲ್ಲಿರಲಿಲ್ಲ.
ಕಸುವುಡುಗಿ ಹೊತ್ತಕಲ್ಲ
ಮಣ್ಣಲ್ಲಿ ಹೂತು, ನಾ ತೇಲಿದೆ.
ನನ್ನಂತೆ ತೇಲುತ್ತಿದ್ದವರ ಕೂಡ
ಕೈಕಾಲು ಬಡಿದು ವಯಸ್ಕನಾದೆ.

ಬೆಟ್ಟಕ್ಕೆ ಕಲ್ಲು ಹೊತ್ತವರು
ಕಲ್ಲಿಗಾಗಿ ಬೆಟ್ಟವನೆಂದೋ
ನೆಲಸಮ ಮಾಡಿದ್ದರು,
ಕೆಲ ಜೊಳ್ಳುಗಳು ಕಲ್ಲು
ಬಿತ್ತಿ ಮಣ್ಣಾಗಿಹೋದರು,
ಅನೇಕರು ಹಣ್ಣಾಗಿ ನೆಲಕ್ಕೆ
ಬೀಜ ಹೊತ್ತಿದ್ದರು.

ಬೆಟ್ಟ ಹಿಂದೆ ಬಿಟ್ಟುಹೋದ
ತೊಟ್ಟಿದ್ದಂಥ ನೆರಳಲ್ಲಿ
ಇಟ್ಟ ತೂಗು ನಿಚ್ಚಣಿಕೆಗೊಂದು
ಟೊಳ್ಳು ಮೆಟ್ಟಿಲಾಗಿ,
ನುಗ್ಗಿ ಲಗ್ಗೆಹಾಕಿದ ಹಗಲಿರುಳುಗಳ
ಬೆರಳ ಸಂದಿಗಳಲ್ಲಿ ಇಷ್ಟಿಷ್ಟೆ ಬಿಟ್ಟುಕೊಟ್ಟು,
ಸ್ಥಳ ಭದ್ರ ಪಡಿಸಿಕೊಂಡೆ.

ಸಾಹಿತ್ಯ ಮತ್ತು ಧೋರಣೆ

ಬರಗೂರು ರಾಮಚಂದ್ರಪ್ಪ

ಸಾಹಿತ್ಯ ಬದುಕಿಗೆ ಸಂಬಂಧಿಸಿರಬೇಕು, ಬದುಕೇ ಸಾಹಿತ್ಯದಲ್ಲಿ ಅಭಿವ್ಯಕ್ತ ವಾಗಬೇಕು – ಎಂದಾಗ ಬಹುಶಃ ಯಾರೂ ವಿರೋಧಿಸುವುದಿಲ್ಲ. ಯಾಕೆಂದರೆ ಬದುಕಿನ ಕೆಲವು ಕ್ಷಣಗಳಿಗೆ ಕಟ್ಟು ಹಾಕಿಟ್ಟರೂ ಈ ಅಗತ್ಯವನ್ನು ಪೂರೈಸಿದಂತಾ ಯಿತು. ಜೊತೆಗೆ ಬದುಕನ್ನು ಕುರಿತಿರಬೇಕು ಎಂದಾಗ ಅದು ಹೀಗೇ ಇರಬೇಕು ಎಂದು ನಿರ್ದಿಷ್ಟವಾಗಿ ಹೇಳಿದಂತೇನೂ ಆಗಲಿಲ್ಲ. ಬದುಕು ಎಂದಾಗ ಇಲ್ಲಿರುವ ಎಲ್ಲವೂ ಸೇರುತ್ತದೆ. ಹೆಣ್ಣಿನ ವಾಸನೆಯೊಡೆಯುವ ಸಾಹಿತ್ಯಸೃಷ್ಟಿ ಕೆಲವರಿಗೆ ಜೀವನೋತ್ಸಾಹದ ಪ್ರತೀಕವಾಗಬಹುದು ; ಸಾಂಸಾರಿಕ ಸ್ಥಿತಿಗತಿ, ಸಾವು, ನೋವು ಗಳಿಗೆ ಮಿಡಿದದ್ದೂ ಬದುಕಿಗೆ ಸಂಬಂಧಿಸಿದ ಸಾಹಿತ್ಯವೇ. ಜೀವನದ ಬಗ್ಗೆ ಹಳತಾದ್ದನ್ನೋ ಕೊಳೆತದ್ದನ್ನೊ ಹೊಸಭಾಷೆ ಬಂಧಗಳಲ್ಲಿ, ವೈಚಾರಿಕತೆಯ 'ಉಪಾಯ'ದಲ್ಲಿ ಗಂಭೀರವಾಗಿ ಚರ್ಚಿಸುವುದೂ ಬದುಕನ್ನು ಕುರಿತ ಉತ್ತಮ ಸಾಹಿತ್ಯವೆಂದು ಕರೆಸಿಕೊಳ್ಳಲು ಸಾಧ್ಯ. ಅಂದರೆ ಇದೆಲ್ಲ ಬದುಕಿಗೆ ನಿಷ್ಠವಾದ ಸಾಹಿತ್ಯವೆಂಬ ತಲೆಬರಹದ ಕೆಳಗೆ ಬರುತ್ತದೆ. ಇಲ್ಲಿ ಮುಖ್ಯವಾಗುವುದು ಎರಡು ಅಂಶಗಳು :

ಒಂದು : ಬದುಕು – ಹೇಗಾದರೂ ಸರಿ – ಸಾಹಿತ್ಯದಲ್ಲಿ ಕಾಣಸಿಗುವುದು.

ಎರಡು : ಕಲಾತ್ಮಕವಾಗಿ ಪರಿಣಾಮ ಉಂಟುಮಾಡುವುದು.

ಹೀಗಾಗುವುದರಿಂದ ನಾವು ಬದುಕಿಗೆ ಸಂಬಂಧಿಸಿದ ಯಾವುದನ್ನಾದರೂ ಸರಿ, ಆ ಒಂದು ಕಾರಣಕ್ಕಾಗಿ ಮುಖ್ಯವೆಂದು ಪರಿಗಣಿಸುತ್ತೇವೆ. ಇನ್ನು ಕಲಾತ್ಮಕವಾಗಿ ಪರಿಣಾಮಕಾರಿ ಮಟ್ಟ ಮುಟ್ಟಿದ್ದರೆ, ಸೂಕ್ಷ್ಮಾಭಿವ್ಯಕ್ತಿ ಇದ್ದರೆ, ಅಂಥ ಕೃತಿ ಶ್ರೇಷ್ಠತೆಯ ಬಿರುದು ಪಡೆದುಬಿಡುತ್ತದೆ. ಇದರಿಂದ ಇನ್ನೂ ಕೆಲವು ಮುಖ್ಯ ಸಂಗತಿಗಳನ್ನು ಮರೆಯುತ್ತೇವೆ ಅಥವಾ ಮರೆಮಾಚುತ್ತೇವೆ. ಇದರರ್ಥ – ನಾನು ಬದುಕಿಗೆ ನಿಷ್ಠವಾದ ಸಾಹಿತ್ಯಕ್ಕೆ ವಿರೋಧಿ ಎಂದಲ್ಲವೇ ಅಲ್ಲ. ಆಕಾಶದಲ್ಲಿ ಹಾರಾಡುವ ಸಾಹಿತ್ಯಕ್ಕಿಂತ ಬದುಕಿನ ಬಗ್ಗೆ ಕಾಳಜಿ ವಹಿಸುವ ಸಾಹಿತ್ಯ ಒಳ್ಳೆಯ ದಾರಿ ಗುರುತಿಸಿದೆ ಎಂಬುದು ಸತ್ಯ. ಇದು ಮೊದಲ ಹಂತದಲ್ಲಿ ಮುಖ್ಯವೆನಿಸುವ ಅಂಶ. ಇಂಥ ಸಂದರ್ಭದಲ್ಲಿ ಬದುಕಿನ ಬಗ್ಗೆ ಬರೆದ ಒಂದು ಕೃತಿ ಯಾವ ಅರ್ಥ ವನ್ನಾದರೂ ಹೊರಡಿಸಲಿ, ಯಾವ ನಿಲುವನ್ನಾದರೂ ಪ್ರತಿಪಾದಿಸಲಿ, ಕಲಾತ್ಮಕ

ಮುಸುಕು ಇದ್ದರೆ ಸಾಕು ಮಹತ್ವ ಗಳಿಸುತ್ತದೆಯಲ್ಲ ಎಂಬುದು ನನ್ನ ತಕರಾರು. ಅಂದರೆ ಕೃತಿಯೊಂದು ಪ್ರತಿಪಾದಿಸುವ ನಿಲುವನ್ನು ಕುರಿತು ಚರ್ಚಿಸದೆ, ಇಲ್ಲಿ, ತಾಂತ್ರಿಕ ಕೌಶಲ್ಯಕ್ಕೆ ಪ್ರಾಮುಖ್ಯತೆ ಲಭ್ಯವಾಗುವ ಸಂದರ್ಭವಿದೆ. ಒಂದು ತೀರಾ ಸಾಮಾನ್ಯ ಸಂಗತಿ ಕಲಾತ್ಮಕ ಚಾತುರ್ಯದಿಂದ 'ಗಹನ' 'ಗಂಭೀರ' ಆಗಬಹುದು. ಆಗ ವಿಮರ್ಶೆಯೂ ಅದೇ ಮಟ್ಟದ್ದಾಗಿ ಈ ಕೃತಿಯಲ್ಲಿ ಏನೊ ಇದೆಯೆಂಬ ಭ್ರಮೆ ಹಿಡಿಸಬಹುದು. ಒಂದು ನಿರ್ದಿಷ್ಟ ನಿಲುವು ಅಂದರೆ ಧೋರಣೆಯನ್ನು ಕುರಿತು ನಾವು ಮಾತಾಡದೆ ಇದ್ದಾಗ ವಿಮರ್ಶೆ ನೇರ ಹಾಗು ಸರಳವಾಗಿರದೆ ಸುತ್ತಿ ಬಳಸುವ ಭಾಷಾಬುದ್ಧಿವಂತಿಕೆಯಾಗುವ ಅಪಾಯವೂ ಇದೆ. ಅಂದರೆ ಕೃತಿಕಾರ ಎಂಥದೊ ಒಂದು ವಿಷಯವನ್ನು ತನ್ನ ತಾಂತ್ರಿಕ ಪರಿಣತಿಯಲ್ಲಿ ಎರಕಹೊಯ್ದು ಹೊಳಪು ಕೊಟ್ಟಂತೆ ವಿಮರ್ಶಕನೂ ಅದೇ ಪಟ್ಟುಗಳನ್ನವಲಂಬಿಸುತ್ತಾನೆ. ಈ 'ಬುದ್ಧಿವಂತಿಕೆ'ಗೆ – ಒಂದು ಕೃತಿಯಲ್ಲಿ ಯಾವುದಾದರೂ ಧೋರಣೆ ಇದೆಯೆ ? ಇದ್ದರೆ ಈ ಸಂದರ್ಭದಲ್ಲಿ ಅದರ ಮೌಲ್ಯವೇನು ? – ಇಂಥ ವಿಷಯಗಳು ಮುಖ್ಯವೆನ್ನಿಸುವುದೇ ಇಲ್ಲ. ಯಾವ ಧೋರಣೆಯಿದ್ದರೇನಂತೆ, ಬದುಕನ್ನು ಕುರಿತು ಹೇಳುವುದನ್ನು ಚನ್ನಾಗಿ ಹೇಳಿದರೆ ಸಾಕು – ಎಂಬ ಮನೋಭಾವಕ್ಕೆ ಈ ನೆಲೆಯಲ್ಲಿ ಪ್ರಾಶಸ್ತ್ಯ. ಈ ಕಾರಣದಿಂದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪುನರಾಲೋಚನೆ ಅಗತ್ಯ. ನಾನೀಗ ಪ್ರಸ್ತಾಪಿಸುವ ವಿಷಯ ಅದೇ ಆಗಿದೆ.

ನಮ್ಮ ಸಮಕಾಲೀನ ಬದುಕು ಇದೀಗತಾನೆ ಉದ್ಭವವಾದದ್ದಲ್ಲ. ಅದರ ಹಿಂದೆ ಇತಿಹಾಸವೇ ಇದೆ. ಯಾಕೆಂದರೆ ನಮ್ಮ ಸಾಮಾಜಿಕ ಸ್ವರೂಪಕ್ಕೆ ಇವತ್ತಿನ ಅಂಶಗಳೊಂದಿಗೆ ಹಿಂದಿನ ಇತಿಹಾಸದ ಅಚ್ಚೂ ಬಿದ್ದಿದೆ. ಧರ್ಮ, ಪ್ರಭುತ್ವ, ಆರ್ಥಿಕ ವ್ಯವಸ್ಥೆ, ದುಡಿಮೆ – ಇವೆಲ್ಲ ಹೇಗೆ ಕೆಲಸ ಮಾಡಿವೆ, ಯಾವ ಯಾವ ಸ್ಥಾನ ಪಡೆದಿವೆ ಎಂಬುದು ಒಂದು ಸಮಾಜದ ಬದುಕನ್ನು ಕಂಡುಕೊಳ್ಳಲು ಸಹಾಯಕ ಸಾಮಗ್ರಿ. ಆದ್ದರಿಂದ ಐತಿಹಾಸಿಕ ಮತ್ತು ಸಮಕಾಲೀನ ಸ್ಥಿತಿಗತಿಗಳ ವೈಜ್ಞಾನಿಕ ಅರಿವಿನಿಂದ ಬದುಕನ್ನು ಕಾಣುವ ಕ್ರಿಯೆ ಸಾಗಬೇಕು. ಕಾಣುವುದಷ್ಟೆ ಅಲ್ಲ, ಅದರಿಂದ ರೂಪಿಸಿಕೊಂಡ ಧೋರಣೆ ಯಾವುದು, ಅದು ಯಾರನ್ನು ಪ್ರತಿನಿಧಿಸುತ್ತದೆ – ಎಂಬುದು ಮುಖ್ಯ.

ತಳೆದ ಧೋರಣೆಯೊಂದು ಯಾರನ್ನು ಪ್ರತಿನಿಧಿಸುತ್ತದೆ – ಎಂಬುದನ್ನು ನಾನು ಬಹು ಮುಖ್ಯವೆಂದೇ ಪರಿಗಣಿಸುತ್ತೇನೆ. ಯಾಕೆಂದರೆ, ಒಬ್ಬ ವ್ಯಕ್ತಿ ಸಮಾಜದಲ್ಲಿ ಬೇರಿರುವ ಬದುಕಿನ ಬಗ್ಗೆ ಧೋರಣೆಯೊಂದನ್ನು ಹೊಂದಿರುವಾಗ ಅದು ಅವನೊಬ್ಬನದೇ ಎಂದು ಹೇಳುವಂತಿಲ್ಲ. ಈ ಹೇಳಿಕೆಯನ್ನು ಹೀಗೆ ಸ್ಪಷ್ಟಪಡಿಸಬಹುದು : ನಾವು ತಳೆಯುವ ಧೋರಣೆಗಳ ಹಿನ್ನೆಲೆಯಲ್ಲಿ ಆಯಾ ಪರಿಸರದಲ್ಲಿ ಬೇರುಬಿಟ್ಟ ತತ್ತ್ವಜ್ಞಾನದ ಪ್ರಭಾವ ಅಥವಾ ಪ್ರೇರಣೆಯಿರುತ್ತದೆ. ವ್ಯಕ್ತಿ ತನ್ನ

ಪರಿಸರದ ಪ್ರಭಾವದಿಂದ ಮುಕ್ತವಾಗುವುದು ಮೊದಮೊದಲು ಕಷ್ಟ. ತಾನು ಬೆಳೆದಂತೆ ಪರಿಸರವನ್ನು ಪ್ರತಿಭಟಿಸಿ ಭಿನ್ನವಾಗಬಹುದು ಅಥವಾ ಅದೇ ಸರ್ವಶ್ರೇಷ್ಠವೆಂದು ನಂಬಿ ಬೇರು ಬಿಡಬಹುದು. ಇವೆರಡರಲ್ಲಿ ಯಾವುದು ಘಟಿಸಬೇಕಾದರೂ ಅದಕ್ಕನುಗುಣವಾದ ಚಿಂತನೆಯೊಂದಿರುತ್ತದೆ. ಈ ಚಿಂತನೆಯಿಂದ ವ್ಯಕ್ತಿ ರೂಪಿಸಿಕೊಳ್ಳುವ ಧೋರಣೆ ಕೆಲವರಿಗೆ ಇಷ್ಟವಾದದ್ದೂ, ಇನ್ನು ಕೆಲವರಿಗೆ ಕನಿಷ್ಠವಾದದ್ದೂ ಆಗಬಹುದು. ಒಂದು ಧೋರಣೆ ಅನೇಕರಿಗೆ ಇಷ್ಟವಾಯಿತು, ಶೀರಾ ಹತ್ತಿರವಾಯಿತು ಎನ್ನುವುದರ ಅರ್ಥ—ಅವರು ಆ ಧೋರಣೆಯಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ ಅಥವಾ ಆ ವ್ಯಕ್ತಿ ಈ ಧೋರಣೆಯ ಮೂಲಕ ಆ ಜನರಲ್ಲಿ ತನ್ನನ್ನು ಗುರುತಿಸಿಕೊಂಡಿದ್ದಾನೆ—ಎಂಬುದು. ಅಂದಮೇಲೆ ಒಬ್ಬನ ಧೋರಣೆ ಅದಕ್ಕನ್ವಯುವಾಗುವ ಸಮಾನಸ್ತರದ ಅನೇಕರ ಧೋರಣೆಯೂ ಹೌದು. ಆಗ ಅವರೆಲ್ಲ ಒಂದೇ ವರ್ಗದವರಾಗುವುದರಿಂದ ಒಬ್ಬನ ಧೋರಣೆ ಒಂದು ವರ್ಗದ ಆಶಯಕ್ಕನುಗುಣವಾದ ಧೋರಣೆಯಾಗುತ್ತದೆ. ತತ್ತ್ವಜ್ಞಾನವೂ ಅಷ್ಟೆ; ಹೀಗೆಯೆ ಅದು ಯಾವುದಾದರೊಂದು ವರ್ಗದ ಆಶಯುವನ್ನು ಪ್ರತಿನಿಧಿಸುತ್ತದೆ.

ಸೂಕ್ತ ಮಾಧ್ಯಮಗಳ ನಿಯಂತ್ರಣ ಸಾಧ್ಯವಾದಾಗ ಒಂದು ವರ್ಗದ ತತ್ತ್ವಜ್ಞಾನ ಬೇರೊಂದು ವರ್ಗದ ಮೇಲೆ ದಟ್ಟಪ್ರಭಾವ ಬೀರಿ ಅದೇ ಬದುಕಿನ ವೈಚಾರಿಕ ಬೆನ್ನೆಲುಬಾಗಿ ಬಿಡುವುದುಂಟು. ಇದಕ್ಕೆ ಭಾರತಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ. ಶೋಷಣೆಗೆ ಹಾದಿ ಮಾಡಿಕೊಟ್ಟ ತತ್ತ್ವವೇ ಶೋಷಿತರಿಗೂ ಇಷ್ಟವಾಗಿರುವ, ಇಷ್ಟವಾಗಿರುವಂತೆ ಮಾಡಿರುವ ದುರಂತ ನಮ್ಮ ಕಣ್ಣೆದುರಿಗೇ ಇದೆ. ವರ್ಣಾಶ್ರಮಧರ್ಮದ ಅನುಷ್ಠಾನಕ್ಕೆ ಸಿಕ್ಕಿದ ಭಾರತೀಯ ಸಮಾಜದಲ್ಲಿ ಬೌದ್ಧಿಕಶಕ್ತರ ಲೋಕದೃಷ್ಟಿ ಪ್ರಭಾವಪೂರ್ಣ ತತ್ತ್ವಜ್ಞಾನ ಎನ್ನಿಸಿಕೊಂಡು ಪ್ರಸಿದ್ಧವಾದದ್ದು, ಸಮಾಜದ ಬದುಕೆಲ್ಲ ಅದಕ್ಕೆ ಬದ್ಧವಾದದ್ದು ಐತಿಹಾಸಿಕ ಸತ್ಯ. ಆಳುವ ವರ್ಗ ಮತ್ತು ಬಂಡವಾಳಶಾಹಿ ತಮಗೆ ಅನುಕೂಲಕರ ವಿಚಾರಧಾರೆಗೆ ಪ್ರಾಶಸ್ತ್ಯ ಕೊಡುವುದು ಸ್ವಾಭಾವಿಕ. ಯಾಕೆಂದರೆ ಇವರ ತಪ್ಪುಗಳಿಗೆಲ್ಲ ಕಾಣದ ಶಕ್ತಿಯ ಲೀಲೆಯ ಕಡೆ ಬೆರಳು ತೋರಿಸುವ ವಿಚಾರಧಾರೆ ಇವರನ್ನು ಸಂರಕ್ಷಿಸಿ ಸುಖವಾಗಿಡುತ್ತದೆ. ಭಾರತದಲ್ಲೂ ಅದೇ ಆಯಿತು. ಬೇರೆ ಬೇರೆ ಧರ್ಮಗಳು ಇಲ್ಲಿ ತಲೆಯೆತ್ತಿದವಾದರೂ ಮೂಲಭೂತವಾಗಿ ಭಿನ್ನವಾಗಲಿಲ್ಲ. ಮೂಲತಃ ಒಂದೇ ಆಶಯವುಳ್ಳ ವಿಚಾರಧಾರೆ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುತ್ತ ಭದ್ರವಾಯಿತು. ಸಾಮಾಜಿಕ ಮತ್ತು ಆರ್ಥಿಕ ಪಟ್ಟಭದ್ರರ ಹಿತಾಸಕ್ತಿಗಳನ್ನು ರಕ್ಷಿಸುತ್ತ ಬಂತು.

ಇವತ್ತಾದರೂ ಹಳೆಯದನ್ನು ಆಧಾರವಾಗಿಟ್ಟುಕೊಂಡು ಸಣ್ಣ ಪುಟ್ಟ ಸುಧಾರಣಾಶೀಲತೆ ತೋರಿಸಿ ಯಥಾಸ್ಥಿತಿ ಉಳಿಸುವ ತತ್ತ್ವಜ್ಞಾನ ಉತ್ಕೃಷ್ಟ

ಎನ್ನಿಸಿಕೊಳ್ಳುತ್ತದೆ. ಇದಕ್ಕೆ ಅನೇಕ ಮಾಧ್ಯಮಗಳ ಸಹಕಾರವಿದೆ. ವರ್ಣಾಶ್ರಮ ಧರ್ಮದ ಅನ್ಯಾಯವನ್ನು ಖಂಡಿಸಿದರೂ, ಅಂಥ ಪದ್ಧತಿಗಳನ್ನು ಬೇರೆ ರೂಪದಲ್ಲಾದರೂ ಇರಗೊಡುವ ವಿಚಾರ ಮೌಲ್ಯಗಳನ್ನು ಪ್ರಭುತ್ವ, ಪ್ರಸಾರಮಾಧ್ಯಮಗಳು ತಪ್ಪಿಸಿಲ್ಲ. ಅಷ್ಟೇ ಅಲ್ಲ, ಇಲ್ಲಿ ಅಂಥವರೇ ಗಣ್ಯ ವಿದ್ವಾಂಸರೂ, ತತ್ವಜ್ಞಾನಿಗಳೂ ಆಗುವುದು ಸಾಧ್ಯವೆನ್ನುವ ವಾತಾವರಣವಿದೆ. ಅನ್ಯರನ್ನು ಆಳಿ ತಮ್ಮ ಬೇಳೆ ಬೇಯಿಸಿಕೊಳ್ಳಬೇಕೆನ್ನುವ ವರ್ಗದವರು ತಮ್ಮ ಹಿತಾಸಕ್ತಿಯನ್ನು ಉಳಿಸಿ ಬೆಳೆಸುವ ಬೌದ್ಧಿಕ ಚಿಂತನೆಯೇ ಸಮಾಜದ ಅಡಿಗಲ್ಲಾಗಿರಬೇಕೆಂದು ಬಯಸುತ್ತಾರಾದ್ದರಿಂದ ಇಲ್ಲೆಲ್ಲ ವರ್ಗಪ್ರಜ್ಞೆ ಕೆಲಸ ಮಾಡಿರುತ್ತದೆ. ಕೆಲವು ವೇಳೆ ಇದು ಒಡೆದು ಕಾಣದಿರಬಹುದು ; ಅಷ್ಟೆ.

ಸಾಹಿತ್ಯವನ್ನು ಈ ಸಂಗತಿಗಳಿಂದ ಬೇರೆ ಮಾಡಬೇಕಾಗಿಲ್ಲ. ಸಾಹಿತಿ ನಿಜಕ್ಕೂ ಬದುಕಿನ ಬಗ್ಗೆ ಗಂಭೀರ ಕಾಳಜಿ ವಹಿಸಿದನಾದರೆ, ಧೋರಣೆಯೊಂದನ್ನು ರೂಪಿಸಿಕೊಳ್ಳುತ್ತಾನೆ ; ಅಥವಾ ಅನುಭವ, ಅಧ್ಯಯನಗಳಿಂದ ರೂಪಿಸಿಕೊಂಡ ಧೋರಣೆಯ ಮುಖಾಂತರ ಬದುಕನ್ನು ಅಳೆಯುತ್ತಾನೆ. ಹೀಗೆ ಸಾಹಿತ್ಯ ಸೃಷ್ಟಿಯಲ್ಲೂ ಅವಿಭಾಜ್ಯ ಅಂಗವಾಗುವ ಧೋರಣೆ–ಮೇಲುನೋಟಕ್ಕಲ್ಲದಿದ್ದರೆ–ಆಳದಲ್ಲಾದರೂ ಒಂದು ವರ್ಗದ ಆಶಯವನ್ನು ಪ್ರತಿನಿಧಿಸುತ್ತದೆ.

'ಮೇಲು ನೋಟಕ್ಕಲ್ಲದಿದ್ದರೆ' ಎಂಬ ಮಾತನ್ನು ಬೇಕಾಗಿಯೇ ಬಳಸಿದ್ದೇನೆ. ಯಾಕೆಂದರೆ ನಮ್ಮ ಬುದ್ಧಿಜೀವಿಗಳಾರೂ ಮೇಲುನೋಟಕ್ಕೆ ಪ್ರತಿಗಾಮಿಗಳಾಗಿರಲು, ಹಾಗೆಂದು ಕರೆಸಿಕೊಳ್ಳಲು ಇಚ್ಛಿಸುವುದಿಲ್ಲ. ಇನ್ನು ಹೀಗಿರಲು ಸಾಧ್ಯವೇ ಇಲ್ಲ–ಎಂಬಂಥ ಸ್ಥಿತಿ ತಲುಪಿದಾಗ ಬಹಳಷ್ಟು ಜನ ಜಾತೀಯತೆಯನ್ನು ಧಿಕ್ಕರಿಸಿ ಮಾತಾಡಲು ಹಿಂದೆ ಮುಂದೆ ನೋಡುವುದಿಲ್ಲ ; ಸಮಾನತೆಯ ಬಗ್ಗೆ ಮಾತಾಡದೆ ಇರುವುದಿಲ್ಲ. ಆದರೆ ಮೂಲಭೂತವಾಗಿ ಜನತೆಯನ್ನು ನಿಯಂತ್ರಿಸುವ 'ವ್ಯವಸ್ಥೆ' ಇರುತ್ತದೆ, ದೋಷ ಅಲ್ಲಿದೆ ಎಂಬುದನ್ನು ಮಾತ್ರ ಒಪ್ಪುವುದಿಲ್ಲ. ಇನ್ನೊಂದು ವಿಪರ್ಯಾಸವೆಂದರೆ ವ್ಯವಸ್ಥೆಯ ವಿರೋಧಿಯಾಗುವುದೂ ಒಂದು ವಿಶೇಷ ಗೌರವವೆಂದು ಭಾವಿಸಿರುವ ಬುದ್ಧಿವಂತರೂ ನಮ್ಮಲ್ಲಿದ್ದಾರೆ. ಪ್ರಗತಿಪರರೆಂದುಕೊಂಡವರೆಲ್ಲ ವ್ಯವಸ್ಥೆಯ ಬಗ್ಗೆಯೇ ಮಾತಾಡುತ್ತಾರಾದರೂ ಒಬ್ಬೊಬ್ಬರಿಗೆ ಒಂದೊಂದು 'ವ್ಯವಸ್ಥೆ'ಯಾಗಿ ಕಂಡಿರುತ್ತದೆ. ವಿಶಾಲಾರ್ಥದಲ್ಲಿ 'ವ್ಯವಸ್ಥೆ' ಹತ್ತಾರು ಆಗಿರಲಿಕ್ಕೆ ಸಾಧ್ಯವಿಲ್ಲ. ಒಂದೇ ಮೂಲ ವ್ಯವಸ್ಥೆಗೆ ಸಂಬಂಧಿಸಿದಂತೆ ಅಂಗವ್ಯವಸ್ಥೆಗಳಿರಬಹುದು ; ಅಷ್ಟೆ. ವೈಯಕ್ತಿಕ ಮಟ್ಟದಲ್ಲಿ ಯೋಚಿಸುತ್ತ ಹೋದಾಗ ತಮಗೆ ತೊಂದರೆ ಕೊಟ್ಟ ಅಥವಾ ಬೇರಾವುದೊ ಕಾರಣಕ್ಕೆ ಬೇಡವಾದ ಸಂಸ್ಥೆ, ಶೋಷಕ ವ್ಯವಸ್ಥೆಯಾಗಿ ಕಂಡುಬಿಡಬಹುದು. ಶೂದ್ರಪ್ರಜ್ಞೆಯ ಸಾರಥ್ಯ ವಹಿಸಿದವರಿಗೆ

ವೈದಿಕ ವರ್ಣವಷ್ಟೇ ಶೋಷಕ ವ್ಯವಸ್ಥೆಯಾಗಿದ್ದರೆ, ಇನ್ನು ಕೆಲವರಿಗೆ ಸರ್ಕಾರ ಅಥವಾ ಕೆಲವು ಸಂಸ್ಥೆಗಳ ನಾಯಕರು 'ವ್ಯವಸ್ಥೆ'ಯಾಗಿರುವುದುಂಟು! ಜೊತೆಗೆ ಇದೇ ಸತ್ಯವೆಂಬ ವಾತಾವರಣ ಸೃಷ್ಟಿಯ ಪ್ರಯತ್ನಗಳೂ ನಡೆಯುವುದುಂಟು. ಹೀಗಾದಾಗ ಅರ್ಥ, ವಿವರಣೆ, ವ್ಯಾಖ್ಯಾನಗಳನ್ನು ಗೌಣಗೊಳಿಸಿ ಸಾಂದರ್ಭಿಕ ಹೇಳಿಕೆಗಳು ಎದ್ದು ಬರುತ್ತವೆ.

ವಿವರಣೆಗಾಗಿ ಒಂದು ನಿದರ್ಶನವನ್ನು ನೋಡಬಹುದು. 'ಆಕ್ರಾಂತರ ಪ್ರಕಟಣೆ'ಯಲ್ಲಿ ಬಂದಿರುವ ಜಿ. ಎನ್. ರಂಗನಾಥರಾವ್ ಅವರ 'ಸರ್ಕಾರ–ಸಾಹಿತಿ–ಪ್ರಶಸ್ತಿ' ಎಂಬ ಪಾಂಪ್ಲೆಟ್ ಓದಿದಾಗ ಸರ್ಕಾರ ಅಥವಾ ಆಗದ ಸಂಸ್ಥೆಗಳ ಮುಖ್ಯಸ್ಥರನ್ನು ಅಥವಾ ಒಟ್ಟು ಸಂಸ್ಥೆಯ ವಿರೋಧವನ್ನು 'ವ್ಯವಸ್ಥೆ ವಿರೋಧಿ' ಎಂದು ಭಾವಿಸಿರುವ ಸೂಚನೆಯಿದೆ. ಈ ಪಾಂಪ್ಲೆಟ್‌ನಲ್ಲಿ 'ವ್ಯವಸ್ಥೆಗೆ ಡೊಗ್ಗು ಸಲಾಮು ಹಾಕದ ವಿಚಾರಧಾರೆಯಿಂದಾಗಿ ಅಡಿಗರ ಜೀವನದಲ್ಲಿ ಅಭದ್ರತೆಯುಂಟಾಯಿತು'– ಎಂಬ ಹೇಳಿಕೆಯಿದೆ. ಗೋಪಾಲಕೃಷ್ಣ ಅಡಿಗರು ಕನ್ನಡದ ಒಬ್ಬ ಪ್ರಮುಖ ಪ್ರಾತಿನಿಧಿಕ ಕವಿ. ಅವರ ಕಾವ್ಯದಲ್ಲಿ ಧೋರಣೆಯೊಂದು ಇದೆ ಎಂಬುದು ಅಷ್ಟರಮಟ್ಟಿಗೆ ಮುಖ್ಯವಾದುದು. ಆದರೆ ಅವರ ವಿಚಾರಧಾರೆ–ಕಾವ್ಯ ಮತ್ತು ಇತರ ಸಂದರ್ಭಗಳಲ್ಲಿ ವ್ಯಕ್ತವಾದಂತೆ–ಆಳದಲ್ಲಿ ವ್ಯವಸ್ಥೆಯ ಅಂಗವೇ ಆಗಿದೆ. ಶೋಷಣೆಗೆ ಸಾಧನವಾಗುವ ಮೂಢನಂಬಿಕೆ, ನಿಷ್ಠೆಗಳ ಅಸ್ತಿತ್ವವನ್ನು ವ್ಯವಸ್ಥೆ ಇಚ್ಛಿಸುತ್ತದೆ. ಆದ್ದರಿಂದ ಅವೂ ಶೋಷಣೆಯ ಅಂಗವಾಗುತ್ತವೆ. ಅಡಿಗರು ಅಲೌಕಿಕ ಸೆಳೆತದಂಥ ನಂಬಿಕೆಗಳಿಗೆ ಮೊದಲಿನಿಂದ ತಮ್ಮ ಕಾವ್ಯದಲ್ಲಿ ಪ್ರಾಮುಖ್ಯ ನೀಡಿದವರು ; ಜೊತೆಗೆ ಕಾವ್ಯದಲ್ಲಿ ಮತ್ತು ಸಕ್ರಿಯ ಪಾತ್ರದಲ್ಲಿ ಹೊರಬಿದ್ದಂತೆ ಅವರ ರಾಜಕೀಯ ಧೋರಣೆ ವ್ಯವಸ್ಥೆ ವಿರೋಧಿಯಲ್ಲ. ಇದು ಮೊದಲು, ಕಟ್ಟುವೆವು ನಾವು, ಸುಲಿಗೆಯೆಂಬ ಯಾಗ–ಮುಂತಾದ ಪದ್ಯಗಳು ಕಲಾತ್ಮಕ ದೃಷ್ಟಿಯಿಂದ ಹೇಗಾದರೂ ಇರಲಿ, ಅವುಗಳಲ್ಲಿರುವ ತುಡಿತ ನಿಜಕ್ಕೂ ಸ್ವಾಗತಾರ್ಹವಾದುದು. ಆದರೆ ಅವರ ಕಲಾಶಕ್ತಿ ಪಕ್ವವಾದಾಗ, ವಿಮರ್ಶಕರು ಅವರ ಕಾವ್ಯದ ಒಂದೊಂದು ಪದಕ್ಕೂ ಗಂಭೀರ ಗಮನ ಕೊಡಹತ್ತಿದಾಗ ಬಂದ ಕೆಲವು ಮುಖ್ಯ ಕವನಗಳಲ್ಲಿ ವಾಮವಾದೀ ವಿರೋಧಿ ಧೋರಣೆ ಬೇರು ಬಿಟ್ಟು ಬೆಳೆದಿದೆ. ಎಡ-ಬಲ, ಡೊಂಕುಬಾಲಕ್ಕೆ ಚಿನ್ನದ ನಳಿಗೆ–ಇಂಥ ಪದ್ಯಗಳು ನನ್ನ ಮಾತಿಗೆ ಸಾಕ್ಷಿ. ಮೂಲಭೂತವಾಗಿ ವ್ಯವಸ್ಥೆಯ ವಿರೋಧಿಯಾಗುವ ಎಡಪಂಥ ಇವರಿಂದ ವಿಡಂಬನೆಗೂ ಗುರಿಯಾಗಿರುವಾಗ, ಇವರ ಸಾಮಾಜಿಕ, ರಾಜಕೀಯ ಧೋರಣೆ, ಸುಧಾರಣಾವಾದಿಯಾಗಿರಬಹುದೇ ಹೊರತು ವ್ಯವಸ್ಥೆ ವಿರೋಧಿಯಲ್ಲ. ಈ ಕಾರಣಗಳಿಂದ–ಅವರ ವಿಚಾರಧಾರೆಯನ್ನು ವ್ಯವಸ್ಥೆಗೆ ಡೊಗ್ಗು ಸಲಾಮು ಹಾಕದಿರುವಂಥಾದ್ದು ಎಂದು ಘೋಷಿಸುವಾಗ 'ವ್ಯವಸ್ಥೆ' ಎಂದರೆ ಕೆಲವು ಸಂಸ್ಥೆಗಳು ಅಥವಾ ಸರ್ಕಾರ ಎಂದು

ಭಾವಿಸಿರಬೇಕು. ಆದರೆ ದುರ್ಬಲರ ಶೋಷಣೆಗೆ ಹಾದಿ ಮಾಡುವ ರಾಜಕೀಯ ವ್ಯವಸ್ಥೆಯಲ್ಲಿರುವ ಯಾವುದೇ ಪಕ್ಷದ ಸರ್ಕಾರ ವ್ಯವಸ್ಥೆಯ ಅಂಗವೇ ಆಗಿರುತ್ತದೆಯಾದ್ದರಿಂದ ಈಗ ಸರ್ಕಾರದ ವಿರೋಧವೆಂದರೆ ಒಟ್ಟು ವ್ಯವಸ್ಥೆಯ ವಿರೋಧವಲ್ಲ.

ಹಾಗಾದರೆ 'ಒಟ್ಟು ವ್ಯವಸ್ಥೆ' ಎಂದರೆ ಯಾವುದು ?

ಸಾಮಾನ್ಯಾರ್ಥದಲ್ಲಿ ವ್ಯವಸ್ಥೆಯೆಂಬುದೊಂದು ಯಾವಾಗಲೂ ಇರುವಂಥದೇ. ಅದನ್ನು ವಿರೋಧಿಸುವುದು ಅಥವಾ ಬೆಂಬಲಿಸುವುದು ಆಯಾದೇಶದ ಸಂದರ್ಭದಲ್ಲಿ ನಿರ್ಣಯಿಸಬೇಕಾದ ವಿಷಯ ; ಹಾಗೂ ಅದು ಎಂಥ ವ್ಯವಸ್ಥೆ ಎಂಬುದರ ಮೇಲೆ ಇದು ನಿಂತಿದೆ. ಶತಶತಮಾನಗಳಿಂದ 'ಧರ್ಮ' ಶೋಷಣೆಗೆ ಸಾಧನವಾಗಿದೆ. ಅದು ಬಿತ್ತಿದ ವಿಚಾರಕ್ಕೆ ಪ್ರಭುತ್ವ ಶಕ್ತಿಯ ಬೆಂಬಲವೂ ಇದೆ. ಇದನ್ನೇ ಬಯಸುವ ಬಂಡವಾಳಗಾರರಂಥ ಪಟ್ಟಭದ್ರರ ವರ್ಗವೇ ಇದೆ. ಪೂರ್ವ ಜನ್ಮದ ಪಾಪ-ಪುಣ್ಯ, ವಿಧಿನಿಯಮದಂಥ ಸಾಮಾನ್ಯ ತತ್ತ್ವಗಳು ಇಲ್ಲಿನ ಸ್ಥಿತಿಯ ವ್ಯಾಖ್ಯಾನಕ್ಕೆ ಆಕಾಶದ ಕಡೆಗೆ ಕೈ ತೋರಿಸುವುದರಿಂದ ಶೋಷಣೆಗೆ ರಕ್ಷಣೆ ಒದಗಿದಂತಾಗುತ್ತದೆ. ಇವೆಲ್ಲಕ್ಕೂ ಅನುಕೂಲವಾಗುವಂಥ ರಾಜ್ಯ ಪದ್ಧತಿಯನ್ನು ಸ್ವೀಕರಿಸಿ ಅನುಷ್ಠಾನಕ್ಕೆ ತುರುವ ರಾಜಕೀಯ ವ್ಯವಸ್ಥೆಯಲ್ಲಿ ಒಟ್ಟು ಈ ಎಲ್ಲ ಅಂಗಗಳ ಸೂತ್ರ ಇರುತ್ತದೆ. ವ್ಯವಸ್ಥೆ ಎನ್ನುವಾಗ ರಾಜಕೀಯ ವ್ಯವಸ್ಥೆಯನ್ನು ಪ್ರಮುಖವಾಗಿ ಗಣಿಸಬೇಕಾದರೂ ಸಮಾಜವನ್ನು ಅಂಧಶ್ರದ್ಧೆ, ಹೀನಸ್ಥಿತಿಗಳಲ್ಲಿ ಹಿಡಿದಿಟ್ಟ ಅಂಗವ್ಯವಸ್ಥೆಗಳನ್ನು ಮರೆಯುವಂತಿಲ್ಲ. ಆದ್ದರಿಂದ ಈಗಿನ ಸಂದರ್ಭದಲ್ಲಿ 'ವ್ಯವಸ್ಥೆ' ಎಂದಾಗ ಇವೆಲ್ಲ ಅದರೊಳಗೆ ಸೇರಬೇಕು.

ಇದನ್ನೆಲ್ಲ ಅರಿತಾಗ ನಾವು ಮೇಲು ನೋಟದ ಪ್ರತಿಪಾದನೆಗೆ ಮರುಳಾಗುವುದು ತಪ್ಪುತ್ತದೆ. ಮೇಲುನೋಟಕ್ಕೆ ಹೇಗೇ ಕಾಣಲಿ, ವಾಸ್ತವವಾಗಿ ಆಳದಲ್ಲಿ ಅದು ಯಾವ ಹಿತಾಸಕ್ತಿಗಳಿಗನುಗುಣವಾಗಿದೆ ಎಂಬುದು ಒಂದು ಧೋರಣೆಯ ನಿಜವಾದ ಅಳತೆಗೋಲು. ಅದ್ದರಿಂದ ಸಾಹಿತಿಯೊಬ್ಬ ತಳೆದಿರುವ, ತಳೆಯುವ ಧೋರಣೆಯನ್ನು ಕುರಿತು ತೀರ್ಮಾನಕ್ಕೆ ಬರುವಾಗ ಇವನ್ನೆಲ್ಲ ಅಗತ್ಯವಾಗಿ ಗಮನಿಸಬೇಕು. ಸಾಹಿತಿ ಒಂದು ಧೋರಣೆಗೆ ಬದ್ಧನಾಗಿರುವುದು ಎಷ್ಟು ಮುಖ್ಯವೋ, ಅದು ಯಾವ ವರ್ಗದ ಆಶಯವನ್ನು ಪ್ರತಿನಿಧಿಸುತ್ತದೆಯೆಂಬುದನ್ನು ಕಂಡುಕೊಳ್ಳುವುದು ಅಷ್ಟೇ ಮುಖ್ಯ.

ಆದ್ದರಿಂದಲೇ ನಾನು ಮುಂಚೆ ಹೇಳಿದ್ದು–ಕೇವಲ 'ಬದುಕಿಗೆ ನಿಷ್ಠವಾಗಿರುವ ಸಾಹಿತ್ಯ' ಎಂದು ತೇಲಿಸಿದರೆ ಸಾಲದು ಎಂದು. ಸಾಹಿತ್ಯದಲ್ಲಿ ಬದುಕು ಹೀಗೆ ಬಂದಿದೆ ಹಾಗೆ ಬಂದಿದೆ ಎಂದು ಅಲ್ಲಿರುವುದನ್ನು ಹಿಗ್ಗಿಸಿ ವಿಮರ್ಶಿಸಿದರೆ ಎಲ್ಲವೂ

ಮುಗಿಯಲಿಲ್ಲ. ಕೃತಿಕಾರ ಬದುಕನ್ನು ಕಾಣುವಾಗ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಸಂಗತಿಗಳ ಪರಿವೀಕ್ಷಣೆಯಿಂದ ಮೂಡಿದ ಯಾವ ಧೋರಣೆ ಕೆಲಸ ಮಾಡಿದೆ ಎಂಬುದನ್ನು ಮುಖ್ಯವೆಂದು ಪರಿಗಣಿಸಬೇಕು. ಇದರರ್ಥ ಪ್ರತಿಯೊಂದು ಕೃತಿಯಲ್ಲಿ ತಾನು ನಂಬಿದ ಧೋರಣೆಯ ಪ್ರಚಾರ ಪಟ್ಟ ಏರಬೇಕೆಂದೇನೂ ಅಲ್ಲ. ಸಮಾಜದ ಬದುಕನ್ನು ಪ್ರಾಮಾಣಿಕವಾಗಿ ವಿಶ್ಲೇಷಿಸುವಾಗ ಸಾಹಿತಿಗೆ ನಿಲುವೊಂದು ಮೂಡುವುದು ಅನಿವಾರ್ಯ ಕ್ರಿಯೆ. ಇದು ಆತ ನೋಡುವ ಎಲ್ಲದರ ಹಿನ್ನೆಲೆಯಲ್ಲಿ ಕ್ರಿಯಾಮಗ್ನವಾಗಿರುವುದು. ಧೋರಣೆಯೊಂದು ರೂಪುಗೊಂಡೇ ಇಲ್ಲ ಎನ್ನುವುದಾದರೆ ಅಲ್ಲಿ ಒಂದು 'ವೈಚಾರಿಕ ವ್ಯಕ್ತಿತ್ವ' ವನ್ನು ಗುರುತಿಸುವುದು ಕಷ್ಟ. ಯಾಕೆಂದರೆ ಸುಸಂಬದ್ಧ ಆಲೋಚನಾ ವಿಧಾನ ಇಂಥ ವ್ಯಕ್ತಿತ್ವದ ರೂಪಧಾರಣೆಗೆ ಪ್ರಮುಖ ಅಡಿಪಾಯ. ಒಟ್ಟಾರೆ, ಧೋರಣೆಯೊಂದು ಅಗತ್ಯ ಎಂಬುದು ಇಲ್ಲಿ ಮುಖ್ಯ ಮಾತು.

ನಾವೆಲ್ಲ ಬದುಕುತ್ತಿರುವುದೇ ಈ ಸಮಾಜದಲ್ಲಾದ್ದರಿಂದ ಅನುಭವದ ಹಿಂದೆ ಸಾಮಾಜಿಕತೆ ಇರುವುದು ಸ್ವಾಭಾವಿಕ ಎನ್ನುವುದನ್ನು ಒಪ್ಪಬೇಕು. ಈ ಕಾರಣದಿಂದಲೇ ವಿಮರ್ಶಕ ಕೃತಿಯೊಂದು ಹೊರಡಿಸುವ ಧೋರಣೆಯನ್ನು ಸಾಮಾಜಿಕ ಸಂದರ್ಭದಲ್ಲಿಟ್ಟು ನೋಡಬೇಕಾಗಿದೆ. ಆಗ ಆ ಧೋರಣೆಯ ಪರೀಕ್ಷೆ ನಡೆದು ಕೃತಿಯ ಮೌಲ್ಯ ನಿರ್ಣಯಕ್ಕೂ ಹಾದಿಯಾಗುವುದು. ಸಾಹಿತಿಯೊಬ್ಬ ಎಷ್ಟರ ಮಟ್ಟಿಗೆ ತನ್ನ ಸಮಕಾಲೀನ ಸಮಾಜದ ಬದುಕಿನೊಂದಿಗೆ ಸಜೀವ ಸಂಬಂಧ ಪಡೆದಿದ್ದಾನೆ, ಎಷ್ಟರಮಟ್ಟಿಗೆ ಸಾಮಾಜಿಕ ನ್ಯಾಯಕ್ಕೆ ಬದ್ಧನಾಗಿದ್ದಾನೆ ಎಂಬ ವಿಷಯ ಹೊರಬರುವುದು. ಹೀಗೆ ಪರಿವೀಕ್ಷಿಸದೆ ಸಾಹಿತಿಯನ್ನು ಇತರರಿಗಿಂತ ಅತ್ಯಂತ ಭಿನ್ನನೆಂದು ತೋರಿಸಿ ಅವನ ಅಂತರಂಗದಲ್ಲಿ ಯಾರಲ್ಲೂ ಆಗದ ಪವಾಡ ಘಟಿಸುತ್ತದೆಯೆಂಬಂತೆ ವಿಜೃಂಭಿಸುವುದರಲ್ಲಿ ಏನೂ ಅರ್ಥವಿಲ್ಲ. ಬೇರೆ ಅನೇಕರಿಗೆ ಇಲ್ಲದ ಪ್ರತಿಭೆ ಅವನಿಗಿದೆಯೆಂಬುದು ನಿಜ. ಆದರೆ ಅವನ ವಿಚಾರಧಾರೆ ಹೇಗೆ ಹೋದರೂ ಮನ್ನಿಸಿ ಗೌರವಿಸಬೇಕೆನ್ನುವುದು ಸಾಹಿತ್ಯ ಮತ್ತು ಸಾಮಾಜಿಕ ಬದುಕಿಗಿರುವ ಸಂಬಂಧದ ವೈಜ್ಞಾನಿಕ ಆಲೋಚನೆಗೆ ತಡೆ ಹಾಕುವ ಪ್ರಯತ್ನ. ಈಗ ನೋಡಿ : ಕೃತಿಕಾರನಿಗೆ ಸ್ವರ್ಗ – ನರಕ, ಜನ್ಮ – ಪುನರ್ಜನ್ಮ, ಪೂರ್ವಪಾಪ – ಪುಣ್ಯ, ವಿಧಿಲಿಖಿತ – ಇತ್ಯಾದಿ ನಂಬಿಕೆಗಳಿಗೆ ಕಾಂಕ್ರೀಟು ಹಾಕಿದ ವಿಚಾರಧಾರೆ ಶತಶತಮಾನಗಳಿಂದ ಈ ಸಮಾಜದ ಜನರನ್ನು ನಿಯಂತ್ರಿಸಲು ಕೆಲವರು ಸೃಷ್ಟಿಸಿದ್ದು – ಎಂಬ ಧೋರಣೆಯಿದ್ದರೆ, ಈ ವಿಷಯಗಳಲ್ಲಿ ಶ್ರದ್ಧೆ ಬಲಿಸುವ ಸಾಹಿತ್ಯ ಸೃಷ್ಟಿ ಆತನಿಂದಾಗುವುದಿಲ್ಲ. ಈ ನಂಬಿಕೆಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ವಿವರಗಳು ಬಂದರೂ ಅವುಗಳ ಪರವಾಗಿ ಮನವೊಲಿಸಲು ಬರುವುದಿಲ್ಲ. ಇವುಗಳ ಅರ್ಥಹೀನತೆಯನ್ನು ಅರಿತ ಸೂಕ್ಷ್ಮತೆ ಹಿನ್ನೆಲೆಯಲ್ಲಿರುತ್ತದೆ. ಆದರೆ ಇವುಗಳಿಗೆ ಶ್ರದ್ಧಾಳುವಾದ

ಸಾಹಿತಿಯು ಬರವಣಿಗೆಯಲ್ಲಿ ಪ್ರಶ್ನಿಸದ, ಬದಲಾಗಿ ಗಟ್ಟಿಗೊಳಿಸುವ ಧೋರಣೆ ಕೆಲಸ ಮಾಡುತ್ತದೆ. ಹೆಚ್ಚಿನ ವಿವರಣೆಗೆಂದು ಒಂದು ಉದಾಹರಣೆ ನೋಡಬಹುದು :

ಇದು, ರಾಘವಾಂಕ ಕವಿ ಬರೆದ 'ಹರಿಶ್ಚಂದ್ರಕಾವ್ಯ'ದ ಒಂದು ಸನ್ನಿವೇಶ. ರೋಹಿತಾಶ್ವ ಹಾವು ಕಚ್ಚಿ ಸತ್ತಿದ್ದಾನೆ; ಹುಡುಕಿಕೊಂಡು ಬಂದ ಚಂದ್ರಮತಿ– ರೋಹಿತಾಶ್ವನ ತಾಯಿ – ಮಗನ ಸ್ಥಿತಿಗಾಗಿ ಗೋಳಾಡುತ್ತಾಳೆ. ಆಗ ಅವಳು ಹೇಳುವ ಕೆಲವು ಮಾತುಗಳು ಹೀಗಿವೆ :

ಆರ ಸಿರಿಯನೆಳೆತಂದೆನೊ ಮುನ್ನ
ಆರಳಲು ಸೆಳೆಕೊಂಡೆನೊ ಹೊನ್ನ
ಅಲ್ಲದಡೀಯಳಲಪ್ಪುದೆ ನನಗೆ
ಇಲ್ಲಿ ವೃಥಾ ಸಾವಪ್ಪುದೆ ನಿನಗೆ

'ಮುಂಚೆ ಯಾರ ಸಿರಿಯನ್ನು ಎಳೆತಂದೆನೊ, ಯಾರ ಹೊನ್ನನ್ನು ಸೆಳೆಕೊಂಡೆನೊ ; ಇಲ್ಲದಿದ್ದರೆ ನಿನಗೆ ಸಾವು, ನನಗೆ ದುಃಖ ಬರುತ್ತಿತ್ತೆ' – ಇವು ಚಂದ್ರಮತಿಯ ಮಾತುಗಳು. ಇದೇ ಅವಳ ನಂಬಿಕೆ. ಮುಂದುವರಿದು ಅವಳು –

ಏನ ಮಾಳ್ಪೆ ನಾ ಮಾಡಿರ್ದುದನು
ತಾನುಂಬುದು ವಿಧಿ ಮಾಡಿದ ಹದನು

– ಎಂದು ಹೇಳುವುದರ ಮೂಲಕ, ತಾನು ಮಾಡಿದ ತಪ್ಪಿಗೆ ಇದು ಪ್ರಾಯಶ್ಚಿತ್ತ, ಇದೇ ವಿಧಿನಿಯಮ ಎಂಬ ನಂಬಿಕೆಗೆ ಜೋತುಬಿದ್ದು ಮಗನ ಸಾವಿನ ಕಾರಣವನ್ನು ತನ್ನಲ್ಲೆ ಕಾಣುತ್ತಾಳೆ; ಅನ್ಯರಲ್ಲಲ್ಲ. ವಾಸ್ತವವಾಗಿ ಚಂದ್ರಮತಿ ಅಂಥ ಪಾಪ ಕಾರ್ಯ ಯಾವುದನ್ನೂ ಮಾಡಿರುವುದಿಲ್ಲ. ಆದರೂ ಇಂಥ ಮಾತುಗಳನ್ನು ಅವಳಿಂದ ಆಡಿಸಿದ್ದು ಆಕಾಲದ ಬದುಕಿನಲ್ಲಿ ಬೆರೆತಿದ್ದ ಮೂಢನಂಬಿಕೆ. ಈ ನಂಬಿಕೆಗಳು ಬದುಕಿನಲ್ಲಿ ಬೆರೆತದ್ದು ಕೆಲವು ಸ್ವಾರ್ಥಶಕ್ತಿಗಳಿಂದ ; ಅವುಗಳ ಸಲುವಾಗಿ ; ಸುಖ ಸಂರಕ್ಷಣೆಗಾಗಿ. ಆದ್ದರಿಂದ ಇಂಥ ನಂಬಿಕೆಗಳು ಮತ್ತು ಅವುಗಳ ವಕಾಲತ್ತು, ವ್ಯವಸ್ಥೆಯ ಅಂಗವಾಗುತ್ತದೆ. ಅವತ್ತಷ್ಟೇ ಅಲ್ಲ, ಇವತ್ತೂ ಇಂಥ ನಂಬಿಕೆ, ಶ್ರದ್ಧೆ ಇರುವುದು ಸ್ಪಷ್ಟ. ಬಡತನ ಯಾಕೆ ಬಂದಿದೆ ಎಂದರೆ ಪೂರ್ವ ಜನ್ಮದ ಪಾಪ ಫಲ ಅಥವಾ ಪಡೆದು ಬಂದದ್ದು ಅನ್ನುವ ಉತ್ತರ : ಹಾಗಾದರೆ ಸಿರಿತನ ? ಅದು ಜನ್ಮಜನ್ಮಾಂತರದ ಪುಣ್ಯಫಲ ! ನಾವು ಯಾವುದನ್ನು ಇವತ್ತು ಧರ್ಮ ಎಂದು ಕರೆಯುತ್ತೇವೊ ಅದು ಇಂಥ ಅವೈಜ್ಞಾನಿಕ ವಿಚಾರಗಳ ಉಗ್ರಾಣ ; ಪ್ರಸಾರ ಕೇಂದ್ರ. ಧರ್ಮದ ಮುದ್ರೆ ಬೀಳುವುದರಿಂದ ಆಗುವ ಮೋಸವನ್ನು ನಾವು ಅರ್ಥಮಾಡಿಕೊಳ್ಳದೆ ಹೋಗುತ್ತೇವೆ. ಚಂದ್ರಮತಿಯ ಪ್ರಸಂಗವನ್ನೆ ತೆಗೆದುಕೊಳ್ಳಿ. ರೋಹಿತಾಶ್ವ ಸಾಯಲು ತಾನು, ತನ್ನ ಪಾಪಕಾರ್ಯ ಕಾರಣ ಎಂದು ಆಕೆ ನಂಬಿದಾಗ, ಸಾವಿನ ನಿಜವಾದ ಕಾರಣವನ್ನು ಕಂಡುಕೊಳ್ಳಲಾಗುವುದಿಲ್ಲ. ಒಂದು

ವೇಳೆ ಸುಳುಹು ಸಿಕ್ಕಿದರೂ ಆಗ ನಂಬಿಕೆ–ನಿಜ ಸ್ಥಿತಿಗಳ ನಡುವೆ ಸಂಘರ್ಷವೇರ್ಪಟ್ಟು ಕಟ್ಟಕಡೆಗೆ ತನ್ನ ಪಾಪಕಾರ್ಯದ ಪ್ರಾಯಶ್ಚಿತ್ತ ಆ ರೂಪದಲ್ಲಿ ಕಾಣಿಸಿಕೊಂಡಿದೆ ಯೆಂಬ ಅಂಧಶ್ರದ್ಧೆಯ ಸಮಾಧಾನ. ಇದೇ ಮಾತನ್ನು ಬೇರೆ ಸಂದರ್ಭಗಳಿಗೂ ಅನ್ವಯಿಸಬಹುದು. ಉದಾಹರಣೆಗೆ – ಬಡತನ. ಭಾರತದಲ್ಲಿ ಬಡವರು ತುಂಬಿದ್ದಾರೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಕೆಲವರಲ್ಲೆ ಕೋಟಿಗಟ್ಟಲೆ ಸಂಪತ್ತಿರುವುದು ಯಾಕೆ ? ಹೆಚ್ಚು ಜನ ದುರ್ಬಲಸ್ಥಿತಿಯಲ್ಲಿರುವುದು ಯಾಕೆ ? ಅಪರೂಪದ ವೈಜ್ಞಾನಿಕ ಅಭಿಪ್ರಾಯಗಳು ಬಂದರೂ ಹೆಚ್ಚು ಜನ ಕಡೆಗೆ ತಾಳುವ ನಿಲುವು : ಪುಣ್ಯವಂತರು ಸಿರಿವಂತರಾದರು ; ಪಾಪಿಗಳು ಬಡವರಾದರು ; ಅಥವಾ ಎಲ್ಲಾ ವಿಧಿವಿಲಾಸ. (ಬದುಕು ಜಟಕಾ ಬಂಡಿ, ವಿಧಿಯದರ ಸಾಹೇಬ – ಎಂದು ಸಲೀಸಾಗಿ ಹೇಳಬಲ್ಲರು ಇಲ್ಲಿಯ ಜನ) ಅಂದರೆ ಬಡವ – ಬಲ್ಲಿದರೆಂಬ ಅಂತರ ಇಲ್ಲಿರುವವರ 'ವಿಲಾಸ'ದಿಂದ ಸೃಷ್ಟಿಯಾದ ಸಮಸ್ಯೆ ಅಲ್ಲ ಎಂದರ್ಥ. ಶೋಷಿತ ವರ್ಗ ಇಂಥ ನಂಬಿಕೆಯಲ್ಲಿ ಶ್ರದ್ಧೆಯಿಟ್ಟಾಗ ಶೋಷಕವರ್ಗ ಆತಂಕ ರಹಿತವಾಗಿರಬಹುದು ; ಪ್ರತಿಷ್ಠಿತವಾಗುಳಿಯಬಹುದು. ಆದ್ದರಿಂದ ಇದು ಬದಲಾವಣೆ ಬಯಸದ, ಶೋಷಕರಿಗೆ ಷಾಮೀಲಾದ ನಂಬಿಕೆ. ಇಂಥ ಧೋರಣೆಯನ್ನು ಬಿತ್ತಿ ಬೆಳೆಯುವುದರ ಪರಿಣಾಮವನ್ನು ಬಿಡಿಸಿ ಹೇಳಬೇಕಾಗಿಲ್ಲ. ವಿಚಾರ ಸಾಹಿತ್ಯವಾಗಲಿ, ಸೃಜನಾತ್ಮಕ ಸಾಹಿತ್ಯವಾಗಲಿ, ಈ ರೀತಿಯ ಧೋರಣೆಯಿಂದ ಪ್ರೇರಣೆ ಪಡೆದು ಪರ ವಹಿಸಿದ್ದರೆ ಶೋಷಕ ವರ್ಗ ಅಥವಾ ವ್ಯವಸ್ಥೆಯ ಆಶಯವಿದೆ ಎನ್ನುವುದು ಅನಿವಾರ್ಯ.

ಹಾಗೆ ನೋಡಿದರೆ ಬಹುಪಾಲು ಕನ್ನಡ ಸಾಹಿತ್ಯ ಒಂದಲ್ಲ ಒಂದು ವಿಧದಿಂದ – ಶೋಷಣೆ, ಸಂಪ್ರದಾಯಗಳ ವಿರುದ್ಧ ನಿಂತಿದ್ದೇವೆಂದು ನಮ್ಮ ಕವಿಗಳು, ಕವಿ ವಿಮರ್ಶಕರು ಅಂದುಕೊಂಡಾಗಲೂ – ಮೂಲಸ್ಥಿತಿಯಲ್ಲಿ ವ್ಯವಸ್ಥೆಯ ಅಂಗ ವಾಗಿಯೇ ಇತ್ತು. ಅದು ಹೊರಬೀಳುವುದು – ಕಲಾತ್ಮಕ ಅಂಶಗಳಿಗೆ ಅಗತ್ಯಕ್ಕಿಂತ ಹೆಚ್ಚು ಪ್ರಾಶಸ್ತ್ಯ ಕೊಡದೆ, ಅದನ್ನೆ ಮುಖ್ಯಮೌಲ್ಯಮಾಪನ ದ್ರವ್ಯ ಮಾಡಿ ಕೊಳ್ಳದೆ, ಧೋರಣೆಯ ಬಗ್ಗೆ ಮಾತಾಡ ಹೊರಟಾಗ. ಇಂಥ ವಿಶ್ಲೇಷಣೆ ಸಾಹಿತ್ಯ ದಲ್ಲಿ ಧೋರಣೆಯ ಸ್ವರೂಪದ ಬಗೆಗೆ ಲಾಭಪ್ರದ ಅರಿವು ಮೂಡಿಸಬಹುದು.

ಕನ್ನಡದ ಬಹಳಷ್ಟು ಪ್ರಾಚೀನ ಕವಿಗಳಿಗೆ ರಾಜಾಸ್ಥಾನವೇ ದಿಕ್ಕು ದೆಸೆಯಾಗಿತ್ತು. ರಾಜಪ್ರಭುತ್ವವು ಧರ್ಮ, ಸಾಹಿತ್ಯ, ಲಲಿತಕಲೆ – ಎಲ್ಲದರ ಸಂರಕ್ಷಣಾ ಸ್ಥಾನವಾಗಿದ್ದರಿಂದ ಕವಿಗಳೂ ಅದನ್ನು ಅವಲಂಬಿಸಿದರು. ಪ್ರಭುತ್ವವರ್ಗ ಅಧಿಕಾರವನ್ನು ಹಿಡಿದಿದ್ದರೂ ಸಮಾಜದ ಬದುಕಿನ ಮೇಲೆ ದಟ್ಟ ಪ್ರಭಾವ ಬೀರಿ ಬೇರೂರಿದ ವಿಚಾರಗಳನ್ನು ಹುಟ್ಟುಹಾಕಿದ ಬುದ್ಧಿವಂತರನ್ನು ಬಿಟ್ಟುಕೊಡುವುದು ಸಾಧ್ಯವಿರಲಿಲ್ಲ. ಪ್ರಭುತ್ವದ ತಲೆಗೆ ಹತ್ತಿದ ಬುದ್ಧಿಯೂ ಇಂಥವರ ವರಪ್ರಸಾದವೇ

ಆಗಿದ್ದರಿಂದ ಅಲ್ಲಿ ವೈಚಾರಿಕ ವಿರೋಧಕ್ಕೆ ಆಸ್ಪದವಿರಲಿಲ್ಲ. ಇಂಥ ಕೇಂದ್ರಸ್ಥಾನದಿಂದ ಹೊರಡುವ ಸಾಹಿತ್ಯದ ಧೋರಣೆ ವ್ಯವಸ್ಥೆಯಿಂದ ಬಹಳ ಭಿನ್ನವಾಗಿರಲು ಹೇಗೆ ಸಾಧ್ಯ? ರಾಜನನ್ನು ಹೊಗಳದಿದ್ದರೆ ಕಷ್ಟ; ತಮ್ಮ ಧರ್ಮದ ಬಗ್ಗೆ ಇಷ್ಟ. ಹೀಗಾದ್ದರಿಂದ ಒಂದು ಲೌಕಿಕ, ಇನ್ನೊಂದು ಆಗಮಿಕ ಕಾವ್ಯ ಬರೆಯುವ 'ಉಪಾಯ' ಮೂಡಿಬಂದಿರಬಹುದು. ಆ ಮಿತಿಯಲ್ಲೆ ಪ್ರಶಂಸಾರ್ಹ ಪ್ರತಿಭೆ ತೋರಿದ್ದಕ್ಕೆ ಪಂಪನಂಥ ಕವಿಗಳನ್ನು ನಾವು ನೆನೆಯುತ್ತೇವೆಂಬುದು ನಿಜ. ಚರಿತ್ರೆಯ ಅನಿವಾರ್ಯತೆಯಿಂದ ಯಥಾಸ್ಥಿತಿಗೆ ಹೆಚ್ಚು ಗೌರವ ಕೊಡಲಾಯಿತೆಂಬುದೂ ನಿಜ. ಇನ್ನು, ಹರಿಹರನನ್ನು ಕೆಲವರು ಕ್ರಾಂತಿಕಾರ ಕವಿ ಎಂದರು. 'ಕ್ರಾಂತಿ' ಎಂಬುದು 'ವ್ಯವಸ್ಥೆ'ಯನ್ನು ಮೂಲಭೂತವಾಗಿ ವಿರೋಧಿಸುವುದರಿಂದ ಹರಿಹರನನ್ನು ಕ್ರಾಂತಿಕಾರಿ ಎಂದು ಕರೆಯುವಾಗ ಆ ಬಗೆಗಿನ ಅಸ್ಪಷ್ಟ ಅರಿವೇ ಕಾರಣವಿರಬಹುದು. ರಾಜಾಶ್ರಯವನ್ನು ಧಿಕ್ಕರಿಸಿದನೆಂದು ಕೆಲವರು ಹಾಗೆಂದಿರಬಹುದೇನೊ; ಆದರೆ ರಾಜಾಶ್ರಯವನ್ನು ಧಿಕ್ಕರಿಸಿದ ವ್ಯಕ್ತಿ ನಾನು ಮೊದಲೇ ತಿಳಿಸಿರುವಂತೆ ಶೋಷಣೆಯ ಸಾಧನಗಳಲ್ಲೊಂದಾದ ದೈವಾ (ಧರ್ಮಾ) ಶ್ರಯಕ್ಕೆ ಹೋದನಲ್ಲ? ಅದೇ ಅವನ ಮುಖ್ಯ ಕಾಳಜಿಯಾಯಿತಲ್ಲ? [ಈ ಕಾಳಜಿಗೆ ಸಾಂಸ್ಕೃತಿಕ ಕಾರಣಗಳಿರಬಹುದು.] ಇನ್ನು, ರಗಳೆ ಎಂಬ ಹೊಸ ಛಂದೋಮಾರ್ಗ ಹಿಡಿದದ್ದಕ್ಕೆ ಹಾಗೆ ಕರೆಯುವುದಾದರೆ ಕನ್ನಡದಲ್ಲಿ ಅನೇಕರು ಕ್ರಾಂತಿಕಾರಿ ಕವಿಗಳಾಗಿಬಿಡುತ್ತಾರೆ. 'ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ' ಬರೆಯುವುದನ್ನು ವಿರೋಧಿಸಿ 'ಪೊಗಳರ್ಚಿಸೆಮ್ಮ ಕಡು ಸೊಂಪಿನ ಪೆಂಪಿನ ಹಂಪೆಯಾಳ್ದನ' ಎಂದು ಕರೆಕೊಟ್ಟ ಕವಿಯ ಒಲವು–ನಿಲವು ಏನೆಂದು ಅಲ್ಲೇ ಸುವ್ಯಕ್ತ.

ಇದೆಲ್ಲ ಒಂದು ಕಡೆ ಇರಲಿ; ಸಮಾಜ ಹಾಗೂ ಕಾವ್ಯ ಸಂಪ್ರದಾಯಗಳ ವಿರುದ್ಧ ನಿಂತು ಚಾರಿತ್ರಿಕಸ್ಥಾನ ಗಳಿಸಿದ ಕೆಲವು ಸಾಹಿತ್ಯ ಸಂದರ್ಭಗಳನ್ನು ನೋಡೋಣ. ಯಾಕೆಂದರೆ ಇದರಿಂದ ನಾನು ಸಾಹಿತ್ಯವನ್ನು ಹೇಗೆ ನೋಡಬೇಕೆಂದು ಬಯಸುತ್ತೇನೆಂಬುದು ಸ್ಪಷ್ಟವಾಗಬಹುದು.

ವಚನ ಸಾಹಿತ್ಯ ಕನ್ನಡದಲ್ಲಿ ವಿಶಿಷ್ಟವಾದ ಪ್ರಕಾರವಾಗಿದೆ. ವೈದಿಕ ಧರ್ಮದ ಕೆಟ್ಟ ಸಂಪ್ರದಾಯಗಳ ವಿರುದ್ಧ ಸಿಡಿದ ಚಳುವಳಿ ಹನ್ನೆರಡನೇ ಶತಮಾನದ, ಅಷ್ಟೇ ಅಲ್ಲ, ಕರ್ನಾಟಕ ಇತಿಹಾಸದ ಒಂದು ಪ್ರಮುಖ ಸಾಂಸ್ಕೃತಿಕ ಘಟನೆ. ಸಮಾಜದಲ್ಲಿ ಹೀನಸ್ಥಿತಿಗೆ ತಳ್ಳಲ್ಪಟ್ಟವರನ್ನು ತಮ್ಮ ಸಮಾನಸ್ಥಾನದಲ್ಲಿ ಕಂಡದ್ದಕ್ಕಾಗಿ ವಚನಕಾರರು ಅಭಿನಂದನಾರ್ಹರು. ರಾಜಾಶ್ರಯದ ಸಾಹಿತ್ಯ ಜನತೆಯ ಹತ್ತಿರ ಬಂದದ್ದು, ಗದ್ಯಗಂಧಿಯಾದ ವಿಶಿಷ್ಟ ಫಾರಂ (Form) ರೂಪುಗೊಂಡದ್ದು, ಆಡುನುಡಿ ಕಾವ್ಯ ಭಾಷೆಯಾದದ್ದು–ವಚನಕಾರರ ಸಾಧನೆಗಳು. ಜೊತೆಗೆ ಮುಖ್ಯವಾಗಿ ಧಾರ್ಮಿಕ ಧೋರಣೆಯೊಂದನ್ನು ರೂಢಿಸಿಕೊಂಡ ಇವರು ಕೆಲವು ಹಳೆಯ ಮೌಲ್ಯ

ಗಳನ್ನು ಅಲ್ಲಗಳೆದು ನಿಂತರು. ವಚನಕಾರರಿಂದ ಸೃಷ್ಟಿಯಾದ ಸಾಹಿತ್ಯದಲ್ಲಿರುವ ಧೋರಣೆಯನ್ನು ವಿಶ್ಲೇಷಿಸುವ ಮುನ್ನ, ವಚನ ಚಳುವಳಿಯು ಎದುರಿಸಬೇಕಾಗಿದ್ದ ಅಂದರೆ ವೀರಶೈವ ಧರ್ಮಪ್ರವರ್ತಕ ಬಸವಣ್ಣನವರು ನೋಡಿರಬಹುದಾದ ಸಾಮಾಜಿಕ ಪರಿಸರ ಹೇಗಿತ್ತು ಎಂಬುದನ್ನು ನೋಡುವುದು ಉತ್ತಮ. ಯಾಕೆಂದರೆ ಆ ಪರಿಸರವನ್ನು ಪ್ರತಿಭಟಿಸಿದ ಧೋರಣೆ ವಚನ ಸಾಹಿತ್ಯದಲ್ಲಿ ಮೂಡಿದ್ದು, ಅದರ ಮೌಲ್ಯ ವಿವೇಚನೆಗೆ ಇದು ಸಹಾಯಕ. 'ಬಸವಣ್ಣನವರು' ಎಂಬ ತಮ್ಮ ಗ್ರಂಥದಲ್ಲಿ ಡಾ॥ ಎಂ. ಚಿದಾನಂದಮೂರ್ತಿಯವರು ಸದರೀ ಸಾಮಾಜಿಕ ಪರಿಸರದ ಬಗ್ಗೆ ಹೇಳಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಅದು ಹೀಗಿದೆ :

"ಸಮಾಜದಲ್ಲಿ ಶ್ರೀಮಂತರ, ದರಿದ್ರರ ಮಧ್ಯೆ ಒಂದು ದೊಡ್ಡ ಅಂತರವೇ ಉಂಟಾಗಿದ್ದಿತು. ಇದೇ ಮಾತುಗಳು ವರ್ತಕರಿಗೂ ಅನ್ವಯಿಸುತ್ತವೆ. ಶ್ರೀಮಂತ ರೈತರು ತಾವು ಜಮೀನನ್ನು ಕೊಳ್ಳುವಾಗ ಒಂದು ಕೋಲನ್ನು, ಮಾರುವಾಗ ಇನ್ನೊಂದು ಕೋಲನ್ನು ಬಳಸುತ್ತಿದ್ದರೆ, ಎಷ್ಟೋ ವರ್ತಕರು ಸಾಮಾನುಗಳನ್ನು ಅಳೆಯಿಸಿಕೊಳ್ಳುವಾಗ ಒಂದು ಬಳ್ಳವನ್ನೂ ಅಳೆದುಕೊಡುವಾಗ ಇನ್ನೊಂದು ಬಳ್ಳವನ್ನೂ ಬಳಸುತ್ತಿದ್ದರು. ಇವೆರಡನ್ನೂ ಬ್ರಹ್ಮಶಿವನೆಂಬ ಕವಿ ಖಂಡಿಸಿದ್ದಾನೆ. 'ಸೆಟ್ಟಿಯ ಬಳ್ಳಂ ಕಿಱಿದು' ಎಂದು ಪಂಪಕವಿ ಮಾರ್ಮಿಕವಾಗಿ ಹೇಳಿದ್ದಾನೆ. ಶ್ರೀಮಂತರಲ್ಲಿ, ಶ್ರೀಮಂತರಾದ ವರ್ತಕರಲ್ಲಿ ನಿಜವಾದ ಧರ್ಮಬುದ್ಧಿಯವರಿದ್ದರೂ ಹೀಗೆ ವಂಚನೆಯೇ ಮೂಲ ಕಸುಬಾದ ಜನರೇ ಅವರಲ್ಲಿ ಹೆಚ್ಚಾಗಿದ್ದಿರಬಹುದು. ಶ್ರೀಮಂತಿಕೆ ಗುಪ್ತ ಮೋಸದ ನಾಗರಿಕ ರೂಪ.........

ಬ್ರಾಹ್ಮಣ–ಅಬ್ರಾಹ್ಮಣ, ಶ್ರೀಮಂತ–ದರಿದ್ರ, ಆ ಜಾತಿ–ಈ ಜಾತಿ, ಈ ವ್ಯತ್ಯಾಸಗಳಲ್ಲದೆ ಒಂದೊಂದು ಪಂಗಡದಲ್ಲೂ ಮತ್ತೆ ಗಂಡು–ಹೆಣ್ಣು ಎಂಬ ಅಂತರ ವಿದ್ದಿತು...ಪುರುಷ ಹೆಚ್ಚು ಸ್ತ್ರೀ ಕಡಮೆ ಎಂಬ ನಂಬಿಕೆ ಸಾಧಾರಣವಾಗಿದ್ದಿತು.

...ಹರಿಜನರು...ಸಾಮಾಜಿಕವಾಗಿ ಬಹು ಕೆಳಗೆ ಇದ್ದವರು. ಇವರ ವಾಸ ಊರಿನ ಹೊರಗೆ...ಜನರು ಇವರನ್ನು ಮನೆಯ ಒಳಕ್ಕೆ ಹೊಗಿಸಿಕೊಳ್ಳುತ್ತಿರಲಿಲ್ಲ. ಅವರು ಊರಲ್ಲಿ ಸತ್ತ ಪ್ರಾಣಿಗಳನ್ನು ಹೊತ್ತುಕೊಂಡು ಹೋಗಿ, ಕತ್ತರಿಸಿ, ಅವುಗಳ ಮಾಂಸವನ್ನು ತಿನ್ನುತ್ತಿದ್ದರು. ಅವುಗಳ ಚರ್ಮದಿಂದ ದೋಣಿ, ಮಿಣಿ, ಚಾಟಿ, ಪಾದರಕ್ಷೆ ಮುಂತಾದವುಗಳನ್ನು ತಯಾರಿಸಿಕೊಡುತ್ತಿದ್ದರು. ಅವರು ಇತರ ಮನುಷ್ಯರಂತೆ ಕೈ, ಕಾಲು, ಕಣ್ಣುಗಳಿರುವುದರಿಂದ ಮಾತ್ರ ಮನುಷ್ಯರು. ಉಳಿದ ಯಾವ ದೃಷ್ಟಿಗಳಿಂದಲೂ ಅವರು ಮನುಷ್ಯರಾಗಿರಲಿಲ್ಲ.

ಕೆಳವರ್ಗದ ಸಾಮಾನ್ಯ ಜನರಲ್ಲಿ ಅಂಧಶ್ರದ್ಧೆ, ಅಜ್ಞಾನಗಳು ಮುಚ್ಚಿ ಮುಸುಕಿದ್ದುವು. ಅವರು ಪೂಜಿಸುತ್ತಿದ್ದ ದೈವಗಳ ಸಂಖ್ಯೆ ಅಪಾರ...ಇನ್ನು ಕೆಲವು ವ್ರತ

ಗಳಂತೂ ಭೀಕರ. ಬಾಯಿಗೆ ಬೀಗ ಹಾಕಿಕೊಳ್ಳುವುದು ; ಬೆಂಕಿಯ ಕೊಂಡವನ್ನು ಹಾಯುವುದು ; ಸಿಡಿಯ ಹರಕೆ; ಬೇವಿನ ಉಡಿಗೆ ಉಡುವುದು ; ಹೊಲಸನ್ನು ತಲೆಯಮೇಲೆ ಹೊತ್ತು 'ಉಧೋ' ಎನ್ನುವುದು ; ಚಾಟಿಯಿಂದ ಹೊಡೆದುಕೊಳ್ಳುವುದು ; ಇತ್ಯಾದಿ ಹೇಯವೂ ಅಸಹ್ಯವೂ ಆದ ಪದ್ಧತಿಗಳಿದ್ದುವು...ಈ ದೈವಗಳ ವಿಷಯವಾಗಿ ಜನರಲ್ಲಿ ಪ್ರಚಲಿತವಾಗಿದ್ದ ಕತೆಗಳೋ ಅತಿ ವಿಚಿತ್ರ..."

ಈ ವಿವರಣೆ ಅಂದಿನ ಧಾರ್ಮಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಕಟ್ಟಿಕೊಟ್ಟಿದೆ. ಇಲ್ಲಿ ಗೊತ್ತಾಗುವಂತೆ–ಆಗ ವರ್ಣಾಶ್ರಮ ಧರ್ಮದ ಕ್ರೌರ್ಯ, ಶ್ರೀಮಂತ–ದರಿದ್ರರೆಂಬ ಪ್ರಮುಖ ಅಂತರ, ವರ್ತಕರ ವಂಚನೆ, ದೇವರ ಧರ್ಮದ ಹೆಸರಿನಲ್ಲಿ ಅಂಧಶ್ರದ್ಧೆ–ಇಷ್ಟೆಲ್ಲ ತುಂಬಿತ್ತು. ಈ ಸ್ಥಿತಿಯಲ್ಲಿ ಶೋಷಣೆಯ ಎರಡು ಮುಖಗಳಿವೆ :

ಒಂದು : ಧರ್ಮದ ಹೆಸರಿನಲ್ಲಿ ಸಾಮಾಜಿಕ ಶೋಷಣೆ.

ಎರಡು : ಆರ್ಥಿಕ ಶೋಷಣೆ.

ಆದರೆ ಇಂಥ ಸ್ಥಿತಿಗೆ ಪ್ರತಿಭಟನೆಯಾಗಿ ಬಂದ ವಚನಕಾರರ ಚಳುವಳಿ ಆರ್ಥಿಕ ಶೋಷಣೆಯನ್ನು ವಿರೋಧಿಸಿ ಹೋರಾಟ ಸಾರಲಿಲ್ಲ. ಸಾಮಾಜಿಕ ಸ್ಥಾನಮಾನಗಳಲ್ಲಿ ಇದ್ದ ಅಂತರವನ್ನು ಗುರುತಿಸಿ, ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯವನ್ನು ತೊಡೆಯಲು ಪ್ರಾಮಾಣಿಕವಾಗಿ ಪ್ರಯತ್ನಿಸಿತು. ಆಗ, ಸಾಮಾಜಿಕ ಅನ್ಯಾಯಕ್ಕೆ ಕಾರಣವಾಗಿದ್ದ ವೈದಿಕ ಧರ್ಮದ ಪಕ್ಕಾರರರನ್ನು ತೆಗಳುವ, ಡಾಂಭಿಕ ಭಕ್ತರನ್ನು ಬಯಲಿಗೆಳೆಯುವ, ಶಿವಲೀಲೆಯನ್ನು ಬಿತ್ತರಿಸಿ ಶರಣರ ಮಹತ್ವವನ್ನು ವೈಭವಿಸುವ ಕ್ರಿಯಾಶೀಲತೆ ಕಂಡು ಬಂತು; ಇದಕ್ಕೆ ವಚನ ಸಾಹಿತ್ಯದಲ್ಲೆ ಆಧಾರವಿದೆ. ಈ ಎಲ್ಲ ಕ್ರಿಯೆಯ ಹಿಂದೆ ಶೋಷಣೆಯ ಸಮಗ್ರ ಮೂಲವನ್ನು ಅನ್ವೇಷಿಸುವ ಪ್ರಯತ್ನವಿಲ್ಲ. ಧರ್ಮವನ್ನು ಪರಿಷ್ಕರಿಸಿ ಮತ್ತೆ ಪ್ರತಿಷ್ಠಾಪಿಸುವ ಪ್ರಯತ್ನವಿದೆ. ಆದ್ದರಿಂದ ಇದೊಂದು ಧಾರ್ಮಿಕ ಪರಿಷ್ಕರಣ ಚಳುವಳಿ. ಈ ಸಂದರ್ಭದಲ್ಲಿ ಸಾಮಾಜಿಕ ಅಸ್ಪೃಶ್ಯರ ಬಗ್ಗೆ ತೋರಿದ ವಿಶಾಲ ಮನೋಧರ್ಮ ದಿಟ್ಟವಾದುದೆಂದು ಪ್ರಶಂಸಿಸುವಾಗಲೂ, ಈ ಮೂಲಕ ಧಾರ್ಮಿಕ ವ್ಯವಸ್ಥೆಯ ವ್ಯಾಪ್ತಿ ಹಿಗ್ಗಿತೆಂಬುದನ್ನು ಮರೆಯಲಾಗದು.

ವಚನ ಸಾಹಿತ್ಯದಂತೆ ವಿಶಿಷ್ಟ ಹೆಸರು ಮಾಡಿದ ದಾಸ ಸಾಹಿತ್ಯವೂ ಅಷ್ಟೆ. ಮನೆಮನೆಯ ಬಾಗಿಲಿಗೆ ಸಾಹಿತ್ಯದ ಮೂಲಕ ತಮ್ಮ ಸಂದೇಶ ತಲುಪಿಸಿದ್ದು ದಾಸರ ಸಾಧನೆ ; ಜನರನ್ನು ತಲುಪುವುದಕ್ಕೆ ಸಹಕಾರಿಯಾದ ಭಾಷೆ, ಸಂಗೀತದ ಬಳಕೆ ಅವರಿಂದಾಯಿತು. ಹರಿಯ ದಾಸರಾಗುವುದನ್ನು ಪರಮ ಪದವೆಂದು ಭಾವಿಸಿದ ಇವರು ವಚನಕಾರರಂತೆಯೆ ಕಪಟ–ಯಾಂತ್ರಿಕ ಭಕ್ತಿ, ಅಸಂಬದ್ಧ ಮಡಿವಂತಿಕೆಗಳನ್ನು

ವ್ಯಂಗ್ಯವಾಗಿ ಚುಚ್ಚಿದರು. ವಚನಕಾರರು ಶಿವಲೀಲೆಗೆ ಪ್ರಾಶಸ್ತ್ಯ ಕೊಟ್ಟರೆ ಇವರು ಹರಿಲೀಲೆಗೆ ಕೊಟ್ಟರು. ಇವರಲ್ಲೂ ಮತಧರ್ಮದ ಮಿತಿ ಇತ್ತು.

ಧರ್ಮ ಗಳಿಸಿರುವ ವ್ಯಾಪ್ತಿ ದೊಡ್ಡದು. ಈಗ ಅದು ಅಂಧಶ್ರದ್ಧೆಗಳ ಸ್ಫೂರ್ತಿ ಕೇಂದ್ರವಾಗಿದೆ. ಅದು ಹುಟ್ಟು ಹಾಕಿ, ಬೆಳೆಸಿ ಬಲಿಸಿದ ವಿಚಾರಧಾರೆ ಶೋಷಣೆಗೆ ಒಂದು ಪ್ರಮುಖ ಸಾಧನವಾಗಿದೆ. ಅಂದರೆ ಶೋಷಣೆಯ ಮೂಲಗಳಲ್ಲಿ ಅದೂ ಒಂದು. ಆದ್ದರಿಂದ ಶೋಷಣೆಯನ್ನು ಪ್ರತಿಭಟಿಸುವಾಗ ಇದರ ಪ್ರತಿಭಟನೆ ಅನಿವಾರ್ಯ. ಆದರೆ ಮೇಲೆ ಹೇಳಿದ ಎರಡೂ ಸಾಮಾಜಿಕ, ಸಾಹಿತ್ಯ ಸಂದರ್ಭಗಳಲ್ಲಿ ಹಾಗಾಗಲಿಲ್ಲ. ವಚನಕಾರರು ಸಾಮಾಜಿಕ ಶೋಷಣೆಯನ್ನು ಧಾರ್ಮಿಕ ತಳಹದಿಯಿಂದಲೇ ವಿರೋಧಿಸಿದ್ದರಿಂದ ಶೋಷಣೆ ಮತ್ತು ಧರ್ಮಗಳ ಸೂಕ್ಷ್ಮ ಸಂಬಂಧವನ್ನು ಗುರುತಿಸಲಿಲ್ಲ. ದಾಸರಿಗಾಗಲಿ, ವಚನಕಾರರಿಗಾಗಲಿ ಮುಖ್ಯವಾಗಿ ಧರ್ಮ ವಿರೋಧ ನೀತಿ ಇರಲೇ ಇಲ್ಲ. ಅದು ಅವರ ಉದ್ದೇಶಕ್ಕೇ ವಿರುದ್ಧ. ಆದ್ದರಿಂದ ತಂತಮ್ಮ ಮತ ಧರ್ಮಗಳನ್ನು ಪ್ರಸಾರ ಮಾಡುವ, ವಿಸ್ತರಿಸುವ ಕಾಳಜಿ ಇಲ್ಲಿ ನಿಜವಾದದ್ದು. ಅಂದರೆ ಇದು ಮೂಲತಃ ಧಾರ್ಮಿಕ ವ್ಯವಸ್ಥೆಯಲ್ಲಿ ನಿಷ್ಠೆ ಕುದುರಿಸುವ ಕ್ರಿಯೆ.

ಕೆಲವು ಸುಧಾರಣೆಗಳನ್ನು ಅಳವಡಿಸಿಕೊಂಡ ಇಂಥ ಕ್ರಿಯೆ ಆಯಾ ಸಂದರ್ಭದಲ್ಲಿ ಮಹತ್ವವೆನ್ನಿಸುವುದು ಸಹಜ. ಆದರೆ ಇದು ನಾವು ದೋಷಪೂರ್ಣ ವ್ಯವಸ್ಥೆಯ ಅಂಗವಾಗಿಯೇ ಬದುಕುವಂತೆ ಮಾಡುತ್ತದೆಯೆಂಬುದು ನನಗಿಲ್ಲಿ ಮುಖ್ಯ. ಇದರ ಪರಿಣಾಮ ಮೂಲಭೂತ ಬದಲಾವಣೆಯ ಮುಂದೂಡಿಕೆ ಅಥವಾ ತಪ್ಪಿಸುವಿಕೆ. ಇದರಿಂದ ಅರಿಯಬೇಕಾದ್ದು–ಪರಿಷ್ಕರಣವಾದ ಮೊದ ಮೊದಲು ಆಪ್ಯಾಯಮಾನವಾಗಿ ಕಂಡರೂ ಕಡೆಗೆ ಶೋಷಕ ಶಕ್ತಿಗಳು ಒಂದಲ್ಲ ಒಂದು ರೂಪದಲ್ಲಿ ಇರುತ್ತವೆ—ಎಂಬ ಸತ್ಯ.

ಸಮಾಜದಲ್ಲಿ ಬುದ್ಧಿಜೀವಿಗಳೆಂಬ 'ಪ್ರಶಸ್ತಿ' ಪಡೆದ ಸಾಹಿತಿಗಳು ಇದನ್ನು ಅಗತ್ಯವಾಗಿ ಗಮನಿಸಬೇಕು. ಯಾಕೆಂದರೆ ಸಾಹಿತ್ಯ ಮತ್ತು ಸಮಾಜ ಅವಿಭಾಜ್ಯ ಅಂಗಗಳು. ತಾನು ಇಚ್ಛಿಸಲಿ ಬಿಡಲಿ ಸಾಹಿತಿಯ ಕೃತಿ ಸಾಮಾಜಿಕವಾಗಿ ಪರಿಣಾಮ ಬೀರುವಂಥದು. ಭಾರತದಂಥ ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಕಡಮೆಯಿದ್ದು, ಸಾಹಿತ್ಯ ಓದುವ ಜನ ಅತಿ ಕಡಮೆ ಎಂಬ ಮಾತು ನಿಜವಾದರೂ, ನನಗಿಲ್ಲಿ ಮುಖ್ಯವಾದದ್ದು ಸಾಹಿತ್ಯ ಎಷ್ಟು ಜನರ ಮೇಲೆ ಪರಿಣಾಮ ಬೀರುತ್ತದೆಯೆಂಬುದಲ್ಲ; ಸಮಾಜದ ಆಲೋಚನಾ ವಿಧಾನದಲ್ಲಿ ಪ್ರಮುಖರಾಗಿ ಕಾಣಿಸಿ-ಕೊಳ್ಳುವ ಜನ ಎಷ್ಟರಮಟ್ಟಿಗೆ ತಮ್ಮ ಹೊಣೆ ಅರಿತಿದ್ದಾರೆಂಬುದು, ಎಷ್ಟರಮಟ್ಟಿಗೆ ಸಮಾಜದ ಸ್ಥಿತಿಗತಿಗಳ ಬಗ್ಗೆ ವೈಜ್ಞಾನಿಕ ಚಿಂತನೆ ನಡೆಸಿದ್ದಾರೆಂಬುದು. ವೈಜ್ಞಾನಿಕ ಚಿಂತನೆಯೆಲ್ಲ ಶಾಸ್ತ್ರಗ್ರಂಥಗಳಿಗೆ ಸರಿ ಎಂದು ಸಲೀಸಾಗಿ ಜಾರಿಕೊಳ್ಳುವ ಮಾತು

ಬರುತ್ತದೆಯೆಂದು ನನಗೆ ಗೊತ್ತು. ನಾನಿಲ್ಲಿ ಹೇಳುವುದು ಆ ಚಿಂತನೆಯನ್ನು ಸಾಹಿತ್ಯ ಕೃತಿಯಲ್ಲಿ ಭಟ್ಟಿಯಿಳಿಸಬೇಕು ಎಂದಲ್ಲ; ಆ ಚಿಂತನೆ ನಮಗೊಂದು ದೃಷ್ಟಿಕೋನ (ಅಥವಾ ಧೋರಣೆ)ವನ್ನು ಕೊಡುತ್ತದೆ ಮತ್ತು ಆ ಮೂಲಕ ಬದುಕನ್ನು ನೋಡುವಂತೆ ಮಾಡುತ್ತದೆ–ಎಂದು.

ಇದೇ ಮಾತನ್ನು ಆಧುನಿಕ ಕನ್ನಡ ಸಾಹಿತ್ಯದ ಒಂದೆರಡು ಸಂದರ್ಭಗಳಿಗೆ ಅನ್ವಯಿಸಿ ನೋಡಬಹುದು. ಹಳಬರೇನೋ ಅಂಥ ಧೋರಣೆಯನ್ನು ಹೊಂದಿದ್ದರು, ಹರಡಿದರು. ಆಧುನಿಕರು ಧೋರಣೆಯೊಂದನ್ನು ತಳೆದರೆ? ತಳೆದಿದ್ದರೆ ಅದು ಎಂಥದು? ಸಾಹಿತ್ಯ ಮತ್ತು ಸಮಾಜದ ನಿಕಟತೆಯ ಪ್ರಜ್ಞೆ ಇವರಿಗಿತ್ತೆ?—ಇಂಥ ಪ್ರಶ್ನೆಗಳಿಗೆ ದೊರೆಯುವ ಉತ್ತರ ಆಧುನಿಕರ ಸಾಹಿತ್ಯ ಕಲ್ಪನೆಯ ಪರಿಚಯ ಮಾಡಿಕೊಡಬಹುದು.

ನಮ್ಮಲ್ಲಿ ನವೋದಯ—ನವ್ಯಕಾವ್ಯ, ಪ್ರಗತಿಶೀಲ ಚಳುವಳಿ—ಇವು ಮುಖ್ಯವಾದುವೆಂದು ಭಾವಿಸಬಹುದು. ನವೋದಯ ಕವಿಗಳು ವಸ್ತು ವೈವಿಧ್ಯಕ್ಕೆ ಹೆಚ್ಚು ಗಮನ ಹರಿಸಿದಂತೆ ಕಾಣುತ್ತದೆ. ಕಂಡುಂಡ ಕ್ಷಣಗಳಿಗೆ ಕಲಾರೂಪಕೊಡುವ ತೀವ್ರತೆಯೇ ಇಲ್ಲಿ ಅಧಿಕ ಪ್ರಮಾಣದಲ್ಲಿದೆ. ಇನ್ನು ಸಾಮಾಜಿಕ ದೃಷ್ಟಿಯಿಂದ ಹಳೆಯ ಶ್ರದ್ಧೆ ಬಿಟ್ಟ ಕವಿಗಳು ಕಡಮೆ. ಕುವೆಂಪು, ಬೇಂದ್ರೆ ಅವರಂಥ ಸುಧಾರಣಾಶೀಲರು ಬಂದಿದ್ದಾರೆ: ಧಾರ್ಮಿಕ ಅನ್ಯಾಯಗಳಿಗೆ ಸಿಡಿದಿದ್ದಾರೆ. ಬಡವರ ಬಗ್ಗೆ ನೊಂದಿದ್ದಾರೆ. ಆದರೆ ಮೂಲಭೂತ ಅಂಶಗಳನ್ನು ಕೆದಕುವ ಧೋರಣೆಯೊಂದು ಗಟ್ಟಿಯಾಗದೆ, ಆಯಾ ಸ್ಥಿತಿಯ 'ಅನುಭವ' ಮೂಡಿಸಿದ ಕಲಾತ್ಮಕ ನುಡಿರೂಪಗಳು ನಮ್ಮೆದುರು ಬರುವಂತಾಯಿತು. ಇದರಿಂದ ಒಂದುಕಡೆ ಅಸಹನೆ ಮೂಡಿಸಿದ್ದ ಪರಿಸ್ಥಿತಿ ಮತ್ತು ಅದರ ಕಾರಣಾಂಶಗಳು ಮತ್ತೊಂದು ಕಡೆ—ಈ ರೂಪದಲ್ಲಲ್ಲದಿದ್ದರೂ—ಇಷ್ಟವಾಗಿ ಬಿಡುವುದುಂಟು. ಕೆಲವೊಮ್ಮೆ ಆಸ್ತಿಕನೂ ದೇವರ ಮೇಲೆ ಅಸಾಧ್ಯ ಸಿಟ್ಟು ತೋರುವ ರೀತಿಯಲ್ಲಿ ಇದೆಲ್ಲ ನಡೆಯುತ್ತದೆ. ಅಂದರೆ ಈ ಸಿಟ್ಟು ಆತನ ವಿಚಾರಧಾರೆಯಲ್ಲಿ ಒಂದಾದದ್ದಲ್ಲ. ನವೋದಯ ಕವಿಗಳು ಸಾಮಾಜಿಕ ಪ್ರಜ್ಞೆ ತೋರಿದ ರೀತಿ ಇಂಥದೇ ಎಂದು ಸ್ಥೂಲವಾಗಿ ಹೇಳಬಹುದು.

ನವೋದಯ ಕಾವ್ಯದ ಕತೆ ಮುಗಿಯಿತೆಂದು ಅಟ್ಟಹತ್ತಿದ ನವ್ಯಕಾವ್ಯ ಮೊದಮೊದಲು ಒಟ್ಟಾರೆ ಧೋರಣೆಯೊಂದನ್ನು ತಳಹದಿಯಾಗಿಟ್ಟುಕೊಳ್ಳುವ ಭಾವನೆ ಮೂಡಿಸಿತ್ತು. ನವ್ಯಕಾವ್ಯದ ಪ್ರಮುಖ ಕವಿ ಗೋಪಾಲಕೃಷ್ಣ ಅಡಿಗರು ತಮ್ಮ 'ನಡೆದು ಬಂದದಾರಿ' ಕವನ ಸಂಕಲನದ ಮೊದಲಲ್ಲಿ ಬರೆದ ಕೆಲವು ಮಾತುಗಳು ಇಂಥ ಭಾವನೆಗೆ ಕಾರಣವಾದವೆನ್ನಬಹುದು. ಅವು ಹೀಗಿವೆ :

'ನಮ್ಮದೇಶಕ್ಕೆ ಸ್ವಾತಂತ್ರ್ಯ ಬರುವ ತನಕ ಇದ್ದ ವಾತಾವರಣ ಈಗ ಸಮೂಲ ಪರಿವರ್ತನಗೊಂಡಿದೆ. ಸ್ವಾತಂತ್ರ್ಯ ಸಂಗ್ರಾಮದ ಉದ್ವೇಗ, ಆದರ್ಶ, ಪರವಶ ತೆಯ ಹಾರಾಟ ಮುಗಿದು ಈಗ ನಮ್ಮ ಮನಸ್ಸು ಮತ್ತೆ ನೆಲಕ್ಕೆ ಇಳಿದಿದೆ...... ಹೊಸ ಆದರ್ಶಕ್ಕಾಗಿ ಹೊಸ ಕನಸಿಗಾಗಿ ದೇಶದ ಮನಸ್ಸು ಹಸಿದು ಕಾಯುತ್ತಿದೆ. ಇಂಥ ವಾತಾವರಣ ಸುತ್ತಮುತ್ತಲೂ ಇರುವಾಗ ಜೀವನಾವಲಂಬಿಯಾದ ಕಾವ್ಯವೂ ಪರಿವರ್ತನೆಗೊಳ್ಳುವುದು ಸಹಜ......... (ಆಧುನಿಕ ಕನ್ನಡ ಕಾವ್ಯ) ನೆಲದಮೇಲೆ ಕಾಲೂರಿ ನಿಂತು ನಕ್ಷತ್ರವನ್ನು ತುಡುಕುತ್ತಿದ್ದದ್ದು ಈಗ ನೆಲಬಿಟ್ಟು ಮೇಲೇರಿ ವೇದಾಂತದ ಮಂಜಿನಲ್ಲಿ ಮರೆಯಾಗಿ ಹೋಗುತ್ತಿದೆ....ಇಂಥ ಕಾಲದಲ್ಲಿ ಕಾವ್ಯಕ್ಕೆ ವಾಸ್ತವದ ರಕ್ತದಾನ ನಡೆಯಬೇಕು.........'

—ಈ ಮಾತುಗಳ ಸತ್ಯಾಸತ್ಯತೆ ಏನೇ ಇರಲಿ ಹೊಸಕಾವ್ಯಕ್ಕೆ ಕಾಲಿಡುವಾಗಿನ ಹೊಸ ಧೋರಣೆಯ ಸೂಚನೆಗಳು ಇಲ್ಲಿ ಕಾಣುತ್ತವೆ. ಆದರೆ ಮುಂದೆ ನವ್ಯಕವಿ ಗಳು form ಬಗ್ಗೆ ತಲೆ ಕೆಡಿಸಿಕೊಂಡಷ್ಟು ಧೋರಣೆಯ ಬಗ್ಗೆ ಕೆಡಿಸಿಕೊಳ್ಳಲಿಲ್ಲ. ಕಾವ್ಯವನ್ನು ಸಂಗೀತದ ಸಾಹಚರ್ಯದಿಂದ ಬಿಡಿಸುವ ಪ್ರಯತ್ನ, ಆಡುಭಾಷೆ, ಹೊಸ ತಂತ್ರ—ಇವುಗಳಿಗೆ ಪ್ರಾಶಸ್ತ್ಯಲಭಿಸಿ, ಸಾಮಾಜಿಕ ರಾಜಕೀಯ ವಿಷಯಗಳಲ್ಲಿ ನಿರ್ದಿಷ್ಟ ನಿಲುವಿಗೆ ತಲುಪುವುದು, ಆ ಮೂಲಕ ಬದುಕನ್ನು ಪರಿವೀಕ್ಷಣೆಗೊಳ ಪಡಿಸುವುದು, ಸಾಹಿತ್ಯಕ್ರಿಯೆಯ ಮುಖ್ಯಾಂಗವಾಗಬಹುದೆಂಬ ಬಗ್ಗೆ ನವ್ಯರು ನಿಷ್ಠರಾಗಲಿಲ್ಲ. ಇದರಿಂದ ಯಾವುದೇ ವರ್ಗಕ್ಕೆ ಸೇರಿದ ಸಾಹಿತಿಗಳು ವಸ್ತುವನ್ನು ಹೊರತುಗೊಳಿಸಿ, ಭಾಷೆ, ಶೈಲಿ, ತಂತ್ರ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಒಮ್ಮತಾಭಿ ಪ್ರಾಯ ತಾಳಿ ಸಾಹಿತ್ಯ 'ಚಳುವಳಿ'ಯ ಹೆಸರಿನಲ್ಲಿ ಸಲೀಸಾಗಿ ಒಂದಾಗಲು ಸಾಧ್ಯ ವಾಗುತ್ತದೆ. ಆದರೆ ನಿಜವಾದ ವೈಚಾರಿಕ ಸಂಘರ್ಷ ಸಂಭವಿಸುವುದು ವರ್ಗ ಧೋರಣೆಯನ್ನು ಆಧರಿಸಿದಾಗ. (ಆದ್ದರಿಂದಲೇನೊ ಇದನ್ನು ಬುದ್ಧಿವಂತಿಕೆಯಿಂದ ಅಥವಾ ನಿಜಕ್ಕೂ ಬೇಡವಾಗಿ ದೂರ ಸರಿಸುವ ಸಾಹಿತಿಗಳೇ ಹೆಚ್ಚು) ಅನೇಕರಲ್ಲಿ ಸರಳ ಬರವಣಿಗೆ ಸಾಹಿತ್ಯವೇ ಅಲ್ಲವೇನೊ ಎಂಬ ಭ್ರಮೆ ಮೂಡಲು ಪ್ರೇರಕ ರಾದ ನವ್ಯರು ಭಾಷೆ ಮತ್ತು ತಂತ್ರದ ಸಾಧ್ಯತೆಗಳನ್ನು ಬಳಸಿಕೊಂಡರೆಂಬುದು ಗಮ ನಾರ್ಹ ಸಾಧನೆಯಾದರೂ ತಾತ್ತ್ವಿಕ ತಳಹದಿಯೊಂದು ಇಲ್ಲದೆ ತಮಗೆ ಸರಿಕಂಡ ಕಡೆ ಹಾಯುವ ಇಂಡಿವಿಜುಯಲಿಸ್ಟ (individualist) ರಾದರು.

ನವ್ಯರಲ್ಲಿ ಕಂಡುಬರದ ತೀವ್ರ ಪ್ರಗತಿಶೀಲತೆಯ ತಳಹದಿ ಹಿಂದೆಯೇ ಕಾದಂಬರಿಕಾರರಲ್ಲಿ ಕಂಡುಬಂದು ಆ ಹೆಸರಿನ ಚಳುವಳಿಯೆಂದೇ ಪ್ರಸಿದ್ಧವಾಗಿದೆ. ಪ್ರಗತಿಪರ ಸಾಮಾಜಿಕ ಧೋರಣೆಯ ಆಧಾರದ ಮೇಲೆ ಅನೇಕ ಕೃತಿಗಳನ್ನೂ ರಚಿಸಿದ ಕೀರ್ತಿ ಅವರದು. ಆಮೇಲೆ ಅವರೂ ನವ್ಯರಂತೆ ಇಂಡಿವಿಜುಯಲಿಸ್ಟರೇ ಆದದ್ದು ಇತಿಹಾಸಕ್ಕೆ ಸೇರಿದ ಮಾತು.

ನವೋದಯ, ಪ್ರಗತಿಶೀಲ ಚಳುವಳಿ—ಇವುಗಳ ವಿಷಯ ಅರಿತಿದ್ದ ನವ್ಯರು ಸಂಕೀರ್ಣ ಅಭಿವ್ಯಕ್ತಿಯನ್ನೆ ಮುಖ್ಯಗುರಿಯಾಗಿಟ್ಟುಕೊಂಡು ಮಿಕ್ಕೆಲ್ಲವನ್ನು ಗೌಣ ಗೊಳಿಸಿಬಿಟ್ಟರು. ನವೋದಯ ಕಾವ್ಯ ಸತ್ವಹೀನವಾಗಿದೆಯೆಂಬುದನ್ನು ಅರಿತ ಇವರಿಗೆ ನಾವು ಬದುಕುತ್ತಿರುವ ಸಮಾಜ 'ಅರ್ಥಹೀನತೆ'ಯಿಂದ ಅಳಿಸಿಕೊಳ್ಳುತ್ತಿದೆ ಯೆಂದು ಗೊತ್ತಾಗಲಿಲ್ಲ. (ಒಂದುವೇಳೆ ಗೊತ್ತಾಗಿದ್ದರೂ) ಅದು ಅವರಿಗೆ ಮೂಲಭೂತ ಧೋರಣೆಯಾಗಲಿಲ್ಲ.


ಒಟ್ಟಿನಲ್ಲಿ ನಮ್ಮ ಪರಿಕಲ್ಪನೆಯಲ್ಲೆ ದೋಷವಿದೆ. ಬದುಕಿಗೆ ಸಂಬಂಧಿ ಸಿದ್ದು, ಕಲಾತ್ಮಕ ಯಶಸ್ಸು ಪಡೆದರೆ ಸಾಕು, ಹೆಚ್ಚೇನೂ ಬೇಕಿಲ್ಲ ಎಂಬುದೇ ಸರಿ ಯಲ್ಲ. ಇದರಿಂದ ಕಲಾತ್ಮಕವಾಗಿ ತುಂಬ ಶಕ್ತನಾದ, ನಾನು ಸೂಚಿಸಿದಂಥ ಆರೋಗ್ಯಕರ ಧೋರಣೆಯಿಲ್ಲದ ಸಾಹಿತಿ ಅಪಾಯಕಾರೀ ಅಂಶಗಳನ್ನೂ ತುಂಬ ಸಮರ್ಥವಾಗಿ ಅಭಿವ್ಯಕ್ತಿಸಬಲ್ಲ. ಆಗ ಈಗಿನಂಥ ವಿಮರ್ಶೆಯೇ ನಡೆದು ಅದನ್ನು ಅಟ್ಟಕೇರಿಸಲಿಕ್ಕೆ ಸಾಧ್ಯ. ನಾನಿಲ್ಲಿ ಕಲಾತ್ಮಕ ಅಂಶವನ್ನೇ ಸಂಪೂರ್ಣವಾಗಿ ವಿರೋಧಿಸು ತ್ತಿಲ್ಲ. ಸಾಮಾಜಿಕ, ರಾಜಕೀಯ, ಚಾರಿತ್ರಿಕ ಅಧ್ಯಯನ, ಸಮಕಾಲೀನ ಅನುಭವ ಒಟ್ಟುಗೂಡಿ ರೂಪುಗೊಂಡ ತೀವ್ರಪ್ರಗತಿಪರಧೋರಣೆಯೊಂದು ಇಂದಿನ ಸಂದರ್ಭ ದಲ್ಲಿ ಸಾಹಿತಿಗಿರಬೇಕೆಂಬುದು ನನ್ನ ಆಶಯ. ಈ ಧೋರಣೆ ಬದುಕನ್ನು ಕಾಣುವಾಗ, ಕಂಡರಿಸುವಾಗ ಕೆಲಸ ಮಾಡುತ್ತಿರಬೇಕು. (ಅದು ಇರುವುದೇ ಆದರೆ ಅಯತ್ನ ಪೂರ್ವಕವಾಗಿ ಕಾರ್ಯಮಗ್ನವಾಗಬಹುದು). ಎರಡನೆಯದಾಗಿ ಕಲಾತ್ಮಕ ಯಶಸ್ಸು ಮುಖ್ಯ. ಈ ಎರಡೂ ಒಟ್ಟುಗೂಡಿದಾಗ ಮಹತ್ವದ ಸಾಹಿತ್ಯ ಸೃಷ್ಟಿಯಾಗುತ್ತದೆ.

ತಂಬೂರ ಶಾಸನಗಳು

ಆರ್. ಎನ್. ಗುರವ

3. ಕದಂಬ ಗೂವಲದೇವನ ಶಾಸನ (ಸು. ಕ್ರಿ.ಶ.1120)

ಪ್ರಸ್ತುತ ಶಾಸನವಾದರೂ ತಂಬೂರಿನ ಎರಡನೆಯ[1] ಶಾಸನದಂತೆ ಈಶ್ವರ ದೇವಾಲಯದ ಆವರಣದಲ್ಲಿ ಎಡಗೋಡೆಗೆ ಆನಿಸಿ ನಿಲ್ಲಿಸಲ್ಪಟ್ಟಿರುತ್ತದೆ. ಶಾಸನವು ತ್ರುಟಿತ ಪರಿಸ್ಥಿತಿಯಲ್ಲಿ ಇದೆ. ಒಂದೆರಡುಕಡೆ ಕಲ್ಲಿನ ಪದರುಗಳು ಬಿಚ್ಚಿಹೋಗಿ ಅಕ್ಷರಗಳು ನಾಶವಾಗಿವೆ. ಕೆಲವು ಕಡೆ ಕಚ್ಚುಗಳು ಬಿದ್ದಿರುತ್ತವೆ. 34ನೆಯ ಸಾಲಿನಿಂದ ಪ್ರತಿ ಸಾಲಿನ ಕೊನೆಯ ನಾಲ್ಕಾರು ಅಕ್ಷರಗಳು ಹಾಳಾಗಿವೆ. ಶಾಸನದ ಕೊನೆಯ ಭಾಗ ಒಡೆದು ಹೋಗಿದೆ, ಕಾರಣ, ಶಾಸನದ ತಿಥಿ ಹಾಗೂ ದತ್ತಿಯ ಭಾಗ ನಾಶವಾಗಿರುತ್ತವೆ.



ಚಿತ್ರ. ತಂಬೂರ ಶಾಸನಗಳು

ಅಕ್ಷರಗಳು ದುಂಡಾಗಿ, ಆಳವಾಗಿ ಮತ್ತು ಅಂದವಾಗಿ ಕೊರೆಯಲ್ಪಟ್ಟಿವೆ. ಮೊದಲಿನ ಭಾಗದಲ್ಲಿ ಅವು ಸುಮಾರು 5/8 ಅಂಗುಲ ಎತ್ತರವಿದ್ದು ಮುಂದೆ

1 ಸಾಧನೆ, ಸಂ. 4, ಸಂ. 1, ಪುಟಗಳು : 64-81

ಸಣ್ಣವಾಗುತ್ತಾಹೋಗಿ ಅಂತ್ಯ ಭಾಗದಲ್ಲಿ ಪುನಃ ದೊಡ್ಡವಾಗಿರುತ್ತವೆ. ಬರೆವಣಿಗೆ ಸಾಮಾನ್ಯವಾಗಿ ಶುದ್ಧವಿದೆ.

ಅಕ್ಷರವಿನ್ಯಾಸ (Orthography)

ಶ, ಸ, ಷ ಗಳನ್ನು ಸರಿಯಾಗಿ ಉಪಯೋಗಿಸಿದ್ದು ಕೆಲವು ಕಡೆ ಮಾತ್ರ ಅವು ಅದಲುಬದಲಾಗಿವೆ : ಉದಾ : ವಂಸಾವತಾರ (ಸಾ. 26); ಪರಸುರಾಮ (ಸಾ. 32); ಸಂತೋಸಮನೆಯ್ದಿ (ಸಾ. 34); ಶತ್ರಗೃಹಂ (ಸಾ. 36); ಸಸ್ತ್ರಜೀವಿಗಳ್ (ಸಾ. 38); ಪ್ರಸಸ್ತಿ (ಸಾ. 48); ಇತ್ಯಾದಿ. ಇಂತಹ ಕೆಲವು ಶಬ್ದಗಳಲ್ಲಿ 'ಸ' ಅಕ್ಷರವು 'ಶ' ದ ಸ್ಥಳದಲ್ಲಿ ತದ್ಭವಮೂಲಕ ಬಂದಿರಬಹುದು. ಋಕಾರವನ್ನು ಒತ್ತಕ್ಷರಗಳಲ್ಲಿ ಸರಿಯಾಗಿ ಬರೆದಿದ್ದು ಒಂದೆರಡು ಸ್ಥಳಗಳಲ್ಲಿ ಅದು ರಿಕಾರವಾಗಿದೆ. ಉದಾ : ಗ್ರಿಹ (ಸಾ. 21). ಶಬ್ದದ ಮಧ್ಯದಲ್ಲಾಗಲಿ, ಸಂಧಿರೂಪದಲ್ಲಾಗಲಿ ರೇಫೆಯನಂತರ ಬರುವ ವ್ಯಂಜನವು ಅಲ್ಪಪ್ರಾಣ–ಅನುನಾಸಿಕ ಪ್ರಸಂಗಗಳಲ್ಲಿ ದ್ವಿತ್ವ ಹೊಂದಿರುತ್ತದೆ. ಮಹಾಪ್ರಾಣವಿದ್ದಲ್ಲಿ ಅಲ್ಪಪ್ರಾಣದಲ್ಲಿ ರೂಪಾಂತರ ಹೊಂದಿ ಮಹಾಪ್ರಾಣದ ಜೊತೆಯಲ್ಲಿ ದ್ವಿತ್ವವನ್ನು ತಾಳಿದೆ : ಉದಾ : ಮಾರ್ತಣ್ಡ (ಸಾ. 6); ನಿರ್ಗ್ಘೋಷಣಂ (ಸಾ. 7); ಗೂವಲದೇವನ್ನಿರ್ಜ (ಸಾ 12); ಆಚಂದ್ರಾರ್ಕ್ಕ (ಸಾ. 14); ದೀನಾರ್ತ್ಥಿ (ಸಾ. 15); ನತೋರ್ವ್ವೀಶಂ (ಸಾ. 15); ಪನ್ನಿರ್ಪ್ಪಳ್ಳಿಯುಮಂ (ಸಾ. 25); ಪುಟ್ಟಿದೂರ್ಬ್ಬಂಟಮನ (ಸಾ. 27); 'ಅನ್ನಾರ್ಣೋರ್ನ್ನೀನ್ತುರ್' (ಸಾ. 34) ಈ ಶಬ್ದ ಸಮುಚ್ಚಯದಲ್ಲಿನ ಅಕ್ಷರವು ದ್ವಿತ್ವವನ್ನು ಹೊಂದಿ ಣ ದಲ್ಲಿ ಪರಿವರ್ತನೆಯಾಗಿದೆ. ಕೆಱ (ಸಾ. 36); ಅಱಿದು (ಸಾ. 41); ಮಱವುಗೆ (ಸಾ. 46) ಮುಂತಾದ ಶಬ್ದಗಳಲ್ಲಿ ಶಕಟರೇಫೆಯು ಉಳಿದು ಬಂದಿದೆ. ಅದೇ ಪ್ರಕಾರವಾಗಿ ನೆಗಟ್ದಿನ್ (ಸಾ. 16), ನೆಗಟ್ದಳ್ (ಸಾ. 31) ಈ ಶಬ್ದಗಳಲ್ಲಿ ಱಳವನ್ನು ಇಟ್ಟದ್ದು ಕಾಣುತ್ತೇವೆ. ಕೆಲವು ಕಡೆ 'ವ' ದ ಸ್ಥಳದಲ್ಲಿ 'ಬ' ಬಳಸಲಾಗಿದೆ; ಉದಾ: ವಂದಿ ಬೃಂದ (ಸಾ. 24); ಪೂರ್ಬ್ಬ (ಸಾ. 30). ಪ್ರಜಿನನ್ದನ (ಸಾ. 36) ಶಬ್ದದಲ್ಲಿ ಉಪಧ್ಮಾನೀಯವನ್ನು ಉಪಯೋಗಿಸಿದ್ದು ಸರಿಯಾಗಿಲ್ಲ. ಕವರ್ಗ, ಚವರ್ಗ ಮತ್ತು ಪವರ್ಗಗಳಲ್ಲಿ ಅನುನಾಸಿಕದ ಪ್ರಸಂಗದಲ್ಲಿ ಬಿಂದುವನ್ನು ಉಪಯೋಗಿಸಿ ಟವರ್ಗ ಹಾಗೂ ತವರ್ಗಗಳಲ್ಲಿ ಹೆಚ್ಚಾಗಿ ಅನುನಾಸಿಕವನ್ನು ಮತ್ತು ವಿಕಲ್ಪವಾಗಿ ಬಿಂದುವನ್ನು ಉಪಯೋಗಿಸಲಾಗಿದೆ. ಉದಾ : ಪಂಚಮಹಾಶಬ್ದ (ಸಾ. 4); ಮಣ್ಡಳೇಶ್ವರ; (ಸಾ. 4); ಧರೇಂದ್ರ (ಸಾ. 6); ಪ್ರಚಣ್ಡ (ಸಾ. 6); ಉತ್ತುಂಗ (ಸಾ. 7) ಸಂಕ್ರಾನ್ತಿಧವಳ (ಸಾ. 10); ಕೊಂಕಣವೊಂಬಯ್ನೂಱು (ಸಾ. 12); ಸಂದಗ್ರಜಂ (ಸಾ. 17); ಗನ್ಧವಾರಣ (ಸಾ. 21); ಬಂಟಯುನ (ಸಾ. 27); ಬನ್ದು (ಸಾ. 28); ಚಂದಿಯಬ್ಬೆ (ಸಾ. 31) ವಿನೆಯ (ಸಾ. 45) ಶಬ್ದದಲ್ಲಿ ಆಕಾರದ ಸ್ಥಳದಲ್ಲಿ ಎಕಾರವನ್ನು ಉಪಯೋಗಿಸಲಾಗಿದೆ.

ಶಾಸನದಲ್ಲಿಯ ಅರಸುಮನೆತನಗಳು

ಪ್ರಾರಂಭದಲ್ಲಿ ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳಿಕೆಯ ಉಲ್ಲೇಖ ಬರುತ್ತದೆ. ಸಾಮಾನ್ಯವಾಗಿ ಗೋವೆಯ ಕದಂಬರು ಚಾಲುಕ್ಯ ಮನೆತನಕ್ಕೆ ಅಧೀನರಾಗಿರುತ್ತಿದ್ದರು. ತರುವಾಯ ಗೋವೆಯ ಕದಂಬ ವಂಶದ ಮಹಾಮಂಡಲೇಶ್ವರ ಮೂರನೆಯ ಗೂವಲದೇವನ ಆಳಿಕೆಯನ್ನು ಹೇಳಲಾಗಿದೆ. ಈತನು ತಂಬೂರಿನ ಹಿಂದಿನ ಶಾಸನಗಳಲ್ಲಿ[2] ಉಲ್ಲೇಖಿತವಾದ ಎರಡನೆಯ ಜಯಕೇಸಿಯ ದೊಡ್ಡಪ್ಪ. ಜಯಕೇಸಿಯ ತಂದೆ ಹಾಗೂ ಗೂವಲದೇವನ ತಮ್ಮನಾದ ಮೊದಲನೆಯ ವಿಜಯಾದಿತ್ಯನು ಪ್ರತ್ಯಕ್ಷವಾಗಿ ರಾಜ್ಯವಾಳಲಿಲ್ಲ. ಆತನು ಜಯಕೇಸಿ ಪಟ್ಟಕ್ಕೆ ಬರುವ ಮೊದಲೇ ತೀರಿಕೊಂಡಂತೆ ಕಾಣುತ್ತದೆ. ಗೂವಲದೇವನ ರಾಜ್ಯವಿಸ್ತಾರ ಕೊಂಕಣವೊಂಬಯ್ಯೂರು, ಪಲಸಿಗೆ ಪನ್ನಿರ್ಚ್ಛಾಸಿರ ಹಾಗೂ ಕವಡಿದ್ವೀಪ ಸವಲಕ್ಕವೆಂದು ಹೇಳಲಾಗಿದೆ. ಆತನ ರಾಜಧಾನಿ ಶಾಸನಕಾಲದಲ್ಲಿ ಗೋವಗೆ ಎಂದರೆ ಈಗಿನ ಗೋವೆಯಾಗಿತ್ತು.

ಸ್ಥಳೀಯ ಮನ್ನೆಯ ಅರಸರು

ಗೂವಲದೇವನ ಸಿಂಹಾಸನಕ್ಕೆ ಅಧೀನನಾಗಿ ವಿಪ್ರಕುಲದ ಜಯಕೇಸಿ ಜಯದೇವನು ಮಾವಳೆನಾಡಿನಲ್ಲಿ ಅಗ್ರಹಾರವಾಗಿದ್ದ ತಂಬೂರ ಗ್ರಾಮಕ್ಕೆ ಊರೊಡೆಯನಾಗಿದ್ದನು. ಈತನ ತಮ್ಮ ಮಾದಿರಾಜ. ತಂದೆ ಬೀಚಿರಾಜ. ಹಿಂದಿನ ಶಾಸನದಲ್ಲಿ ಜಯಕೇಸಿ ಹಾಗೂ ಮಾದಿರಾಜರ ತಂದೆಯ ಹೆಸರು ಚಂಗಚಮೂಪವೆಂದು ಹೇಳಲಾಗಿದೆ. ಬಹುಶಃ ಬೀಚಿರಾಜ ಇದು ಚಂಗಚಮೂಪನ ಮತ್ತೊಂದು ಹೆಸರು ಆಗಿರಬಹುದು. ಇವರ ತಾಯಿ ಹಿಂದಿನ ಶಾಸನದಲ್ಲಿ ಹೇಳಿದಂತೆ ಆಚಲ ದೇವಿ –ಆಯ್ಚಾಂಬಿಕೆ. ವಯೋವೃದ್ಧ ಅಣ್ಣನಾದ ಜಯಕೇಸಿಯು ತಂಬೂರ ಗ್ರಾಮಕ್ಕೆ ಒಡೆಯನಾಗಿದ್ದರೆ, ಪ್ರಾಯದ ತಮ್ಮ ಮಾದಿರಾಜನು, ತಂಬೂರ ಸಂಸ್ಥಾನಕ್ಕೆ ಅಧಿಪತಿಯಾಗಿದ್ದನು.

ತಂಬೂರ ಗ್ರಾಮ

ಈ ಗ್ರಾಮದ ಅಚ್ಚುಕಟ್ಟಾದ ವರ್ಣನೆ ಈ ಶಾಸನದಲ್ಲಿ ಬರುತ್ತದೆ. ಇಲ್ಲಿ ಹರಿಹರಾದಿಗಳ ದೇವಾಲಯಗಳು, ಆರು ಹಾದಿಗಳ ಜಿನಾಲಯಗಳು, ಸಭಾಗೃಹ, ಸತ್ರಗೃಹ, ಹಿರಿಯ ಕೆರೆ, ಬಾವಿ, ಉಪವನ, ಪುಷ್ಪವಾಟಿಕೆ ಮುಂತಾದವು ಕಂಗೊಳಿಸುತ್ತಿದ್ದವು. ಕಿಕ್ಕಿರಿದ ಅಂಗಡಿಗೇರಿ, ಬೆಡಗುವೆತ್ತ ಸೂಳೆಗೇರಿ, ಯಾವಕಾಲದಲ್ಲಿಯೂ ವೇದ ಘೋಷ ನಿಲ್ಲದಿರುವ ಬ್ರಾಹ್ಮಣಗೇರಿ, ಮನಸು ಸೆಳೆಯುವ ಒಕ್ಕಲಗೇರಿ,

---

2 ಸಾಧನೆ, ಸಂ. 3, ಸಂ. 3, ಪು. 90-106 ; ಅದೇ, ಸಂ. 4, ಸಂ. 1, ಪುಟಗಳು 64-81

ವಿದ್ಯಾವಂತರ ರಮ್ಯವಾದ ಮನೆಗಳು, ಯೋಧರ ಮನೆಗಳು, ಸ್ತುತಿಪಾಠಕರ ಮನೆಗಳು, ಸಂಗೀತ ಹಾಗೂ ಶಯನಗೃಹ ಮುಂತಾದವುಗಳಿಂದ ಈ ಗ್ರಾಮವು ತುಂಬಿತುಳುಕುತ್ತಿತ್ತು.

ಶಾಸನದ ವಿಷಯ

ಇಂತಹ ಈ ತಂಬೂರ ಗ್ರಾಮದಲ್ಲಿ ಒಂದು ಸೇಣಿಗ ಮನೆತನವು ವಾಸ ಮಾಡುತ್ತಾ ಇತ್ತು. ಅದು ಚಾವುಂಡನ ಮನೆತನ. ಆತನ ತಂದೆ ಬಂಟಯ್ಯ, ತಾಯಿ ಬಾಗಿಯಬ್ಬೆ. ಅವರ ಮೂಲ ಗ್ರಾಮ ಗುಡಿಗೆರೆ ಚಾವುಂಡನು ಹರಿ, ಹರ ಹಾಗೂ ಬ್ರಹ್ಮದೇವರ ಉಪಾಸಕನಾಗಿದ್ದನು. ಆತನ ಹೆಂಡತಿ ಚಂದಿಯಬ್ಬೆ. ಈ ದಂಪತಿಗೆ ದುಗ್ಗ, ಬೀರ ಹಾಗೂ ದಾಸಿಸಾಸಿಗವೆಂಬ ಮೂವರು ಮಕ್ಕಳು, ತಂಬೂರಿನ ಎರಡನೆಯ ಶಾಸನದಲ್ಲಿ ಸೇಣಿಗ ಬೀರನ ಮಗ ಬೊಪ್ಪ ಒಂದು ಶಿವಾಲಯವನ್ನು ಕಟ್ಟಿಸಿದ ಉಲ್ಲೇಖ ಬಂದಿದೆ. ನಾಮಸಾದೃಶ್ಯ ಹಾಗು ಆನುಪೂರ್ವಿಯಿಂದ ಈ ಬೊಪ್ಪನು ಸೇಣಿಗ ಚಾವುಂಡನ ಮೊಮ್ಮಗ ಹಾಗೂ ಬೀರನ ಮಗನಾಗಿದ್ದಂತೆ ಕಾಣುತ್ತದೆ. ಈ ಸೇಣಿಗರ ಚಾವುಂಡನು ತಂಬೂರಿನಲ್ಲಿ ಒಂದು ಶಿವಾಲಯವನ್ನು ಕಟ್ಟಿಸಿದ ಸಂಗತಿ ಈ ಶಾಸನದಲ್ಲಿ ಬಂದಿರುವಂತಿದೆ. ಈ ಶಿವಾಲಯಕ್ಕೆ ಮಹಾಮಂಡಳೇಶ್ವರನೊಬ್ಬನು ದತ್ತಿ ಬಿಟ್ಟ ವಿಷಯ ಮುಂದೆ ಬಂದಿರಬಹುದು. ಶಾಸನದ ತೇದಿಯ ಕೆಲವು ಶಬ್ದಗಳು ಇಲ್ಲಿ ಕಾಣುತ್ತವೆ. ಇಲ್ಲಿಗೆ ಶಾಸನದ ಮುಂದಿನ ಭಾಗ ಒಡೆದುಹೋಗಿದೆ.

ಶಾಸನದ ಕಾಲ

ಸಾಲು 50ರಲ್ಲಿ ತೇದಿಯ ಕೆಲವು ಶಬ್ದಗಳು ಕಾಣುತ್ತವೆ; 'ಬ್ದಂ ಬರೆ ಭಾದ್ರ ಸುದ್ಧ ಪಕ್ಷಂ' ಎಂಬ ಆ ಶಬ್ದಗಳು—ಆದರೆ, ಇವುಗಳಿಂದ ತಿಥಿಯನ್ನು ನಿರ್ಣಯಿಸುವುದು ಸಾಧ್ಯವಿಲ್ಲ. ಆದ್ದರಿಂದ, ಅಕ್ಷರಗಳ ಸ್ವರೂಪ ಮತ್ತು ಗೂವಲದೇವ ಮಾದಿರಾಜರ ಆಳಿಕೆಯ ಉಲ್ಲೇಖಗಳ ಮೇಲಿಂದ ಶಾಸನವು ಸುಮಾರು ಕ್ರಿ.ಶ. 1120ರಲ್ಲಿ ಹುಟ್ಟಿರಬಹುದೆಂದು ಭಾವಿಸಬಹುದು.

ಭೌಗೋಲಿಕ ಉಲ್ಲೇಖಗಳು*

(1) ಬನವಾಸೀಪುರ (ಸಾ–4); (2) ಗೋವಗೆ (ಸಾ. 12); (3) ಕೊಂಕಣವೊಂಬಯ್ಯೂಱು (ಸಾ. 12); (4) ಪಲಸೆಗೆ ಪನ್ನಿಚ್ಛಾಸಿರ (ಸಾ. 12–13); (5) ಕವಡಿದ್ವೀಪ ಸವಾಲಕ್ಷ (ಸಾ. 13); (6) ಮಾವಳೆ ನಾಡು

* 3ರಿಂದ 8ರವರೆಗಿನ ಸ್ಥಳಗಳು ತಂಬೂರಿನ ಹಿಂದಿನ ಎರಡು ಶಾಸನಗಳಲ್ಲಿ ಬಂದಿವೆ.

(ಸಾ. 15) ; (7) ತಮ್ಮಿಯೂರು, ತಾಂಬ್ರಾಪುರ, ತಾಂಬ್ರಪುರ (ಸಾ. 15, 35, 29, 43) ; (8) ತಮ್ಮಿಯೂರು ಹನ್ನಿಪ್ಪೞ್ಳಿ (ಸಾ. 25) ಮತ್ತು (9) ಗುಡಿಗೆಱೆ (ಸಾ. 27),

ಬನವಾಸೀಪುರ

ಇದು ಕಾರವಾರ ಜಿಲ್ಲೆಯ ಸಿರ್ಸಿ ತಾಲ್ಲೂಕಿನಲ್ಲಿರುವ ಈಗಿನ ಬನವಾಸಿ. ಸಿರ್ಸಿಯಿಂದ ಆಗ್ನೇಯಕ್ಕೆ ಸುಮಾರು 25 ಕಿಲೊ. ಮೀಟರಗಳಂತರದಲ್ಲಿದೆ. ಇದು ಪೂರ್ವ ಕದಂಬರ ಪ್ರಮುಖ ರಾಜಧಾನಿ ಸ್ಥಳ ಹಾಗೂ ಅವರ ಮೂಲ ಗ್ರಾಮ.

ಗುಡಿಗೆಱೆ

ಧಾರವಾಡ ಜಿಲ್ಲೆಯ ಕುಂದಗೂಳ ತಾಲ್ಲೂಕಿನಲ್ಲಿಯ ಈಗಿನ ಗುಡಗೇರಿ. ಇದು ಒಂದು ರೈಲು ನಿಲ್ದಾಣವಾಗಿದೆ. ಕುಂದಗೋಳದಿಂದ ಆಗ್ನೇಯಕ್ಕೆ ಸುಮಾರು 30 ಕಿಲೊ ಮೀಟರಗಳಂತರದಲ್ಲಿದೆ.

ಭಾಷಿಕ ಹಾಗೂ ಪಾರಿಭಾಷಿಕ ಶಬ್ದಗಳು

1. ಸಂಕ್ರಾನ್ತಿಧವಳ (ಸಾ. 10) : ಸಂಕ್ರಾನ್ತಿಯಂತೆ ಧವಳನಿದ್ದವನು. ಸಂಕ್ರಾಂತಿಯು ಬೆಳ್ಳಗಿರುತ್ತದೆಯೆಂದು ಕವಿಸಮಯ.

2. ಮೂರ್ತಿನಾರಾಯಣ (ಸಾ. 10) : ಮೂರ್ತಿಮಂತ ನಾರಾಯಣನಾದವನು. ಮಾರ್ಸೆಲಾ ತಾಮ್ರ ಪಟದಲ್ಲಿ[3] ಈ ಬಿರುದವನ್ನು ಪ್ರಥಮವಾಗಿ ಎರಡನೆಯ ಚಟ್ಟಯ್ಯನಿಗೆ ಕೊಟ್ಟಿದ್ದು ಅದರ ವಿವರಣೆ ತಾಮ್ರಪಟದಲ್ಲಿ ಹೀಗೆ ಬಂದಿದೆ ;

> ಸಶ್ರೀಮಾನ್ ದಶದಿಗ್ವಿಧೂಪ್ರಿಯಯಶೋ ಹಂಸಾವತಂಸೋಲ್ಲಸ
> ತ್ತ್ಯಾಗಾಗಾಧತಡಾಗ ತುಂಗಲಹರೀಲೀಢ ತ್ರಿಲೋಕೀತಟಃ ।
> ಹೇಲಾವಿಕ್ರಮವಿಕ್ಲವಾಹಿತವಧೂ ನೇತ್ರಾಂಬುಧಾರಾಸರಿ
> ತ್ತೀರ್ಥಸ್ನಾತಕೃಪಾಣಪಾಲಿತಜಯಶ್ರೀಮೂರ್ತಿನಾರಾಯಣಃ ।।

ಆ ಮೇಲೆ ಈ ಬಿರುದನ್ನು ಈ ಮನೆತನದ ಎಲ್ಲ ಅರಸರಿಗೆ ಕೊಡಲಾಗಿದೆ.

3, 4, 5 ಬಾಹುಬಳಬಾವನ್ನವೀರ (ಸಾ. 22), ವಿಪ್ರಕೇದಾರ (ಸಾ. 22) ಮತ್ತು ರೇವನ್ತ (ಸಾ, 47) : ಈ ಶಬ್ದಗಳ ವಿವರಣೆ ಹಿಂದಿನ ಶಾಸನಗಳಲ್ಲಿ ಬಂದಿದೆ.

---

3 Selected Inscriptions from Maharashtra : Dr. M. G. Dikshit ; p. 62 ; Verse 14

6. ಅವಗುನ್ತಿ (ಸಾ. 30) : ಅನುಬಂಧವನ್ನು ನೋಡಿರಿ.

ಶಾಸನ ಪಾಠ[4]

1 ಸ್ವಸ್ತಿ [।*] ಸಮಸ್ತಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರ ಮೇಶ್ವರಂ ಪರಮಭ-

2 ಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀ [ಮ*] ತ್ರಿ ಭುವನಮಲ್ಲ ದೇವರ ವಿ-

3 ಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂ ಸಲುತ್ತ ಮಿರೆ॥ ತತ್ಪಾದ-

4 [ಪದ್ಮೋಪ] ಜೀವಿ ॥ ಸಮಧಿಗತಪಂಚಮಹಾಶಬ್ದ ಮಹಾಮಣ್ಡಳೇಶ್ವರ । ಬನವಾಸೀ ಪುರವರಾಧೀಶ್ವರಂ । ಸಮಸ್ತ-

5 [ಭುವನಸಂಸ್ತೂ] ಯಮಾನ ಹರಧರಣೀ ಪ್ರಸೂತತ್ರಿಳೋಚನಕದಂಬವಂಶ ಮಹೋದ ಯಮಹೀಧರೇಂದ್ರ-

6 [ಶಿಖರಾಭ್ಯುದ] ಯಮಾನಮಹಾಪ್ರಚಣ್ಡ ಮಾರ್ತ್ತಣ್ಡಂ ಮಾರ್ತ್ತ[ಣ್ಡಕರಾ]ತಿ ತೀವ್ರನಿಜ ಪ್ರತಾಪವಶೀಕೃತಸ-

7 [ಕಳಮಹೀಮ] ಣ್ಡಳನುತ್ತುಂಗಸಿಂಹ [ಲಾಂಛನಂ] . . . . ತೂರ್ಯ್ಯನಿರ್ಗ್ಘೋಷಣಂ । ಚತು-

8 . . . . ತಾಷ್ಟಾದಶಾ . . . . [ವದ್ಗಿರೀಂದ್ರ]ರುಂದ್ರಶಿಖರಸ್ಥಾ-

9 . . . . [ಪ್ರ]ಭಾವಂ . . . . [ಸುಭ]ಟಕನಕನಿಕ-

10 . . . . ವಜ್ರಪ್ರಾ . . . . [ಸಂ]ಕ್ರಾನ್ತಿಧವ[ಳಂ] ಮೂರ್ತ್ತಿನಾರಾಯಣಂ ಕೀರ್ತ್ತಿಮಾರ್ತ್ತಣ್ಡಂ

11 . . . [ಕ]ಲಲಾಟಪಟ್ಟ ವೈರಿಘ . . . . ಮಣಿ ಕಾದಂಬ[ಚೂಡಾ] ಮಣೀತ್ಯಖಿಳ ರಾಜಾವಳೀ ವಿರಾ-

12 . . . ಶ್ರೀಮನ್ಮಹಾಮಣ್ಡಳೇಶ್ವರಂ [ಗೂವ] ಲದೇವರ್ನ್ನಿಜ- ರಾಜ [ಧಾನಿ] ಗೋವಗೆಯೊಳ್ ಕೊಂಕಣವೊಂಬಯ್ನೂಱುಮಂ ಪಲ-

13 [ಸಿಗೆ] ಪನ್ನಿಚ್ಛಾಸಿರಮು[ಮಂ] ಕವಡಿದ್ವೀಪಸವಾಲಕ್ಖಮುಮಂ ದುಷ್ಟನಿಗ್ರಹವಿಶಿಷ್ಟಪ್ರತಿಪಾಳನೆಯಿಂದುತ್ತರೋ-

14 [ತ್ತರಾಭಿ]ವೃದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂ ಸುಖಸಂಕಥಾ- ವಿನೋದದಿಂ ವಿಜಯರಾಜ್ಯಂ ಸಲುತ್ತಮಿರೆ ॥ ತತ್ಸಿಂಹಾಸನಾ-

---

4 1954 – 58ರಲ್ಲಿ ನಾನು ಹುಬ್ಬಳ್ಳಿ–ಕಲಘಟಗಿ ತಾಲೂಕಗಳ ಜ್ಯೂಡಿಸಿಯಲ್ ಮ್ಯಾಜಿಸ್ಟ್ರೇಟ ನಾಗಿದ್ದ ಸಮಯದಲ್ಲಿ ತೆಗೆದುಕೊಂಡ ಶಾಸನದ ಪಡಿಯಚ್ಚುಗಳಿಂದ.

15 [ಶ್ರೀ] ಯಾಸನ್ನವರ್ತ್ತಿ ಮೂವಳಿನಾಡಗ್ರಹಾರಂ ತಮ್ಮಿಯೂರೂರೊಡೆಯಂ ॥ [⁵ಶ್ರೀಮತ್ಸಮ]ಸ್ತಗುಣಗಣಧಾಮಂ ದೀನಾರ್ತ್ಥಿ-

16 ಕುಮುದವನ[ವಿಕಸ]ಲಸತ್ಸೋಮಂ ವರಾಂಗನಾಜನಕಾಮಂ ಜಯಕೇಸಿ ನೆಗಟ್ದನಖಿಳಾವನಿಯೊಳ್ ॥ [1*][6]ಅಕಳಂಕಂ ಬಿಚಿರಾಜಂ

17 ಜನಕನಖಿಳಪುಣ್ಯಾಂಗನೋ[ತ್ಕರ್ಷೆ] ಯಾಯ್ಯಾಂಬಿಕೆ ತಾಯಿ ಸಂದಗ್ರಜಂ[7] ಮಮ್ಮಿಗನೆಸೆವನುಜಂ ಮಾದಿರಾಜಂ ನತೋರ್ವ್ವೀಶಕದಂಬಂ ಗೂ-

18 ಹಲೋರ್ವ್ವೀಪತಿ ಪತಿ ᴗᴗ— —ᴗ—ದೆಯ್ವಯೆಂದೆಂದೆ ಕೃತಾರ್ತ್ಥಂ ವಿಪ್ರವಂಶಾಗ್ರಣಿಗುಣಿ ಜಯದೇವಂ ಯಶಶ್ರೀನಿವಾಸಂ॥ [2*]ತದನುಜ ॥

19 ಸ್ವಸ್ತಿ [1*]ಸಮಧಿಗತಪಂಚಮಹಾಶಬ್ದ ಮಹಾ [ಸಾ] ಮನ್ತಾಧಿಪತಿ ಮಹಾಪ್ರಚಣ್ಡದಣ್ಡನಾಯಕ। ವೈರಿಭಯದಾಯಕ।

20 ಸಮರಸಾಗರತರ [ಣ್ಡ] [1] [ರಿ]ಪುಕಾಳದಣ್ಡ। ಚತುರಂಗಬಳಸೂತ್ರಧಾರಿ ಮೊನೆಗೆ ಮುರಾರಿ ವಿಜಯಾಂಗನಾಭುಜಂಗ। ಚತು-

21 ರಂಗಸಿಂಗ। ಕೃತಗುಣಕೃತ್ಯ। ಕಲಿಯುಗ ವಿಕ್ರಮಾದಿತ್ಯ। ವೀ[ರಲ]ಕ್ಷ್ಮೀಗ್ರಿಹತೋರಣ। [8]ನಣ್ಣನ ಗನ್ಧವಾರಣ। [8]ನಸಮಸಾಹಸ-

22 ವೈನತೇಯ। ಧುರದಂಕ[ಜೇಯ] [1] [ಬಾಹು] ಬಳ [ಬಾವ] ನ್ನವೀರ। ವಿಪ್ರಕೇದಾರ। ಪರಾರ್ತ್ಥಪರಸುರಾಮ। ಸುಭಟಂಕಭೀಮ।

23 ವಂದಿಬೃಂದಚಿನ್ತಾಮಣಿ... ... ...[ಚ]ಕ್ರವರ್ತ್ತಿ ಶ್ರೀತ್ರಿಭುವನಮಲ್ಲದೇವರಾಜ್ಯಲಕ್ಷ್ಮೀವಿಳಾಸಂ। ಸಕಳ-

24 ಲಕ್ಷ್ಮೀನಿವಾಸಂ।... ... ...ಶ್ರೀ[ಮನ್ಮಹಾ]- ಪ್ರಚಣ್ಡದಣ್ಡನಾಯಕಂ ಮಾದಿರಾಜಯ್ಯಂ ತಮ್ಮಿಯೂರುಂ

25 ಹನ್ನಿರ್ಪ್ಪಳ್ಳಿಯ[ಮಂ]... ... ...[ಸಾ]ಮ್ಯದಿಂ ದುಷ್ಟನಿಗ್ರಹವಿಶಿಷ್ಟಪ್ರತಿಪಾಳನೆಯಿನಾಳ್ದು ಸುಖದಿನಿರೆ ॥

26 ತತ್ಪಾದ ಪದ್ಮೋಪಜೀವಿ ಸೇಣಿಗ ಚವುಣ್ಡಯನ ವಂಸಾವತಾರಮೆನ್ತೆನ್ದೊಡೆ ॥ ಶ್ರೀಗೆ[9] ಹರಿಯೊಳ್ವಿವಾಹೋದ್ಯೋಗಂ ಗೆಯ್ವ-

27 ಲ್ಲಿ ಮಂಗಳಾನಕಮೆಸೆಯಲು ಬೇಗಂ ಕಟ್ಟಿದ ಗುಡಿಗೆಚ್ ರಾಗದಿನೆಸೆದೊಪ್ಪೆ ವುಟ್ಟಿದೂರ್ಬ್ಬಂಟಯನ ॥ [3*] ಶ್ರೀ ಗುಡಿಗೆಚ್

28 ಸಲೆ ನಿಲೆ ನೆಲೆಯಾಗಿರೆ ತತ್ಕುಲವಿಭೂಷಣಂ ಬಂಟಯನೊಳ್ಪಾಗಿಯಬೆ ಬನ್ದು ಕೂಡಿರೆ ರಾಗದಿನನ್ವವರ್ಗ್ಗೆ ಪುಟ್ಟಿದಂ ಚಾವುಣ್ಡ ॥ [4*]

5 ವೃತ್ತ : ಕಂದ

6 ವೃತ್ತ : ಮಹಾಸ್ರಗ್ಧರೆ

7 ವೃತ್ತದ ಸಲುವಾಗಿ 'ತಾಯ್ಸಂದಗ್ರಜಂ' ಎಂದು ಓದಿರಿ

8 ಸಂಧಿಯಾದ ಮೂಲಕ ದಂಡ ಅನವಶ್ಯಕ

9 ವೃತ್ತ : ಇದು ಮತ್ತು ಮುಂದಿನ ಹನ್ನೆರಡು ಪದ್ಯಗಳು : ಕಂದ

29 ಹರಚರಣಕಮಳಭೃಂಗಂ ಹರಿಚರಣಾಂಬುಜಶಿಳೀಮುಖಂ ಬ್ರಹ್ಮಪದಾಂಬುರುಹನವ
ಷಟ್ಪದಂ ಸಚ್ಚರಿತಂ ಚಾವುಣ್ಡನೆಸೆಯೆ ತಾಂಬ್ರಾ

30 ಪುರದೊಳ್ ॥ [5*] ಅನ್ತೆಸೆಯೆ ಚಾವುಣ್ಡಯಂ[10] [ಗುಣಮಂ], ತಳೆದಂ ತನ್ನ ಪೂರ್ಬ್ಬ
ಪುಣ್ಯೋದಯದೊಳ್ಕನ್ತುಗೆ ರತಿ ದೊರಕೊಣ್ಡದಗುನ್ತಿಯುಮಂ

31 [ತಾಳ್ದಿ] ಚಂದಿಯಬ್ಬೆಯ ನೆಗಟ್ದಿಳ್ ॥ [6*] ರಮಣೀಸತಿ ಚಂದಿಯಬ್ಬೆಗಮಮಳ
ಗುಣೋದ್ಭಾಸಿ ಚವುಣ್ಡಯಂಗಂ[11] ಮುದದಿಂ ಸುಮನ-

32 [ರ್ವ್ವಟ್ಟಿದ] ಮೂವರ್ಗ್ಗಮೆ ಪಿರಿಯಂ ದುಗ್ಗನಾತನಿಂದಂ ಬೀರಂ ॥ [7*] ಬೀರಂಗೆ ಸಕಳ
ಗುಣಗಣಧಾರಂಗೆ ಮನೋಜರಾಜಮದಹರಚರ

33 ಣಧಾರಂಗೆ ನೆಗಳ್ದ ತಮ್ಮಂ ಧಾರಿಣಿಯೊಳ್ದಾಸಿಸಾಸಿಗಂ ಗುಣಿಸುಭಟ ॥ [8*] ಇನ್ತು
ಗುಣಮನ್ತರೆನಿಸಿದರನ್ತಳೆದು ಸು [ಪು] ತ್ರರಪ್ಪ

34 ಕುಲದೀಪಕರಿಂ ಸನ್ತೋಸಮನೆಯ್ದಿ ಪುಣ್ಯದಿನಿನ್ತಿದವಿದ ಚಾವುಣ್ಡ[12]ನನ್ತಿರನ್ತಾಣ್ರ್ಣೀ
ನ್ತರ್ ॥ [9*] ವಾರಿಧಿ ಪರಿವೃತವಸು[ಧಾ]... .....

35 ಲ್ತಿರ ನಾಡೆ ಚೆಲ್ವಗಲದ ಸಂಸಾರಫಳಂ ಮಾವಳೆನಾಡೂರುಗಳೊಳ್ತಮ್ಮಿಯೂರ್ಕ್ಕರಂ ಸೊಗ
ಯಿಸುಗುಂ ॥ [10*] ಹರಿಹರ.........

36 ಮರುಹಾಲಯಮುಂ ಸಭಾಗೃಹಂ ಶತ್ರಗೃಹಂ ಪಿರಿಯ ಕೆಱೆ ಬಾವಿಯಾರಮೆ ಮೆಱಸೆಸೆದದು
ಪುಱನನ್ದನ......... ॥ [11*]

37 ಸಂಗಡದಂಗಡಿಗೇರಿ ಬೆಡಂಗಿಡಿದಿರೆ ಸೂಳೆಗೇರಿ ವೇದಧ್ವನಿಯೊಳ್ಪಿಂಗದ ಪಾರ್ವ್ವರ ಕೇರಿ
ಮನಂಗೊಳಿಪೊಕ್ಕಲಿಗಗೇರಿ......... ॥ [12*]

38 ರಯ್ಯಮೆನಿಸಿಪ್ಪರಕ್ಕರಿಗಯ್ಯಂಗಳ ಸಸ್ತ್ರಜೀವಿಗಳ ಜೀಯರ ಜೀಯಯ್ಯೆಂಬ ಭಟ್ಟಗಾಯಣ
ಸಯ್ಯಗೃಹಂಗಳೊ.........

39 ಸುಗುಂ ॥ [13*] ಹರಿಹರವಿಮಾನಮಂ ತಂದಿರಿಸಿದನೊ ವಿಷ್ಣುದೇವರಾಜಂ ತನ್ನಿರ್ಜ್ಜರ-
ವಿನ ವಿಮಾನಮಂ ತಂದಿರಿಸಿದನೆನೆ ಚಾವುಣ್ಡನ......... ॥ [14*]

40 ಫಣಿರಾಜ ನಿಳಯಮಂ ಧಾರಿಣಿಗಿರಲಿದು ಪೂಜ್ಯಮೆನ್ದು ತಂದಿರಿಸಿದನಾ ಫಣಿರಾಜನೆನ್ದುದಿನ್ನಿ
ದನೆಣಿಸುವರಾ.........

41 ಪಗೃಹಮಂ ॥ [15*] ಸಹಜಂ ಶಿವಪದಯುಗಳಮಿವಿಹಪರದ ಸುಖಾರ್ತ್ಥಹೇತುವೆನ್ದ
ಱಿದು ಮಹಾಮಹಿಗೆ ಮಹಿಮೆಯೆ.........

42 ಮ ಸೇಣಿಗರ ಚಾವುಣ್ಡಯಂ ದೇಗುಲಮಂ ॥ [16*][13] ತಾಣ್ಡವರಂ ತ್ರಿಬಣ್ಡ ಮಣಿ
ಮಣ್ಡನ ಮಣ್ಡಿತ ಭೋಗಭೂಷಣಂ ಚಣ್ಡ ◡ – ◡ – ◡ ◡

---

10 ವೃತ್ತದ ಸಲುವಾಗಿ 'ಚಾಣ್ಡಯಂ' ಎಂದು ಓದಿರಿ.

11 ವೃತ್ತದ ಸಲುವಾಗಿ 'ಚೌಣ್ಡಯಂಗಂ' ಎಂದು ಓದಿರಿ.

12 ವೃತ್ತದ ಸಲುವಾಗಿ 'ಚವುಡ ನನ್ತಿರ' ಎಂದು ಓದಿರಿ.

13 ವೃತ್ತ : ಉತ್ಪಲಮಾಲೆ

43 ಯನಂ ವಿಭುಧಾಶ್ರಮನನ್ತಮೂರ್ತ್ತಿ ಕಯ್ಕೊಣ್ಡು ನಿರನ್ತರಂ ನೆಲಸಿ ತಾಂಬ್ರಪುರ ತ್ರಿತಯಾಸೆ ಯಲ್ಲಿ ಚಾವುಣ್ಡನ ದೇ ᴗ–ᴗᴗᴗ–ᴗ

44 ಸೆದತ್ತೋ ಸಮಸ್ತಧಾತ್ರಿಯೊಳ್ ॥ [17*] ಸಮಧಿಗತಪಂಚಮಹಾಶಬ್ದ ಮಹಾಮಣ್ಡ ಳೇಶ್ವರನಹಿತಮಣ್ಡಳಿ [ಕ] ....

45 ಶ್ವರ ನಿಜಕುಳಕುವಳಯಸುಧಾಕರ । ವಿನೆಯ ರತ್ನಾಕರ । ಸೆಣಸುಮಣ್ಡಳಿಕ ತಲೆಯ ಕರವತ್ತ.........

46 ದತ್ತನೊಡ್ಡುಗಣ್ಡು ಸುತ್ತಂ ಬಳ[ಸುವ ಮ]ಣ್ಡಳಿಕರ ಮಣ್ಡೆಯನಡೆವ । ಮಱೆವುಗೆ ಕಾವ । ವಿಷಮ ತುರಗ.........

47 ರೇವನ್ತನಹಿತಕೃತಾನ್ತ । .... [ಮಲ್ಲಿ]ಕಾರ್ಜ್ಜುನದೇವಲಬ್ಧವರಪ್ರಸಾದನು ಭಯ ಬಳರಣಾಚಾ [ರ್ಯ್ಯ] ....

48 ರ್ಯ್ಯ ಶ್ರೀಮತ್ತ್ರಿ (ತ್ರಿ) ಭುವನ [ಮಲ್ಲ] ... ... [ಗರು]ಡನಾಮಾದಿ ಸಮಸ್ತ ಪ್ರಸಸ್ತಿಸಹಿತಂ ಶ್ರೀಮನ್ಮ [ಹಾ]...... .

49 ... ... [ಯಿ]ಮಯ್ಯರಸಂ ಶ್ರೀ ... ...ಗೆನಾದ ದುಷ್ಟನಿಗ್ರಹಶಿಷ್ಟಪ್ರತಿ ಪಾಳನೆ... ... ...

50 ... ...ಬರೆನ್ದು ಪು... ... ... ಬ್ದಂ ಬರೆ ಭಾದ್ರ ಸುದ್ಧಪ[ಕ್ಷಂ][14]

ಅನುಬಂಧ

ಅದಗುನ್ತಿ : ಹಳೆಯ ಕಿಟೆಲ್ ಕೋಶದಲ್ಲಿ ಈ ಶಬ್ದವು ಕಂಡುಬರುವುದಿಲ್ಲ. ಶಾಸನ ಪದ್ಯಮಂಜರಿಯ ಟಿಪ್ಪಣಿಗಳಲ್ಲಿ ಆರ್. ನರಸಿಂಹಾಚಾರರು ಹದಿನಾಲ್ಕನೆಯ ಪದ್ಯದಲ್ಲಿ ಬರುವ ಈ ಶಬ್ದಕ್ಕೆ 'ರಾಶಿ' ಎಂದು ಅರ್ಥ ಹೇಳಿದ್ದಾರೆ. ಬಂಕಾಪುರದ ಶಾಸನವೊಂದರಲ್ಲಿ[15] 'ವಿನಯದ ಮೇರೆ ಧರ್ಮ್ಮದ ತವರ್ಮ್ಮನೆ ಸತ್ಯದ ಜನ್ಮಭೂಮಿ ಮಾಂತನದಡಗುನ್ತಿ ಚಾಗದ ಮಹಾನಿಧಿ ಪೆಂಪಿನ ರತ್ನರಾಶಿ' ಎಂದು ಕದಂಬ ಮಹಾ ಮಂಡಳೇಶ್ವರ ಹರಿಕೇಸರಿದೇವನ ಪಿರಿಯರಸಿ ಲಚ್ಚಲದೇವಿಯ ವರ್ಣನೆಯಲ್ಲಿ ಈ ಶಬ್ದ ಬರುತ್ತದೆ. ಕುರಗೋಡದ ಶಾಸನಗಳಲ್ಲಿ 'ಸಿಂದಭೂಪನ ಸನ್ತತಿಯಡಗುನ್ತಿ ಪೆರ್ಚ್ಚೆ[16], ಎಂದೂ 'ತದೀಯ ಸಂತತಿಯಡಗುಂತಿಯೆಂತೆಂದಡೆ[17]' ಎಂದೂ ಈ ಶಬ್ದದ ಪ್ರಯೋಗಗಳು ಬರುತ್ತವೆ. ಈ ಮೂರೂ ಶಾಸನಗಳನ್ನು ಸಂಪಾದಿಸಿದ ಡಾ. ಬಾರ್ನೆಟ್ ಅವರು, ಅನುಕ್ರಮವಾಗಿ 'the structure of greatness', 'when the line of the king Sinda's descendants waxed great'

---

14 ಮುಂದಿನ ಭಾಗ ಒಡೆದು ಹೋಗಿದೆ.

15 E. I. xiii ; p. 171, l. 26, A.D. 1055

16 Ibid. xiv ; p. 271, l. 26, A.D. 1173

17 Ibid. xiv ; p. 280, l. 21 c A.D. 1184

ಹಾಗೂ 'the greatness of that line is as follows' ಎಂದು ಭಾಷಾಂತರ ಮಾಡಿದ್ದಾರೆ. ಮುಂದೆ ಆರ್. ನರಸಿಂಹಾಚಾರರ ಸೂಚನೆಯ ಪ್ರಕಾರ 'ಅಡಗುನ್ತಿ ಶಬ್ದವನ್ನು ಅದಗುನ್ತಿಯೆಂದು ಓದಿರಿ' ಎಂದು ಅವರೇ ತಿದ್ದುಪಡಿ ಕೊಟ್ಟು ಅದಕ್ಕೆ 'greatness' ಎಂದು ಅರ್ಥಹೇಳಿದ್ದಾರೆ.[18]

ಡಾ॥ ಬಾರ್ನೆಟ್ ಅವರು ಸಂಪಾದಿಸಿದ ಇನ್ನೊಂದು ಶಾಸನದಲ್ಲಿ ಈ ಶಬ್ದ ಬರುತ್ತದೆ, ಅದು ಗದಗಿನ ಶಾಸನ.[19] ಅದರಲ್ಲಿಯು ಪ್ರಯೋಗ ಹೀಗೆ ಇದೆ :

'ಆ ಮಹಿಮಾ ವಿಳಾಸದಡಗುನ್ತಿ[ಯ] ಪೆರ್ಗ್ಗಡೆ ಧೋಯಿಪಯ್ಯನುದ್ದಾಮ ಕುಳಕ್ಕೆ ತಕ್ಕ ಸಚಿ' ಇತ್ಯಾದಿ.

ಇದಕ್ಕೆ 'That perfection of the display of dignity' ಎಂದು ಭಾಷಾಂತರ ಕೊಟ್ಟಿದ್ದಾರೆ. ಈ ಶಬ್ದದ ಇನ್ನೂ ಕೆಲವು ಪ್ರಯೋಗಗಳನ್ನು ನೋಡುವಾ. ಕೊಕಟನೂರ ಗ್ರಾಮದ ತ್ರೈಳೋಕ್ಯಮಲ್ಲನ ಶಾಸನದಲ್ಲಿ[20] ಮಹಾಮಂಡಳೇಶ್ವರ ಜೋಗಪಯ್ಯರಸನ ರಾಣಿ ಪೊಲ್ಲಿಕಬ್ಬರಸಿಯನ್ನು ವರ್ಣಿಸುವಾಗ 'ಆ ಪುಣ್ಯವತಿಯ ಭಾಗ್ಯದ ಸೌಭಾಗ್ಯದ ಕಾನ್ತಿಯಡಗುನ್ತಿಯೇಂ ಪೊಗಳ್ವಡೆ' ಎಂದು ಉಲ್ಲೇಖ ಬರುತ್ತದೆ. ಹುಬ್ಬಳ್ಳಿ ತಾಲ್ಲೂಕಿನ ನೂಲವಿ ಗ್ರಾಮದ ಶಾಸನದಲ್ಲಿ[21]

ಕುನ್ತಳ ವಿಷಯವ ರಂಜಿತ
ಕಾನ್ತಾನಿಟಳಕ್ಕೆ ತಿಳಕಮೆನಿಸಿದ ನಾಡ
ತ್ಯಂನತ ಹಲಸಿಗೆಯದಱದ
ಗುನ್ತಿಯನೊಳಕೊಂಡು ನೂಲೆ ಸೊಗಯಿಸಿ ತೋರ್ಕ್ಕುಂ ॥

ಎಂದೂ, ಗದಗ ತಾಲೂಕಿನ ಕುರ್ತಕೋಟಿ ಗ್ರಾಮದ ಶಾಸನದಲ್ಲಿ[22]

ಅಂತಾಯಿನ್ನೂರ್ವ್ವರ್ಗ್ಗಂ
ಸಂತತಮತಿಭಕ್ತಿಯಿಂದೆ ನಾವಿದ ಧೋರಂ
ಮಾಂತನದಾಗರಮೆನಿಪದ–
ಗುನ್ತಿಗೆ ಸಲೆಯಾದನನ್ತು ಪಿರಿಯರುವೊಳರೇ ॥

18 Ibid. xiv ; Additions and Corrections ; pp. viii and ix
19 Ibid. xix ; p. 220, ll 21-22, AD 1037
20 ಕರ್ನಾಟಕ ಭಾರತಿ ಸಂ. 3, ಸಂ. 3 . ಪುಟ 51 ; AD 1050
21 The Kadambas of Goa and their Inscriptions : unpublished Thesis of Dr. R. N. Gurav ; p. III, No. 7 ll 15–16 ; A.D. 1072
22 S. I. I. Vol. xi, p–II, p. 155, ll. 12–13, AD 1087

ಎಂದೂ ಈ ಶಬ್ದದ ಪ್ರಯೋಗಗಳು ಬರುತ್ತವೆ. ಈ ಎಲ್ಲ ಪ್ರಯೋಗಗಳಿಂದ ಅದಗುನ್ತಿ ಶಬ್ದಕ್ಕೆ 'ರಾಶಿ, ಆದಿತ್ಯ, ಶ್ರೇಷ್ಠತೆ, ಪರಿಪೂರ್ಣತೆ' ಮುಂತಾದ ಅರ್ಥಗಳಿದ್ದದ್ದು ಗೋಚರವಾಗುತ್ತದೆ.

ಶಾಸನಗಳ ಹೊರತು ಬೇರೆ ಸಾಹಿತ್ಯದಲ್ಲಿಯೂ ಈ ಶಬ್ದವು ಕಂಡುಬರುತ್ತದೆ. ಹೀಗೆ ಎರಡನೆಯ ನಾಗವರ್ಮನ ವರ್ಧಮಾನ ಪುರಾಣದಲ್ಲಿ[23]

ಎಲೆ ಮೃಗರಾಜ ನೀಂ ಬಗೆಯೆ ಮುನ್ನಿನ ನಿನ್ನ ಮಹಾವಿಭೂತಿ ದೋರ್ವಳದ ಪ್ರೊಢರ್ಪನಾಂಕೆಯದಗುಂತಿ ನೆಗರ್ತೆಯ ಬೀರವಮಾವಗಂ ತೊಲಗೆ ಕುಯೋನಿಯೊಳ್ ಸುಳಿದು ಪುಣ್ಯಪರಿಕ್ಷಯದಿಂದಮೀಗಳಾಕುಳತೆಯೊಳೊಂದಿ ನಿಟ್ಟಡವಿಯೊಳ್ ನಿನಗಂ ನವೆವಂತುಟಾದುದೇ ॥

ಎಂಬ ಪದ್ಯದಲ್ಲಿ ಅದಗುಂತಿ ಶಬ್ದವನ್ನು ನಾವು ಕಾಣುತ್ತೇವೆ. ಗ್ರಂಥ ಸಂಪಾದಕರಾದ ಶ್ರೀ ಸಣ್ಣಯ್ಯನವರು ಈ ಶಬ್ದಕ್ಕೆ 'ಆಶ್ಚರ್ಯ, ದಗುಂತಿ' ಎಂದು ಅರ್ಥಹೇಳಿದ್ದಾರೆ.

ಆದಿಪುರಾಣದಲ್ಲಿ ಈ ಶಬ್ದದ ಪ್ರಯೋಗ ಹೀಗೆ ಬಂದಿದೆ[24] :

ನೆಗಟ್ದವರಾಂಗನಾಜನದ ರೂಪುಗಳೆಲ್ಲಮದೀಕೆಯೊಂದು ದೇ
ಸೆಗೆ ನಿಮಿರ್ವೊಂದು ಪುರ್ವಿನ ನಯಕ್ಕಮರ್ವೊಂದದಗುಂತಿಗೊಂದು ಭಂ-
ಗಿಗೆ ನೆಗಟ್ಬ್ವೊಂದು ಮೆಲ್ಪಿನ ತೊದಳ್ನುಡಿಗಪ್ಪೊಡಮೆಯ್ದೆ ವಾರವೇ-
ನೊಗಸುವವೆಂದು ತಳ್ತಗಲನಾಕೆಯುನಾ ಲಲಿತಾಂಗವಲ್ಲಭಂ ॥

ಸಂಪಾದಕರು ಅದಗುಂತಿಗೆ 'ಅತಿಶಯು' ವೆಂದು ಅರ್ಥ ಕೊಟ್ಟಿದ್ದಾರೆ.

ಇನ್ನು, ಕಿಟೆಲ್ ಶಬ್ದಕೋಶದ ಪರಿಷ್ಕೃತವಾದ ಹೊಸ ಆವೃತ್ತಿಯಲ್ಲಿ ಅದಗುಂತಿಯೆಂದು ಶಬ್ದವನ್ನು ಕೊಟ್ಟು ಅದಕ್ಕೆ ಅಗುಂತಿಯೆಂದು ಅರ್ಥ ಹೇಳಿ ಆದಿಪುರಾಣದಲ್ಲಿಯ ಮೇಲಿನ ಪದ್ಯಭಾಗವನ್ನು ಉಧೃತಮಾಡಿದ್ದಾರೆ. ಮತ್ತು 'this may be a ghost word wrongly used in the place of ಅಗುಂತಿ' ಎಂದು ಷರಾ ಬರೆದಿದ್ದಾರೆ. ಅಗುಂತಿ ಶಬ್ದಕ್ಕೆ ಅದೇ ನಿಘಂಟಿನಲ್ಲಿ abundance, excellence ಎಂದು ಅರ್ಥಕೊಟ್ಟು 'ಧರಾತಳದ ತಿಣ್ಣಮನಾದಿತ್ಯನ ತೇಜದಗುಂತಿಯುಮಂ ಚಂದ್ರನ ಕಾಂತಿಯುಮಂ' ಎಂದು ಪಂಪಭಾರತದಲ್ಲಿಯ (pb. 139 ವ) ಪ್ರಯೋಗವನ್ನು ಉಧೃತ ಮಾಡಿದ್ದಾರೆ. ಹೀಗೆ ನಿಘಂಟುಕಾರರ ಸೂಚನೆಯ

---

23 6-2 Mysore University Publication

24 Adi-Purana of Pampa ; 2-75 : Prof. K. G. Kundangar and *Devan-Bahadur* A.P. Chaugule

ಪ್ರಕಾರ ಅದಗುಂತಿಯು ಬರಹಗಾರನ ತಪ್ಪಿನಿಂದ ಸಂಭವಿಸಿದ ಕಾಲ್ಪನಿಕ ಶಬ್ದವಾಗಿದ್ದು ಅಗುಂತಿ ಸರಿಯಾದ ಶಬ್ದವಿರುತ್ತದೆ.

ಆದರೆ, ಕೋಶಕಾರರ ಈ ಸೂಚನೆ ಈ ಶಬ್ದದ ಶಾಸನಗಳಲ್ಲಿಯ ಪ್ರಯೋಗಗಳಿಗೆ ಸರಿಹೋಗುವುದಿಲ್ಲ. ಅಗುಂತಿಯೆಂದು ರೂಪವಿಟ್ಟುಕೊಂಡರೆ ಪದ್ಯಭಾಗಗಳಲ್ಲಿ ಒಂದು ಲಘುಮಾತ್ರೆ ಕಡಿಮೆಯಾಗುವುದು. ಹೀಗಿರುವದರಿಂದ ಅದಗುಂತಿಯೇ ಸರಿಯಾದ ರೂಪವೆಂದು ಭಾವಿಸಬೇಕಾಗುತ್ತದೆ. ಶಾಸನಗಳ ಪ್ರಯೋಗಗಳಲ್ಲಿ ಹಾಗೂ ವರ್ಧಮಾನ ಆದಿಪುರಾಣಗಳಲ್ಲಿ ಅದಗುಂತಿ ಶಬ್ದವು ಹಿಂದಿನ ಶಬ್ದದ ಕೂಡ ಸಂಧಿಯಾಗಿಯೇ ಕಂಡುಬರುತ್ತದೆ. ಒಂದು ವೇಳೆ ಅದಗುಂತಿ ಶಬ್ದವು ಕಾಲ್ಪನಿಕವಾಗಿದ್ದರೆ, ಅದರ ನಿಜವಾದ ರೂಪು ಅಗುಂತಿಯಾಗದೆ ದಗುಂತಿಯಾಗಬಹುದು. ಈ ಪ್ರಯೋಗಗಳನ್ನು ಸಂಧಿರಹಿತವಾಗಿ ಓದಿದರೆ ದಗುಂತಿಯೆಂದು ರೂಪು ಕಂಡುಬರುವುದು. ಕಿಟೆಲ್‌ರ ಪರಿಷ್ಕೃತ ನಿಘಂಟಿನಲ್ಲಿ ದಗುಂತಿಯೆಂದು ಶಬ್ದವೊಂದನ್ನು ಕೊಟ್ಟಿದ್ದು, ಅದಕ್ಕೆ 'great, excess' ಎಂದು ಅರ್ಥ ಹೇಳಿ 'ಮೂಱುಮುಮರಾವಾಸಂಗಳೊಳ್ ಪೇಳ್ವೊಡುತ್ತಮ ಸಮ್ಯಕ್ತ್ವಫಲಂ ದಗುನ್ತಿ ಮಗಳೇ ನೀನಿನ್ತಿದಂ ನಂಬನುಕ್ರಮದಿಂದಂ ದೊರೆವೆತ್ತ ಸಪ್ತಪರಮಸ್ಥಾನಂಗಳಂ ಪೊರ್ದುರ್ವೈ' ಎಂಬ ಆದಿಪುರಾಣದಲ್ಲಿಯ ಐದನೆಯ ಆಶ್ವಾಸದಲ್ಲಿಯ 63ನೆಯ ಪದ್ಯಭಾಗವನ್ನು ಉಧೃತ ಮಾಡಿದ್ದಾರೆ. ಎರಡೂ ಶಬ್ದಕ್ಕೆ ಹೆಚ್ಚುಕಡಿಮೆ ಒಂದೇ ಅರ್ಥ.

ಈ ಶಬ್ದದ ಕುರಿತು ಇನ್ನೂ ಒಂದು ತೊಡಕಿದೆ. ಡಾ. ಬಾರ್ನೆಟ್ ಅವರ ವಾಚನದಲ್ಲಿ ಅದಗುಂತಿ ಶಬ್ದವು ನಾಲ್ಕು ಸಾರೆ ಬಂದಿದ್ದು, ನಾಲ್ಕೂ ಸ್ಥಳಗಳಲ್ಲಿ ಅವರು ಅಡಗುನ್ತಿಯೆಂದು ಮೊದಲು ಓದಿ, ಮೂರ ಸ್ಥಳಗಳಲ್ಲಿ ಅದಕ್ಕೆ ಅದಗುನ್ತಿಯೆಂದು ತಿದ್ದುಪಡಿ ಹೇಳಿದ್ದಾರೆ. ಈ ತಿದ್ದುಪಡಿ ಶಾಸನಗಳ ಪಡಿಯಚ್ಚುಗಳಿಗೆ ಅನುಸಾರವಾಗಿದೆಯೋ ಅಥವಾ ಇಲ್ಲವೋ ಇದನ್ನು ಅವರು ಹೇಳಿಲ್ಲ. ನಾಲ್ಕನೆಯದಾದ ಗದಗ ಶಾಸನವು ಈ ಮೂರು ಶಾಸನಗಳ ತರುವಾಯ ಪ್ರಕಟವಾಗಿದ್ದು, ಅದಕ್ಕೆ ಅವರು ತಿದ್ದುಪಡಿ ಹೇಳಿಲ್ಲ. ಹೀಗಿರುವದರಿಂದ ಈ ಶಾಸನಗಳಲ್ಲಿ ಬರುವ ನಿಜವಾದ ಶಬ್ದವು ಅದಗುನ್ತಿಯೋ ಅಡಗುನ್ತಿಯೋ ಎಂಬುದು ಅನಿರ್ಣಿತವಾಗಿ ಉಳಿಯುತ್ತದೆ. ಡಾ. ಬಾರ್ನೆಟ್ ಅವರ ಓದುವಿಕೆಯ ಆಧಾರದಿಂದ ನಾನು ಕೊಕಟನೂರ ಶಾಸನದಲ್ಲಿ ಅಡಗುನ್ತಿಯೆಂದು ಪಾಠವಿಟ್ಟಿರುತ್ತೇನೆ. ಈಗ ಪುನಃ ಪಡಿಯಚ್ಚುಗಳನ್ನು ಪರೀಕ್ಷಿಸಿ ನೋಡಿದರೂ 'ಡ' ಅಥವಾ 'ದ' ಎಂಬುದನ್ನು ನಿರ್ಣಯಿಸಲು ಬರುವಂತಿಲ್ಲ. ಯಾಕಂದರೆ ಶಾಸನದ ಈ ಭಾಗವು ಸವಕಳಿ ಹಾಗೂ ಕಚ್ಚುಗಳಿಂದ ಕೆಟ್ಟು ಹೋಗಿದೆ. ಅದೇ ಪ್ರಕಾರ, ನೂಲವಿ ಶಾಸನ ಪಡಿಯಚ್ಚುಗಳನ್ನು ಪುನಃ ಪರೀಕ್ಷಿಸಿ ನೋಡಿದೆ. ಅಲ್ಲಿಯೂ ಕಚ್ಚುಗಳು ಇರುತ್ತವೆ. ಅಕ್ಷರವು ಸ್ಪಷ್ಟವಾಗಿ ಕಾಣುವುದಿಲ್ಲ. ಆದರೆ, ಪ್ರಸ್ತುತ ತಂಬೂರ ಶಾಸನದ ಈ ಭಾಗವು

ಸಮತಳವಾಗಿದ್ದು ಕಚ್ಚುಗಳು ಇರುವುದಿಲ್ಲ. ಅಲ್ಲಿಯು ಪಾಠ 'ಅದಗುನ್ತಿ' ಯೆಂದು ಸ್ಪಷ್ಟವಾಗಿದೆ.[25]

ಹೀಗೆ ಅಡ(ದ)ಗುನ್ತಿ ಮತ್ತು ಡ(ದ)ಗುನ್ತಿ ಯೆಂದು ನಾಲ್ಕು ರೂಪುಗಳು ಉಳಿಯುತ್ತವೆ. ಇವುಗಳಲ್ಲಿ ಯಾವ ರೂಪವು ಸರಿಯಾದುದು ಎಂಬುದನ್ನು ನಿರ್ಣಯಿಸಲಿಕ್ಕೆ ಈ ಶಬ್ದದ ವ್ಯುತ್ಪತ್ತಿ ದೃಷ್ಟಿಯಿಂದ ಹೆಚ್ಚಿನ ಸಂಶೋಧನಾಭ್ಯಾಸವಾಗಬೇಕಾಗಿದೆ. ಅದನ್ನು ನಾನು ಭಾಷಾತಜ್ಞರಿಗೆ ಬಿಟ್ಟು ಕೊಡುತ್ತೇನೆ.[26]

---

25 ಈ ಭಾಗದ ಪಡಿಯಚ್ಚಿನ ಛಾಯಾಚಿತ್ರವನ್ನು ನೋಡಿರಿ.

26 ಪರಿಷ್ಕೃತ ಕಿಟೆಲ್ ಶಬ್ದಕೋಶದಲ್ಲಿ 'ಅಡುಗು' ಯೆಂದು ಒಂದು ಶಬ್ದ ಕೊಟ್ಟಿದ್ದು, ಅದಕ್ಕೆ 'The state of being joined, becoming or fit; agreeableness, beauty' ಎಂದು ಅರ್ಥಗಳನ್ನು ಕೊಟ್ಟಿದ್ದಾರೆ. ತೆಲಗು ಹಾಗು ತಮಿಳ ಭಾಷೆಗಳಲ್ಲಿಯ ಸಂವಾದಿ ಶಬ್ದಗಳನ್ನು ಸೂಚಿಸಿದ್ದಾರೆ. ಈ ಅಡಗು ಶಬ್ದಕ್ಕೆ ಮತ್ತು ಅಡಗುನ್ತಿಗೆ ಏನಾದರೂ ಸಂಬಂಧವಿದೆಯೊ ?

ಸಲ್ಲದ ನಾಣ್ಯ

ಆರ್. ರಾಚಪ್ಪ

‘ಇಲ್ಲಿ ಸಲ್ಲುವವರು ಅಲ್ಲಿಯೂ
ಸಲ್ಲುವರಯ್ಯಾ’

ಹೌದು, ಇಲ್ಲಿ ಸಲ್ಲುವುದಾದರೂ ಹೇಗೆ ?

ಕಳ್ಳತನ ಮಾಡದಿರುವವನು
ಸುಳ್ಳು ಹೇಳದಿರುವವನು
ತನ್ನ ಬಣ್ಣಿಸದವನು
ಅನ್ಯರಿಗೆ ಅಸಹ್ಯ ಪಡದವನು
ಇದಿರ ಹಳಿಯದವನು

ಇಲ್ಲಿ ಹೇಗೆ ಸಂದಾನು ?

ಸ್ವಾರ್ಥ ತುಂಬಿರುವ ಈ ಸಮಾಜದಲ್ಲಿ
ನಿಸ್ವಾರ್ಥಿ ತಾನೆಂಬ ಬಿಗುಮಾನದ ವ್ಯಕ್ತಿ
ಇಲ್ಲಿ ಸಲ್ಲದ ನಾಣ್ಯ.

ಇಲ್ಲಿಯೂ ಸಂದು, ಅಲ್ಲಿಯೂ ಸಲ್ಲುವುದಕೆ

ಹಿಡಿ, ಗೆದ್ದ ಎತ್ತಿನ ಬಾಲ—

ಇಲ್ಲದಿದ್ದರೆ ಗೆದ್ದ ಎತ್ತು
ಎತ್ತಿ ಒದೆಯುತ್ತದೆ ನಿನ್ನನ್ನು
ಸೋತದ್ದು ನಿನಗೆ ಸಹಾಯುವಲ್ಲ,
ಹೀಗಿರುವಾಗ ತನ್ನತನವನುಳಿಸಿಕೊಂಡು
ಬದುಕುವೆನೆಂಬ ಅಭಿಮಾನದ ಮಾತು
ಬರಿಯ ಬಿಂಕ !

ಅಪ್ಪ ಹಾಕಿದ ಆಲದ ಮರ,
–ಧರ್ಮ, ನ್ಯಾಯ, ನೀತಿ, ದಯೆ ಎಂದು—

ಜೋತು ಬಿದ್ದೆಯಾದರೆ,
ಇಲ್ಲಿಯೂ ಸಲ್ಲದ, ಅಲ್ಲಿಯೂ ಸಲ್ಲದ
ಎಲ್ಲೆಲ್ಲಿಯೂ ಸಲ್ಲದ ಜೆಂತರನಾಗಿಬಿಡುವೆ!
ತ್ರಿಶಂಕುವಿಗಾದರೂ ಇತ್ತಯ್ಯ
ವಿಶ್ವಾಮಿತ್ರ ಮುನಿಯ ತಪೋಬಲ
ನಿನಗೆ ಯಾರ ಬಲವಿದೆ?
ಅದಕೆ ಇಲ್ಲಿ ಸಲ್ಲುವಂತ ನಡೆ
ಇಲ್ಲದಿರೆ ನೀನಿಲ್ಲಿ ಅಪಾತ್ರ

ಕೊಂಡದ ಕಾಟವ್ವ

ಎ. ಕೃಷ್ಣಮೂರ್ತಿ

ಕರ್ನಾಟಕದಲ್ಲಿ ಸತಿಸಹಗಮನ ಪದ್ಧತಿಯ ಉಲ್ಲೇಖಗಳು ಕ್ರಿ.ಶ. ಸು 400 ರಿಂದ ಆರಂಭವಾಗಿ ಸ್ಪಷ್ಟ ಐತಿಹಾಸಿಕ ನಿದರ್ಶನಗಳು ನಮಗೆ ದೊರಕೊಳ್ಳುವುದು ಕ್ರಿ.ಶ. 972 ರಿಂದ ಬಿದಿಯಣ್ಣನು ಮಡಿದಾಗ ಆತನ ಹೆಂಡತಿ ಜಕ್ಕಬ್ಬೆ ಸತಿಯಾಗುವುದು, ಆಕೆಯ ತಂಗಿ ಕಲ್ಲನಿರಿಸುವುದು ತಿಳಿದುಬರುತ್ತದೆ. ಅಲ್ಲಿಂದ ಶಾಸನಗಳಲ್ಲೇ ಆಗಲಿ, ಕಾವ್ಯಗಳಲ್ಲೇ ಆಗಲಿ ನಮಗೆ ಉಲ್ಲೇಖಗಳು ತೀರ ಇತ್ತೀಚಿನವರೆಗೂ ದೊರೆಯುತ್ತವೆ.[1]

ಪತಿಯು ಮಡಿದಾಗ ಸತಿಯು ಸಹಗಮನ ಅಥವಾ ಅನುಗಮನ ಕೈಕೊಂಡು ಮಹಾಸತಿಯರಾಗಿ ಕಲ್ಲಿರಿಸಲ್ಪಟ್ಟು ಕಾಲಕ್ರಮೇಣ ಕಲ್ಲಿಗೆ ಗುಡಿಯೂ ಕಟ್ಟಲ್ಪಟ್ಟು, ಪೂಜೆಪುನಸ್ಕಾರಗಳು ಜಾತ್ರೆಯೂ ನಡೆಯುವುದುಂಟು.[2] ಹಾಗೆಯೇ ಮಹಾಸತಿಯರನ್ನು ಕುರಿತ ಜನಪದ ಗೀತೆಗಳು ಹುಟ್ಟಿಕೊಂಡಿರುವುದಕ್ಕೂ ಉದಾಹರಣೆಗಳಿಲ್ಲದಿಲ್ಲ.

---

1 ವಿಷಯವನ್ನು ಡಾ॥ ಎಂ. ಚಿದಾನಂದಮೂರ್ತಿಯವರ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಗ್ರಂಥದಿಂದ ತೆಗೆದುಕೊಳ್ಳಲಾಗಿದೆ: ಕೆಲವು ಶಾಸನ ಉದಾಹರಣೆಗಳು: ಕ್ರಿ ಶ. 972 ರ ಜಕ್ಕಬ್ಬೆ ಮಹಾಸತಿಯದು. 1051ರ ಮದುವಳಿಗೆ ನಾಗಮ್ಮ ಮಹಾಸತಿಯ ಶಾಸನ. 1057ರ ದೇಕಬ್ಬೆಯ ಬೇಳತೂರು ಶಾಸನ, 1088ರ ನವಲಾಹಿರಾಜನ ಸತಿಗೆ ಸಂಬಂಧಿಸಿದ ಶಾಸನ. ಹೀಗೆ ಹಲವಾರನ್ನು ಹೆಸರಿಸಬಹುದು. ಕಾವ್ಯಗಳಾದರೆ, ಪಂಪಭಾರತದಲ್ಲಿ ಪಾಂಡುವಿನ ಜತೆ ಮಾದ್ರಿಯ ಅನುಗಮನ, ಅಜಿತಪುರಾಣದಲ್ಲಿ ನಾಗದೇವನ ಜತೆ ಗುಂಡುಮಬ್ಬೆಯ ಅನುಗಮನ, ಜನ್ನನ ಅನಂತನಾಥ ಪುರಾಣದಲ್ಲಿ ರಾಜನ ಸಾವಿನನಂತರ ಅನುಗಮನಕ್ಕೆ ಸಿದ್ಧವಿರುತ್ತಿದ್ದ ರಾಣಿಯರ ಪ್ರಸ್ತಾಪ, ಎಂ. ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹರಾಯ ಕಾದಂಬರಿಯಲ್ಲಿ ವರ್ಣಿತವಾಗಿರುವ ಅನುಗಮನ ಪದ್ಧತಿಯ ವಿಚಾರ....

2 ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕು ಕಾನಮಡಗು ಗ್ರಾಮದಲ್ಲಿ ಬೇವಿನಮರದ ಜಗುಲಿಯ ಕಟ್ಟೆಯಮೇಲಿನ ಮಹಾಸತಿಕಲ್ಲೊಂದು ಗ್ರಾಮಸ್ಥರಿಂದ ಪೂಜಿಸಿಕೊಳ್ಳುತ್ತಿದೆ. ಚನ್ನಗಿರಿ ತಾಲ್ಲೋಕಿನ ಒಂದು ಗ್ರಾಮದಲ್ಲಿ ಮಹಾಸತಿ ಕಲ್ಲೊಂದು ಗ್ರಾಮದವರಿಂದ ನಂಬಿಕೆಯ ದೇವತೆಯಾಗಿ ಪೂಜಿಸಿಕೊಂಡು ವಿಶೇಷ ಸಮಾರಂಭಗಳೂ ಆಕೆಯ ಹೆಸರಿನಲ್ಲಿ ಜರುಗುತ್ತಿವೆಯೆಂದು ಡಾ॥ ಚಿದಾನಂದ ಮೂರ್ತಿಯವರು ತಿಳಿಸಿದ್ದಾರೆ.

ಮಹಾಸತಿಯೊಬ್ಬಳನ್ನು ಕುರಿತ ಜನಪದ ಗೀತೆಯೊಂದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೋಕಿನ ಹುಲಿಕುಂಟೆ, ಹರ್ತಿಕೋಟೆ, ತಿಮ್ಮಣ್ಣನಾಯಕನ ಕೋಟೆ ಈ ಗ್ರಾಮಗಳಲ್ಲಿ ಪ್ರಚಲಿತದಲ್ಲಿದೆ. ಹಾಡುವ ಹೆಂಗುಸರು ಅಥವಾ ಕಥೆ ತಿಳಿದ ಹಳಬರು ಇಲ್ಲೇ ಕೊಂಡಕ್ಕೆ ಸತಿಬಿದ್ದದ್ದು, ಆಕೆ ಬಿದ್ದನಂತರ ಸ್ಥಳವನ್ನು ಕಲ್ಲಿನಿಂದ ಮುಚ್ಚಿ ಮೇಲೆ ತೋಪು ಏಳಿಸಲಾಯಿತೆಂದು ಹುಲಿಕುಂಟೆ ಗ್ರಾಮದ ಒಂದು ತೋಪಿನ ಸ್ಥಳವನ್ನು[3] (?) ತೋರಿಸುತ್ತಾರೆ. ಮಹಾಸತಿ ಕಾಟವ್ವನ ಹೆಸರಿನಲ್ಲಿ ಆಗಾಗ ಪೂಜೆ ಪುನಸ್ಕಾರಗಳು ಹಳ್ಳಿಗರಿಂದ ನಡೆಯುತ್ತದಾದರೂ ಜಾತ್ರೆಯಂಥ ಯಾವ ವಿಶೇಷ ಸಮಾರಂಭಗಳು ನಡೆಯುವುದಿಲ್ಲ. ಆಕೆಯ ಹೆಸರಿನಲ್ಲಿ ಕಲ್ಲನ್ನೂ ಕೂಡ ಇರಿಸಲ್ಪಟ್ಟಿಲ್ಲ. ಆದರೆ ಕಾಟವ್ವನ ಮೇಲೆ ಕಟ್ಟಿರುವ ಗೀತೆ ಗಮನಾರ್ಹವಾಗಿರುವುದೇ ಅಲ್ಲದೆ ಸಾಹಿತ್ಯಿಕವಾಗಿ ಪದ್ಯಗಳು ಸೊಗಸಾಗಿವೆ.

ಕಾಟವ್ವನ ತವರುಮನೆ ಹರ್ತಿಕೋಟೆ. ಗಂಡನ ಮನೆ ಹುಲಿಕುಂಟೆ. ಸುಮಾರು ಹತ್ತನ್ನೆರಡು ಮೈಲುಗಳ ಅಂತರದಲ್ಲಿ ಎರಡು ಗ್ರಾಮಗಳೂ ಇವೆ. ಈ ಕಾಲಕ್ಕೆ ಅವು ಹಿಂದುಳಿದ ಗ್ರಾಮಗಳಾಗಿ ಕಂಡುಬಂದರೂ ಹಿಂದಿನ ಕಾಲಕ್ಕೆ ಅವು ನಿಡುಗಲ್ಲು ಪಾಳೆಯ ಪಟ್ಟುಗಳಿಗೆ ಸೇರಿಕೊಂಡಿದ್ದು ಹೆಸರುವಾಸಿಯಾಗಿದ್ದ ವೆಂದು ತಿಳಿಯಬಹುದು. ಏಕೆಂದರೆ ತುಮಕೂರು ಜಿಲ್ಲೆ ಪಾವಗಡ ನಲವತ್ತಾರರ ಶಾಸನ[4]ದಲ್ಲಿ ವೆಂಕಟಪತಿರಾಯನು ಹೊಟ್ಟ್ಯಾಳನಾಯಕನಿಗೆ ದೊಡ್ಡೇರಿ, ಸಿರಾ, ತುರುವೇಕೆರೆ, ಹಿರಿಯೂರು, ಐಮಂಗಲ ಈ ಪ್ರದೇಶಗಳನ್ನು ದಾನವಾಗಿ ಒಟ್ಟು ಕೊಟ್ಟನೆಂಬುದಾಗಿ ತಿಳಿದು ಬರುತ್ತದೆ. ಹುಲಿಕುಂಟೆ, ಹರ್ತಿಕೋಟೆ, ತಿಮ್ಮಣ್ಣ ನಾಯಕನ ಕೋಟೆ ಈ ಗ್ರಾಮಗಳು ವೆಂಕಟಪತಿರಾಯನ ದಾನ ಪ್ರದೇಶಗಳ ನಡುವೆಯೇ ಬರುತ್ತವೆ.

ಜನಪದಗೀತೆಯಲ್ಲಿ ಕಾಟವ್ವ ಮಹಾಸತಿಯಾಗಿ ಕಂಡು ಬರುತ್ತಾಳಾದರೂ ಪತಿ ಮುತ್ತಣ್ಣ ತೀರಿಕೊಂಡ ಬಗೆ ಹೇಗೆ ಅನ್ನುವುದು ಗೊತ್ತಾಗುವುದಿಲ್ಲ. ಈ ಗೀತೆಯನ್ನು ಹಾಡಿದ ಸಿರಿಯಜ್ಜಿಯನ್ನು ಆ ವಿಷಯದ ಬಗ್ಗೆ ಪ್ರಶ್ನೆ ಕೇಳಲಾಗಿ, ಆಕೆಯಿಂದ ಸಮಂಜಸ ಉತ್ತರ ದೊರೆಯಲಿಲ್ಲ. (ಲೇಖನದ ಕೊನೆಗೆ ಸಂದರ್ಶನ ವನ್ನು ಕೊಡಲಾಗಿದೆ.) ಕಾಟವ್ವನ ಮೈದುನನ ಹೆಸರು ಸಿರಿಗೊಂಡಗೌಡ. ತಂದೆಯ

---

3 ಈ ಜನಪದ ಗೀತೆ ಹುಟ್ಟಿಕೊಂಡು ಸರಿಸುಮಾರು ಮುನ್ನೂರು ವರ್ಷಗಳಾಗಿರಬಹುದು. ಏಕೆಂದರೆ ಈ ಗೀತೆಯಲ್ಲಿ ನಿಡಗಲ್ಲು ಪಾಳೆಯಗಾರ ಮುಮ್ಮಡಿ ಹೊಟ್ಟ್ಯಾಳ ನಾಯಕನ ಹೆಸರು ಬರುತ್ತದೆ. ಆತನ ಕಾಲ ಕ್ರಿ.ಶ. ಸು. 1705. ಅದೇ ಗ್ರಾಮದಲ್ಲಿ ಘಟನೆ ನಡೆದಿರಬಹುದಾದರೆ ಕೊಂಡಕ್ಕೆ ಬಿದ್ದ ಸ್ಥಳ ಅದೇ ಎಂದು ನಂಬುವುದು ಎಷ್ಟು ಸೂಕ್ತವೊ? ಕೊಂಡದಸ್ಥಳ ಬದಲಾವಣೆ ಇದ್ದರೂ ಇರಬಹುದು.

4 E. C. Tur, Vol. 12, page : 14

ಹೆಸರು ಕುರಿಯಣ್ಣ. ತಮ್ಮ ಕಾಟಣ್ಣ. ಅತ್ತೆ, ತಾಯಿ, ನಾದುನಿಯರು ಗೀತೆಯಲ್ಲಿ ಬರುತ್ತಾರೆ. ಮಹಾಸತಿಯ ಸೋದರ ಕಾಟಣ್ಣ ತಂಗಿ ಕೊಂಡಕ್ಕೆ ಬೀಳುವುದನ್ನು ತಪ್ಪಿಸಲು ಬರುತ್ತಾನೆ. ಈ ಸಂದರ್ಭ 1057 ರ ಬೇಳತೂರಿನ ದೇಕಬ್ಬೆಯ ಶಾಸನದ ಕೆಲವು ಪದ್ಯಗಳನ್ನು ನೆನಪಿಗೆ ತರುತ್ತದೆ.[5]

ಗೀತೆಯ ಆರಂಭಕ್ಕೆ ಸರಸ್ವತಿಯ ಪ್ರಾರ್ಥನೆಯಿದೆ. ಅನಂತರ ಕಾಟವ್ವನನ್ನು ಕುರಿತು ಗೌರವಿಸಿ ಹೇಳುವ, ಕೊಂಡಕ್ಕೆ ನಡೆಯುವಲ್ಲಿ ಆಕೆ ಶೃಂಗರಿಸಿಕೊಳ್ಳುವ ಪದ್ಯಗಳು ಬರುತ್ತವೆ. ಅಂಥ ಪದ್ಯಗಳಲ್ಲಿ ಒಂದಾದ

ಅಸುಮಗಳು ಕಾಟಮ್ಮ ಬಸುವಾನೇರಿಕಂಡು
ಎಸಳುಮಲ್ಲಿಗೆಯಾ ಮುಡಕಂಡು
ಎಸಳುಮಲ್ಲಿಗೆಯಾ ಮುಡಕಂಡುವುಲಿಕುಂಟೆ
ಸೊಸಿ ಬೇವಿನಾಗ ಮೆರುದಾಳೆ ॥[6]

ಈ ಸಾಲುಗಳು ಹುಲಿಕುಂಟೆಯ ಕೊಂಡದ ಸ್ಥಳವನ್ನು ಹೇಳುತ್ತದೆ ಎನ್ನಬಹುದು. ಕಾಟಮ್ಮನನ್ನು ಕುರಿತ ಗೌರವದ ಪದ್ಯಗಳಲ್ಲಿ ಮಹಾಸತಿಯಾಗ ಹೋಗಲಿರುವ ಆಕೆ ಶೃಂಗಾರ ಮಾಡಿಕೊಳ್ಳುವುದು, ಮಾವನ ಮನೆಯಿಂದ ತವರು ಮನೆಗೆ ಹೋಗಿಬರುವುದು, ಕೊಂಡಕ್ಕೆ ನಡೆಯುವುದು ಇವೆಲ್ಲ ಬರುತ್ತದೆ. ಸತಿಯಾಗುವವಳು ರಾಜನ ಅಪ್ಪಣೆಯನ್ನು ಪಡೆದಿರಬೇಕಾಗುತ್ತದೆ ಎಂಬ ನಿಯಮ

---

5 ದೇಕಬ್ಬೆಯ ಬೇಳತೂರು ಶಾಸನ [E. C. IV Hg. 18.]

ಈ ಶಾಸನದ "ತನ್ದೆಯುಮಬ್ಬೆಯುಮೊಡನೆಯೇ
ಬನ್ಧುಗಳುಂಬನ್ದು ಮಗಳೇ ಸಾಯದೆ ಮಾಣ್ಣನೆ। "

ಈ ಸಾಲುಗಳು

ಬಿತ್ತೀದವಲದಾಗ ಉತ್ರಾಣೆಮೆಳೆಯಾಗ । ಅತ್ತೇ ಬರುತ್ತಾನೆ ಅವರಣ್ಣ
ಅತ್ತೇ ಬರುತಾನೆ ಅವರಣ್ಣ ಕಾಟಣ್ಣ । ಲಕ್ಸ ಕೊಟ್ಟೇನು ನಿಲುತಂಗಿ ॥
ಅರುಗೀದ ವಲದಾಗ ಸುರವೊನ್ನೆ ಮೆಳಿಯಾಗ । ಅರುದೇ ಬರುತ್ತಾನೆ ಅವರಣ್ಣ
ಅರುದೇ ಬರುತಾನೆ ಅವರಣ್ಣ । ಅರುವತ್ತು ಕೊಟ್ಟೇನು ನಿಲುತಂಗಿ ॥

ಎಂಬ ಜನಪದ ಗೀತೆಯ ಸಾಲುಗಳನ್ನು ಹೋಲುತ್ತವೆ.

ಶಾಸನದ 'ದೇವಲೋಕಕ್ಕೆ ಪೋದಳ್' ಎಂಬುದು ಗೀತೆಯ

'ರುದ್ರಣ್ಣನೆಂಬೋ ಕುದುರೇಯಾನೇರಿಕಂಡು
ಪೋದಾಳೆ ಶಿವನಾ ಅರುಮನಿಗೆ'

ಎಂಬ ಸಾಲುಗಳನ್ನು ಹೋಲುತ್ತದೆ.

6 ಈ ಪದ್ಯವನ್ನು ಹೇಳುವಾಗ ಹಾಡುವಾಕೆ ಈ ನುಡಿಯು ಹೇಳುವುದೇ ಹುಲಿಕುಂಟೆಕೊಂಡದ ಸ್ಥಳ ಎಂದಳು.

ಕ್ಕನುಸಾರವಾಗಿ, ನಿಡುಗಲ್ಲುದೊರೆ ಮುಮ್ಮಡಿ ಹೊಟ್ಟ್ಯಾಳ ನಾಯಕ[7]ನನ್ನು ಕಂಡು ಅಪ್ಪಣೆ ಪಡೆದುಬರಲು ಸೋದರ ಕಾಟಣ್ಣ ಹೋಗಿರುತ್ತಾನೆ. ಗುಲಗಂಜಿಯು ಹಾಗೆ ಕೆಂಪು ಚುಕ್ಕೆಯಿರುವ 'ಅರಿಸಿಣಗಂಬಿ' ಸೀರೆ ಉಟ್ಟಿರುತ್ತಾಳೆ ಕಾಟವ್ವ. ಹೆರಳು ಕಟ್ಟಿಸಿಕೊಳ್ಳುತ್ತಾಳೆ. ಕಯ್ಯಲ್ಲಿ ನಿಂಬೇಹಣ್ಣು ಹಿಡಿದು ಮೇಲುಮೇಲ ಕ್ಕೆಸೆದುಕೊಂಡು ಆಟವಾಡುತ್ತಾ ಬೀದಿಯಲ್ಲಿ ಸಾಗುತ್ತಾಳೆ. 'ದೂಳೂಗವುದಾವೆ, ದೂಳೂಗವುದಾವೆ ದುಕ್ಕದವ್ವ್ಯಾಡಗಳೆದ್ದಾವೆ' ಅನ್ನುವ ಸಾಲು ಅಲ್ಲಿ ನೆರೆದವರೆಲ್ಲರ ಮನಸ್ಸಿಗೆ, ಕೊಂಡಕ್ಕೆ ನಡೆಯುತ್ತಿದ್ದ ಕಾಟವ್ವನನ್ನು ಕಂಡು ಅದೆಂಥ ನೋವಾಯಿತು ಅನ್ನುವುದನ್ನು ಸೊಗಸಾಗಿ ಹೇಳುತ್ತದೆ.

ತಾಯಿಯ ಮನೆಯವರು ಆಕೆಯ 'ಅರಿಸಿಣಗಂಬಿ' ಸೀರೆಯ ಮಡಲಿಗೆ ಅಕ್ಕಿ ಸುರಿದಿರುತ್ತಾರೆ. ಒಂದೊಂದು ಅಕ್ಕಿಯ ಕಾಳು ಕೆಂಡವಾಯಿತು ಅನ್ನುವ ಪದ್ಯದ ಸಾಲು ಇನ್ನೊಂದು ಗಳಿಗೆಯಲ್ಲಿ ಆಕೆ ಬೆಂಕಿಗೆ ಆಹುತಿಯಾಗುತ್ತಾಳೆ ಎಂಬುದನ್ನು ಮೊದಲಿಗೇ ಸೂಚಿಸುತ್ತವೆ. ತವರಿನ ಮನೆಯವರು, ಅತ್ತಿಗೆ ನಾದಿನಿಯರು ಆಕೆಯನ್ನು ಕೊನೆಯದಾಗಿ ಸತ್ಕರಿಸುತ್ತಾರೆ. ಕಾಟವ್ವ ಯಾರನ್ನಾದರೂ ಬಿಟ್ಟು ಕೊಂಡಕ್ಕೆ ನಡೆಯಬಲ್ಲಳಾದರೂ ತಾನು ಹೆತ್ತ ಮಗುವನ್ನು ಬಿಟ್ಟು ಹೋಗ ಲಾರಳು.

---

7 ಹಲವು ಸಾಹಸ ಕಾರ್ಯಗಳಲ್ಲಿ ತೊಡಗಿ ತಿಪ್ಪಣ್ಣನಾಯಕನೆಂಬುವನು ಕೃಷ್ಣದೇವರಾಯನ (1506–1529) ಮೆಚ್ಚುಗೆಯನ್ನು ಗಳಿಸಿದನು. ಅಂಥ ಸಾಹಸಿಗೆ ಕೃಷ್ಣದೇವರಾಯ ಚಿತ್ರದುರ್ಗ ಜಿಲ್ಲೆಯ ಪೂರ್ವಭಾಗಕ್ಕೆ ಸ್ವಲ್ಪ ಭೂಮಿಯನ್ನು ಕೊಟ್ಟನು. ಆ ಭೂಮಿ ಯೆಂದರೆ ಮಜ್ಜ ಸಮುದ್ರ, ಗೋಸೀಕೆರೆ, ಚಳ್ಳಕೆರೆಯ ಪ್ರಾಂತಗಳು. ಈ ಪ್ರಾಂತ್ಯಗಳಿಗೆ ಒಡೆಯನಾದ ತಿಪ್ಪಣ್ಣ ನಾಯಕ ಸ್ವಯಂಸಾಮರ್ಥ್ಯದಿಂದ ಭೂಮಿಯನ್ನು ವಿಸ್ತರಿಸಿಕೊಂಡ. ಕಾಲಕ್ರಮದಲ್ಲಿ ಈತನ ಪಾಳೆಯಪಟ್ಟು ಬಜಾಪುರದ ಸುಲ್ತಾನರ ವಶವಾಯಿತು. (ಇಷ್ಟರಲ್ಲಿ ವಿಜಯನಗರದ ಅವನತಿಯಾಗಿತ್ತು.) ಸೋತ ತಿಪ್ಪಣ್ಣನಾಯಕ ನಿಡುಗಲ್ಲಿಗೆ ಓಡಿಹೋಗಿ ಅಲ್ಲಿ ದುರ್ಗಮವಾದ ಕೋಟೆಕಟ್ಟಿ ಹೊಸದಾಗಿ ಅಲ್ಲಿ ತನ್ನ ವಸಾಹತು ಸ್ಥಾಪಿಸಿದ. 1761ರಲ್ಲಿ ಇದೇ ನಿಡುಗಲ್ಲು ಹೈದರಾಲಿಯ ವಶವಾಯಿತು. ಹೈದರಾಲಿಯ ವಶಕ್ಕೆ ನಿಡುಗಲ್ಲು ಬಂದಾಗ ತಿಪ್ಪಣ್ಣನಾಯಕನ ವಂಶಸ್ಥರು ಅಲ್ಲಿ ಪಾಳೈಗಾರಿಕೆ ನಡೆಸಿರುತ್ತಾರೆ. ಹಾಗೆ ಪಾಳೆಗಾರಿಕೆ ನಡೆಸಿದವರಲ್ಲಿ ಎಂಟು ಜನ ಹೊಟ್ಟ್ಯಾಳ ನಾಯಕರು ಬರುತ್ತಾರೆ. ಇವರನ್ನು ಕುರಿತ ಶಾಸನಗಳು ಚಳ್ಳಕೆರೆ, ಪಾವಗಡ ತಾಲ್ಲೂಕುಗಳಲ್ಲಿ ದೊರೆಯುತ್ತವೆ. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ತಾಮ್ರಪಟದಲ್ಲಿ (ಕಾಲ! ಕ್ರಿ.ಶ. 1705) ಮುಮ್ಮಡಿ ಹೊಟ್ಟ್ಯಾಳ ನಾಯಕನ ಹೆಸರು ಬರುತ್ತದೆ. ಜನಪದ ಗೀತೆಯಲ್ಲಿ ಈತನನ್ನು ಹೆಸರಿಸ ಲಾಗಿದೆ. ಅಂದರೆ ಈತನ ಅಪ್ಪಣೆಯನ್ನು ತರಲು ಕಾಟವ್ವನ ಸೋದರ ನಿಡುಗಲ್ಲು ದುರ್ಗಕ್ಕೆ ಹೋಗುತ್ತಾನೆ. ಕಥೆಯ ಘಟನೆ ಬಹುಶಃ ಮುನ್ನೂರು ವರ್ಷಗಳ ಹಿಂದೆ ನಡೆದಿರ ಬಹುದು. (?)

ಸಾಯುವ ಕಾಲಕ್ಕೆ ಕಾಟವ್ವನಿಗೆ ಒಂದು ಮಗುವಿದ್ದಿರಬೇಕು. ಅದನ್ನು ತೊಟ್ಟಿಲಿಗಾಕಿ 'ಕಂದ ಅಳದೀರೋ ಕಂದಯ್ಯ ಅಳದೀರೋ, ಕಂದಸಿರಿಯಣ್ಣ ಅಳದೀರೋ...ನಿಮ್ಮಮ್ಮ ಕಂದನ ಬುಟ್ಟು ಕಾಡ ವೊಗತೀನಿ' ಎಂದು ಹಲುಬುತ್ತಾಳೆ. ಎಲ್ಲರನ್ನೂ ಬಿಟ್ಟು ಕೊನೆಗೆ ಕೊಂಡದ ಕಡೆಗೆ ನಡೆದ ಕಾಟವ್ವನನ್ನು ದಾರಿಯಲ್ಲಿ ತಡೆದು ಅವಳ ಅಣ್ಣದಿರು ತೆರವನ್ನು ಕೇಳುತ್ತಾರೆ.[8] ಅದಕ್ಕೆ ಕಾಟವ್ವ ತೆರಬೇಕಾದಲ್ಲಿ ನಮ್ಮ ಮಾವನ ಮನೆಯುವರೇನು ಬಡವರಲ್ಲ, ಶ್ರೀಮಂತರಿದ್ದಾರೆ, ಬೇಕಾದಷ್ಟು ತೆರ ಪಡೆಯುವುದು ಎಂದು ಹೇಳಿ ಕೊಂಡದ ಕಡೆಗೆ ಮುಂದುವರಿಯುತ್ತಾಳೆ. ಮರದ ತುಂಡುಗಳನ್ನು ಕತ್ತರಿಸಿ ಒಟ್ಟಿದ ಆ ಕೊಂಡದಲ್ಲಿ ಅಗ್ನಿದೇವಿ ಅಸನಾಗಿ ನಕ್ಕು ಉರಿಯುತ್ತಿದ್ದಳಂತೆ, ಪದ್ಯ–

ಅಸಿಯಾ ತುಗ್ಗಲಿಮರ ಎಸಳೊಡೆದೂಬೇವಾಗ
ಅಸುಮಗಳು ಕಾಟಮ್ಮ ಮೆರಿವಾಗ
ಅಸುಮಗಳು ಕಾಟಮ್ಮ ಮೆರಿವಾಗ ಅಗ್ಗುಣಿದೇವಿ
ಅಸನಾದ ನಗುವಾ ನಗುತಾಳೆ ॥

ಎಂಬುದಾಗಿದೆ.

ಕೊಂಡಕ್ಕೆ ಕಾಟವ್ವ ಬಿದ್ದುದು ಪದ್ಯಗಳಲ್ಲಿ ಬರುವುದಿಲ್ಲ. ನೇರವಾಗಿ ಮೇಲಿನ ಪದ್ಯದ ನಂತರ ಮಹಾಸತಿ 'ಸಿವನರುಮನಿಗೆ' ಹೋದಳು ಎಂಬಷ್ಟಕ್ಕೆ ಗೀತೆಯು ಮುಕ್ತಾಯವಾಗುತ್ತದೆ.

---

8 ಮಹಾಸತಿಯು ಮದುಮಗಳಂತೆಯೇ ಶೃಂಗಾರ ಮಾಡಿಕೊಳ್ಳುತ್ತಿದ್ದಳು ಎಂಬುದು ಕಥನ ಗೀತೆಯಿಂದಲೂ ಕೊನೆಯ ಸಂದರ್ಶನದಿಂದಲೂ ತಿಳಿದುಬರುತ್ತದೆ. ಹರ್ತಿ ಬಯಲ ಗೊಲ್ಲರಲ್ಲಿ ಒಂದು ಸಂಪ್ರದಾಯವಿದೆ. ಮದುವೆಯ ಸಂದರ್ಭದಲ್ಲಿ ಗಂಡಿನ ಕಡೆಯವರು ಹೆಣ್ಣಿನ ಕಡಯುವರಿಗೆ ತೆರಕೊಟ್ಟು ವಿವಾಹ ಏರ್ಪಡಿಸಿಕೊಳ್ಳುತ್ತಾರೆ. (ವರನಿಗೆ ಕೊಡುವ ದಕ್ಷಿಣೆ ವರದಕ್ಷಿಣೆಯಾದರೆ ವಧುವಿಗೆ ಕೊಡುವುದು ವಧುದಕ್ಷಿಣೆಯಾಗದೆ 'ತೆರ' ಅನಿಸಿಕೊಳ್ಳುತ್ತದೆ.) ಮಹಾಸತಿಯಾಗುವವಳು ಸ್ವರ್ಗದಲ್ಲಿರುವ ಪತಿಯನ್ನು ಮದುವೆಯಾಗಿ ಹೋಗುತ್ತಿರುವಳೆಂದು 'ಅವಳ ಅಣ್ಣಗಳು' ದಾರಿಯಲ್ಲಿ ಅಡ್ಡನಿಂತು ತೆರ ಕೇಳುತ್ತಾರೆ. ಕಾಟವ್ವ ತನ್ನ ಮಾವನ ಮನೆಯುವರಿಂದ ಪಡೆಯಿರಿ ಎಂದು ಉತ್ತರಿಸುತ್ತಾಳೆ.

'ತೆರ' ಅನ್ನುವುದಕ್ಕೆ ಕಾಣಿಕೆ ದಕ್ಷಿಣೆ ಅನ್ನುವ ಅರ್ಥವನ್ನಿಟ್ಟುಕೊಳ್ಳಬಹುದು. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಸ್ಮಶಾನ ಕಾಯುತ್ತಿದ್ದ ಹರಿಶ್ಚಂದ್ರ, ಸತ್ತ ಲೋಹಿತಾಶ್ವನನ್ನು ತಂದ ಚಂದ್ರಮತಿಯನ್ನುದ್ದೇಶಿಸಿ '—ತೆರವನಿಕ್ಕದೆ ಸುಡಲ್ಬಾರದು' ಎನ್ನುತ್ತಾನೆ.

ತೆರ ಪದಕ್ಕೆ 'ಥರ' ಅನ್ನುವ ಅರ್ಥ ಇದೆ. ಪಂಪ ಭಾರತದ ಹತ್ತನೇ ಆಶ್ವಾಸದ ಹದಿನಾರನೇ ಪದ್ಯದ ಸಾಲಿನಲ್ಲಿ ಆ ಪದ ಬರುತ್ತದೆ. 'ಭಗವತಿಯೇಱುವೇಳ್ವ ತೆರದಿಂ ಕಥೆಯಾಯ್ತುವರೇಱು—' ಸಾಲಿನಲ್ಲಿ 'ತೆರ' ಅನ್ನುವುದಕ್ಕೆ ಅರ್ಥ 'ಥರ' ಅಥವಾ ರೀತಿ ಎಂದು.

ಗೀತೆಯ ಛಂದಸ್ಸು ಮತ್ತು ಹಾಡುಗಾರಿಕೆಯ ರೀತಿ

ತ್ರಿಪದಿಯ ಛಂದದಲ್ಲಿ ರಚಿತವಾಗಿದೆ ಕೊಂಡದ ಕಾಟವ್ವ ಜನಪದ ಗೀತೆ. ಈ ಬಯಲಿನ ಹೆಚ್ಚುಪಾಲು ಕಥನ ಗೀತೆಗಳೆಲ್ಲ ಈ ಛಂದದಲ್ಲಿಯೇ ರಚಿತವಾಗಿದೆ.[9] ಸಾಂಗತ್ಯ ಮತ್ತು ಚೌಪದಿಗಳು, ಕ್ವಚಿತ್ತಾಗಿ ಅಲ್ಲಲ್ಲಿ ಕಾಣಿಸಿಕೊಳ್ಳುವುದುಂಟು. ತ್ರಿಪದಿಯಲ್ಲಿ ಅಂಶಗಣಾವಲಂಬಿಯಾದ ರಚನೆಗಳೇ ಹೆಚ್ಚು. ಮಾತ್ರಗಣಾವಲಂಬಿಯಾದ ರಚನೆಗಳೂ ಉಂಟು. ಪ್ರಸ್ತುತ ಕೊಂಡದ ಕಾಟವ್ವ ಗೀತೆಯ ಮೊದಲನೆಯ ಪದ್ಯ ಮಾತ್ರಾಗಣಾವಲಂಬಿಯಾಗಿದೆ.

ಎಲ್ಲಾರ । ವಚನಾಕ । ನಿಲ್ಲೋಳೆ । ಸರಸೋತಿ ।
ನೆಲ್ಲು ತೆನೆ । ಯಂಗ । ಬಳುಕೂತ । ಬಾಗೂತ
ನಿಲ್ಲಮ್ಮ । ನಮ್ಮ । ವಚನಾಕ ॥

ಐದು ಮಾತ್ರೆಗಳ ನಾಲ್ಕು ಗಣಗಳ ಓಟ ಈ ತ್ರಿಪದಿಯಲ್ಲಿ ಸ್ಪಷ್ಟ. ಯತಿಗೂ ಕೂಡ ಚ್ಯುತಿ ಇಲ್ಲ. ರಸದಶಸ್ಥಾನದಲ್ಲಿ ಬ್ರಹ್ಮಗಣ ಬಂದಿದೆ. ಒಳಪ್ರಾಸ ದ್ವಿತೀಯಾಕ್ಷರ ಪ್ರಾಸ ಎಲ್ಲವೂ ಸರಿಯಾಗೇ ಇದೆ. ಏಳು ಮತ್ತು ಹನ್ನೊಂದನೇ ಗಣಗಳ ಪ್ರಾರಂಭದಲ್ಲಿ ಎರಡು ಲಘುಗಳು—ಇದು ಜಯಕೀರ್ತಿ ಹೇಳಿದಂತೆ ಚಿತ್ರಾ ತ್ರಿಪದಿಕೆಯ ಲಕ್ಷಣ. ಈ ತ್ರಿಪದಿಯನ್ನು ನೋಡಿದಾಗ

ಬಿತ್ತೀದೊ | ಳದಾಗ ಸ । ತ್ರಿವಂತೆ । ಬರುತಾಳೆ
ಮುತ್ತೊತ್ತಿ | ದ್ವಾಲೆ । ಕಿವಿಯಾಗೆ । ಕಾಟಮ್ಮ
ಮುತ್ತೈದೆ । ಆಗಿ । ಬರುತಾಳೆ

ಮಾತ್ರಾಗಣಾವಲಂಬಿಯಾಗಿದ್ದ ತ್ರಿಪದಿ ಅಂಶಗಣಾವಲಂಬಿಯಾಗಿ ಜಾರಿಕೊಳ್ಳುವುದನ್ನು ಗೀತೆಯ ಕೆಲವು ಪದ್ಯಗಳಲ್ಲಿ ಕಾಣಬಹುದು. ದ್ವಿತೀಯಾಕ್ಷರ ಪ್ರಾಸವಿದೆ. ಸ್ವಾಭಾವಿಕವಾಗಿ ಏರ್ಪಡುವ ಯತಿ ಇಲ್ಲಿಲ್ಲ.

ಉದ್ದಾಗೆ । ಕೊಂಡಾಕ । ಗೆಜ್ಜೆ ಮು।ಚ್ಚಲು ಗಲ್ಲು ।
ರುದ್ರಣ್ಣ । ನೆಂಬೋ । ಕುದುರೇಯ । ನೇರಿಕಂಡು ।
ವೋದಾಳೆ । ಸಿವನಾ । ಅರುಮನಿಗೆ ।

ಈ ಪದ್ಯ ಗೀತೆಯ ಕೊನೆಯ ತ್ರಿಪದಿ. ಇಲ್ಲಿ ಹನ್ನೊಂದನೇ ಗಣ ವಿಷ್ಣುಗಣಕ್ಕೆ ಬದಲಾಗಿ ರುದ್ರಗಣ ಬಂದಿದೆ. ಇದು ವಿಚಿತ್ರ ತ್ರಿಪದಿಯ ಲಕ್ಷಣ. ಎಂಟನೆಯ ಗಣ ತ್ರಿಪದಿಯ ಸುಲಭವಾದ ಓಟಕ್ಕೆ ತಡೆಯನ್ನುಂಟುಮಾಡುತ್ತದೆ. ಅಂಶಗಣದ ಛಂದದಲ್ಲಿ ಇದೆಲ್ಲ ಸ್ವಾಭಾವಿಕ. ಜನಪದ ಗೀತೆಗಳ ಒಂದು ವಿಶೇಷ ಅಂಶ

---

9 ಕಾದ್ರಿನರಸಿಮ್ಮ, ಉತ್ತಪ್ಪ, ಈರೈಜುಂಜ, ಕಾಟಲಿಂಗೇಶ್ವರ, ತಿಪ್ಪೇರುದ್ರಸ್ವಾಮಿ, ಪಾಲ್ನಾಯಕ ಮುಂತಾದ ದೀರ್ಘ ಕಥನ ಗೀತೆಗಳೆಲ್ಲ ತ್ರಿಪದಿಯಲ್ಲೇ ಇವೆ.

ಎಂದರೆ ಒಂದು ಬಾರಿ ಕೇಳಿದ್ದನ್ನೇ ಮತ್ತೊಮ್ಮೆ ಅವರಿಂದ ಹೇಳಿಸಿದಲ್ಲಿ ನುಡಿಗಳಲ್ಲಿ, ಗಣಗಳ ಜೋಡಣೆಯಲ್ಲಿ, ಮಾತ್ರೆಗಳ ಸಂಬಂಧದಲ್ಲಿ ವ್ಯತ್ಯಾಸವಾಗುವುದುಂಟು.

ಹಾಡುಗಾರಿಕೆಯ ರೀತಿ : ತ್ರಿಪದಿ ತಾಳಹೀನ ಎಂಬುದಾಗಿ 'ಸಂಗೀತ ರತ್ನಾಕರ' ಹೇಳುತ್ತದೆಂಬುದನ್ನು ಡಾ. ಡಿ. ಎಸ್. ಕರ್ಕಿಯವರು ತಮ್ಮ ಕನ್ನಡ ಛಂದೋವಿಕಾಸದಲ್ಲಿ ತಿಳಿಸುತ್ತಾರೆ.[10] ಇದು ಅಂಶಗಣಗಳಿಂದ ಬಂಧವಾದ ತ್ರಿಪದಿಗಳಿಗೆ ಸಂಬಂಧಿಸಿದ್ದು. ಜನಪದ ತ್ರಿಪದಿಗಳ ಹಾಡುಗಾರಿಕೆಯಲ್ಲಿ ಅಕ್ಷರಗಳನ್ನು ಹಿಗ್ಗಿಸಿ ಹಾಡುವುದರಿಂದ ತಾಳದ ಹೊಂದಿಕೆ ಅವರಿಗೆ ಕಷ್ಟವಲ್ಲ. ಪ್ರಸ್ತುತ ಗೀತೆಯಲ್ಲಿ ಐದು ಮಾತ್ರೆಗಳನ್ನು ಹೊಂದಿಸಿ ನಾಲ್ಕು ಗಣಗಳ ಓಟದ ಸಾಲುಗಳನ್ನು ಹೇಳಲು ಸರಾಗ. ಇದು ಲಲಿತಲಯದ ಮಟ್ಟು. ಮೊದಲೆರಡು ಪಾದದಲ್ಲಿ ಕೊನೆಯ ಗಣವನ್ನುಳಿದು ಮಿಕ್ಕೆಲ್ಲವನ್ನು ಹಾಡಿ ಸೊಲ್ಲು ನುಡಿಯುತ್ತಾರೆ.[11] ನಂತರ ಎರಡನೇ ಪಾದದಿಂದ ಆರಂಭಿಸಿ ಎರಡು, ಮೂರನೇ ಪಾದವನ್ನು ಹೇಳಿ ತಿರುಗಿ ಸೊಲ್ಲು ನುಡಿಯುತ್ತಾರೆ.

ಈ ಗೀತೆಯಲ್ಲಿ ಉಪಯೋಗಿಸಿಕೊಂಡ ಸೊಲ್ಲುಗಳ ಸಂಖ್ಯೆ ಐದು :

ಬಾಳೇಯ ಅಣ್ಣ ನೋಡೆ ಅವಳಾಕಿರುವ
ಬಲದಾಕಾಸೀಯ ನೋಡೆ ॥
ಅಸುರು ಸುವ್ವಾರಿ ಬಾರೇ ಕಾಟಮ್ಮ
ಮೊಸರೀ ಲೊಕುಳಿಯಾನಾಡೆ ॥
ದೂಳೂಗವುದಾವೆ ದೂಳೂಗವುದಾವೆ
ದುಕ್ಕದ ಮ್ವಾಡಗಳೆದ್ದಾವೆ ॥
ಮಾನ ಮುತ್ತಿನರುಳೇ ಕಾಟಮ್ಮ
ನಾರಿಕೊಂಡಾಕ ನಡಿಯೇ ॥
ಗಂದಾ ಸೋಬಂದಿ ಬಾರೇ ಕಾಟಮ್ಮ
ರೆಂಬೇ ಕಿಡಿಗಣ್ಣ ಕಾಣೇ ॥

ಇಲ್ಲಿ ಒಟ್ಟು ಮಾತ್ರೆಗಳ ಸಂಖ್ಯೆ ಹೆಚ್ಚು ಕಡಿಮೆ ಇಪ್ಪತ್ತೇಳು. ಬ್ರಹ್ಮ ಮತ್ತು ವಿಷ್ಣು ಗಣಗಳು ಒಂದಾದಮೇಲೊಂದು ಬಂದು ಕೊನೆಯಲ್ಲಿ ಆರನೇ

10 ಕನ್ನಡ ಛಂದೋವಿಕಾಸ : '...ಅಂದರೆ ಶಾರ್ಙ್ಗದೇವನು ಸಂಗೀತರತ್ನಾಕರದಲ್ಲಿ ಹೇಳಿದ ತ್ರಿಪದಿಯ ಲಕ್ಷಣವು ನಾಗವರ್ಮ, ಜಯಕೀರ್ತಿಗಳ ಲಕ್ಷಣದಂತೆಯೇ ಇದೆ. ಆದರೆ ತ್ರಿಪದಿ ತಾಳಹೀನವಾದುದು ಎಂಬ ಒಂದು ಹೆಚ್ಚಿನ ಅಂಶ ಸಂಗೀತರತ್ನಾಕರದಲ್ಲಿ ಸೇರಿದೆ.'

11 ಹಾಡುವವರು ಸೊಲ್ಲನ್ನು 'ದಣಿ' ಎಂದು ಕರೆಯುತ್ತಾರೆ. 'ಸೊಲ್ಲು ಹೇಳು' ಎಂದಲ್ಲಿ ಸಾಮಾನ್ಯವಾಗಿ ಅವರಿಗೆ ಅರ್ಥವೇ ಆಗುವುದಿಲ್ಲ. ದನಿ ಅಥವಾ ದಣಿ ಅನ್ನುವುದೇ ರೂಢಿಯಲ್ಲಿದೆ.

ಗಣಕ್ಕೆ ಬದಲಾಗಿ ರುದ್ರಗಣ ಬರುವುದು ಸಾಮಾನ್ಯ ಲಕ್ಷಣ. ತ್ರಿಪದಿಯ ಬಂಧದೊಡನೆ ಸೇರಿದಾಗ ಒಟ್ಟು ಮಾತ್ರೆಗಳ ಸಂಖ್ಯೆ ಅರುವತ್ತೊಂದು. ಹಾಡಿದಾಗ ಐದು ಮಾತ್ರೆಗಳ ಗಣಗಳಾಗಿ ಒಡೆದು ಹೊಂದಿಕೊಳ್ಳುತ್ತದೆ. ತ್ರಿಪದಿಯ ಮೊದಲನೇ ಪಾದವನ್ನು ಹಾಡಿದಾಗ 5–4 ರ ಲಯ ಸ್ಪಷ್ಟ. ಮುಂದೆ ಸೊಲ್ಲು ಕೂಡಿಕೊಳ್ಳುವುದರಿಂದ ಐದರಲಯ ಪ್ರಾರಂಭದಲ್ಲಿ ಕಂಡರೂ ಗಣಗಳ ಓಟ ಅಸ್ಪಷ್ಟ. ಒಂದೆರಡು ಮಾತ್ರೆಗಳು ಹಿಂದುಮುಂದಾಗುವುದೂ ಉಂಟು. ಈ ವಿಚಾರವನ್ನು ಕೊಂಚ ಹೆಚ್ಚಾಗಿಯೇ ವಿವೇಚಿಸಲು ಕಾರಣ ಈ ಬಯಲಿನಲ್ಲಿ ಸಂಗ್ರಹಿಸಿದ ಕಥನ ಗೀತೆಗಳೆಲ್ಲಾ ತ್ರಿಪದಿಯಲ್ಲೇ ಇವೆ.

ಸುಮಾರು ಹದಿನೈದು ಪುಟಗಳ ಈ ಕೊಂಡದ ಕಾಟವ್ವ ಗೀತೆಯನ್ನು ಹಾಡಿದ ಸಿರಿಯಜ್ಜಿಯ ಸ್ಥಳ ಚಳ್ಳಕೆರೆಯಿಂದ ಸುಮಾರು 20 ಮೈಲಿ ದೂರದಲ್ಲಿರುವ ಯಲಕಟ್ಟೆ ಗ್ರಾಮದ ಬಳಿಯ ಗೊಲ್ಲರಹಟ್ಟಿ. ಸುಮಾರು ಮುನ್ನೂರೈವತ್ತು ಪುಟಗಳಷ್ಟು ಸಾಹಿತ್ಯವನ್ನು ಈಕೆಯೊಬ್ಬಳೇ ಹಾಡಿದ್ದಾಳೆ. ಈ ಕೆಳಗೆ ಮಹಾಸತಿ ಕಾಟವ್ವ ಗೀತೆಗೆ ಸಂಬಂಧಿಸಿದ ಹಾಗೆ ಮಾತ್ರ ಒಂದು ಚಿಕ್ಕ ಸಂದರ್ಶನವನ್ನು ಮಾಡಲಾಗಿದೆ. ಆಕೆ ಹಾಡಿದ ಎಲ್ಲ ಕಥನ ಗೀತಗಳಿಗೆ ಸಂಬಂಧಿಸಿದಂತೆ ಸಂದರ್ಶನ ಮಾಡಲಾಗಿದೆಯಾದರೂ ಅದು ಇಲ್ಲಿ ಅಪ್ರಸ್ತುತ.

ಪ್ರಶ್ನೆ : ಏನು ಸಿರಿಯಜ್ಜಿ ನಿನ್ ವಯಸ್ಸೆಷ್ಟಿರಬೌದು ?
ಉತ್ತರ : ಅರುವತ್ತೈದಿರಬೌದು. ಸರಿಯಾಗ್ಗೊತ್ತಿಲ್ರ.
ಪ್ರ : ನಿಂಗೆ ಈ ಕಾಟವ್ನ ಪದ ಹೇಳ್ಕೊಟ್ಟೋರು ಯಾರು ?
ಉ : ನಂ ಕರಿಸಿರಿಯಜ್ಜಿ ತಾವು ಕಲ್ತದ್ದು
ಪ್ರ : ನಿಂಗೇನಾರ ಸ್ವಂತಗಿಂತ ಆಗ್ಬೇಕಾ ?
ಉ : ನಮಪ್ಪನಗಕ್ಕ. ಆಯಮ್ಮನ ಮಗಂಗೇ ನನ್ನ ಮಾಡ್ಕಂಡುದ್ದು.
ಪ್ರ : ಅಂದ್ರೆ ಇದೇ ಗೊಲ್ಲರಟ್ಟೀಲೆ ಎಲ್ಲ ಪದ ಕಲ್ತ್ಕಂಡೆ ಅಲ್ವ ?
ಉ : ಅವುದು. ಅದೇ ನಾವು ಸೊಸಿನಾಟಿ ಆಕಕ್ಕೋದಾಗ, ಕಳೇನ ಕೀಳಕ್ಕೋದಾಗ ರಾಗಿ ಬೀಸಾಗ ಅಟ್ಟೀಲಿ, ಏಳ್ಕೋತಿದ್ವಿ. ನಾಕಲ್ತ್ಕತಿದೆ.
ಪ್ರ : ನಿಮ್ಮತ್ತೆ ನಿಂಗೆ ಪದ ಹೇಳ್ಕೊಟ್ಟಿದ್ದು ಯಾವಾಗ ? ಆಗ ನಿಂಗೆ ಸುಮಾರು ಎಷ್ಟು ವಯಸ್ಸಾಗಿತ್ತು ?
ಉ : ವಯ್ಸು ? ನಂಗಾಗ್ಲೆ ? ಸುಮಾರು, ಅದ್ನಾರು, ಅದ್ನೇಳು ಆಗಿರಬೌದು. ಲಗ್ನವಾಗಿ ಪಿಳ್ಳೆಗೊಳಾಗಿದ್ದೊ ನಮತ್ತಗ ಮಾತ್ರ ಅರವತ್ತೊರ್ಸದ ದಂಡ್‌ದಂಡೆ.

ಪ್ರ : ನಿಮ್ಮತ್ತೆಗೆ ಆ ಪದಗಳ್ನೆಲ್ಲ ಯಾರು ಹೇಳ್ಕೊಟ್ರು ಗೊತ್ತಾ ?

ಉ : ಅದೇ ಏಳ್ತಿದ್ಲು. ಕ್ವಾಣೇರಳ್ಳಿ ಸಣ್ಣೀರಜ್ಜಿ ಕಲ್ಸಿಕೊಟ್ಟವ್ಳು ಅಂತ. ಕ್ವಾಣೇರಳ್ಳಿಯವಳು ಲಗ್ಣವಾದದ್ದು ಇಲ್ಲಿಗೆ. ಸ್ಯಾನೆ ಪದ ಬತ್ತಿದ್ವು. ಅವ್ಳೇ ಏಳ್ಕೊಟ್ಟಿದ್ದು. ಅವ್ಳಗೂ ಅರು ವತ್ತೆಪ್ಪಾತ್ತಾಗಿತ್ತಂತ ಅಂತ ಮಡಕ್ಕೊ.

ಪ್ರ : ಕೊಂಡಕಾಟವ್ನ ಮೇಲೆ ಏನಾದ್ರೂ ಅದು ಇದು ಹೇಳ್ತಾ ಇದ್ಲ ನಿಮ್ಮತ್ತೆ. ಆಮೇಲೆ ಈ ಪದನ ಎಲ್ಲೆಲ್ಲಿ ಹೇಳ್ತಾ ಇದ್ರು ?

ಉ : ಅಬ್ಬ, ಪ್ರಣಾಮ ಅಪ್ರ ಬ್ಯಾರೆ ಪದಗೊಳ್ನೆ ಏಳಿಸ್ತರೆ. ಈ ಪದನ ಎಲ್ಲೂ ಏಳಲ್ಲ. ಈರ್ಲೆ ಜುಂಜುಂದೋ ನರಸಿಮ್ಮಂದೋ ಎತ್ತಪ್ಪಂದೋ ಏಳಿಸ್ತರೆ. ಕೊಂಡದ ಕಾಟವ್ನ ಏಳ್ಸಲ್ಲ. ನಾನೇ ಪುಲಿಕುಂಟೀತಾಪ್ಕ ಆಯಮ್ಮನ್ ಪೂಜ ಮಾಡಕೋದಾಗ ಏಳ್ಕವೇನಿ.

ಪ್ರ : ಯಾಕೇಳ್ಸಲ್ಲ ಗೊತ್ತ ?

ಉ : ಗೊತ್ತಿಲ್ರಿ.

ಪ್ರ : ಕಾಟವ್ನ ಹೆಸರಲ್ಲಿ ಜಾತ್ರೆ ಗೀತ್ರೆ ನಡೆಯುತ್ತಾ ? ಆಮೇಲೆ ಈ ಕಥೆ ಯಾವಾಗ ನಡೆದದ್ದು ಅಂತ ಗೊತ್ತ ?

ಉ : ಜಾತ್ರೆ, ಪಾತ್ರೆ ನಡಿಯುದಿಲ್ಲ. ಪೂಜ ಮಾಡ್ತರೆ ಯಾರಾರ. ಕತೆ ಸ್ಯಾನೆ ಇಂದುಲ್ದು. ಅದ್ಯಾವತ್ತಾಯ್ತೊ. ನಮತ್ತೆ ಪದ ಏಳ್ತಿದ್ಲು, ಕಲ್ಕಂಡೆ.

ಪ್ರ : ಕಾಟವ್ನ ಕೊಂಡಕ್ಕೆ ಬಿದ್ದದ್ದು ಯಾಕೆ ?

ಉ : ಅದೇ ಗಂಡ ತೀರ್ಕಂಡ್ನಲ್ಲ ಇನ್ಯಾಕೆ ಅಂತ.

ಪ್ರ : ಗಂಡ ಯ್ಯಾಕೆ ತೀರ್ಕಂಡಿದ್ದು ?

ಉ : ಗೊತ್ತಿಲ್ರಿ.

ಪ್ರ : ಪದ ಹೇಳುವಾಗ ಅರಿಷಣಗಂಬಿ ಸೀರೆ ಉಟ್ಕಂಡಿದ್ಲು ಅಂತ ಅಂದ್ಯಲ್ಲ ಅದೇನು ? ಸಾಯುಕ್ಕೋಗುವಾಗ ಅಂತಾ ಸೀರೆನಾ ಉಟ್ಕೋತಿದ್ರಾ ?

ಉ : ಅಂತ ಸೀರೇನ ಉಟ್ಕೋಬೇಕು. ಅದ್ದೀ ಸ್ಯಾಲೆ. ದಾರೆನ ಉಯ್ಯಾಗ ಉಡುಸ್ತರೆ ನೋಡ್ರಿ. ಕೊಂಡಕ್ಕೋಗಾಗ್ಲುವ ಅದ್ನೇ ಉಟ್ಕಳದು. ಮದುವೆಗೋಗ ಎಣ್ಣಂಗೆ ಸುಂಗಾರ ಮಾಡ್ತರೆ. ಅರಿಸ್ನ, ಕುಂಕ್ಮ, ಹೂನೆಲ್ಲ ಮುಡುಸಿ ಸತ್ತು ಸ್ವರ್ಗದಾಗಿರೋವನ್ನ ಮದುವ್ಯಾಗಿ ಕೂಡಕಳಕೆ ಅಂತ ಮಾಡದು. ಆಮ್ಯಾಲೆ ಕೊಂಡಕ್ಕೋಗಾಗ ಸಂತೋಸ್ವಾಗಿ ಆಟನ ಆಡ್ಕಂಡು ಪೋಯ್ತಾಳೆ. ಗಂಡನ್ ತಾವುಕ್ಕೊಯ್ತೀನಿ ಅಂತ ಅವ್ಳು ಸಂತೋಸವಾಗಿರ್ತಾಳೆ.

ಪ್ರ : 'ನಿಂಬೀಯ ಅಣ್ಣು ಅಂಬರಕೀಡಾಡುಶ' ಅಂತ ಹೇಳ್ದಲ್ಲ. ಅದೇನು? ಕೊಂಡಕ್ಕೋಗೋವಾಗ ನಿಂಬೆಹಣ್ಣೇ ಹಿಡ್ಕೋಬೇಕ?

ಉ : ಅದೇ ಸಾಯಕ್ಕೋಗವ್ಳೆ ಕೈಲಿ ಪುಚ್ಚಂಡೆ ಕಾಯಿ, ನಿಂಬೇಣ್ಣು, ಕಾಕಿ ಅಣ್ಣು ಇಲ್ಲಿರ ಗಜನಿಂಬಕಾಯಿ ಏನಾರ ಇರ್ತದ. ಅದನ್ನೆ ಎಸ್ಕಂತ ಆಡ್ಕಂತವೋಗದು. ಅದಿಲ್ದಯಿದ್ರೆ ದುಕ್ಕ ಮಾಡ್ಕಂಡುವೊಯ್ತಾವಳೇ ಅಂತರ್ತ. ಅಣ್ಣೆಸ್ಕಂಡು ಆಡ್ಕಂಡೇ ವೋಗದು.

ಪ್ರ : ನೀನು ಹೇಳಿದ್ಯಲ್ಲ ನಾಲ್ಕು ತರದ ಹಣ್ಣು, ಅದ್ರಲ್ಲಿ ಯಾವ್ದಾದ್ರೂ ಇರಬೋದಾ ?

ಉ : ಓ ಯಾವ್ದಾದ್ರೂ ಸರಿನೇ.

ಪ್ರ : ಕೊಂಡದ ಕಡೆಗೆ ಕಾಟವ್ವ ಹೋದಲು ಅಂತ ಹೇಳ್ದಿ. ಆದ್ರೆ ಬಿದ್ದದ್ದನ್ನ ಯಾಕೆ ಹೇಳ್ಲಿಲ್ಲ. ಮರೆತು ಏನಾದ್ರೂ ಹೇಳ್ಲಿಲ್ಲೋ ಅಥ್ವಾ ಬಿಟ್ಯೋ[12] ?

ಉ : ಮರಿನಿಲ್ಲ. ಬುಡುನಿಲ್ಲ. ಎಲ್ಲ ಏಳಿವ್ನಿ. ಸಾಯದ್ನ ಏಳ್ಬಾರ್ದು. ಅವು ಪದಗೊಳಲ್ಲಿ ಇರದು ಇಲ್ಲ. ಕೊಂಡತ್ತಾವು ವೊಯ್ತಾಳೆ. ಸಿವನತ್ತಾವುಕ್ಕೊಯ್ತಾಳೆ ಅಂದ್ರೆ ಬಿದ್ದು ತೀರ್ಕೊಂಡ್ಲು ಅಂತ್ಲೇ ಅರ್ತ.

ಪ್ರ : ಹಾಗಾದ್ರೆ ಕಾಟವ್ವ ಈ ಎಲ್ರತಾವು ದೇವ್ರು ಅನ್ನಿಸ್ಕೊಂಡು ಪೂಜೆ ಮಾಡಿಸ್ಕೊತಾ ಇದ್ದಾಳೆ ಅಲ್ವ.

ಉ : ಔದ್ರ-ಎಲ್ಲ ಅಣ್ಣು ಕಾಯಿ ಮಾಡಿಸ್ತರೆ.

ಪ್ರ : ನೀಯೇನಾದ್ರೂ ಕಣ್ಣಾರೆ, ಈ ಅರುವತ್ತು ವರ್ಷ ಕಾಲದಲ್ಲಿ ಹೀಗೆ ಗಂಡ ಸತ್ತ ಅಂತ ಹಿಂದೆನೆ ಬೆಂಕಿಗೆ ಬಿದ್ದು ಸತ್ತವರನ್ನ ಕಂಡಿಯಾ ?

ಉ : ಇಲ್ಲ. ಈಗ್ಯಾರು ಅಂತ ಪತಿಬ್ರತಾರು ? ಅವ್ಳು ಅಂಗೆ ಪತಿಬ್ರತೆ ಅಂತ ಎಲ್ಲ ಈ ಪೂಜಮಾಡದು ನಾವ್‌ಗೋಳು. ಎಲ್ಲ ಇಂದಿನ ಕಾಲದ್ದು ಕತೆಗೊಳು.

---

12 ಈ ಪ್ರಶ್ನೆಗೆ ಸಿರಿಯಜ್ಜ ಕೊಟ್ಟ ಉತ್ತರವನ್ನೇ ಬೇರೆಯೊಬ್ಬಳೂ 'ವೀರ ಅಭಿಮನ್ಯು' ಎನ್ನುವ ಕಥನಗೀತೆಯನ್ನು ಹಾಡುವಾಗ ಕೊಟ್ಟಿರುತ್ತಾಳೆ. ಆ ಕಥನ ಗೀತೆಯಲ್ಲಿ ಅಭಿಮನ್ಯು ಮಹಾದೇವಿಯನ್ನು ಮದುವೆಯಾಗ ಹೋಗಿ ಪ್ರಾಣ ಕಳೆದುಕೊಳ್ಳುತ್ತಾನೆ. (ಕಾವ್ಯದ ರೀತ್ಯಾ ಅಭಿಮನ್ಯು ಕುರುಕ್ಷೇತ್ರದಲ್ಲಿ ಚಕ್ರವ್ಯೂಹವನ್ನು ಭೇದಿಸಲು ಹೋಗಿ ಪ್ರಾಣ ಕಳೆದುಕೊಳ್ಳುತ್ತಾನೆ.) ಯುದ್ಧಕ್ಕೆ ಸಕಲ ಸಜ್ಜಾಗಿ ಹೋದವನು ಹಿಂದಕ್ಕೆ ಬರಲಿಲ್ಲ ಎಂದಷ್ಟೇ ಹೇಳಿ ಕಥನ ಗೀತೆಯನ್ನು ಮುಗಿಸುತ್ತಾರೆ. ಸಾಯುವುದನ್ನು ಕುರಿತೇಕೆ ಪದ್ಯಗಳಲ್ಲಿ ಹೇಳಲಿಲ್ಲವೆಂದು ಪ್ರಶ್ನಿಸಿದ್ದಕ್ಕೆ ಅಭಿಮನ್ಯು ಸತ್ತ ಅನ್ನುವ ಅನಿಷ್ಟವನ್ನು ಪದಗಳಲ್ಲಿ ಹೇಳುವುದಿಲ್ಲ, ಹಾಗೆ ಪದಗಳೂ ಇಲ್ಲ ಎಂದು ಉತ್ತರಿಸಿದ್ದಾಳೆ.

ವುಲಿಕುಂಟೆ ಕೊಂಡದ ಕಾಟವ್ವ

ಎಲ್ಲಾ್ಲರ ವಚನಾಕು ನಿಲ್ಲೋಳೆ ಸರಸೋತಿ
ನೆಲ್ಲುತೆನೆಯಾಂಗ ಬಳುಕೂತ
ನೆಲ್ಲು ತೆನೆಯಾಂಗ ಬಳುಕೂತ ಬಾಗೂತ
ನಿಲ್ಲಮ್ಮ ನಮ್ಮ ವಚನಾಕ ॥

ಯಾರವಚನಾಕು ಬರುವೋಳೆ ಸರಸೋತಿ
ಬಾಳಿಲೆಯಾಂಗ ಬಳುಕೂತ
ಬಾಳಿಲೆಯಾಂಗ ಬಳುಕೂತ ಬಾಗೂತ
ಬಾರಮ್ಮ ನಮ್ಮ ವಚನಾಕ ॥

ನೀರಿಟ್ಟು ನೈನದೇನ ನಾರೀ ಕಾಟಮ್ಮನ
ನೀರೀಗೆ ಬತ್ತ್ಯೇವ ನಡೆಸೋಳು
ನೀರೀಗೆ ಬತ್ತ್ಯೇವ ನಡೆಸೋಳು ಕಾಟಮ್ಮನ
ನೀರಿಟ್ಟು ನಾವು ನೈನದೇವು ॥

ಎಸರಿಟ್ಟು ನೈನದೇವು ದೆಸೆವಂತೆ ಕಾಟಮ್ಮ
ಎಸರೀಗೆ ಬತ್ತ್ಯೇವ ನಡೆಸೊಳು
ಎಸರಿಗೆ ಬತ್ತ್ಯೇವ ನಡೆಸೋಳು ಕಾಟಮ್ಮ
ಎಸರಿಟ್ಟು ನಾವು ನೈನದೇವು ॥

ಅಕ್ಕಬಾರೆ ಅರಸಿಬಾರೆ ಚಿಕ್ಕನಾಗುತಿಬಾರೆ
ಸೆಟ್ಟಿಸಂದನೋರ[1] ಮಗಳೆ ಭಾರೆ
ಸೆಟ್ಟಿಸಂದನೋರ ಮಗಳೆಬಾರೆ ಕಾಟಮ್ಮ
ಸತ್ತಿ ಬಾರೇ ನಮ್ಮ ವಚನಾಕ ॥

ತಾಯಿಬಾರೆ ತಂಗಿ ಬಾರೆ ದೇವಿ ನಾಗತಿ ಬಾರೆ
ರಾಯ ಸಂದನೋರ ಮಗಳೆ ಬಾರೆ
ರಾಯ ಸಂದನೋರ ಮಗಳೆ ಬಾರೆ ಕಾಟಮ್ಮ
ದೇವಿ ಬಾರೆ ನಮ್ಮ ವಚನಾಕ ॥

ಗದ್ದಿಗೆಯಾಗ ಎದ್ದು ಮೂಡಿರುವೋಳೆ
ನೆಗ್ಗುಲಿವೂವಿನ ಸೀರೆ ನೆರಿಗೆಯೋಳೆ
ನೆಗ್ಗುಲಿವೂವಿನ ಸೀರೆ ನೆರಿಗೆಯೋಳೆ ಅಕ್ಕಕಾಟಮ್ಮ
ಮುದ್ದೆ ಬಾ ನಮ್ಮ ವಚನಾಕ ॥

ಕಡದಾಕಂಬದಲಿ ವಡೆದು ಮೂಡಿರುವೋಳೆ
ಕಡಲೂವಿನ ಸೀರೆ ನೆರಿಗೆಯೋಳೆ
ಕಡಲೂವಿನ ಸೀರೆ ನೆರಿಗೆಯೋಳೆ ಕಾಟವ್ವ
ದರಣಿ ಬಾರೇ ನಮ್ಮ ವಚನಾಕ ॥

---

1 ಗೊಲ್ಲರ ಜಾತಿಯಲ್ಲಿ ಕಾಟಮ್ಮ ಸಂದನೋರ ಕುಲಕ್ಕೆ ಸೇರುತ್ತಾಳೆ. 'ಸಂದನೋರು' ಅನ್ನುವುದು ಗೊಲ್ಲರಲ್ಲಿ ಒಂದು ಉಪಕುಲ.

ಮುಂಚೆ ನೈನದೇನ ಕೆಂಚೇ ಕಾಟವ್ಮಾನ
ಅಂಚೀನ ಸೀರೇಯು ಗರತೀಯು
ಅಂಚೀನ ಸೀರೇಯು ಗರತೀಯು ಕಾಟಮ್ನ
ಮುಂಚ್ಯೇಳು ಸೋಲ್ಲೀಲಿ ನೈನದೇನವ ॥

ಮೊದಲೇ ನೆನದೇವ ಮದನಾರಿ ಅಮ್ಮಾನ
ಮದಗಾದಿಂದಾಚೆ ಮನೆಯೋಳ
ಮದಗಾದಿಂದಾಚೆ ಮನೆಯೋಳ ಅಕ್ಕಾ ಕಾಟಮ್ಮ
ಮುದ್ದೇ ಬಾರೇ ನಮ್ಮ ವಚನಾಕ ॥

ನಾನು ನೆನದೇನು ದೇವಿ ಕಾಟಮ್ಮಾನ
ಕೇಳೀಲಿ ಮೊಸರಾ ಕಡೆವೋಳ
ಕೇಳೀಲಿ ಮೊಸರಾ ಕಡೆವೋಳ ಕಾಟಮ್ಮ
ನಾರೀಯ ಮೊದಲು ನೆನದೇನ ॥

ಅಕ್ಕಾ ಕಾಟಮ್ಮ ನೈಟ್ಟನ್ನ ಎಂಗೂಸು
ಕಟ್ಟೆಗ್ಹೋದವ್ಳು ಬರಲಿಲ್ಲ
ಕಟ್ಟೆಗ್ಹೋದವ್ಳು ಬರಲಿಲ್ಲ ವುಲಿಕುಂಟೆ
ವುಟ್ಟು ಬ್ಯೇವಿನಾಗ ಮೆರೆದಾಳೆ ॥

ನಾರೀಕಾಟಮ್ಮ ನ್ಯಾರನ್ನ ಎಂಗೂಸು
ನೀರಿಗೋದೋಳೆ ಬರಲಿಲ್ಲ
ನೀರಿಗೋದೋಳೆ ಬರಲಿಲ್ಲ ವುಲಿಕುಂಟೆ
ಸಾಲು ಬ್ಯೇವಿನಾಗ ಮೆರೆದಾಳೆ ॥

ಅಕ್ಕ ಕಾಟಮ್ಮ ಅತ್ತಿಗ್ಗಂಜೋಳಲ್ಲ
ಅಟ್ಟ್ಯಾಗ ಕೊಡನಾ ಇಳುವ್ಯಾಳೆ
ಅಟ್ಟ್ಯಾಗ ಕೊಡನಾ ಇಳುವ್ಯಾಳೆ ವುಲಿಕುಂಟೆ
ತೊಟ್ಟಾಲ ಕೂಸಾ ಮೆರುದಾಳೆ ॥

ನಾರೀ ಕಾಟಮ್ಮ ಮಾವಗ್ಗಂಜೋಳಲ್ಲ
ವೋಣ್ಯಾಗ ಕೊಡನಾ ಇಳುವ್ಯಾಳೆ
ವೋಣ್ಯಾಗ ಕೊಡನಾ ಇಳುವ್ಯಾಳೆ ವುಲಿಕುಂಟೆ
ತೊಟ್ಟೀಲ ಕೂಸಾ ಮೆರೆದಾಳೆ ॥

ಅಸುಮಗಳು ಕಾಟಮ್ಮ ಬಸುವಾನೇರಿಕಂಡು
ಎಸಳೂಮಲ್ಲಿಗೆ ಮುಡಕಂಡು
ಎಸಳೂಮಲ್ಲಿಗೆ ಮುಡಕಂಡು ವುಲಿಕುಂಟೆ
ಸೊಸಿಬ್ಯೇವಿನಾಗ ಮೆರುದಾಳೆ ॥

ಸಣ್ಣೋಳು ಕಾಟಮ್ಮ ಬಲ್ಲಾ[2]ನೇರಿಕೊಂಡು
ಬಳ್ಳೀಮಲ್ಲಿಗ ವಾ ಮುಡಕಂಡು
ಬಳ್ಳಿಮಲ್ಲಿಗ ವಾ ಮುಡಕಂಡು ವುಲಿಕುಂಟೆ
ಅಳ್ಳೀ ಕ್ವಾಲಾಲಿ ಮೆರುದಾಳೆ ॥

ಅರಿವೆಯಾಲೀನ ಸಿರಿವಂತೆ ಕಾಟಮ್ಮ
ಬೈಗಾದರೆಲ್ಲಿ ವುಳುದೀಯೆ
ಬೈಗಾದರೆಲ್ಲಿ ವುಳುದೀಯೆ ವುಲಿಕುಂಟೆ
ಎಳಿಯಾ ವಂಬಾಳೆ ವನದಾಗೆ ॥

ಕಂಬೀಯೊಲೀನ ಲಿಂಗವಂತೆ ಕಾಟಮ್ಮ
ಸಂಜೇಯಾದಲ್ಲಿ ಎಲ್ಲೀ ಉಳುದೀಯು
ಸಂಜೇಯಾದಲ್ಲಿ ಎಲ್ಲಿ ಉಳುದೀಯು ವುಲಿಕುಂಟೆ
ತೆಂಗು ವಂಬಾಳೇಯು ವನದಾಗೇ ॥

ವೋಡಿ ವೋದಾಳೆಂದು ರಾಡು[3]ಗಳು ಆಕಿಸ್ದ
ವೋಡಿ ವೋಗೋರ ಮಗಳಲ್ಲ
ವೋಡಿ ವೋಗೋರ ಮಗಳಲ್ಲ ಸಿರಿಗೊಂಡಗೌಡ
ರಾಡಾಬಾಗುಲನು ತಗಿಸಯ್ಯ ॥

ಕದ್ದು ವೋದಾಳೆಂದು ದಿಡ್ಡಿಗಳ ಕಟ್ಟಿಸ್ತ
ಕದ್ದು ವೋಗಾರ ಮಗಳಲ್ಲ
ಕದ್ದು ವೋಗಾರ ಮಗಳಲ್ಲ ಸಿರಿಗೊಂಡಗೌಡ
ದಿಡ್ಡೀ ಬಾಗುಲ ತಗುಸಯ್ಯ ॥

ಕಾಡುಕುಳ್ಳು ಕನ್ನೂಡಿಯಾಲಕ್ಕಿ ಗಜನಿಂಬೆ
ಆಡುಂಬಮಗಳೆ ಕಾಟಮ್ಮ
ಆಡುಂಬಮಗಳೆ ಕಾಟಮ್ಮ ವುಲಿಕುಂಟೆ
ರಾಡಾಗ ಕೋಸಿ ಮೆರುದಾಳೆ ॥

ತೊಟ್ಟು ಕುಳ್ಳು ಕನ್ನೂಡಿಗಜನಿಂಬೆ
ಕಟ್ಟುಂಬ ಮಗಳೆ ಕಾಟಮ್ಮ
ಕಟ್ಟುಂಬ ಮಗಳೆ ಕಾಟಮ್ಮ ವುಲಿಕುಂಟೆ
ಕೊತ್ತಾಲ ಕೋಸಿ ಮೆರೆದಾಳೆ ॥

ಕಿಚ್ಚ ಗಂಜ್ಯಾಳೆಂದು ಅಚ್ಚಡವತೆರೆಕಟ್ಟಿಸ್ತ
ಕಿಚ್ಚ ಗಂಜೋರಮಗಳಲ್ಲ
ಕಿಚ್ಚ ಗಂಜೋರಮಗಳಲ್ಲ ಸಿರಿಗೊಂಡಗೌಡ
ಅಚ್ಚಡದ ತೆರಿಯಾ ತಗುಸಯ್ಯ ॥

---

2 ಬಲ್ಲಾನೇರಿಕಂಡು ಎನ್ನುವುದು ಅರ್ಥ ಬಲ್ಲ ಎನ್ನುವ ಹೆಸರಿನ ಎತ್ತನ್ನು ಏರಿಕೊಂಡು ಎಂದರ್ಥ.

3 ರಾಡು ಪದದ ಅರ್ಥ ಅಡ್ಡಗಂಬಿಯೆಂದು. ಈ ಪದ ಅಲ್ಲಮಪ್ರಭುವಿನ ಒಂದು ವಚನದಲ್ಲಿಯೂ ಉಪಯೋಗವಾಗಿದೆ; 'ಕೋಪವೆಂಬ ರಾಡನೊಡ್ಡಿ ತಾಪವೆಂಬ ಅಡಿಗಲ್ಲನಿರಿಸಿ ಹುಸಿ ಎಂಬ ಮಿಾಟುಗಣೆಯ ಜಂತ್ರಿಸಿ...'

ಕೊಂಡಕಂಜ್ಯಾಳೆಂದು ಕಂಬ್ಳಿತೆರೆಯಕಟ್ಟಿಸ್ತ
ಕೊಂಡಗಂಜೋರ ಮಗಳಲ್ಲ
ಕೊಂಡ ಗಂಜೋರಮಗಳಲ್ಲ ಸಿರಿಗೊಂಡಗೌಡ
ಕಂಬಳಿ ತೆರೆಯ ತಗುಸಯ್ಯ ॥

ಚಾಪೆವೊದ್ದುಕಂಡು ಪಾಪಿಯಾಗೈದಾನೆ
ಲೋಕಪತಿ ಕಾಣೆ ಮೈದುನ
ಲೋಕಪತಿ ಕಾಣೆ ಮೈದುನ ಸಿರಿಗೊಂಡಗೌಡ
ಲೋಕದಪ್ಪಣೆಯ ತರಲೊದ ॥

ಅರಿವಿವೊದ್ದುಕಂಡು ಅರಿಯದನಾಗವನೆ
ದೊರೆ ಮೂಡಿ ಕಾಣೆ ಮೈದುನ
ದೊರೆ ಮೂಡಿ ಕಾಣೆ ಮೈದುನ ಸಿರಿಗೊಂಡಗೌಡ
ದುರುಗಾದಪ್ಪಣೆಯ ತರಲೋದ ॥

ಕೊಂಡ ಅತ್ಯಾಳೆ ಇಂದಾಕ ನೋಡ್ಯಾಳೋ
ಕೊಂಡದೀ ಕೆಂಡ ಕಿರಿದಂದು
ಕೊಂಡದೀ ಕೆಂಡ ಕಿರಿದಂದು ಸಿರಿಗೊಂಡಗೌಡ
ಜೊತ್ತಾಲದ ಮರವಾ ಕಡಿಸಯ್ಯ ॥

ಅಣ್ಣಾ ಕಾಟಣ್ಣ ಬಣ್ಣಾವ ತತ್ತಾರೋ
ಇಂದು ಬಂದೆಯೂರ ವೊಗಲಿಲ್ಲ
ಇಂದು ಬಂದೆಯೂರ ವೊಗಲಿಲ್ಲ ಅವಳಕ್ವಾಟೆ
ಎಣ್ಣುಮಕ್ಕಳಾಗ ಇರಲಿಲ್ಲ ॥

ಅಪ್ಪ ಕುರಿಯಣ್ಣಕುಪ್ಪಸ ತತ್ತಾರೋ
ಮತ್ತೆಬಂದೆ ಊರ ವೊಗಲಿಲ್ಲ
ಮತ್ತೆಬಂದೆ ಊರ ವೊಗಲಿಲ್ಲ ಅರ್ತಿಕ್ವಾಟೆ
ಚಿಕ್ಕಮಕ್ಕಳಾಗ ಇರಲಿಲ್ಲ ॥

ಆಲಾದಮರವ ಜೋಲು ಬೊಗ್ಗಿಸಿದಾಂಗ
ಆಯ ನೋಡಿ ತವರೂರರ್ತಿಮುಂದೆ
ಆಯಾನೋಡ್ಯಾರರರ್ತಿಮುಂದೆ
ಆಡೂಮಕ್ಕಳ ಸುಳಿವಿಲ್ಲ ॥

ಅತ್ತೀಯಮರದ ತೊಟ್ಟು ಬಗ್ಗುಸುದಂಗ
ಅತ್ತಿನೋಡ್ಯಾಳ ತವರೂರ
ಅತ್ತಿ ನೋಡ್ಯಾಳೆ ತವರೂರ ಅರ್ತಿಮುಂದೆ
ಚಿಕ್ಕಾಮಕ್ಕಳ ಸುಳಿವಿಲ್ಲ ॥

ಸಾವಿಗೋಗೋಳಿಗೆ ಸಾಲ್ಯಾದ ಸೀರ್ಯಾಕೆ
ಸಾವಿಗೊಪ್ಪ್ಯಾವೆ ಗುಲಗಂಜಿ
ಸಾವಿಗೊಪ್ಪ್ಯಾವೆ ಗುಲಗಂಜಿ ಬಣ್ಣದಸೀರೆ
ಬ್ಯಾಗಾನೆ ಕಾಟಣ್ಣನ ಬರ ಏಳೋ ॥

ಕಿಚ್ಚಿಗೋಗೋಳಿಗೆ ಪಟ್ಟೇದ ಸೀರ್ಯಾಕೊ
ಕಿಚ್ಚಿಗೊಪ್ಪಾ್ಯವೆ ಗುಲಗಂಜಿ
ಕಿಚ್ಚಿಗೊಪ್ಪ್ಯಾವೆ ಗುಲಗಂಜಿ ಬಣ್ಣದಸೀರೆ
ಗಕ್ಕನವರಪ್ಪ ಬರಏಳೋ ॥

ನಲ್ಲೇದಮ್ಯಾಗಾಳ ಸಾಲ್ಯಾದಸೀರೀಯ
ನೋಡಾಗಲು ಕಾಟವ್ವ
ನೋಡಾಗಲು ಕಾಟವ್ವ ಬರಏಳೋ
ಅವರಣ್ಣ ಬ್ಯಾಗಾನೊಂದಾಳ ಬರಏಳೋ ॥

ನೋಡಾಲು ಕಾಟವ್ವ
ಬರಏಳೆಂದವರಣ್ಣ
ಬ್ಯಾಗಾನೊಂದಾಳ ಕಳುವ್ಯಾನೆ ॥

ಪೆಟ್ಟಿಗ್ಯಾಗಳ ಪಟ್ಟೇದ ಸೀರೀಯ
ವುಟ್ಕೋಗಲಿ ಕಾಟವ್ವ ಬರಏಳೋ
ವುಟ್ಕೋಗಲಿ ಕಾಟವ್ವ ಬರಏಳೋ ಅವರಪ್ಪ
ಗಕ್ಕಾನೊಂದಾಳ ಕಳುವ್ಯಾನೆ ॥

ಮುತ್ತೀನ ಜಕ್ಕುಣೆಗೆ ಅವರಕ್ಕಯ್ಯ ಇಡಕಂಡು
ನೆತ್ತೀಯ ಕೊರಳ ಬಾಗಿಬಾಚಿ
ನೆತ್ತೀಯ ಕೊರಳ ಬಾಗಿಬಾಚಿ ಅಕ್ಯಾಳೆ
ಮುಕ್ಕಣ್ಣನೆಂಬೋ ಚವುಲೀಯ ॥

ಮುಕ್ಕಣ್ಣನೆಂಬೋ ಚವುಲೀಯ ಆಕಲುವಾಗ
ಅವರಕ್ಕಯ್ಗೆ ದುಕ್ಕಗಳು ಗನವಾಗಿ
ಅವರಕ್ಕಯ್ಗೆ ದುಕ್ಕಗಳು ಗನವಾಗಿ ಚಿನ್ನಾದ
ಜಕ್ಕುಣಿಗೆಯ ನೀಡಾಡ್ಯಾಳೋ ॥

ಚಿನ್ನಾದ ಜಕ್ಕುಣಿಕೆ ಅವರಮ್ಮಯ್ಯ ಇಡಕಂಡು
ಕೆನ್ನಿಂದ ಕೊರಳಾ ಬಿಗಿಬಾಚಿ
ಕನ್ನಿಂದ ಕೊರಳಾ ಬಿಗಿಬಾಚಿ ಅಕ್ಯಾಳೆ
ಚಿನ್ನಣ್ಣನೆಂಬೋ ಚವುಲೀಯ ॥

ಚಿನ್ನಣ್ಣನೆಂಬೋ ಚವುಲೀಯ ಆಕಲುವಾಗ
ಅವರಮ್ಮಯ್ಗೆ ದುಕ್ಕಗಳು ಗನವಾಗಿ
ಅವರಮ್ಮಯ್ಗೆ ದುಕ್ಕಗಳು ಗನವಾಗಿ ಚಿನ್ನಾದ
ಜಕ್ಕುಣಿಕೆಯ ನೀಡ್ಯಾಡಾಳೋ ॥

ತನ್ನೀರಿ ಬಾಚಣಿಗೇಯ ತನ್ನೀರಿ ಜಕ್ಕುಣಿಕೇಯ
ತನ್ನೀರಿ ಬಂಗಾರುದ ಬರಣೀಯ
ತನ್ನೀರಿ ಬಂಗಾರುದ ಬರಣೀಯ ಮುತ್ತಣ್ಣಾನ
ಕನ್ನೀಗೆ ವೂವಾ ಮುಡಿಸಾನ ॥

ತೋರೀರಿ ಬಾಚಣಿಗೀಯ ತೋರೀರಿ ಜಕ್ಕುಣಿಕೇಯ
ತೋರೀರಿ ಬಂಗಾರುದ ಬರಣೀಯ
ತೋರೀರಿ ಬಂಗಾರುದ ಬರಣೀಯ ಮತ್ತ್ರಣ್ಣಾನ
ನಾರೀಗೆ ವೂವ ಮುಡಿಸಾನ ॥

ಅಣ್ಣಗಳಾ ವಲದಾಗ ಸಣ್ಣಾ ಮಲ್ಲಿಗ ಸಾವಿರ
ಇನ್ಯಾರೆ ತಂಗಿ ಮುಡಿವೋರು
ಇನ್ಯಾರೆ ತಂಗಿ ಮುಡಿವೋರು ಅಂದಂದು
ಅವರಣ್ಣಯ್ಯ ನಾನಾಡಿ ಅಳುತಾನೆ ॥

ಅಪ್ಪಗಳಾ ವಲದಾಗ ಬುಟ್ಟಾ ಮಲ್ಲಿಗ ಸಾವಿರ
ಮತ್ಯಾರೆ ಮಗಳೇ ಮುಡಿವೋರಿ
ಮತ್ಯಾರೆ ಮಗಳೇ ಮುಡುವೋರು ಅಂದಿನ್ನ
ಅವರಪ್ಪಯ್ಯ ಆಡ್ಯಾಡಿ ಅಳುತಾನೆ ॥

ಗುಲಗಂಜಿ ಬಣ್ಣದಸೀರೆ ಗುಂಜೂತೆ ಕಾಟಮ್ಮ
ಮುಂಜೆರಗೀನಾಗ ಗುಲಗಂಜಿ
ಮುಂಜೆರಗೀನಾಗ ಗುಲಗಂಜಿ ಬಣ್ಣದಸೀರೆ
ತಂದೆ ಕುರಿಯಣ್ಣ ತರಿಸ್ಯಾನೆ ॥

ಅರಿಷಿಣಗಂಬಿ ಸೀರೆ ನಿಲಿಸುಡೆ ಕಾಟಮ್ಮ
ನೆಡುಸುತ್ತಿನಾಗ ಗುಲಗಂಜಿ
ನೆಡುಸುತ್ತಿನಾಗ ಗುಲುಗಂಜಿ ಬಣ್ಣದ ಸೀರೇಯ
ಅಣ್ಣ ಕಾಟಣ್ಣ ತರಿಸ್ಯಾನೇ ॥

ಅತ್ತೊರವಾ ಕೊಟ್ಟು ಪಟ್ಟೇವ ತರಿಸ್ಯಾನೆ
ಅಕ್ಕ ಕಾಟಮ್ಮಗ್ಗೆ ಉಡುಗ್ವಾರೆ
ಅಕ್ಕ ಕಾಟಮ್ಮಗ್ಗೆ ಉಡುಗ್ವಾರೆ ವುಲಿಕುಂಟೆ
ಮುತ್ತೈದೇಳಾಗಿ ವೊರಡಮ್ಮ ॥

ಆರೊರವಾ ಕೊಟ್ಟು ಸಾಲ್ಯಾವ ತರಿಸ್ಯಾನೆ
ನಾರಿ ಕಾಟಮ್ಮ ಉಡುಬಾರೆ
ನಾರಿ ಕಾಟಮ್ಮ ಉಡುಬಾರೆ ವುಲಿಕುಂಟೆ
ಮೊದಲಗಿತ್ಯಾಗಿ ವೊರಡಮ್ಮ ॥

ಬಳಿಯಾ ತೊಡುವಾಗ ಬಲುಗಡೆಯೇ ಸೀತಾರು
ಬಳಿಗಾರರಣ್ಣ ಬುದುಕಯ್ಯ
ಬಳಿಗಾರರಣ್ಣ ಬುದುಕಯ್ಯ ಕಾಟ್ಮೊನ
ಸಲುವೈದೆ ತನಕ ಅಳಿಗಾಲ ॥

ಕುಪ್ಪುಸವಾ ತೊಡುವಾಗ ಬೆಕ್ಕಡ್ಡಲಾದಾವು
ಸಿಪ್ಪಿಗರಣ್ಣ ಬುಡುಕಯ್ಯ
ಸಿಪ್ಪಿಗರಣ್ಣ ಬುಡುಕಯ್ಯ ಕಾಟಮ್ಮಾನ
ಮುತ್ತೈದೆ ತನಕ ಅಳಿಗಾಲ ॥

ಪಟ್ಟೇದ ಸೀರೇಯ ನುಡಿಸ್ಯಾರೆ
ಮುತ್ತೀನ ಬೊಟ್ಟಿಟ್ಟಾರೆ
ಮುತ್ತೀನ ಬೊಟ್ಟಿಟ್ಟಾರೆ ಅಕ್ಕಗಳು
ವೊಯ್ದಾರೆ ಮೊಡುಲಕ್ಕೀನ ॥

ಮೊಡುಲಕ್ಕೀನೆ ವೊಯ್ದುವರೆ ಕಾಟಮ್ನ
ಅತ್ತೀಯಾ ಮನೆಗೇ ಕಳುವವರೇ ॥

ಸಾಲ್ಯಾದ ಸೀರೇಯನುಡಿಸಿ ಸಾದೀನ ಬಟ್ಟಿಟ್ಟಾರೆ
ತಾಯೋರು ವೊಯ್ದಾರೆ ಮಡುಲಕ್ಕಿ
ತಾಯೋರು ವೊಯ್ದಾರೆ ಮಡುಲಕ್ಕಿ ಕಾಟಮ್ಮಾನ
ಮಾವಾನ ಮನಿಗೇ ಕಳಿವ್ಯಾರೇ ॥

ಗಂಜೀಯ ಸೀರುಡಿಸ್ಯಾರೆ ಗಂದಾದ ಒಟ್ಟಿಟ್ಟಾರೆ
ತಂಗ್ಯೋರೊಯ್ದಾರೆ ಮಡುಲಕ್ಕಿ
ತಂಗ್ಯೋರೊಯ್ದಾರೆ ಮಡುಲಕ್ಕಿ ಕಾಟಮ್ಮಾನ
ಗಂಡಾನಮನಿಗೇ ಕಳುವ್ಯಾರು ॥

ಚಿಕ್ಕರ್ತಿಕ್ವಾಟೆ ಮುತ್ತೀ ನೇರಿಮ್ಯಾಲೆ
ಪಟ್ಟೇದ ಸೀರ್‍ಯೋರು ಸರಿಬ್ಯೆರಕೆ
ಪಟ್ಟೇದ ಸೀರ್‍ಯೋರು ಸರಿಬ್ಯೆರಕೆ ಕಾಟಮ್ಮಾನ
ಅಕ್ಕಗಳು ಸಾಗಿ ಕಳುವ್ಯಾರೇ ॥

ರಾಯ ಅರ್ತಿಕ್ವಾಟೆ ವೂವಿನೇರಿ ಮ್ಯೊಲೆ
ಸಾಲ್ಯಾದ ಸೀರೆಯೋರು ಸರಿಬ್ಯೆರಕೆ
ಸಾಲ್ಯಾದ ಸೀರೆಯೋರು ಸರಿಬ್ಯೆರಕೆ ಕಾಟಮ್ಮಾನ
ತಾಯೋರು ಸಾಗಾ ಕಳುವ್ಯಾರೆ ॥

ಇಂದೇ ಅರ್ತಿಕ್ವಾಟೆ ಗಂದಾದೇರಿ ಮ್ಯಾಲೆ
ಗಂಜೀ ಸೀರ್‍ಯೋರು ಸರಿಬ್ಯೆರಕೆ
ಗಂಜೀ ಸೀರ್‍ಯೋರು ಸರಿಬ್ಯೆರಕೆ ಕಾಟಮ್ಮಾನ
ತಂಗ್ಯೋರು ಸಾಗಾ ಕಳುವ್ಯಾರೆ ॥

ದಾಸವಾಳ ವೂವಿನಂಗ ಕ್ಯಾಸಕ್ಕಿಮಡಿಲಾಗುಯ್ದು
ಕ್ಯಾಸಕ್ಕಿಗೊಂದು ತನಿಗೆಂಡ
ಕ್ಯಾಸಕ್ಕಿಗೊಂದು ತನಿಗೆಂಡ ಮುತ್ತಣ್ಣಾನ
ಜೋತ್ರಾದ ಸೆರಗೀಗೆ ಸುರುವ್ಯಾಳೆ ॥

ಮಲ್ಲಿಗೂವಿನಂಗೆ ನಲ್ಲಕ್ಕಿಮಡಿಲಾಗೊಯ್ದು
ನೆಲ್ಲಕ್ಕಿಗೊಂದು ತನಿಗೆಂಡ
ನೆಲಕ್ಕಿಗೊಂದು ತನಿಗೆಂಡ ಮುತ್ತಣ್ಣಾನ
ವಲ್ಲೀ ಸೆರಗೀಗೆ ಸುರಿವ್ಯಾಳೆ ॥

ಬಿತ್ತೀದೊಲದಾಗ ಸತ್ತಿವಂತೆ ಬರುತಾಳೆ
ಮುತ್ತುತ್ತಿದ್ವಾಲೆ ಕಿವಿಯಾಗೆ
ಮುತ್ತೊತ್ತಿದ್ವಾಲೆ ಕಿವಿಯಾಗೆ ಕಾಟಮ್ಮ
ಮುತ್ತೈದೇಳಾಗಿ ಬರುತಾಳೆ ॥

ಅರುಗೀದವಲದಾಗ ಸಿರಿವಂತೆ ಬರುತಾಳೆ
ಅರಳೊತ್ತಿದ್ವಾಲೆ ಕಿವಿಯೋಳು
ಅರಳೊತ್ತಿದ್ವಾಲೆ ಕಿವಿಯೋಳು ಕಾಟಮ್ಮ
ಮೊದಲಗಿತ್ತ್ಯಾಗಿ ಬರುತಾಳೆ ॥

ಅಕ್ಕಾವುಟ್ಟಸೀರೆ ಸುಪ್ಪಂಗದ ನಾತಾವೆ
ಮತ್ತೆಲ್ಲಿವಗದೆ ಮಡಿವಾಳ
ಮತ್ತೆಲ್ಲಿವಗದೆ ಮಡಿವಾಳ ವುಲಿಕುಂಟೆ
ಕಟ್ಟಿಂದ್ಯೆದಾವೆ ಕೆರೆಬಾವಿ ॥

ಕೆರೆಬಾವಿಯುಂಟು ಕೆಳಗೆತ್ವಾಟವುಂಟು
ಅಣ್ಣುಂಟು ಆಲಸಿನ ಮರವುಂಟು
ಅಣ್ಣುಂಟು ಆಲಸಿನ ಮರವುಂಟು ಕಾಟಮ್ಮಾನ
ಸೆರಗೀನಾಗುಂಟು ಗಜನಿಂಬೇ ॥

ತಾಯಿ ವುಟ್ಟಾಸೀರೆ ದೇವಂಗದ ನಾತಾವೆ
ಮ್ಯಾಲೆಲ್ಲಿ ವಗೆದೋ ಮಡಿವಾಳ
ಮ್ಯಾಲೆಲ್ಲಿ ವಗೆದೋ ಮಡಿವಾಳ ವುಲಿಕುಂಟೆ
ಕೇರಿಯಿಂದ್ಯೆದಾವೆ ಕೆರೆಬಾವಿ ॥

ಕೆರೆಬಾವಿಯುಂಟು ಕೆಳಗೆ ತ್ವಾಟವುಂಟು
ಅಣ್ಣುಂಟು ಆಲಸಿನ ಮರವುಂಟು
ಆಣ್ಣುಂಟು ಅಲಸಿನ ಮರವುಂಟು ಕಾಟಮ್ಮಾನ
ತುರುಬೀನಾಗುಂಟು ಮಲ್ಲಿಗದೂವು ॥

ತಾಯಿಮನಿಗೋಗಲಿಲ್ಲ ಮೂರು ತುತ್ತಣಲಿಲ್ಲ
ತಾಯಲ್ಲ ತೌರು ಮನೆಯಲ್ಲ
ತಾಯಲ್ಲ ತೌರು ಮನೆಯಲ್ಲ ಸಂದನೋರ
ಬಾಳೆವನವಿಂದು ಉರಿಯಾಲಿ ॥

ತಂದೆ ಮನೆಗೋಗನಿಲ್ಲ ಒಂದು ತುತ್ತುಣಲಿಲ್ಲ
ತಂದ್ಯೆಲ್ಲ ತೌರ ಮನಿಯಲ್ಲ
ತಂದ್ಯೆಲ್ಲ ತೌರಮನಿಯಲ್ಲ ಸಂದನೋರ
ನಿಂಬೀಯ ವನವಿಂದು ಉರಿಯಾಲಿ ॥

ಅಪ್ಪಗಳ ವಲದಾಗ ಉತ್ರಾಣಿ ಬೆಳಿಯಾಲಿ
ಚಿಕ್ಕಾಮಾವುಗಳ ಸ್ವೊಬಗೀನ
ಚಿಕ್ಕಾಮಾವುಗಳ ಸ್ವೊಬಗೀನ ವಲದಾಗ
ಬುಟ್ಟಾರಾಜುಣವೇ ಬೆಳಿಯಾಲಿ ॥

ಅಣ್ಣಗಳಾ ವಲದಾಗ ಅಣ್ಣೇಯು ಬೆಳಿಯಾಲಿ
ಸಣ್ಣಾಮಾವುಗಳು ಸ್ರೊಬಗೀನ
ಸಣ್ಣಾಮಾವುಗಳು ಸ್ರೊಬಗೀನ ವಲದಾಗ
ಸಾಲು ರಾಜುಣವೇ ಬೆಳಿಯಾಲಿ ॥

ಕುಣಿ ಕುಣಿ ಅಂದಾರೆ ನಾವೇನು ಕುಣಿದೇವು
ಕುಣಿ ಕಡ್ಡೈದಾವೆ ಕಣದಾಗೆ
ಕುಣಿ ಕಡ್ಡೈದಾವೆ ಕಣದಾಗೆ ಕಾಟಮ್ಮಾನ
ಕುಣಿಸೋರು ಬಂದಾರೆ ದೊರೆಗಾಳು ॥

ಮ್ಯೆರಿಯೀರಿ ಅಂದಾರೆ ನಾವೇನು ಮ್ಯೆರದೇವು
ಮ್ಯೆರಿಗಡ್ಡಿಯ್ಯೆದಾವೆ ಕಣದಾಗೆ
ಮ್ಯೆರಿಗಡ್ಡಿಯ್ಯೆದಾವೆ ಕಣದಾಗೆ ಕಾಟಮ್ಮಾನ
ಮ್ಯೆರಿಸೋರು ಬಂದಾರೆ ದೊರಿಗಾಳು ॥

ಗುಗ್ಗೂರಿಸ್ವಾರೇಗೆ ಇಬ್ಬಾರು ಕಾವಾಲು
ಬುದ್ದಿವಂತೆ ಕೇಳೆ ಕರಿಯಮ್ಮ
ಬುದ್ದಿವಂತೆ ಕೇಳೆ ಕರಿಯಮ್ಮ ನಮ್ಮಿಬ್ಬಾರ
ಗುದ್ದಾಟವಿಲ್ಲೀಗೆ ಅರುದಾವೆ ॥

ಆಲು ಸ್ವಾರಿಗ್ಗೆ ನಾಲ್ವಾರು ಕಾವಾಲು
ನಾದುನಿ ಕೇಳೆ ಸಿರಿಯಮ್ಮ
ನಾದುನಿ ಕೇಳೆ ಸಿರಿಯಮ್ಮ ನಮ್ಮಿಬ್ಬಾರ
ಕಾದಾಟವಿಲ್ಲೀಗೆ ಅರುದಾವೆ ॥

ಸಂದಿಮನೆಯೋಳು ಕೇಳೆ ಗುಂದಿಮನೆಯೋಳು ಕೇಳೆ
ಸಂಗಾತಿ ಕೇಳೆ ಕರಿಯುಮ್ಮ
ಸಂಗಾತಿ ಕೇಳೆ ಕರಿಯುಮ್ಮ ನಮ್ಮಿಬ್ಬಾರ
ಗುಂಜಾಟ ವಿಲ್ಲೀಗೆ ಅರುದಾವೆ ॥

ಆದಿಮನಿಯೋಳು ಕೇಳೆ ಬೀದಿಮನಿಯೋಳು ಕೇಳೆ
ನಾದೂನಿ ಕೇಳೆ ಸಿರಿಯಮ್ಮ
ನಾದೂನಿ ಕೇಳೆ ಸಿರಿಯಮ್ಮ ನಮ್ಮಿಬ್ಬಾರ
ಕಾದಾಟವಿಲ್ಲೀಗೆ ಅರುದಾವೆ ॥

ಉಪ್ಪಾಕಿದ ಸೊಪ್ಪು ಮತ್ತೀಟು ಆಕ್ಸಾರು
ಉಪ್ಪರಿಗೆ ಮುಂದೆ ಮ್ಯೆರಿವಾಗ
ಉಪ್ಪರಿಗೆ ಮುಂದೆ ಮ್ಯೆರಿವಾಗ ವಾರುಗಿತ್ಯೇರು
ತುಪ್ಪಾವೋಗರಕೆ ಕರೆದಾರು ॥

ಆಲೊಯ್ದು ಸೊಪ್ಪು ಮ್ಯಾಲೀಟು ಆಕೋರು
ವಾವುರಿಗೆ ಮುಂದೆ ಮೆರಿವಾಗ
ವಾವುರಿಗೆ ಮುಂದೆ ಮೆರಿವಾಗ ವಾರುಗಿತ್ಯೋರು
ಆಲು ವೋಗರಕೆಂದು ಕರೆದಾರು ॥

ಬಾಳೀಯಮರಕ ಬಾಲನ ತೊಟ್ಟಿಲು ಕಟ್ಟಿ
ಬಾಲಸಿರಿಯಣ್ಣ ಅಳದೀರೋ
ಬಾಲಸಿರಿಯಣ್ಣ ಅಳದೀರೋ ನಿಮ್ಮಮ್ಮ
ಬಾಯಾರಿದರೂ ಬರವಲ್ಲಳೋ ॥

ನಿಂಬೀಯ ಮರಕ ಕಂದನ ತೊಟ್ಟಿಲು ಕಟ್ಟಿ
ಕಂದಸಿರಿಯಣ್ಣ ಅಳದೀರೋ
ಕಂದಸಿರಿಯಣ್ಣ ಅಳದೀರೋ ನಿಮ್ಮಮ್ಮ
ಅಂಗುಳಾರಿದರೂ ಬರವಲ್ಲಾಳೋ ॥

ಬಾಲಾ ಅಳದೀರೋ ಬಾಲಯ್ಯ ಅಳದೀರೋ
ಬಾಲಾ ಸಿರಿಯಣ್ಣ ಅಳದೀರೊ
ಬಾಲಾಸಿರಿಯಣ್ಣ ಅಳದೀರೋ ನಿಮ್ಮಮ್ಮ
ಬಾಲಾನ ಬುಟ್ಟು ಕಾಡ ವೊಗತಾಳೋ ॥

ಕಂದ ಅಳದೀರೋ ಕಂದಯ್ಯ ಅಳದೀರೋ
ಕಂದ ಸಿರಿಯಣ್ಣ ಅಳದೀರೋ
ಕಂದಸಿರಿಯಣ್ಣ ಅಳದೀರೋ ನಿಮ್ಮಮ್ಮ
ಕಂದನಬುಟ್ಟು ಕಾಡವೊಗತಾಳೋ ॥

ಕೇರಿವೊಕ್ಕಾಳೆ ಬಾಲನ ಮುದ್ದಾಡ್ಯಾಳೆ
ಬಾಲ ಸಿರಿಯಣ್ಣ ಅಳದೀರೋ
ಬಾಲ ಸಿರಿಯಣ್ಣಅಳದೀರೋ ವುಲಿಕುಂಟೆ
ರಾಣ್ಯಾಕ ಕಯ್ಯ ಮುಗುದೇನು ॥

ಸಂದಿವೊಕ್ಕಾಳೆ ಕಂದಾನ ಮುದ್ದಾಡ್ಯಾಳೆ
ಇಂದೇನನ ಕಂದ ಅಗಲೀದೆ
ಇಂದೇನನ ಕಂದ ಅಗಲೀದೆ ವುಲಿಕುಂಟೆ
ಮೂರಾದೀಗೆ ಕಯ್ಯ ಮುಗುದಾಳೆ ॥

ಕೇರಿ ವೊಕ್ಕಾಳೆ ಬಾಲಾನ ಮುದ್ದಾಡ್ಯಾಳೆ
ನಾಳೀಕೆ ನನ್ನ ಬಾಲ ಅಗಲೀದ
ನಾಳೀಕೆ ನನ್ನ ಬಾಲ ಅಗಲೀದ ವುಲಿಕುಂಟೆ
ರಾಣ್ಯಾಕ ಕಯ್ಯಾ ಮುಗದೇನು ॥

ಅಸಿಯಾ ತುಗ್ಗಲಿ ಮರ ಎಸಳೊಡೆದು ಬೇವಾಗ
ಅಸುಮಗಳು ಕಾಟಮ್ಮ ಮೆರಿವಾಗ
ಅಸುಮಗಳು ಕಾಟಮ್ಮ ಮೆರಿವಾಗ ಅಗ್ಗುಣಿದೇವಿ
ಅಸನಾದ ನಗುವಾ ನಗುತಾಳೇ ॥

ಸಣ್ಣಾ ಕುಗ್ಗಲಿ ಮರ ಗಿಣ್ಣೊಡೆದು ಬೇವಾಗ
ಸಣ್ಣ ತುಗಳು ಕಾಟಮ್ಮ ಮೆರಿವಾಗ
ಸಣ್ಣ ಮಗಳು ಕಾಟಮ್ಮ ಮೆರಿವಾಗ ಅಗ್ಗುಣಿದೇವಿ
ಸಣ್ಣಾಗೆ ನಗುವಾ ನಗುತಾಳೇ ॥

ಅರುಗೀದ ವಲದಾಗ ಸುರವೊನ್ನ ಮೆಳಿಯಾಗ
ಅರುದೇ ಬರುತಾನೆ ಅವರಣ್ಣ
ಅರುದೇ ಬರುತಾನೆ ಅವರಣ್ಣ ಕಾಟಣ್ಣ
ಅರುವತ್ತು ಕೊಟ್ಟೇನು ನಿಲುತಂಗಿ ॥

ಅರುವತ್ತು ಕೊಟ್ಟಾರೆ ತುರುಬೀನ ಬೆಲಿಯಲ್ಲ
ದುರುಗಾ ವಾಳೋರ ಮಗ ದೂರ
ದುರುಗಾ ವಾಳೋರ ಮಗ ದೂರ ವೋಗಲುವಾಳು
ತಡೆಯಾದೆ ಕಿಚ್ಚ ಕೊಡಿರಣ್ಣ ॥

ಕಿಚ್ಚು ಕೊಡುವಾಕ ವೊಟ್ಟ್ಯಪ್ಪನಾಯಕನಾಣೆ
ಪಚ್ಚೆ ಕಲ್ಲಾಣೆ ಪ್ರಜೆಯಾಣೆ
ಪಚ್ಚೆ ಕಲ್ಲಾಣೆ ಪ್ರಜೆಯಾಣೆ ಮುಮ್ಮಡಿಬೂಪ್ನ
ವೊಟ್ಟೆಮ್ಯಾಲಾಡೋ ಮಗನಾಣೆ ॥

ಬತ್ತೀದ ವಲದಾಗ ಉತ್ರಾಣಿ ಮೆಳೆಯಾಗ
ಅತ್ತಿ ಬರುವಾನೆ ಅವರಣ್ಣ
ಅತ್ತಿ ಬರುವಾನೆ ಅವರಣ್ಣ ಕಾಟಣ್ಣ
ಲಕ್ಸ ಕೊಟ್ಟೇನು ನಿಲುತಂಗಿ ॥

ಲಕ್ಸ ಕೊಟ್ಟಾರೆ ಅದು ಕೊಪ್ಪೀನ ಬೆಲಿಯಲ್ಲ
ಪಟ್ನ ಆಳೋರ ಮಗ ದೂರ
ಪಟ್ನ ಆಳೋರ ಮಗ ದೂರ ವೋಗಲುವಾಳು
ಗಕ್ಕಾನೆ ಕಿಚ್ಚ ಕೊಡಿರಣ್ಣ ॥

ಕಿಚ್ಚು ಕೊಡುವಾಕ ವೊಟ್ಟ್ಯಪ್ಪನಾಯಕನಾಣೆ
ಪಚ್ಚೆಕಲ್ಲಾಣೆ ಪ್ರಜೆಯಾಣೆ
ಪಚ್ಚೆಕಲ್ಲಾಣೆ ಪ್ರಜೆಯಾಣೆ ಮುಮ್ಮಡಿಭೂಪ್ನ
ರಟ್ಟೆಮ್ಯಾಲಾಡೋ ಮಗನಾಣೆ ॥

ಅತ್ತಿಕೊರಡು ಬಂದು ಅಟ್ಟೆಬಂದೈದಾವೆ
ಅಪ್ಪ ನಿಮ್ಮ ವೊಡಲು ಉರಿಯಾಲೋ
ಅಪ್ಪ ನಿಮ್ಮ ವೊಡಲು ಉರಿಯಾಲೋ ನೀ ಪಡೆದ
ಚಿತ್ರಾರ ಕಾಡವೊಗತೀನಿ ॥

ಆಲಾದಕೊರಡು ಬಂದು ವೋಣೆ ಮುಂದೈದಾವೆ
ತಾಯಿ ನಿಮ್ಮ ಒಡಲು ಉರಿಯಾಲಿ
ತಾಯಿ ನಿಮ್ಮ ಒಡಲು ಉರಿಯಾಲಿ ನೀ ಪಡೆದ
ರೂವಾರ ಕಾಡ ವೊಗತೀನಿ ॥

ಆಲಾದ ಮರವಾ ಸೋವಿಟ್ಟು ಮೆರವೋಳಿ
ತಾಯೀಯು ಬಂದವಳೇ ಮೊಕತೋರೆ ॥

ತಾಯಿ ಬಂದಾರೆ ಬರಲಿ ವಾಲೆ ತಂದರೆ ತರಲಿ
ರಾಯ ವುಲಿಕುಂಟೆ ಮೂಡಾಲ
ರಾಯ ವುಲಿಕುಂಟೆ ಮೂಡಾಲದಿನ್ನ್ಯಾಗ
ಗಾಜೀನ ಕೊಂಡಾವು ನಮುಗವ್ವೆ ॥

ಅತ್ತೀಯ ಮರ ಸುತ್ತಿಟ್ಟು ಮ್ಯೆರವೋಳೆ
ಅಪ್ಪ ಬಂದವನೇ ಮೊಕ ತೋರೆ
ಅಪ್ಪ ಬಂದವನೇ ಮೊಕ ತೋರೆ ॥

ಅಪ್ಪ ಬಂದರೆ ಬರಲಿ ಕಪ್ಪು ತಂದರೆ ತರಲಿ
ಚಕ್ಕೂಲಿ ಕುಂಟೆ ಮೂಡಲ
ಚಕ್ಕೂಲಿ ಕುಂಟೆ ಮೂಡಲ ದಿನ್ನ್ಯಾಗ
ಕಿಚ್ಚೀನಕೊಂಡ ನಮುಗವ್ವೆ ॥

ನಿಂಬೀಯ ಅಣ್ಣ ಅಂಬಾರ ಕೀಡಾಡೂತ
ಬಂದೀಯ ತೋಳ ತಿರುವೂತ
ಬಂದೀಯ ತೋಳ ತಿರುವೂತ ಮುತ್ತಣ್ಣಾನ
ರೆಂಬೇ ಕೊಂಡಾಕ ನೆಡೆದಾಳೆ ॥

ಕಾಕೀಯ ಅಣ್ಣ ಆಕಾಸಕೀಡಾಡೂತ
ಬಾಪುರಿ ತೋಳ ತಿರುವೂತ
ಬಾಪುರಿ ತೋಳ ತಿರುವೂತ ಮುತ್ತಣ್ಣಾನ
ಕಾಂತೆ ಕೊಂಡಾಕ ನಡುದಾಳೆ ॥

ಗಂಡಾನಿಲ್ಲದ ಗಂಬೀರೇಯ ನೋಡೀರಿ
ಗಂದಾದಬಾವಿಯವಳ ಮನಿಮುಂದೆ
ಗಂದಾದಬಾವಿಯವಳ ಮನಿಮುಂದೆ ಕಾಟಮ್ಮ
ಗಂಡಿದ್ದರೆಸ್ಟು ನೀ ಮೆರದೀಯೇ ॥

ಪುರುಸ ಇಲ್ಲದೋಳ ಸರಸಾವ ನೋಡೀರಿ
ಅರಿಸಿಣದ ಬಾವಿಯವಳ ಮನಿಮುಂದೆ
ಅರಿಸಿಣದ ಬಾವಿಯವಳ ಮನಿಮುಂದೆ ಕಾಟಮ್ಮ
ಪುರುಸಾನಿದ್ದಾರೆಷ್ಟು ಮ್ಯೆರದೀಯೆ ॥

ದೂಳುಗವುದಾವೆ ದುಕ್ಕಾದ ಮೋಡಾವೆದ್ದಾವೆ
ಏಳು ಮಾರುದ್ದದ ಜಡೆಯೆಳೆದು
ಏಳು ಮಾರುದ್ದದ ಜಡೆಯೆಳೆದು ಕಾಟಮ್ಮ
ದೂಳಲ್ಲಿ ನಲಿವೂತ ನಡೆದಾಳು ॥

ಕೊಂಡಾದ ಸುತ್ತಮುತ್ತ ಇಂಗ್ಯಾಕೆ ನಿಂತೈದಾರೆ
ತುರುಬಿಗಾಯುದ್ಯವ ನಾಕಿ
ತುರುಬಿಗಾಯುದ್ಯವ ನಾಕಿ ಕಾಟಮ್ಮಾನ
ತೆರವೀಗಣ್ಣಗಳು ತಡೆದಾರೆ ॥

ತೆರವೀಗ ತಡೆಯಾಕೆ ಬಡವಾರೇನು ಮಾವಗಳು
ಸೆರಗೊಡ್ಡಿ ಬೇಡೋ ಇರಿಯಣ್ಣ
ಸೆರಗೊಡ್ಡಿ ಬೇಡೋ ಇರಿಯಣ್ಣ ನಮ್ಮಾವುಗಳು
ಪಡಿವೊನ್ನು ಸೂರೆ ಬಿಡುತಾರೆ ॥

ಕಣ್ಣಾಗ ಸೆದೆಬಿದ್ದು ಎಣ್ಣ್ಯಾಕ ನೊಣಬಿದ್ದು
ಸಣ್ಣಾ ಸೀರ್‍ಯಾಕ ಕಿಡಿಬಿದ್ದು
ಸಣ್ಣಾ ಸೀರ್‍ಯಾಕ ಕಿಡಿಬಿದ್ದು ಕಾಟಮ್ಮಾನ
ಎಣೆಗಂಟುವಿಂದೇ ಉರುದಾವೋ ॥

ತುಪ್ಪದಾಗ ನೊಣಬಿದ್ದು ಕಣ್ಣಾಕ ಸೆದೆಬಿದ್ದು
ಪಟ್ಟೇದ ಸೀರ್‍ಯಾಕ ಕಿಡಿಬಿದ್ದು
ಪಟ್ಟೇದ ಸೀರ್‍ಯಾಕ ಕಿಡಿಬಿದ್ದು ಕಾಟಮ್ಮನ
ವುಟ್ಯಾಗಂಟುವಿಂದೇ ಉರುದಾವೇ ॥

ಅಗಲನ್ನ ಕೊಂಡಾಕ ಜಗುಲಿಮುಚ್ಚಲುಗಲ್ಲು
ರೇವಣ್ಣನೆಂಬೋ ಕುದುರೀಯ
ರೇವಣ್ಣನೆಂಬೋ ಕುದುರೀಯ ಏರಿಕಂಡು
ವೋದಾಳೆ ಕಾಟವ್ವ ಸಿವನರುಮನಿಗೆ ॥

ಉದ್ದನ್ನ ಕೊಂಡಾಕ ಗೆಜ್ಜೆಮುಚ್ಚಲುಗಲ್ಲು
ರುದ್ರಣ್ಣನೆಂಬೋ ಕುದುರೀಯ
ರುದ್ರಣ್ಣನೆಂಬೋ ಕುದುರೀಯ ಏರಿಕಂಡು
ಎದ್ದೋದಾಳೆ ಕಾಟವ್ವ ಸಿವನರುಮನಿಗೆ ॥

ಅಕ್ಕಾಕಾಟಮ್ಮಾನ ಕಪ್ಪೀನ ಕಿಳೆಗಾಳ
ಒಪ್ಪಾವೈದು ಮುತ್ತುತಗುದು
ತುಪ್ಪಾದ ದೀವೀಲಿ ಪುತ್ರನ ಸಂತೋಸಾಕ
ಎಚ್ಚೀಗ ಕೊಡು ನಮ್ಮ ಕಂದಯ್ಯಾಗೆ
ಜಯಮಂಗಳಾ ರಾಮು ಸುಬಮಂಗಳಾ ॥

ತಾಯಿ ಕಾಟಮ್ಮಾನ ವಾಲೀಯ ಕೆಳಗಾಳ
ಮುತ್ತುಗಳಾ ತಗುದು ಆಲಾದ ಅರುವೀಲಿ
ಬಾಲಾನ ಸಂತೋಸಾಕ ಏಳೀಗೆ ಕೊಡುವಮ್ಮ
ನಮ್ಮ ಕಂದಯ್ಯಗೆ ।।

ಜಯಮಂಗಳಾ ರಾಮು ಸುಬಮಂಗಳಾ ।।
ರೆಂಬೆ ಕಾಟಮ್ಮಾನ ಬಂದೀಯ ಕೆಳಗಾಳ
ಅಂದಾವೈದು ಮುತ್ತಾತಗುದು

ಗಂದಾದರಿವೀಲಿ ಕಂದನ ಸಂತೋಸಾಕ
ನಂಬೀಗೆ ಕೊಡುನಮ್ಮ ಕಂದಯ್ಯಾಗ
ಜಯಮಂಗಳಾ ರಾಮು ಸುಬಮಂಗಳಾ ।।

ಮುಪ್ಪನ್ನು ಜಯಿಸಬಹುದೇ ?

ಎಂ. ಬಸವರಾಜೆ ಅರಸ್

ಸವಕಳಿಗಳ ದೆಸೆಯಿಂದ ಶರೀರ ಕುಸಿದು ಮುಪ್ಪು ಬರುವುದು ಸಹಜ. ಅಂಗಕ್ರಿಯೆಗಳ ಚಟುವಟಿಕೆಯಿಂದ ಜೀವಕಣಗಳ ಮುದುರಿಕೆಯೂ ಮುಪ್ಪಿಗೆ ಮತ್ತೊಂದು ಕಾರಣ. ಪೆಟ್ಟು, ಸೋಂಕು, ಉದ್ರೇಕ, ಪಥ್ಯ, ಆಹಾರ ಕೊರತೆ, ಆಯಾಸ, ಶ್ರಮ ಇತ್ಯಾದಿಗಳಿಂದ ಸವಕಳಿಯುಂಟಾಗುತ್ತದೆ. ಈ ಕಾರಣಗಳು ಬದಲಾದಂತೆಲ್ಲಾ ಜೀವಾವಧಿ ಬದಲಾಗುವುದೂ ಸಹಜ. ಕೆಲವರಿಗೆ ಮುಪ್ಪು ಬೇಗ ಬರಬಹುದು. ಇತರರಿಗೆ ನಿಧಾನವಾಗಿ ಬರಬಹುದು. ಇದನ್ನು ಒಂದು ರಹಸ್ಯವೆಂದು ಕರೆದರೂ ಸರಿ ಎನ್ನಬಹುದು. ಏಕೆಂದರೆ ಇಲಿ ಎರಡು ವರ್ಷದಲ್ಲೆ ಮುದಿಯಾಗುತ್ತದೆ. ರ್ರೀಸಸ್‌ಕಪಿ 20ರಿಂದ 25 ವರ್ಷ ಬದುಕಿದರೆ, ಆಮೆ 100ವರ್ಷ ಬದುಕುತ್ತದೆ. ಆಫ್ರಿಕ ಆನೆಗಿರುವಷ್ಟು ವಯಸ್ಸು ಅಂದರೆ 70ರಿಂದ 75 ವರ್ಷ ಮನುಷ್ಯನೂ ಬದುಕುತ್ತಾನೆ. ಈ ವ್ಯತ್ಯಾಸಗಳಿಗೆ ಕಾರಣ ತಿಳಿಯದು. ಸಾಮಾನ್ಯವಾಗಿ ವಯಸ್ಸಿಗೂ ಮೆದುಳಿನ ಗಾತ್ರಕ್ಕೂ ಒಂದು ವಿಶೇಷ ಸಂಬಂಧ ವಿದೆಯೆಂದು ಹೇಳಲಾಗಿದೆ. ಈ ರಹಸ್ಯ ವಿಜ್ಞಾನಶಾಸ್ತ್ರವನ್ನು ಹೆಚ್ಚು ಹೆಚ್ಚಾಗಿ ಪರಿಶೀಲಿಸಲಾಗುತ್ತಿದೆ. ಇತ್ತೀಚೆಗೆ ಸೋಂಕು ರೋಗಗಳನ್ನೂ ಶಿಶುಪ್ರಾಣ ನಷ್ಟಗಳನ್ನೂ ತಡೆದಿರುವುದರಿಂದ ಮನುಷ್ಯನ ಜೀವಿತಕಾಲ ಹೆಚ್ಚುತ್ತಾ ಬಂದಿದೆ. ಆದರೂ ಮನುಷ್ಯನಿಗೆ ಸಾವಂತೂ ತಪ್ಪಿದ್ದಲ್ಲ. ಬಹಳ ಅಪೂರ್ವವಾಗಿ ಮಾತ್ರ ಮನುಷ್ಯ ಬಹಳ ದಿವಸ ಬದುಕಬಹುದು. ಏಡಿಗಂತಿ, ಗುಂಡಿಗೆ ಆಘಾತ, ಸಿಹಿಮೂತ್ರ, ರಕ್ತದ ಏರೊತ್ತಡ ಇತ್ಯಾದಿ ರೋಗಗಳನ್ನು ತಡೆಗಟ್ಟಿದರೂ ಮನುಷ್ಯ ಬಹಳಕಾಲ ಬದುಕಲಾರ.

ಮುಪ್ಪನ್ನು ತಡೆಯಲು ಅಸಾಧ್ಯವಾದುದರಿಂದ ಅದು ಎಲ್ಲರಿಗೂ ಬರುವ ಒಂದು ರೀತಿಯ ರೋಗವೆಂದು ಬಫ್ಫೆಲೋ ವಿಶ್ವವಿದ್ಯಾಲಯದ ಬೆಂಜಮಿನ್ ಪ್ಲಾಸ್ ಘೋಷಿಸಿದ್ದಾರೆ. ಇತರ ಎಲ್ಲಾ ರೋಗಗಳಿಂದಲೂ ಸ್ವಲ್ಪಮಟ್ಟಿಗೆ ಪಾರಾದರೂ ಮುಪ್ಪಿನಿಂದ ಪಾರಾಗುವ ಸಂಭವವೇ ಇಲ್ಲ. ವಿಜ್ಞಾನಶಾಸ್ತ್ರ ಬೆಳೆದಂತೆಲ್ಲಾ ಅನೇಕ ರಹಸ್ಯಗಳು ಬಗೆಹರಿಯಲ್ಪಡುತ್ತಿವೆ. ಈಗಾಗಲೇ ವಿಜ್ಞಾನ ಶಾಸ್ತ್ರ ಮುಪ್ಪಿನ ವಿಚಾರದಲ್ಲಿ ಸಾಕಷ್ಟು ಜ್ಞಾನೋದಯವನ್ನುಂಟುಮಾಡಿದೆ. ಇತ್ತೀಚೆಗೆ ತಿಳಿದುಬಂದಿರುವ ಜೀವಕಣದ ಹೊಸ ವಿಷಯ ಸ್ವಲ್ಪಮಟ್ಟಿಗೆ ಮುಪ್ಪಿನ

ರಹಸ್ಯವನ್ನು ಹೊರಗೆಡಹಿಸಿದೆ. ಜೀವಕಣದ ನಡುಬೀಜದಲ್ಲಿರುವ ಡಿ.ಎನ್.ಎ. ಅಣುಗಳಲ್ಲಿ ಜೀವದ ಬೆಳವಣಿಗೆಗೂ ಪಾಲನೆಗೂ ನೆರವಾಗುವ ವಂಶವಾಹಿ ಸಾಕಷ್ಟು ಅರಿವನ್ನುಂಟುಮಾಡಿದೆ. ಪ್ರತಿಯೊಂದು ಜೀವಕಣದಲ್ಲಿ ಕಂಡುಬರುತ್ತಿರುವ ಈ ಅರಿವು ಆರ್.ಎನ್.ಎ. ಅಣುಗಳ ಮೂಲಕ ರಸಾಯನಿಕ ಕಿಣ್ವದ ಸಹಾಯದಿಂದ ಜೀವಕಣದ ಸಾಮಾನು ಸರಂಜಾಮುಗಳು, ಅದರಲ್ಲೂ ಪ್ರೋಟೀನು ಶಿಥಿಲವಾಗುವು ದಕ್ಕೂ ನಿರ್ಮಾಣಕ್ಕೂ ರವಾನಿಸಲಾಗುತ್ತದೆ. ಅಂದರೆ ಜೀವಕಣದ ರಚನೆಯು ಹತೋಟಿ ತಿಳಿದಂತಾಯಿತು. ಜೀವಕಣದ ರಚನೆ ಹಾಗೂ ಅದರ ಹತೋಟಿ ತಿಳಿದುಬಿಟ್ಟ ಮೇಲೆ ಜೀವಿತ ಕಾಲದ ಹತೋಟಿಯೂ ಗೊತ್ತಾದಂತಾಯಿತು. ಅಂದರೆ ಮುಪ್ಪನ್ನು ಕೂಡ ಹತೋಟಿಯಲ್ಲಿಡಬಹುದೆಂದು ವ್ಯಕ್ತವಾಗುತ್ತದೆ.

ಈ ತಿಳಿವಳಿಕೆಯಿಂದ ಮುಪ್ಪಿನ ತೊಂದರೆಗಳನ್ನು ಬಹುಮಟ್ಟಿಗೆ ತಡೆಯ ಬಹುದೇ ಅಲ್ಲದೆ, ಮುಪ್ಪನ್ನೇ ತಡೆಯಬಹುದೆಂದು ಮುಪ್ಪು-ಶಾಸ್ತ್ರಜ್ಞರು ಹೇಳುತ್ತಿದ್ದಾರೆ. ಈ ಅಭಿಪ್ರಾಯವನ್ನು ಸಮರ್ಥಿಸಲು ಕೆಲವು ಪ್ರಯೋಗಗಳೂ ನಡೆದಿವೆ. ಒಂದು ಮುದಿ ಇಲಿಯನ್ನು ಒಂದು ಎಳೆ ಇಲಿಯ ಜೊತೆ ಜಂಟಿಸಿ ಒಂದರ ರಕ್ತ ಇನ್ನೊಂದರ ಶರೀರದಲ್ಲಿ ಚಲಿಸುವಂತೆ ಮಾಡಿದರೆ. ಮುದಿ ಇಲಿ ತನ್ನ ಪ್ರಮಾಣಕ್ಕಿಂತಲೂ ಹೆಚ್ಚುಕಾಲ ಬದುಕುವುದು ಕಂಡುಬರುತ್ತದೆ. ಸುಮಾರು 500ಕ್ಕಿಂತಲೂ ಹೆಚ್ಚು ಈ ತರಹದ ಪ್ರಯೋಗಗಳನ್ನು ಕ್ಯಾಲಿಫೋರ್ನಿಯ ವಿಶ್ವ ವಿದ್ಯಾಲಯದ ಫ್ರೆಡೆರಿಕ್ ಸಿ. ಲಡ್ವಿಗ್ ನಡೆಸಿ ಮುದಿತನವನ್ನು ದೂರಮಾಡಿ ಹೆಚ್ಚುಕಾಲ ಇಲಿಗಳು ಬದುಕುವ ರೀತಿಯನ್ನು ದೃಢಪಡಿಸಿದ್ದಾನೆ. ಎಳೆ ಇಲಿಯ ರಕ್ತ ದಲ್ಲಿ ಏನೋ ಒಂದು ವೈಶಿಷ್ಟ್ಯವಿದೆಯೆಂದೂ, ಅದು ಮುಪ್ಪನ್ನು ದೂರಮಾಡುತ್ತ ದೆಂದೂ ಡಾ॥ ಹೃಜ ಪ್ರಕಾರ ಈ ವೈಶಿಷ್ಟ್ಯದ ಕಾರಣ ಒಂದು ಬಗೆಯ ಚೋದನಿ ಎಂದೂ ತಿಳಿದುಬಂದಿದೆ. ಇದರಂತೆ ಮುದಿಜಿರಳೆಯನ್ನು ಎಳೆಜಿರಳೆಗೆ ಜಂಟಿ ಮಾಡಿ ಕಿತ್ತುಹಾಕಿದ್ದ ಮುದಿಜಿರಳೆಯ ಕಾಲುಗಳು ಈ ಚೋದನಿಯ ಶಕ್ತಿಯಿಂದ ಪುನಃ ಬೆಳೆಯುವುದನ್ನು ಡಾ॥ ಬೊಡೆನ್‌ಸ್ಟೇನ್ ತೋರಿಸಿದ್ದಾನೆ. ಈ ಚೋದನಿ ರಸ ಯಾವುದು ? ಅದನ್ನು ಪ್ರಯೋಗಶಾಲೆಯಲ್ಲಿ ತಯಾರಿಸಬಹುದೇ ? ಅದನ್ನು ಮುಪ್ಪು ತಡೆಯಲು ಉಪಯೋಗಿಸಬಹುದೇ ? ಮನುಷ್ಯನಿಗೆ ಈ ಪ್ರಯೋಗದಿಂದ ಲಾಭವಿದೆಯೆ ? ಎಂಬ ಅನೇಕ ಪ್ರಶ್ನೆಗಳು ಏಳುವುದಲ್ಲದೆ, ಅವು ಜನಾಂಗದ ಆಕಾಂಕ್ಷೆಯನ್ನು ಕೂಡ ಉದ್ರೇಕಿಸುತ್ತವೆ.

ಈ ಪ್ರಯೋಗಗಳಿಂದ ಕಂಡುಬಂದಿರುವ ಚೋದನಿರಸ ಯಾವುದೇಆಗಿದ್ದರೂ ಅದು, ಇಲ್ಲಿಯವರೆಗೆ ಅಸಾಧ್ಯವೆಂದು ತಿಳಿದಿದ್ದ ಮುಪ್ಪನ್ನು ದೂರಮಾಡುತ್ತ ದೆಂಬುದು ನಂಬಬೇಕಾದ ವಿಷಯ. ಶರೀರದ ಕಾವನ್ನು ತಗ್ಗಿಸುವುದರಿಂದ ಮುಪ್ಪನ್ನು ಮುಂದುವರಿಸಬಹುದೆಂದು 1917ರಿಂದೀಚೆಗೆ ತಿಳಿದುಬಂದಿದೆ. ತಂಪು

ರಕ್ತದ ಪ್ರಾಣಿಗಳ ಮೈಶಾಖವನ್ನು ಇನ್ನಷ್ಟು ತಗ್ಗಿಸಿದರೆ, ಅವುಗಳ ಜೀವಿತಕಾಲ ಹತ್ತರಷ್ಟು ಹೆಚ್ಚುತ್ತದೆ. ಇದು ಬಿಸಿರಕ್ತಪ್ರಾಣಿಗಳಿಗೂ ಅನ್ವಯಿಸುವುದು ಒಂದು ಹರ್ಷದ ಸಂಗತಿ. ಇತ್ತೀಚೆಗೆ, ಕಪಿಗಳ ಮೈಶಾಖವನ್ನು ತಗ್ಗಿಸಿ ಅವುಗಳ ಜೀವಿತ ಕಾಲವನ್ನು ಹೆಚ್ಚಿಸುತ್ತಿರುವುದು ಪರ್ಡ್ಯು ವಿಶ್ವವಿದ್ಯಾಲಯದ ರಾಬರ್ಟ್ ಮೇಯರ್ಸ್‌ನ ಪ್ರಯೋಗಗಳಿಂದ ಹೊರಬಿದ್ದಿದೆ. ಗಾಳಿತಾಪಸಮನಿಸುವ ಕೊಠಡಿ ಗಳಲ್ಲಿ ಅಥವ ತಂಪು ನೀರಿನ ಹಾಸಿಗೆ ಮೇಲೆ ಮಲಗಿರುವುದರಿಂದ ಮನುಷ್ಯನೂ ಹೆಚ್ಚುಕಾಲ ಬದುಕಬಲ್ಲನೆಂದು ಗೊತ್ತಾಗಿದೆ. ಎಷ್ಟುಮಂದಿ ಹೀಗೆ ಮಾಡಿ ಹೆಚ್ಚು ಕಾಲ ಬದುಕಲು ಇಚ್ಛಿಸುತ್ತಾರೊ ತಿಳಿಯದು. ಡಾ॥ ಸ್ಟ್ರೆಹ್ಲರ್ ಪ್ರಕಾರ ಹೆಚ್ಚು ಕಾಲ ಬದುಕಿರುವ ಜನರಲ್ಲಿ ಪ್ರಾಯಶಃ ಮೈಶಾಖ ಸಾಮಾನ್ಯವಾಗಿ ತಗ್ಗಿರಬಹು ದೆಂದು ಊಹಿಸಿದ್ದಾನೆ. ಅಲ್ಲದೆ ಮೈಶಾಖವನ್ನು 3°ಫ್ಯಾ. ತಗ್ಗಿಸಿದರೆ ಮನುಷ್ಯ 30 ವರ್ಷಕಾಲ ಹೆಚ್ಚು ಬದುಕಬಹುದೆಂದೂ ಊಹಿಸಿದ್ದಾನೆ. ಮೈಶಾಖ ತಗ್ಗಿಸುವ ಹಾಗೂ ಜಂಟಿಜೀವಿಗಳ ಪ್ರಯೋಗಗಳು ಎಷ್ಟೇ ಅತಿರೇಕಗಳಾಗಿದ್ದರೂ ಅವು ಜನರಲ್ಲಿ ಅಪಾರವಾಗಿ ಊಹಾಪೋಹಗಳನ್ನು ಎಬ್ಬಿಸಿವೆ. ಜೀವಕಣಗಳ ಅಣು ಶಾಸ್ತ್ರದ ಮುನ್ನಡೆ ಹೆಚ್ಚಿದಂತೆಲ್ಲಾ ಹೆಚ್ಚುಕಾಲ ಬದುಕುವ ಆಸೆಯೂ ಕೂಡ ಹೆಚ್ಚುವುದು ಆಶ್ಚರ್ಯವಲ್ಲ.

ಇದು ಒಂದು ರೀತಿಯ ವಾದ. ವಂಶವನ್ನು ವೃದ್ಧಿಪಡಿಸುವುದೇ ಜೀವನದ ಧ್ಯೇಯ. ಆದ್ದರಿಂದ ಸಂತಾನ ಬೆಳೆಸಲು ಎಷ್ಟುಕಾಲ ಬೇಕೋ ಅಷ್ಟುಕಾಲ ಮನುಷ್ಯ ಜೀವಿಸಿದ್ದರೆ ಸಾಕು ಎಂಬುದು ಮತ್ತೊಂದು ರೀತಿಯ ವಾದ. ಸಂತಾನ ವೃದ್ಧಿಯಾದ ಕೂಡಲೆ ಹೊಸ ಜೀವಿಗೆ ಸ್ಥಾನ ಕೊಡುವುದು ಪ್ರಕೃತಿಯ ಉದ್ದೇಶ. ಚಿರಜೀವಿ ಅಣು ಡಿ. ಎನ್. ಎ. ಇದಕ್ಕೆ ತಾನಾಗಿ ಅನುಸರಿಸುತ್ತದೆ. ಈ ವಾದ ವನ್ನು ಸಮರ್ಥಿಸುವ ಉದಾಹರಣೆ ಯಾವುದೆಂದರೆ—ಪೆಸಿಫಿಕ್ ಸಾಗರದಲ್ಲಿ ಜೀವಿಸುವ ಸಾಲ್ಮನ್ ಮೀನು ಮೊಟ್ಟೆ ಇಡುವ ಸಮಯದಲ್ಲಿ, ಉಪಯುಕ್ತವಾದ ನದಿಯ ಸೀ ನೀರಿನಲ್ಲಿ ಮೊಟ್ಟೆ ಇಡಲು ಪ್ರವಾಹಕ್ಕೆ ಎದರು ಈಜಿ ಬಂದು ಮೊಟ್ಟೆ ಇಡುವ ದೃಶ್ಯ ಸಹಜ, ಸಾಮಾನ್ಯವಾದದ್ದು. ಮೊಟ್ಟೆ ಇಟ್ಟ ಕ್ಷಣದಿಂದ ಎರಡು ವಾರ ಗಳಲ್ಲೇ ಬಹುಬೇಗ ತನ್ನ ಯೌವನವನ್ನು ಕಳೆದುಕೊಂಡು ಮುಪ್ಪನ್ನು ಮುಟ್ಟು ತ್ತದೆ. ಮನುಷ್ಯ ಕೂಡ ಮೀನಿನಂತೆ ಸಾಕಷ್ಟು ಸಂತಾನವೃದ್ಧಿಯಾದಂದಿನಿಂದ ಮುಪ್ಪಾಗಲು ಪ್ರಾರಂಭಿಸುತ್ತಾನೆ. ಆದರೆ ಈ ಬದಲಾವಣೆಗೆ ಮನುಷ್ಯನಲ್ಲಿ ಹೆಚ್ಚು ಕಾಲ ಹಿಡಿಯುತ್ತದೆ. ಸುಕ್ಕು ಚರ್ಮ, ನೆರೆಗೂದಲು, ಸವೆದಹಲ್ಲು, ಮಬ್ಬುಗಣ್ಣು, ಚಾಳೀಸು, ದುರ್ಬಲ ಮಾಂಸಖಂಡ, ಗೂನು ಇತ್ಯಾದಿಯೆಲ್ಲಾ ಮುಪ್ಪಿನ ಹೆಗ್ಗುರುತು ಗಳು. ಶರೀರದ ಒಳಗೂ ಹೀಗೆಯೇ ಅಂಗವಿಕಲತೆ ಉಂಟಾಗುತ್ತದೆ. ಕಡಿಮೆ ಕೆಲಸಮಾಡುವ ಗುಂಡಿಗೆ, ಕಿರಿದಾದ ಧಮನಿಗಳು, ಕುಂದಿದ ಶ್ವಾಸಕೋಶ, ಕೊರತೆ

ಗೀಡಾದ ಮೂತ್ರಪಿಂಡ ಹಾಗೂ ಈಲಿಗಳೇ ಈ ವಿಕಲಅಂಗಗಳು, ಅಲ್ಲದೆ, ಬುದ್ಧಿ ಶಕ್ತಿ, ಗಮನ ಹಾಗೂ ಕಲಿಯುವ ಸಾಮರ್ಥ್ಯಗಳೂ ಕುಂದಿರುವುವು. ಹೀಗೆ ಬದಲಾವಣೆಗಳು ವಿಸ್ತರಿಸಿದ ನಂತರ ಏಡಿಗಂತಿ, ಗುಂಡಿಗೆಬೇನೆ, ಅಂಬಲಿಪೆಡಸಣೆ, ರಕ್ತದ ಏರೊತ್ತಡ, ಸಿಹಿಮೂತ್ರ, ಕೀಲುಬೇನೆ ಹಾಗು ಮುಪ್ಪಿನ ಚಿತ್ತವಿಕಲತೆ ಇತ್ಯಾದಿ ರೋಗಗಳಿಂದ ನರಳುತ್ತಾನೆ. ಇದು ಮನುಷ್ಯನ ಸಾಮಾನ್ಯ ಚಿತ್ರವಾದರೆ, ಕೊನೆಯಪಕ್ಷ ಶೇಕಡ 14 ರಷ್ಟು ಮಂದಿ ಈ ರೋಗಗಳಿಂದ ನರಳುವುದಿಲ್ಲ. ಬಹುಮಂದಿ ಮುದಿ ಮುದಿಯಾದರೂ ಈ ಕಷ್ಟಗಳಿಗೆ ಒಳಗಾಗುವುದಿಲ್ಲ. ಅಮೇರಿಕ ದೇಶದಲ್ಲಿ ಸದ್ಯಕ್ಕೆ 1,300 ಜನ 100 ವರ್ಷಕ್ಕಿಂತಲೂ ಹೆಚ್ಚು ಕಾಲ ಬದುಕಿದ್ದಾರೆ. ಇತರ ಪಾಶ್ಚಿಮಾತ್ಯ ದೇಶಗಳಲ್ಲೂ ಇದೇ ರೀತಿ ಹಣ್ಣಣ್ಣು ಮುದುಕರಿದ್ದಾರೆ. ಚರ್ಚಿಲ್, ಅಡೆನಾರ್, ಬಟ್ರ್ಯಾಂಡ್, ರಸ್ಸಲ್, ಜಾರ್ಜ್ ಬರ್ನಾಡ್ ಷಾ, ಹಾಗೂ ನಮ್ಮ ರಾಜಗೋಪಾಲಚಾರಿ ಮತ್ತು ರಾಧಾಕೃಷ್ಣನ್ ಹಣ್ಣಣ್ಣಾಗಿದ್ದರು. ಇದಕ್ಕೆ ನಿಜವಾದ ಕಾರಣ ಸಿಗದಿರಬಹುದು. ಅವರ ವಂಶವಾಗಿ ಏನಾದರೂ ಈ ವೃಧ್ಯಾಪಕ್ಕೆ ಕಾರಣವೊ, ಅವರ ಚಿಕ್ಕತನದಲ್ಲಿ ಏನಾದರೂ ಆಹಾರ ಕೊರತೆ ಇದ್ದಿತೊ ಗೊತ್ತಿಲ್ಲ.

ಇತ್ತೀಚಿಗೆ ತಿಳಿದುಬಂದಿರುವಂತೆ, ವಂಶವಾಹಿಕೂಡ ಪರಮಾವಧಿ ಜೀವಕಾಲ ಹೊಂದಿದೆ ಎಂದು ಗೊತ್ತಾಗಿದೆ. ಜೀವಕಣ ಬೆಳೆಯುತ್ತಾ ಹೋದಾಗೆಲ್ಲ, ಅದರ ವಂಶವಾಹಿ ಕುಂದಬಹುದು. ಇಲ್ಲದಿದ್ದರೆ ಒಡೆದುಹೋಗಬಹುದು. ಇಲ್ಲವೇ ಹಾಳಾಗಬಹುದು. ಇದರಿಂದ ಡಿ. ಎನ್. ಎ. ಮತ್ತು ಆರ್. ಎನ್. ಎ. ಗಳ ಕರ್ತವ್ಯ ಕುಂದಬಹುದು. ಸಾಲ್ಕ್ ಸಂಸ್ಥೆಯ ಲೆಸ್ಲಿ ಆರ್ಗೆಲ್ ಪ್ರಕಾರ ವಂಶವಾಹಿಯಲ್ಲೇನಾದರೂ ಒಂದು ಸಾರಿ ಕುಂದುಕಂಡರೆ ಅದು ಬೆಳೆಯುತ್ತಾ ಬಂದು ಅದರ ಕರ್ತವ್ಯ ನಿಂತು ಹೋಗುತ್ತದೆಯೇ ಹೊರತು, ಪುನಃ ಚೇತರಿಸಿಕೊಳ್ಳುವುದಿಲ್ಲ. ಜೀವಕಣ ಬೆಳೆಯುತ್ತಿರುವಾಗ ಅದರ ಅಣುಗಳಲ್ಲಿ ಸ್ವಯಂರಕ್ಷಣೆ ಅಥವಾ ಅಡ್ಡಜಂಟಿ ಕಂಡು ಜೀವಕಣ ಮುಪ್ಪಾಗುತ್ತದೆಂದು ಕೆಲವು ಶಾಸ್ತ್ರಜ್ಞರ ನಂಬಿಕೆ. ಪ್ರತಿಯೊಂದು ಜೀವಕಣದಲ್ಲೂ ಬಿಡಿಯಾದ ಘಟಕ ತನ್ನ ಇಷ್ಟ ಬಂದಂತೆ ಯಾವುದರ ಜೊತೆಯಲ್ಲಾದರೂ ಕಲೆತು ಜೀವಕಣಕ್ಕೆ ಧಕ್ಕೆ ಕಂಡು ಮುಪ್ಪುಂಟು ಮಾಡುತ್ತದೆಂದು ಇನ್ನು ಕೆಲವರ ಅಭಿಪ್ರಾಯ. ಜೀವಕಣದ ವಿಕಿರಣತೆ ಹಾಗು ಅದರಲ್ಲೇ ಳುವ ಆಮ್ಲಜನಕ ಸಂಯೋಗ ಬಿಡಿ ಘಟಕದ ಉತ್ಪತ್ತಿಗೆ ಮೂಲಕಾರಣಗಳೆಂದು ತಿಳಿದುಬಂದಿದೆ.

ವೈಶಾಖ ಇಳಿಸಿ ಜೀವಿತಕಾಲವನ್ನು ಹೆಚ್ಚಿಸಲು ಮತ್ತೊಂದು ಪ್ರಯೋಗ ಇತ್ತೀಚಿಗೆ ನಡೆದಿದೆ. ಗುಂಡುಸೂಜಿ ಕೊನೆಯಷ್ಟು ಕಿರಿದಾಗುವ ರೋಟಿಫರ್ ಎಂಬ ಜಲಚರ ಕೇವಲ 18 ದಿವಸ ಮಾತ್ರ ಜೀವಿಸಬಲ್ಲದು. ಅದು ವಾಸಿಸುವ ನೀರಿನ ಶಾಖವನ್ನು 10° ಸೆಂ. ನಷ್ಟು ಇಳಿಸಿದರೆ ಅದರ ಜೀವಕಾಲ ಎರಡರಷ್ಟು

ಹೆಚ್ಚುತ್ತದೆ. ಅದೇ ವೇಳೆಯಲ್ಲಿ ಅದರ ಆಹಾರವನ್ನು ಅರ್ಧದಷ್ಟು ಕಡಿಮೆಮಾಡಿದರೆ ಅದರ ಜೀವಕಾಲ ಮೂರರಷ್ಟು ಹೆಚ್ಚುತ್ತದೆ. ಆದರೆ ಇವು ಜೀವಕಾಲದ ಮೊದಲ ಅಥವ ಕೊನೆಯ ಹಂತಗಳನ್ನು ಮಾತ್ರ ಬದಲಾಯಿಸುತ್ತದೆ. ಆಹಾರ ಕೊರತೆ ಜೀವಿತ ಕಾಲದ ಮೊದಲ ಭಾಗವನ್ನೂ, ತಗ್ಗಿದ ಮೈ ಶಾಖ ಕೊನೆಯ ಭಾಗವನ್ನೂ ಹೆಚ್ಚಿಸುತ್ತವೆ. ಕಾರ್ನೆಲ್ಲಿನ ಕ್ಲೈವ್ ಮೆಕ್ಕೆ ಕಡಿಮೆ ಕ್ಯಾಲೊರಿಗಳ ಆಹಾರವನ್ನು ಕೊಟ್ಟು ಇಲಿಯ ಜೀವಕಾಲದ ಮೊದಲ ಭಾಗವನ್ನು ಹೆಚ್ಚಿಸಿದ್ದಾನೆ. ಪರ್ಡ್ಯೂ ವಿಶ್ವವಿದ್ಯಾಲಯದ ರಾಬರ್ಟ್ ಮೆಯರ್ಸ್ ಕಪಿಗಳ ಮೈಶಾಖವನ್ನು ಮೆದುಳಿನ ಶಾಖ ನಿಯಂತ್ರಕದ ಕೈವಾಡದಿಂದ ತಗ್ಗಿಸಿ ಹೆಚ್ಚುಕಾಲ ಬದುಕಿಸಿದ್ದಾನೆ.

ಶಾಸ್ತ್ರಜ್ಞರ ಈ ವಾದ ವಿವಾದಗಳು ಕೆಲವು ಮುಖ್ಯಾಂಶಗಳನ್ನೂ ಎತ್ತಿ ತೋರಿಸುತ್ತ, ಮನುಷ್ಯನ ಜೀವಕಾಲದ ಯಾವ ಭಾಗವನ್ನು ಹೆಚ್ಚಿಸಿದರೆ ಉತ್ತಮ ವೆಂಬ ಅಂಶವನ್ನು ತೋರ್ಪಡಿಸುತ್ತವೆ. ಮೊದಲನೆಯದಾಗಿ, ಮುಪ್ಪಿನ ಅವಧಿ ಯನ್ನು ಹೆಚ್ಚಿಸಿ ಅದರಿಂದೇಳುವ ಕುಂದು ಕೊರತೆಗಳಿಂದ ನರಳುವಂತೆ ಮಾಡಲು ಶಾಸ್ತ್ರಜ್ಞರಿಗೆ ಎಂದಿಗೂ ಇಚ್ಛೆಯಿಲ್ಲ. ಮುಪ್ಪಿನಲ್ಲಿ ಬರತಕ್ಕ ರೋಗರುಜಿನಗಳನ್ನು ತಡೆಯುವುದಲ್ಲದೆ ಗುಣಪಡಿಸುವುದೇ ಅವರ ಮುಖ್ಯ ಉದ್ದೇಶ. ಹೆಚ್ಚುಕಾಲದ ಎಳೆತನದಿಂದ ಎಷ್ಟೇ ಸ್ವಾರಸ್ಯವಿದ್ದರೂ ಆಹಾರ ಕೊರತೆ ಕೊಟ್ಟು ಬಾಲ್ಯವನ್ನು ಹೆಚ್ಚಿಸುವುದೂ ಅವರ ಇಚ್ಛೆ ಅಲ್ಲ. ಹಾಗೆಯೇ ಮೈಶಾಖವನ್ನು ತಗ್ಗಿಸಿಯಾಗಲೀ ಅಥವ ಚಳಿಯ ಚೇತನದಿಂದಾಗಲೀ ಜೀವಕಾಲವನ್ನು ಹೆಚ್ಚಿಸಲೂ ಇಷ್ಟವಿಲ್ಲ. ಸಾಕಷ್ಟು ಆರೋಗ್ಯ ಬುದ್ಧಿಶಕ್ತಿ ಕೂಡಿದ ಸಂತೋಷದ ಹಾಗು ಪ್ರಯೋಜನಕಾರಿ ಯಾದ ಜೀವಕಾಲ ಹೆಚ್ಚಿಸಬೇಕೆಂಬುದೇ ಎಲ್ಲಾ ವಿಜ್ಞಾನಿಗಳ ಹಾರೈಕೆ.

ದಾರಿ

ಶ್ರೀನಾಥ್ ರಾಯಸಂ

ಮಲಗಿ
ಹಲಾಯುಧಕ್ಕೆ ನೆಲವಾಗಿ
ಬಿತ್ತಿದ ಬೆಳೆ ಮರವಾಗುತ್ತ
ಅರಳಿದ ಕಥೆ ಕಣ್ಮುಂದೆ
ತೇಲುವಾಗ ತಿಳಿಯುತ್ತದೆ—
ಸರಪಳಿಗೊಳ್ಳುವ ನಾವುಗಳೇ
ಜೀವ ಜೀವದ ಜೀವನಕ್ಕೆ
ಮನೆಯಾಗುತ್ತೇವೆಂದು

ಮನಸ್ಸಿನ ತೆವಲು
ತೊಗಲಲ್ಲಿ ಕಂಪಿಸಿ
ಸಫಲಗೊಳ್ಳುತ್ತದೆ
ಬಯಕೆ—
ಅರಳುವ ಪ್ರತಿ ಹೂವಿನಲ್ಲೂ
ಕಾಯಾಗಿ ಹಣ್ಣಾಗಿ
ಸಿಡಿದ ಬೀಜವಾಗಿ
ನೆಲ ಹೊಕ್ಕು ಗಗನಕ್ಕೆ
ಜಿಗಿಯುವ ತಾಲೀಮು
ನಡೆಯುತ್ತದೆ
ತೆರೆಯುತ್ತ ನಡೆಯುತ್ತದೆ
ದಾರಿ—
ಸುಖ ದುಃಖ ಆಸೆ ಆಮಿಷ
ಬುನಾದಿಯೋ ಗೋರಿಯೋ

ಆಗಿ,
ಸುಖಕ್ಕೊಂದು ದುಃಖವಿರುವುದರಿಂದ
ಸುಖದ ಕಾಂಕ್ಷೆ ಕಂಪಿಸುತ್ತದೆ

ಕಂಪನದ ಕಂಪು
ಇಡುಗುತ್ತದೆ ಸುತ್ತ
ಬೆಳೆಸುತ್ತದೆ ಹುತ್ತ
ನಮ್ಮ ನಿಮ್ಮ ನಿಮ್ಮ ನಮ್ಮ
ನಡುವೆ

ಸಹಜ ಶಬ್ದಗಳಷ್ಟೇ
ಶೃತಿಗೊಂಡು ಹಾಡಾಗುತ್ತ
ತಾರಕದಲ್ಲಿ ಪದಗಳೇ
ಕಳೆದು ಹೋಗುತ್ತವೆ—;

ಭಾಷಾ ಅಧ್ಯಾಪಕನಿಗಿರಬೇಕಾದ ಎಂ.ಎಲ್.ಎ. ಅರ್ಹತೆಗಳು

ಲಿಂಗದೇವರು ಹಳೆಮನೆ

ಎರಡನೆಯ ಮಹಾಯುದ್ಧದ ಸಮಯದಲ್ಲಿ ಸಂಭವಿಸಿದ ಕೆಲವು ವಿಪರೀತ ಘಟನೆಗಳಿಂದ ಭಾಷಾ ವಿಜ್ಞಾನದ ಪಾತ್ರ ವಿಶಾಲವಾದದ್ದು ವಿಸ್ಮಯಕಾರಕ ಸಂಗತಿಯೇ ಸರಿ. ಮಾನವನ ಮಹದಾಕಾಂಕ್ಷೆಗಳೆಂಥದೇ ಇರಲಿ ಕೆಲವೊಮ್ಮೆ ಅದು ತಾನು ಊಹಿಸದಂತಹ ಸಂಘಟನೆಗಳಿಗೆ ನಾಂದಿಯಾಗುವುದೂ ಉಂಟು. ಮಿತ್ರ ರಾಷ್ಟ್ರಗಳು ಶತ್ರುಗಳನ್ನು ಸದೆಬಡಿದು ಅಲ್ಲಿ ತಮ್ಮ ಠಿಕಾಣಿ ಊರುವುದಕ್ಕೆ ಹವಣಿಸಿ ದಾಗ ಅದಕ್ಕೆ ಪೂರ್ವಭಾವಿಯಾಗಿ ಅಲ್ಲಿನ ಭಾಷೆಗಳನ್ನು ಕಲಿಯಬೇಕಾಯಿತು. ಭಾಷೆ ಕಲಿಯಲು ಒಂದು ವ್ಯವಸ್ಥಿತ ವಿಧಾನವನ್ನು ಅನುಸರಿಸಬೇಕಾಯಿತು. ಭಾಷೆಯ ವ್ಯಾಮೋಹ ಹೀಗೆ ಬೆಳೆದು ಮುಂದೊಂದು ದಿನ ಅದು ವೃತ್ತಿನಿರತ ಉದ್ಯೋಗವಾಗುತ್ತದೆಂದು ಅಂದು ಬಹುಶಃ ಅವರಿಗೆ ತಿಳಿದಿರಲಿಕ್ಕಿಲ್ಲ. ಆದರೆ ಇತ್ತೀಚೆಗೆ ಭಾಷಾ ಅಧ್ಯಯನದ ಕ್ಷೇತ್ರ ತುಂಬಾ ಬೆಳೆದಿದೆ. ಹೊಸ ಹೊಸ ವಿಧಾನ ಗಳೂ ತಂತ್ರಗಳೂ ಜಾರಿಗೆ ಬಂದಿವೆ. ಅಮೆರಿಕ ಸಂಯುಕ್ತ ಸಂಸ್ಥಾನ, ಇಂಗ್ಲೆಂಡ್, ರಷ್ಯಾ ಮುಂತಾದೆಡೆಯಲ್ಲಿ ಭಾಷಾ ವಿಜ್ಞಾನ, ಭಾಷಾ ಅಧ್ಯಯನ ಜನಪ್ರಿಯತೆಯ ತುತ್ತತುದಿ ಸೇರಿದೆ. ಎಲ್ಲಾ ಶಾಸ್ತ್ರಗಳನ್ನೊಳಗೊಂಡಂತೆ ಇದಕ್ಕೊಂದು ಸಂಕೀರ್ಣ ರೂಪ ಸಿಕ್ಕಿದೆ.

ಅನ್ಯ ಭಾಷೆಯೊಂದನ್ನು ಕಲಿಯುವುದರಿಂದಾಗುವ ಅನುಕೂಲತೆಗಳು ಹಲವಾರು. ಅದರಲ್ಲೂ ಭಾಷೆಗಳ ಪ್ರದರ್ಶನ ಶಾಲೆಯಂತಿರುವ ಭಾರತದಲ್ಲಿ ಇಂಥ ಆಶಯದಿಂದ ಭಾವೈಕ್ಯತೆಯನ್ನು ಸಾಧಿಸಬಹುದು ಎಂದು ನಂಬಲಾಗಿದೆ. ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡಾಗ ಒಳಜಗಳಗಳು ನಿರ್ಮೂಲವಾಗಬಹುದು. ಈ ಧ್ಯೇಯ ದಿಂದ ಇತ್ತೀಚೆಗೆ ಭಾರತದಲ್ಲಿ ಕೆಲವು ಭಾಷಾಕೇಂದ್ರಗಳನ್ನು ತೆರೆದು ಅಲ್ಲಿ ಅನ್ಯಭಾಷೆ ಗಳನ್ನು ಕಲಿಸಲಾಗುತ್ತಿದೆ. ಭಾರತದ ಪ್ರಮುಖ ಭಾಷೆಗಳೆಲ್ಲವನ್ನೂ ಇಲ್ಲಿ ಕಲಿಸ ಲಾಗುತ್ತಿದೆ. ಹತ್ತು ತಿಂಗಳ ಅವಧಿಯಲ್ಲಿ ಒಂದು ಭಾಷೆಯನ್ನು ಕಲಿಯುವ ಸಾಹಸ ವನ್ನು ನಾವಿಲ್ಲಿ ನೋಡಬಹುದು. ಇಲ್ಲಿ ಭಾಷೆ ಕಲಿಯುವವರೆಲ್ಲ ವಯಸ್ಕರು; ಅಧ್ಯಾಪಕರು. ಹೀಗೆ ಕಲಿತ ಭಾಷೆಯನ್ನು ಅವರು ಅವರ ರಾಜ್ಯದಲ್ಲಿ ಮಕ್ಕಳಿಗೆ ಕಲಿಸಬೇಕು. ಅಂದರೆ ಮಾಧ್ಯಮಿಕ ತರಗತಿಯಲ್ಲಿ ಅನ್ಯಭಾಷೆಯನ್ನು ಕಲಿಸಬೇಕಾಗು ತ್ತದೆ. ಇಂಥ ಸಂದರ್ಭದಲ್ಲಿ ಸಾಮಾನ್ಯ ಅಧ್ಯಾಪಕನಿಗಿರಬೇಕಾದ ಅರ್ಹತೆಗಳಷ್ಟೇ

ಇದ್ದರೆ ಸಾಲದು, ಅದರೊಟ್ಟಿಗೆ ಇನ್ನೂ ಕೆಲವು ವಿಶೇಷ ಅರ್ಹತೆಗಳಿರಬೇಕೆಂದು ಕೆಲವು ಭಾಷಾವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ; ಕೆಲವು ಅಂಶಗಳನ್ನೂ ಸೂಚಿಸಿದ್ದಾರೆ. ಇಂಥ ಅರ್ಹತೆಗಳನ್ನು ಸೂಚಿಸಿರುವುದರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿರುವ ಆಧುನಿಕ ಭಾಷಾ ಸಂಸ್ಥೆಯೂ ಒಂದು. ಈ ಸಂಸ್ಥೆ ಹೊರಪಡಿಸಿರುವ ಅರ್ಹತೆಗಳ ಪಟ್ಟಿ ಅಲ್ಲಿಯ ಸದಸ್ಯರಿಂದ ತಯಾರಿಸಲ್ಪಟ್ಟು ಹದಿನೆಂಟು ವಿದೇಶೀ ಭಾಷಾ ಸಂಸ್ಥೆಗಳಿಂದ ಅಂಗೀಕರಿಸಲ್ಪಟ್ಟಿದೆ.

ಅಮೆರಿಕಾ ಆಧುನಿಕ ಭಾಷಾ ಸಂಸ್ಥೆ (The Modern Language Association of America) ಪ್ರಕಟಪಡಿಸಿರುವ ಅರ್ಹತೆಗಳು ಕೆಳಕಂಡಂತೆ ಇವೆ. ಇವುಗಳನ್ನು ಸಂಕ್ಷಿಪ್ತವಾಗಿ ಎಂ.ಎಲ್.ಎ. ಅರ್ಹತೆಗಳೆಂದು ಕರೆಯುವುದುಂಟು.

(1) ಶ್ರವ್ಯ – ಗ್ರಹಣ. (Aural Comprehension)

(2) ಮಾತನಾಡುವುದು (Speaking) (3) ಓದುವುದು (Reading)

(4) ಬರವಣಿಗೆ (Writing) (5) ಭಾಷಾ ವಿಶ್ಲೇಷಣೆ (Language analysis) (6) ಸಂಸ್ಕೃತಿ (Culture) ಮತ್ತು (7) ವೃತ್ತಿ ತಯಾರಿ (Professional Preparation).

ಅನ್ಯಭಾಷಾ ಆಧ್ಯಾಪನದಲ್ಲಿ ವಿದ್ಯಾರ್ಥಿಗೆ ಪಾಠ ಹೇಳಿಕೊಡುವಾಗ ಅಧ್ಯಾಪಕ ಮೇಲ್ಕಂಡ ಅರ್ಹತೆಗಳನ್ನು ಪಡೆದಿರಬೇಕೆಂದು ಅಮೆರಿಕದ ಇನ್ನಿತರ ವೃತ್ತಿನಿರತ ಭಾಷಾ ಅಧ್ಯಾಪಕರೂ ಅಭಿಪ್ರಾಯಪಟ್ಟಿದ್ದಾರೆ. ಈ ಅರ್ಹತೆಗಳನ್ನು ಶ್ರೇಷ್ಠ (Superior), ಉತ್ತಮ (Good) ಮತ್ತು ಸಾಮಾನ್ಯ (Minimal) ಎಂಬ ತರತಮ ಪಾತಾಳಿಯಮೇಲೆ ವಿವರಿಸಲಾಗಿದೆ. ಇದರ ವಿವರಣೆಯನ್ನು ಕೆಳಗೆ ಕೊಡಲಾಗಿದೆ.

	ಶ್ರೇಷ್ಠ (Superior)	ಉತ್ತಮ (Good)	ಸಾಮಾನ್ಯ (Minimal)
1. ಶ್ರವ್ಯ-ಗ್ರಹಣ (Aural Comprehension)	ನಾಟಕ, ಸಿನಿಮಾ, ಸಮೂಹ ಸಂಭಾಷಣೆ ಮುಂತಾದ ಹಲ ತೆರನ ಶಿಷ್ಟ ನುಡಿಯನ್ನು ಮೂಲಕ್ಕೆ ಧಕ್ಕೆ ಬಾರದಂತೆ ಸುಲಭವಾಗಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿರಬೇಕು	ಸಾಧಾರಣ ವೇಗದ ಸಂಭಾಷಣೆ, ಭಾಷಣ ಮತ್ತು ಸುದ್ದಿ ಪ್ರಸಾರಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ವಿರಬೇಕು	ಸ್ಥಳೀಯ ವಿದ್ಯಾವಂತನೊಬ್ಬ ಸಾಮಾನ್ಯ ಸಂಗತಿಯೊಂದರ ಮೇಲೆ ಏನು ಮಾತ ನಾಡುತ್ತಾನೋ ಅದನ್ನು ಕೇಳಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಿರಬೇಕು.
2. ಮಾತನಾಡುವುದು (Speaking)	ಶಬ್ದಸಂಪತ್ತು, ಸ್ವರವಿನ್ಯಾಸ ಮತ್ತು ಉಚ್ಚಾರಣೆಗಳನ್ನು ಪಯೋಗಿಸಿಕೊಂಡು ಮಾತೃಭಾಷೆಯವರಂತೆಯೇ ಮಾತನಾಡುವ ಸಾಮರ್ಥ್ಯವನ್ನು ಪಡೆದಿರಬೇಕು.	ಸಾಧಾರಣ ವೇಗ, ಶುದ್ಧ ಉಚ್ಚಾರಣೆ ಗಳನ್ನೊಳಗೊಂಡು ಎಡರುತೊಡರಿಲ್ಲದೆ ಶಬ್ದ ಮತ್ತು ವಾಕ್ಯಗಳ ಮೇಲೆ ಹಿಡಿತ ವನ್ನಿಟ್ಟುಕೊಂಡು ಸರಾಗವಾಗಿ ಮಾತ ನಾಡುವ ಸಾಮರ್ಥ್ಯವನ್ನು ಪಡೆದಿರ ಬೇಕು.	ಮೊದಲೇ ಸಿದ್ಧಮಾಡಿಕೊಂಡು ವಿಷಯ ಗಳ ಮೇಲೆ ಮಾತನಾಡುವುದು. (ಉದಾ: ತರಗತಿಯ ಪಾಠಗಳು). ಮಾತೃಭಾಷೆಯ ವರೊಟ್ಟಿಗೆ ಮಾತನಾಡುವಾಗ ಸಾಮಾನ್ಯ ಉಕ್ತಿಗಳನ್ನೂ ತನಗೆ ಒಗ್ಗಿದ ಉಚ್ಚಾರ ವನ್ನೂ ಬಳಸುವ ಸಾಮರ್ಥ್ಯ ಹೊಂದಿರ ಬೇಕು.
3. ಓದುವುದು (Reading)	ತನ್ನ ಮಾತೃಭಾಷೆಯಷ್ಟೇ ಸರಾಗವಾಗಿ ಕ್ಲಿಷ್ಟಪಾಠಿಕೆಗಳಾದ ಪ್ರಬಂಧ, ಸಾಹಿತ್ಯ ವಿಮರ್ಶೆ ಮುಂತಾದವುಗಳನ್ನು ಓದುವ ಸಾಮರ್ಥ್ಯವಿರಬೇಕು.	ಸ್ವಲ್ಪ ಕ್ಲಿಷ್ಟವಾದ ಗದ್ಯ ಮತ್ತು ಪದ್ಯಗಳನ್ನು ಓದಿ ತಕ್ಷಣ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಿರ ಬೇಕು.	ಸುಲಭವಾದ ಪಾರಿಭಾಷಿಕೇತರ ಗದ್ಯ ವನ್ನು ಓದಿ ಅರ್ಥಮಾಡಿ (ಭಾಷಾಂತರಿ ಸದೆ) ಕೊಳ್ಳುವ ಸಾಮರ್ಥ್ಯವಿರಬೇಕು.

	ಶ್ರೇಷ್ಠ (Superior)	ಉತ್ತಮ (Good)	ಸಾಮಾನ್ಯ (Minimal)
4. ಬರವಣಿಗೆ (Writing)	ವಿಶಿಷ್ಟ ಪದಪ್ರಯೋಗಗಳನ್ನು ಬಳಸಿಕೊಂಡು ಸರಳವಾದ ಭಾಷೆಯಲ್ಲಿ, ವಿಶಿಷ್ಟ ಶೈಲಿಯಿಂದ ವಿಭಿನ್ನ ವಿಷಯಗಳ ಬಗ್ಗೆ ಬರೆಯುವ ಸಾಮರ್ಥ್ಯ ಹೊಂದಿರಬೇಕು.	ಸ್ಪಷ್ಟ ಮತ್ತು ಕರಾರುವಾಕ್ಕಾದ ಶಬ್ದಗಳು, ವಿಶಿಷ್ಟ ಪದ ಪ್ರಯೋಗ ಮತ್ತು ವಾಕ್ಯರಚನೆಯನ್ನು ಪ್ರಯೋಗಿಸಿಕೊಂಡು ಸರಳ ಪ್ರಬಂಧವನ್ನು ರಚಿಸುವ ಸಾಮರ್ಥ್ಯ ಪಡೆದಿರಬೇಕು.	ಬಾಯಿಪಾಠವಾದ ಅಥವಾ ತರಗತಿಯಲ್ಲಿನ ವಿಷಯಗಳನ್ನು, ಸಣ್ಣ ಪತ್ರಗಳನ್ನು ತಪ್ಪಿಲ್ಲದ ವಾಕ್ಯ ಅಥವಾ ಪ್ಯಾರಾಗಳಲ್ಲಿ ಬರೆಯುವ ಸಾಮರ್ಥ್ಯವಿರಬೇಕು.
5. ಭಾಷಾ ವಿಶ್ಲೇಷಣೆ (Language analysis)	ಭಾಷಾ ಬೋಧನೆಯ ಸನ್ನಿವೇಶಕ್ಕೆ ತಕ್ಕಂತೆ ವಿವರಣಾತ್ಮಕ, ತೌಲನಿಕ ಮತ್ತು ಐತಿಹಾಸಿಕ ಭಾಷಾವಿಜ್ಞಾನವನ್ನು ಅಳವಡಿಸಿಕೊಳ್ಳುವ ಸಾಮರ್ಥ್ಯವಿರಬೇಕು.	ಭಾಷೆಯ ಐತಿಹಾಸಿಕ ಬೆಳವಣಿಗೆ ಮತ್ತು ಸದ್ಯದ ಅವಸ್ಥೆ ಮತ್ತು ಲಕ್ಷಣಗಳ ಬಗ್ಗೆ ಮೂಲ ತಿಳಿವಳಿಕೆಯನ್ನು ಪಡೆದಿರಬೇಕು. ಜೊತೆಗೆ ಗ್ರಾಂಥಿಕ ಮತ್ತು ಆಡು ಭಾಷೆಗಳ ಮಧ್ಯೆ ಇರುವ ವೈಲಕ್ಷಣ್ಯವನ್ನೂ ಅರಿತಿರಬೇಕು.	ವ್ಯವಹಾರದಲ್ಲಿ ಬಳಸುವುದಕ್ಕೆ ಬೇಕಾಗುವಷ್ಟು ಧ್ವನಿ ಮತ್ತು ವ್ಯಾಕರಣ ನಮೂನೆಗಳ ಮೇಲೆ ಹಿಡಿತ ಸಾಧಿಸಿರಬೇಕು. ತನ್ನ ಮಾತೃಭಾಷೆಗಿಂತ ಈ ವ್ಯವಸ್ಥೆ ಹೇಗೆ ಭಿನ್ನ ಎಂಬುದನ್ನು ಅರಿತಿರಬೇಕು.
6. ಸಂಸ್ಕೃತಿ (Culture)	ತಾನು ಕಲಿಸುವ ಭಾಷೆಯ ಜನರ ವೈಯಕ್ತಿಕ ಸಂಪರ್ಕ, ಆ ನಾಡಿನ ಸಂಚಾರ ಮತ್ತು ಕೆಲದಿನಗಳ ಮಟ್ಟಿಗೆ ಆ ನಾಡಿನಲ್ಲೇ ತಂಗುವುದರ ಮೂಲಕ ಅಲ್ಲಿಯ ಸಂಸ್ಕೃತಿಯನ್ನು ಅರ್ಥಮಾಡಿಕೊಂಡಿರಬೇಕು. ಅರ್ಥಮಾಡಿಕೊಂಡ ಸಂಸ್ಕೃತಿಯನ್ನು ವಿವರಣಾತ್ಮಕವಾಗಿ ಹೇಳುವುದು, ಅಲ್ಲಿಯ ಸಾಹಿತ್ಯ, ಕಲೆಗಳನ್ನು ವ್ಯಾಪಕವಾಗಿ ಅಭ್ಯಾಸ ಮಾಡುವುದರ ಮೂಲಕ ಇನ್ನೂ ಆಳವಾಗಿ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿರಬೇಕು.	ಕೆಲವು ಸಾಹಿತ್ಯ ಕೃತಿಗಳ ಬಗ್ಗೆ ಸ್ಥೂಲ ಮಾಹಿತಿಯನ್ನು ಪಡೆದಿರಬೇಕು. ಆ ಸಂಸ್ಕೃತಿ ತನ್ನ ಸಂಸ್ಕೃತಿಗಿಂತ ಎಲ್ಲಿ ಹೇಗೆ ಭಿನ್ನ ; ಅವರ ಜನಪದ ಮತ್ತು ನಾಗರೀಕತೆಯ ಧ್ಯೇಯ ಧೋರಣೆಗಳೇನು ಎಂಬುದನ್ನು ತಿಳಿದುಕೊಳ್ಳುವ ಸಾಮರ್ಥ್ಯವಿರಬೇಕು.	ಅನ್ಯ ಜನಾಂಗದ ಭೂಗೋಳ, ಇತಿಹಾಸ, ಸಾಹಿತ್ಯ, ಕಲೆ, ಸಾಮಾಜಿಕ ರೂಢಿಗಳ ಮತ್ತು ಸಮಕಾಲೀನ ನಾಗರೀಕತೆ ಇವುಗಳನ್ನು ತಿಳಿಸುವ ಸಾಧನೆ ಭಾಷೆ. ಆದ್ದರಿಂದ ಭಾಷೆ ಮಾನವನ ಸಂಸ್ಕೃತಿಯನ್ನು ರೂಪುಗೊಳಿಸುತ್ತದೆ, ಜ್ಞಾನ ಪ್ರಸಾರ ಮಾಡುತ್ತದೆ ಎಂದು ಅರಿತು ಅದನ್ನು ಉಪಯೋಗಿಸಿ ಕೊಳ್ಳುವ ಸಾಮರ್ಥ್ಯವಿರಬೇಕು.

	ಶ್ರೇಷ್ಠ (Superior)	ಉತ್ತಮ (Good)	ಸಾಮಾನ್ಯ (Minimal)
7. ವೃತ್ತಿತಯಾರಿ (Professional Preparation)	ಅಂಗೀಕೃತ ಬೋಧನಾ ವಿಧಾನದಲ್ಲಿ ಪ್ರಾವೀಣ್ಯತೆಯಿರಬೇಕು. ಜೊತೆಗೆ ಹೊಸ ವಿಧಾನ ಹಾಗೂ ತಂತ್ರಗಳನ್ನು ಅಳವಡಿಸಿಕೊಂಡು ಅವುಗಳನ್ನು ಪ್ರಯೋಗಿಸುವ ಹಾಗೂ ಪರಿಶೀಲಿಸುವ ಸಾಮರ್ಥ್ಯವಿರಬೇಕು.	ಬೋಧನಾ ಸನ್ನಿವೇಶಕ್ಕೆ ತಕ್ಕಂತೆ ಹೊಸ ವಿಧಾನ ಮತ್ತು ತಂತ್ರಗಳನ್ನು ಅಳವಡಿಸಿಕೊಳ್ಳುವ ಸಾಮರ್ಥ್ಯವಿರಬೇಕು. ಮತ್ತು ತಾನು ಬೋಧಿಸುವ ವಿಧಾನವನ್ನು ಬೇರೆ ಪಠ್ಯಕ್ರಮಗಳಿಗೂ ಸಂಬಂಧಿಸಿದಂತೆ ಅಳವಡಿಸಿಕೊಳ್ಳಬೇಕು.	ತನಗೆ ಗೊತ್ತಿರುವ ಕೆಲವು ವಿಧಾನ ಮತ್ತು ತಂತ್ರಗಳನ್ನು ಪಯೋಗಿಸಿಕೊಂಡು ಪರಿಣಾಮಕಾರಿಯಾಗಿ ಭಾಷೆಯನ್ನು ಬೋಧಿಸುವ ಅರ್ಹತೆಯಿರಬೇಕು.

ಮೇಲೆ ತಿಳಿಸಿದ ಈ ಏಳು ಅರ್ಹತೆಗಳನ್ನು ಪಡೆದುಕೊಂಡ ಅಧ್ಯಾಪಕರು ಅನ್ಯಭಾಷೆಯನ್ನು ಸಮರ್ಥನೀಯವಾಗಿ ಕಲಿಸಬಲ್ಲರು ಎಂಬುದನ್ನು ಪ್ರಾಯೋಗಿಕವಾಗಿ ಸಮರ್ಥಿಸಲಾಗಿದೆ.

ಪಾಟೀಲರ ನಾಟಕಗಳು–ಒಂದು ಪ್ರತಿಕ್ರಿಯೆ

ಭಾರತಾದ್ರಿ

ಸಂವೇದನೆಗಳ ಸಂವಹನಕ್ಕೆ ನಾಟಕ ವಿಶಿಷ್ಟ ಮಾಧ್ಯಮ; ಮಾತುಗಳ ಮೂಲಕ ಮಾತ್ರವಲ್ಲದೆ, ಅಭಿನಯದ ಮೂಲಕ, ರಂಗಸಾಧ್ಯತೆಗಳ ಮೂಲಕ—ಅರ್ಥವನ್ನು ಸಂವಹನಿಸುವ ಸಾಧ್ಯತೆ ಇರುವುದರಿಂದ ಇದು ಉಳಿದವಕ್ಕಿಂತ ವಿಭಿನ್ನ; ಹಾಗೂ ವಿಶಿಷ್ಟ. ಎಲ್ಲಾ ಕಲೆಗಳ ಅಂಶಗಳೂ ಸಮರಸಗೊಂಡಿವೆ ಎಂಬ ಕಾರಣಕ್ಕಿಂತ, ಎಂಥ ಸಂಕೀರ್ಣ ಸಮಸ್ಯೆಯನ್ನಾಗಲೀ ಅದರ ಎಲ್ಲ ತೀವ್ರತೆಯೊಂದಿಗೆ ವಿಶ್ಲೇಷಿಸುವ ಸಾಧ್ಯತೆ ಇದೆ ಎಂಬ ಅಂಶದಿಂದ ಇದನ್ನು ಸಂಕೀರ್ಣ ಕಲೆ ಎಂದು ಕರೆದರೆ ಅರ್ಥಪೂರ್ಣವಾಗುತ್ತದೆ.

ಇತ್ತೀಚೆಗೆ ಬರುತ್ತಿರುವ ಕೆಲವು ಕನ್ನಡ ನಾಟಕಗಳು ಕೇವಲ ತಂತ್ರದ ಹಂತದಲ್ಲಿಯೇ ಮಹತ್ವವೆನಿಸಿ ಉಳಿದೆಲ್ಲ ವಿಷಯಗಳಲ್ಲಿ ಸೊರಗಿ ನಿಲ್ಲುತ್ತಿವೆ. ತಂತ್ರ ಅಪ್ರಧಾನವೆಂದು ನನ್ನ ಅರ್ಥವಲ್ಲ; ಆದರೆ ಸಂವೇದನೆ ಸಂವಹನಗೊಳ್ಳುವ ಪ್ರಕ್ರಿಯೆಯಲ್ಲಿಯೇ ತಮ್ಮ ವಿಶಿಷ್ಟತೆಯನ್ನು ವ್ಯಕ್ತಪಡಿಸುತ್ತಾ ಒಟ್ಟಾರೆಯ ಅರ್ಥವನ್ನು ಬದಿಗೆ ಸರಿಸಬಾರದಷ್ಟೆ.

ಪಾಶ್ಚಾತ್ಯ ಸಂವೇದನೆಗಳಿಂದ ಪ್ರೇರಿತರಾಗಿದ್ದರೂ ಕೂಡ ಪ್ರಕೃತ ಜೀವನ ಗತಿಗೆ ತಮ್ಮ ಮನಸ್ಸು ಪಡಿಮಿಡಿದಂತೆ, ಆ ಸಂವೇದನೆಯ ತೀವ್ರತೆಗನುಗುಣವಾಗಿ ತಂತ್ರವನ್ನು ದಕ್ಕಿಸಿಕೊಳ್ಳುವ ಚಂದ್ರಶೇಖರ ಪಾಟೀಲರು ಮೇಲಿನ ಮಾತುಗಳಿಗೆ ಅಪವಾದ ಎಂಬುದನ್ನು ಈ ಸಂದರ್ಭದಲ್ಲಿ ತೀವ್ರವಾಗಿ ಗಮನಿಸಬೇಕಾಗುತ್ತದೆ. 'ಕೊಡೆ'ಗಳಂಥ ಅಸಂಗತನಾಟಕ, ಶತಶತಮಾನಗಳಿಂದ ಜನರಿಗೆ ಮೋಸಮಾಡುತ್ತ ಆದರೆ ಹೊಟ್ಟೆ ಹೊರೆದು ಕೊಳ್ಳುತ್ತ ಬಂದ ಬ್ರಾಹ್ಮಣ ಪ್ರಜ್ಞೆಯನ್ನು ಗೇಲಿ ಎಬ್ಬಿಸಿದ 'ಗೋಕರ್ಣದ ಗೌಡಶಾನಿ', ಕನಸಿನ ರಮ್ಯತೆ, ಜೀವನದ ವಾಸ್ತವತೆಗಳ ನಡುವಣ ಕೊರಕಲಿನಲ್ಲಿ ಕೊರಗಿ ಲಯವಾಗುವ ಬಸವರಾಜನಂಥ ವ್ಯಕ್ತಿತ್ವವನ್ನು ಕಡೆಯುವ 'ಅಪ್ಪ'. ಜಾನಪದ ಸತ್ವವನ್ನು ಅರ್ಥಪೂರ್ಣವಾಗಿ ಅರ್ಥದ ಅಭಿವ್ಯಕ್ತಿಗಾಗಿ ದುಡಿಸಿ ಕೊಂಡಿರುವ 'ಟಿಂಗರ ಬುಡ್ಡಣ್ಣ'-ಹೀಗೆ ವೈವಿಧ್ಯಮಯ ವೈಶಿಷ್ಟ್ಯಪೂರ್ಣ ಸೃಷ್ಟಿ ಪಾಟೀಲರದ್ದು. ದಿಟವಾದ ಬರಹಗಾರ ಜೀವನ ಬದಲಾದಂತೆ ತಾನೂ ಬದಲಾಗುತ್ತಾನೆ, ಅರ್ಥಪೂರ್ಣವಾದ ಪ್ರತಿಕ್ರಿಯೆ ನೀಡುತ್ತಾನೆ ಎಂದು ನಂಬಿದ ನನ್ನಂಥವರಿಗೆ 'ಪಾಂಚಾಲಿ'ಯಲ್ಲಿ ಪಾಟೀಲರು 'ಬೀದಿ'ಗೆ ಇಳಿದದ್ದು ಮತ್ತೂ ಅರ್ಥವತ್ತಾದ ಘಟ್ಟ ಅನ್ನಿಸುತ್ತದೆ.

ಇತ್ತೀಚೆಗೆ ಪಾಟೀಲರು ಬೀದಿಗೆ ಇಳಿದಿದ್ದಾರೆ ಅಂದರೆ ಪ್ರಸ್ತುತ ಸಮಸ್ಯೆಗಳಲ್ಲಿ ಮಿಳಿತಗೊಂಡು ಪ್ರತಿಕ್ರಿಯಿಸಲೆತ್ನಿಸಿದ್ದಾರೆ ಎಂದು ಅರ್ಥ. 'ಜಗದಂಬೆಯ ಬೀದಿ ನಾಟಕ' ನಡೆಯುವುದು ಒಂದು ನಡು ಬೀದಿಯಲ್ಲಿ. ಅದರ ಪರಿಕರ ಅಂದರೆ ಒಂದು ಸ್ಟೂಲು ಮಾತ್ರ. ಅನಟ, ಬನಟ, ಕನಟರು ಮತ್ತು ನಟಿ ತಮ್ಮ ತಮ್ಮ ಪಾತ್ರ ಅವಶ್ಯಕ ಅನ್ನಿಸಿದಾಗ ಜನಸಂದಣಿಯಿಂದ ನುಸುಳಿಬಂದು ಅಭಿನಯಿಸುತ್ತಾರೆ. ನಾಟಕ ಶುರುವಾಗಿ ಸ್ವಲ್ಪ ಹೊತ್ತಿನಲ್ಲಿಯೇ ನಮಗೆ ಅರ್ಥವಾಗುತ್ತದೆ : ಇದು ನಮ್ಮದೇ ನಾಟಕ ಅಂತ. ಅಂದರೆ ಇಲ್ಲಿ ನಡೆಯುವ ಕ್ರಿಯೆಯನ್ನೆಲ್ಲಾ ನಾವು ದಿನ ಬೆಳಗಾದರೆ ಅನುಭವಿಸಿರುತ್ತೇವೆ. ಆದರೆ ಪ್ರಜ್ಞೆಗೆ ತಂದುಕೊಂಡಿರುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಬೇರು ಬಿಟ್ಟಿರುವ ನಿರಂಕುಶ ಪ್ರಭುತ್ವವನ್ನು ಪಾಟೀಲರು ಇಲ್ಲಿ ಗೇಲಿ ಎಬ್ಬಿಸಿದ್ದಾರೆ. ಆದರೆ ಈ ಗೇಲಿಯ ಹಿಂದೆ ಅದಕ್ಕಾಗಿ ವ್ಯಥೆ ಇದೆ; ಅದನ್ನು ಒಪ್ಪಿದ ಈ ಕುರಿಮಂದೆ ಅರ್ಥಾತ್ ಜನಸಂದಣಿಯ ಬಗ್ಗೆ ಆರೋಗ್ಯಕರವಾದ ಆಕ್ರೋಶವಿದೆ.

ಇಂದಿರಾ, ಅರಸು ಎಲ್ಲರನ್ನೂ ಒಳಗೊಂಡು ಗೇಲಿ ಎಬ್ಬಿಸುತ್ತ ಪ್ರಸುತ್ತ ಸಮಸ್ಯೆಗಳನ್ನು ಅದರ ನಗ್ನತೆಯೊಂದಿಗೆ ಬಹಿರಂಗಪಡಿಸುವ ಮಾಸ್ಟರ್ ಹಿರಣ್ಣಯ್ಯನವರಿಗೂ ಪಾಟೀಲರಿಗೂ ಈ ನಾಟಕದ ಸಂದರ್ಭದಲ್ಲಿ ಏನು ವ್ಯತ್ಯಾಸವಿದೆ ಎಂದು ನನ್ನ ಸ್ನೇಹಿತರೊಬ್ಬರು ಕೇಳಿದರು. ಆಗ ನಾನು ಕೊಟ್ಟ ಉತ್ತರವಿದು : ಪಾಟೀಲರ ಈ ಬೀದಿ ನಾಟಕ ಹಿರಣ್ಣಯ್ಯನವರ ರಾಜಕೀಯ ನಾಟಕವಲ್ಲ, ಇದು ಪ್ರಸ್ತುತ ಸಮಸ್ಯೆಗಳ ಕಲಾತ್ಮಕ ಅಭಿವ್ಯಕ್ತಿ, ಮಾತ್ರವಲ್ಲ – ಇದು ಒಂದು ದೇಶದ, ಇಷ್ಟೇಪರಿಸರದ, ಎಂಬ ಕಟ್ಟುಗಳನ್ನು ಹಾಕಿಕೊಳ್ಳದೆ ತನ್ನ ಅರ್ಥವನ್ನು ವಿಸ್ತರಿಸಿಕೊಳ್ಳುತ್ತದೆ; ಪ್ರಜಾಪ್ರಭುತ್ವದಲ್ಲಿ ಬೇರುಬಿಟ್ಟ ನಿರಂಕುಶ ಪ್ರಭುತ್ವದ ಫಲಗಳನ್ನು ಸಂಕೇತಿಸುತ್ತಾರೆ.

2

'ಕೊಡೆಗಳು'—ಒಂದು ಅಸಂಗತ ನಾಟಕ. ಅಸಂಗತ ನಾಟಕ ಒಂದರ್ಥದಲ್ಲಿ ಬದುಕಿಗೆ ಹತ್ತಿರ; ಇನ್ನೊಂದರ್ಥದಲ್ಲಿ ದೂರ. ನಿಜವಾದ ಬದುಕು ಬರಿಯ ಬೆತ್ತಲು. ಅದಕ್ಕೆ ಚಡ್ಡಿ ಹಾಕಿ, ಅಂಗಿತೊಡಿಸಿ ಅಸಂಗತವಾಗಿಸುತ್ತೇವೆ. ಅಸಂಗತ ನಾಟಕ ಈ ಅಸಾಂಗತ್ಯವನ್ನು ಆಸ್ಫೋಟಿಸಿ ಬದುಕನ್ನು ಅದರ ಎಲ್ಲ ತೀವ್ರತೆಯೊಂದಿಗೆ ಅಭಿವ್ಯಕ್ತಿಸಬಯಸುತ್ತವೆ. ಒಂದು ವ್ಯವಸ್ಥೆಯ ಪರಿಮಿತಿಯೊಳಗೆ ಬದುಕುವಾಗ ನಾವು ಆ ವ್ಯವಸ್ಥೆಯ ಕೆಲ ನಿಯಮುಗಳಿಗೆ ಬದ್ಧವಾಗಿರುತ್ತೇವೆ ; ಬದುಕಿನ ಮೂಲಭೂತ ಆಕಾಂಕ್ಷೆಗಳನ್ನು ವಿರೋಧಿಸಿರುತ್ತೇವೆ ಎಂಬುದೇ ಅಸಂಗತನಾಟಕದ ಪ್ರೇರಣೆ ಅನ್ನಿಸುತ್ತದೆ.

ಇಲ್ಲಿ 'ಕ್ಷ' ಕೊಡೆ ಮುಚ್ಚಿ ಕೂತವನು; 'ಯಾ' ಕೊಡೆಬಿಚ್ಚಿ ನಿಂತವನು. ಇಬ್ಬರೂ ವಿಚಿತ್ರವಾಗಿ ಮಾತಾಡುತ್ತಾ ಆತ್ಮೀಯರಾಗುತ್ತಾರೆ. ಒಬ್ಬನಿಗೆ ಮುಚ್ಚಿದರೆ ಎಲ್ಲಿ ಬೆತ್ತಲಾಗುತ್ತೇನೋ ಎಂಬ ಭಯ. ಮತ್ತೊಬ್ಬನಿಗೆ ಬಿಚ್ಚಿದರೆ ಎಲ್ಲಿ ಬೆಲ್ಟ್ ಕಳಚಿ ಪ್ಯಾಂಟು, ಅಂಗಿ ಎಲ್ಲೆಡೆ ಗಾಳಿ ತುಂಬಿ ನಗ್ನವಾಗಿ ಬಿಡುತ್ತೇನೋ ಎಂಬ ಹೆದರಿಕೆ. ಒಂದರ್ಥದಲ್ಲಿ ಅವರು ಅಭಿನ್ನರು; ಮತ್ತೊಂದರ್ಥದಲ್ಲಿ ಇಬ್ಬರ ನಡುವೆಯೂ ಅಸಾಂಗತ್ಯವಿದೆ. ಕ್ರಮೇಣ ಮನುಷ್ಯರು ಒಬ್ಬರಿಗೆ ಒಬ್ಬರು ಕನ್ನಡಿಯಾಗುತ್ತಾರೆ; ಅವರು ಬದಲಾಗುತ್ತಾರೆ; ಆದರೆ ನಗ್ನಸ್ಥಿತಿಯಲ್ಲಿರಲಾರದೆ ಮತ್ತೆ ಮಾಮೂಲು ಪರಿಸ್ಥಿತಿಗೆ ಮರಳುತ್ತಾರೆ.

ಮಳೆ ಬಿಸಿಲು ಇತ್ಯಾದಿ ನೈಸರ್ಗಿಕ ಕ್ರಿಯೆಗಳಿಗೆ ಪ್ರತಿಕ್ರಿಯೆಯಾಗಿ ಕೊಡೆ ಹಿಡಿದು ಕೂತ ಮನುಷ್ಯ ಕ್ರಮೇಣ 'ಹಿಡಿಯುವಿಕೆ'ಯನ್ನು ರೂಢಿಯಾಗಿಸಿ ಕೊಂಡಿದ್ದಾನೆ; ಬೇಕು ಬೇಡಗಳೆಂಬ ಪರಾಮರ್ಶನ ಪ್ರಜ್ಞೆ ಆತನಲ್ಲಿ ಇರದು; ಅದರಿಂದ ಆ ರೂಢಿ ಅಸಂಗತವಾಗಿಬಿಟ್ಟಿದೆ — ಎಂಬುದೇ ನಾಟಕಕಾರ ಹೊರಡಿಸುವ ಅರ್ಥ.

ಪಾಟೀಲರ ಲವಲವಿಸುವ ಮಾತುಗಾರಿಕೆ, ಆ ಮಾತುಗಾರಿಕೆಯನ್ನು ತಮ್ಮ ಅಭಿನಯದ ಮೂಲಕ ಅರ್ಥಪೂರ್ಣವಾಗುವ ನಟರು, ವಿಶಿಷ್ಟ ಸಂದರ್ಭಗಳಲ್ಲಿ ಮಾತುಗಳ ಮೇಲೆ ಒತ್ತುಕೊಡುವ ಮೂಲಕ ಅರ್ಥವಂತಿಕೆಯನ್ನು ದಟ್ಟವಾಗಿಸುವ ಸಾಧ್ಯತೆಯನ್ನು ದುಡಿಸಿಕೊಳ್ಳುವ ನಿರ್ದೇಶಕ–ಇವರೆಲ್ಲರಿಂದ ಕನ್ನಡ ರಂಗಭೂಮಿಯ ಮೇಲೆ ಅರ್ಥಪೂರ್ಣವಾಗಿ ಅಳವಡುವ ಏಕೈಕ ಅಬ್ಸರ್ಡ್ ನಾಟಕವಾಗಿದೆ'-ಕೊಡೆಗಳು'.

3

'ಟಿಂಗರಬುಡ್ಡಣ್ಣ' ನಾಟಕವನ್ನು ಕುರಿತು ಎಚ್. ಎಂ. ಚನ್ನಯ್ಯನವರು, 'ನಾಟಕ ಶ್ರೇಷ್ಠ ಅನ್ನಿಸಿದರೂ ಅಭಿವ್ಯಕ್ತಿ ಹೊಟ್ಟೆಕಿಚ್ಚು ಬರಿಸುವಷ್ಟು ಸಮರ್ಥ ಆಗಿದ್ದರೂ ಅವರು ವೈಯಕ್ತಿಕ ಜರೂರಿನಿಂದ ಬರೆದಂತೆ ಕಾಣುವುದಿಲ್ಲ', ಎಂದಿದ್ದಾರೆ. ಬಹುಶಃ ಈ ನಾಟಕದ ಪರಿಕಲ್ಪನೆ ಪಾಟೀಲರ ವೈಯಕ್ತಿಕ ಜರೂರಿನದ್ದಲ್ಲ, ಅದು ಶತಮಾನಗಳಿಂದ ನಮ್ಮಲ್ಲಿ ಬೇರು ಬಿಟ್ಟು ಫಲಕೊಟ್ಟು ವಟವೃಕ್ಷವಾಗಿರುವ ಬ್ರಾಹ್ಮಣ ಪ್ರಜ್ಞೆಯ ಪ್ರಭಾವವಲಯದಲ್ಲಿ ಸಂಭವಿಸಿದ್ದು ಅನ್ನಿಸುತ್ತದೆ. ಈ ಮಾತನ್ನು ವಿಶದಪಡಿಸುವ ಮುನ್ನ 'ಸಾಹಿತ್ಯವಾರ್ಷಿಕ'ದಲ್ಲಿ ವಿಮರ್ಶಿಸಿದ ಕೆ. ಮರುಳಸಿದ್ದಪ್ಪನವರ ಮಾತುಗಳನ್ನು ನೋಡೋಣ.

"ಟಿಂಗರ ಬುಡ್ಡಣ್ಣ ಪುರಾಣದ ಮೋಹಿನಿ ಭಸ್ಮಾಸುರದ ಕತೆಯಂತೆ ಒಂದು ನಾಟಕೀಯ ಪ್ರತಿಮೆಯಾಗಿದೆ. ಶಕ್ತಿ ಸಂಚಯನ, ಯಾವಾಗಲೂ ಒಳ್ಳೆಯ

ಪರಿಣಾಮವನ್ನೇ ಉಂಟುಮಾಡುವುದಿಲ್ಲ; ಅಧಿಕಾರದ ಮದ ಯಾವುದನ್ನೂ ಲೆಕ್ಕಿಸುವುದಿಲ್ಲ; ಆದರೆ ಅಪ್ರತಿಮಶಕ್ತಿ ತನ್ನ ವಿನಾಶವನ್ನು ತನ್ನಲ್ಲಿ ಹುದುಗಿಸಿ ಕೊಂಡೇ ಹುಟ್ಟಿಬರುತ್ತದೆ."

ಮುಂದುವರಿದು ಆಧುನಿಕ ವಿಜ್ಞಾನ ಮತ್ತು ರಾಜಕೀಯ ಶಕ್ತಿಗಳ ವಿಡಂಬನೆ ಯೊಂದಿಗೆ ದೇಶಕಾಲಾತೀತವಾದ ಭಯಾನಕ ಸಮಸ್ಯೆಯನ್ನು ಮುಂದಿಡುತ್ತದೆ ಎಂದಿದ್ದಾರೆ. ಇವೆಲ್ಲ ಅರ್ಥವನ್ನು ಒಪ್ಪಬಹುದಾದರೂ ನಾವು ಹೀಗೆ ಅಂದು ಕೊಂಡು ಬದುಕುವುದನ್ನು ನಮ್ಮನ್ನು ತುಳಿವ ಶಿಷ್ಟವರ್ಗ ಕಲಿಸಿಕೊಟ್ಟಿದ್ದು ಅನ್ನಿಸಿ ಬಿಡುತ್ತದೆ. ಶಕ್ತಿಸಂಚಯನ ಕೊಡುವ ಫಲಿತಾಂಶ ಘೋರವಾದುದು ಎಂಬ ನಿರ್ಧಾರಕ್ಕೆ ಬಂದರೆ ಈ ಶಕ್ತಿಸಂಚಯನ ಕ್ರಿಯೆಯನ್ನೇ ವಿರೋಧಿಸಿದಂತಾಗುತ್ತದೆ. ಬಹುಶಃ ಭಸ್ಮಾಸುರನಂಥ ಶೂದ್ರ ಸರ್ವಶಕ್ತನಾಗುವುದು ಬ್ರಾಹ್ಮಣ ಹಿತಾಸಕ್ತಿಗೆ ಬೇಡವಾಗಿರುವುದು ಸಹಜವೇ. ಆದರಿಂದಲೇ ಶಕ್ತಿಯ ಕೇಂದ್ರೀಕರಣ ನಾಶಸಕ್ಕೆ ಎಡೆಮಾಡಿಕೊಡುತ್ತದೆ ಎಂಬ ಕಥೆಯನ್ನು ಹುಟ್ಟುಹಾಕಿರಬಹುದು. ಈ 'ಸ್ವಾರ್ಥ', ಸ್ವಕ್ಷೇಮಕ್ಕಾಗಿ ಹಾಕಿಕೊಂಡಂಥ ಮಿತಿ, ಸರ್ವೇಸಾಮಾನ್ಯರಮಟ್ಟಿಗೆ ವಾಸ್ತವಸತ್ಯ ಅನ್ನಿಸಿಬಿಡುವಂತೆ general ಆದುದು – ಪುರೋಹಿತಶಾಹಿವರ್ಗ ಹೇಗೆ ಜನ ಸಾಮಾನ್ಯರ ಆಂತರಂಗಿಕ ಪ್ರಗತಿಯನ್ನು ನಿಯಂತ್ರಿಸಿತು ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ. ನಮ್ಮಲ್ಲಿರುವ – ಇದೇ ತೆರನದ್ದಾದ, ಶಕ್ತಿಸಂಚಯನ – ಖಲಾಸ್ ಆಗುವಿಕೆ – ದುರಂತದ ಅಂತ್ಯಗಳನ್ನು ಮೈಗೂಡಿಸಿಕೊಂಡಿರುವ ಜಾನಪದ ಕತೆಗಳನ್ನು ನೋಡಿದರೆ ಸಾಕು. ಇಡೀ ವ್ಯವಸ್ಥೆಯ ದುರಂತಕ್ಕೆ ಕಾರಣ ಎಂಥ ದೆಂಬುದು ಅರ್ಥವಾಗುತ್ತದೆ. ಪಾಟೀಲರಂಥ ಬುದ್ಧಿಜೀವಿಗಳೂ ಕೂಡ ಈ ಪರಿಕಲ್ಪನೆಯನ್ನು ಒಪ್ಪಿಕೊಂಡು ನಾಟಕ ಬರೆದಿದ್ದಾರೆ ಅಂದರೆ ಇದರ ಪ್ರಭಾವದ ಬೇರು ಎಷ್ಟು ಆಳಕ್ಕಿಳಿದಿದೆ ಎಂಬುದು ವೇದ್ಯವಾಗದೇ ಇರದು.

ಪಾಟೀಲರು ತಮಗನ್ನಿಸಿದ್ದನ್ನು ಬುದ್ಧಿಪೂರ್ವಕವಾಗಿ ವಿಶ್ಲೇಷಿಸಿ ಈ ನಂಬಿಕೆಯ ಹಿಂದಣ ಸತ್ಯವನ್ನು ಅರ್ಥೈಸಿದ್ದರೆ "ಟಿಂಗರ ಬುಡ್ಡಣ್ಣ"ಕ್ಕೆ ಹೊಸ ಅರ್ಥ ಬರುತ್ತಿತ್ತು; ವಿಭಿನ್ನವಾದ ಆಯಾಮ ಒದಗಿ ಪ್ರಭಾವಪೂರ್ಣವಾಗುತ್ತಿತ್ತು. ಆದ್ದರಿಂದ "ಟಿಂಗರ ಬುಡ್ಡಣ್ಣ" ಒಂದು 'ಪ್ರತಿಗಾಮಿ ನಾಟಕ' ಅನ್ನಿಸುತ್ತದೆ. ಬಹುಶಃ ಕೆ. ಮರುಳಸಿದ್ದಪ್ಪನವರ, "ಆದರೆ ಅಪ್ರತಿಮಶಕ್ತಿ ತನ್ನ ವಿನಾಶವನ್ನು ತನ್ನಲ್ಲಿ ಹುದುಗಿಸಿಕೊಂಡೇ ಹುಟ್ಟಿಬರುತ್ತದೆ", ಎಂಬ ಮಾತು ಆ ಶಕ್ತಿ ಬದುಕ ಬೇಕಾದ ದರಿದ್ರ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಬಂದಂಥದ್ದು ಅನ್ನಿಸುತ್ತದೆ.

ಶೇಕ್ಸ್‌ಪಿಯರನ Tempest ನಾಟಕವನ್ನು ನೆನಪಿಸಿಕೊಂಡಾಗ, ಮೇಲಿನ ಪರಿಕಲ್ಪನೆ ಕೃತಕ ಮಾತ್ರ ಎಂಬುದು ಅರ್ಥವಾಗದೇ ಇರದು. ಅಲ್ಲಿ ಪ್ರಾಸ್ಪೆರೋ ನಂಥವನ ಕೈಲಿ ಕೇಂದ್ರೀಕೃತವಾದ ಶಕ್ತಿ ಘೋರ ಫಲಿತಾಂಶವನ್ನೇನೂ ಕೊಡುವು

ದಿಲ್ಲವಷ್ಟೆ. ಅಲ್ಲಿಯೂ ಕ್ಯಾಲಿಬಾನ್‌ನಂಥ ಅರೆಕೊರೆ ಪಾತ್ರಗಳಿವೆಯಾದರೂ ಪಾಶ್ಚಾತ್ಯರು ಶಕ್ತಿಸಂಚಯನ ಕ್ರಿಯೆಯನ್ನು ವಿರೋಧಿಸಿಲ್ಲ – ಹಾಗೆ ಕೆಲವೆಡೆ ಆ ಕ್ರಿಯೆಯ ವಿರುದ್ಧದ ದನಿಯಿದ್ದರೂ ಅದಕ್ಕೆ ತದ್ವಿರುದ್ಧವಾದ ನಂಬಿಕೆಯಿದೆ ಎಂಬ ಅಂಶವೇ ಸಮಾಧಾನ ತರುವಂಥದ್ದಾಗಿರುತ್ತದೆ.

ಧೋರಣೆಯಲ್ಲಿ ಪ್ರತಿಗಾಮಿ ಅನ್ನಿಸಿದರೂ 'ಟಿಂಗರ ಬುಡ್ಡಣ್ಣ' ಮಹತ್ವದ ಕೃತಿ ಅನ್ನಿಸಿಕೊಳ್ಳುತ್ತದೆ, ಸ್ವರೂಪವನ್ನು ಗಮನಿಸಿದಾಗ. ಲಿರಿಕಲ್ ಭಾಷೆಯೇ ಅದ್ಭುತವಾಗಿ ಅರ್ಥವನ್ನು ಸಂವಹನಿಸುತ್ತದೆ.

"ಭಾಷೆಯ ಜೋರಿನಿಂದಲೇ ನೀವು ಹೊಡೆದುಃಕೊಂಡು ಹೋಗಿಬಿಡುತ್ತೀರಿ," ಎಂದು ಕಾರ್ನಾಡರು ಪಾಟೀಲರನ್ನು ಕುರಿತು ಹೇಳಿದ್ದರಂತೆ. ಅವರ ಈ ಟೀಕೆಯಲ್ಲಿಯೂ ಪ್ರಶಂಸೆಯಿದೆ; ಪಾಟೀಲರ ಭಾಷಾಪ್ರಭುತ್ವದ ಬಗ್ಗೆ ಮೆಚ್ಚುಗೆಯಿದೆ. ಜಾನಪದ ಸತ್ವದಿಂದ ಶಕ್ತಿಯುತವಾದ ಈ ನಾಟಕ – ಜಾನಪದ ಅಂಶಗಳನ್ನು ಆಧುನಿಕ ಅರ್ಥಗಳ ಸಂವಹನಕ್ಕೆ ಹೇಗೆ ಬಳಸಿಕೊಳ್ಳಬೇಕು ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ.

4

'ಗೋಕರ್ಣದ ಗೌಡಶಾನಿ'ಯನ್ನು ಮೊದಲನೇಬಾರಿ ಓದಿ ಮುಗಿಸಿದ ಅನಂತರ ಇದೊಂದು ಚಂದಾದ ತಲೆಹರಟೆ ಅನ್ನಿಸಿತು. ಇಂಥ ತಲೆಹರಟೆ ಹೊಡೆಯುವುದರಲ್ಲಿ ಪಾಟೀಲರನ್ನು ಬಿಟ್ಟರೆ ಇನ್ನಿಲ್ಲ ಎಂಬ ಭಾವನೆ ಕೂಡ ಬಂದಿತ್ತು. ಆದರೆ ಮತ್ತೆ ಮತ್ತೆ ಓದಿದಂತೆ ಅರ್ಥದ ಪದರುಗಳು ತಂತಾವೇ ಬಿಚ್ಚುತ್ತ ಹೋಗುವುದರ ಅರಿವಾಯಿತು.

'ಗೌಡಶಾನಿ' ಅನೇಕ ಅರ್ಥಗಳನ್ನು ಹೊರಡಿಸುತ್ತಿದೆ; ಆದರೆ ಈ ಎಲ್ಲ ಅರ್ಥಗಳ ಹಿನ್ನೆಲೆಯಲ್ಲಿ ಒಂದು ಏಕಸೂತ್ರವಿಲ್ಲ ಎಂದು ಅನ್ನಿಸಿದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಕಡೆಗೂ ಗೌಡಶಾನಿ ಹೇಳಿದ್ದೇನು ಎಂಬುದೇ ಗೊಂದಲವಾಗಿ ಬಿಡುವ ಸಾಧ್ಯತೆ ಉಂಟು. ಈ ದಿಶೆಯಲ್ಲಿ ಚಿಂತಿಸಿದಾಗ ನನಗೆ ಹೊಳೆದ ಅರ್ಥವನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

'ಟಿಂಗರ ಬುಡ್ಡಣ್ಣ'ದಲ್ಲಿ ಪರಂಪರೆಯ ನಿಷ್ಠುರ ವಾತಾವರಣವನ್ನು ಒಪ್ಪಿಕೊಂಡಿದ್ದ ಪಾಟೀಲರು 'ಗೌಡಶಾನಿ'ಯಲ್ಲಿ ಆ ವಾತಾವರಣವನ್ನು ವ್ಯಂಗ್ಯದೃಷ್ಟಿಯಿಂದ ನೋಡಿದ್ದಾರೆ; ಪೌರಾಣಿಕ ಪರಿಕಲ್ಪನೆಗಳು ವಾಸ್ತವ ಜೀವನದ ಸಂದರ್ಭದಲ್ಲಿ ಫ್ಯಾಂಟಸಿಗಳಾಗಿಬಿಡುವುದನ್ನು ಅರಿತಿದ್ದಾರೆ ಎಂದು ನನಗೆ ಅನ್ನಿಸುತ್ತದೆ.

ಇಲ್ಲಿ ಬರುವ ರಾವಣನ ಕತೆ, ಶಿವ ಶಿವಲಿಂಗವನ್ನು ಕೊಟ್ಟುಬಿಟ್ಟು ಆಡುವಂಥ ಮಾತುಗಳು, ಗಣಪತಿಯು ಪಾತ್ರ ವರ್ತಿಸುವ ವೈಖರಿ – ಇವಿಷ್ಟನ್ನು ಗಮನಿಸಿದರೆ ಸಾಕು, ಪರಂಪರಿಕ ಮೌಲ್ಯಗಳು ಹೇಗೆ ಹಳಸಿ ನಾರುತ್ತಿವೆ ಎಂಬುದು ವೇದ್ಯವಾಗುತ್ತದೆ. ಬಹುಶಃ ಶತಶತಮಾನಗಳಿಂದ ಮೋಸ ಮಾಡುತ್ತ ಬಂದ ಬ್ರಾಹ್ಮಣತ್ವ ಹುಟ್ಟುಹಾಕಿದ ಇಂಥ ಪೌರಾಣಿಕ ಪರಿಕಲ್ಪನೆಗಳು ನಿಷ್ಠುರ ವಾಸ್ತವತೆಯ ಒರೆಗಲ್ಲಿನಲ್ಲಿ ತಮ್ಮ ತೋರಿಕೆಯ ಮಹತ್ವತೆಯನ್ನು ನೀಗಿಕೊಳ್ಳುವುದನ್ನು ಪಾಟೀಲರು ಪ್ರಥಮಬಾರಿಗೆ ಲೇವಡಿ ಎಬ್ಬಿಸಿದ್ದಾರೆ. ರಾವಣ - ಶಿವನ ಕತೆಯ ಜತೆಯಲ್ಲಿಯೇ ಬೆಳೆದುಕೊಂಡು ಹೋಗುವ ಬಸ್ಯಾ - ಗೌಡ - ಶಿವಿಯರ ಕತೆ ಕೂಡ ಮೇಲಿನ ಅರ್ಥವನ್ನೇ ಸಂವಹನಿಸುತ್ತದೆ. ಬ್ರಾಹ್ಮಣತ್ವ ಕಲ್ಪಿಸಿದ ಪರಿಸರದಲ್ಲಿ ಬದುಕಲೆತ್ನಿಸುವ ಷಂಡಗೌಡ, ಈ ಪರಿಸರದ ಸದುಪಯೋಗ ಮಾಡಿಕೊಂಡು ಬದುಕುವ ಬಸ್ಯಾ, ಗಂಡುತನ ಮೆರೆವ ಗೌಡನನ್ನು ವೈಭವಿಸಿ ತಂತ್ರಮಂತ್ರಗಳನ್ನು ಮಾಡುತ್ತ ತನ್ನ ರೊಟ್ಟಿ ಬೇಯಿಸಿಕೊಳ್ಳುವ ಭಾಗವತ – ಪಾಟೀಲರು ಹೇಳಬೇಕೆಂದಿರುವ ಅರ್ಥದ ಪರಿಪೂರ್ಣತೆಗೆ ಸಹಕರಿಸುತ್ತಾರೆ. ತನಗಿಲ್ಲದ್ದನ್ನು ತನಗಿದೆ ಎಂದು ತೋರಿಸಿಕೊಂಡು, ಶಿವಿಯನ್ನು ತೀವ್ರವಾಗಿ ಉಪಭೋಗಿಸಿಬಿಡುವವನಂತೆ ಮಾತಾಡಿ, ಕಡೆಗೆ ಹೊಟ್ಟೆ ನೋವು ಕಾಣಿಸಿಕೊಂಡು ಕೆರೆಯ ಕಡೆಗೆ ಓಡುವ ಷಂಡಗೌಡ, ಬೇಕೆಂದಾಗ ಯಾವ ವೇಷವನ್ನೂ ಧರಿಸುವ ಗೋಸುಂಬೆ ಪ್ರವೃತ್ತಿಯ ಭಾಗವತನ ಬುದ್ಧಿ ಹೇಳಿದಂತೆ ನಡೆಯುವಂಥವನು. ಆದರೆ ಕೃತ್ರಿಮತೆಯಿಂದ ದೂರನಾದ ಬಸ್ಯಾ ಪ್ರಕೃತಿ ಅರ್ಥಾತ್ ಶಿವಿಯನ್ನು ಕೂಡುತ್ತಾನೆ; ಶಿವಿ ಬಸ್ಯಾನಿಗೆ ಸೀರೆ ಸಡಲಿಸುವಾಗ ಆ ಕ್ರಿಯೆಯ ಯುಕ್ತಾಯುಕ್ತತೆಯನ್ನು ವಿವೇಚಿಸುವುದಿಲ್ಲವೆಂಬುದನ್ನು ತೀವ್ರವಾಗಿ ಗಮನಿಸಬೇಕೆನ್ನಿಸುತ್ತದೆ. ಮಾನವನ ಮೂಲಭೂತ ಆಕಾಂಕ್ಷೆಗಳು ಕ್ರಿಯೆಗಿಳಿಯುವಲ್ಲಿ – ಅದೂ ಯಾವ ಮಡಿವೈಲಿಗೆ ಭಾವನೆಗಳನ್ನು ಒಪ್ಪಿಕೊಳ್ಳದೆ ಕ್ರಿಯೆಗಿಳಿಯುವಲ್ಲಿ ಇರುವ 'ಶೂದ್ರತನ' ಮುಖ್ಯವಾಗುತ್ತದೆ. ಇದೇ ಸಂದರ್ಭದಲ್ಲಿ ಉಚ್ಚೆ ಹುಯ್ಯಲಿಕ್ಕೆಂದು ರಾವಣ ಅತ್ತಹೋದಾಗ ಲಿಂಗವನ್ನು ಪ್ರತಿಷ್ಠಾಪಿಸಿಬಿಡುವ ಗಣಪತಿಯ ಕತೆಯೂ ಅಭಿನಯಿಸಲ್ಪಡುತ್ತಿರುತ್ತದೆ. ಇಲ್ಲಿನ ಪಾರಂಪಾರಿಕ ಫ್ಯಾಂಟಸಿ, ಬಸ್ಯಾ ಶಿವಿಯರ ಕತೆಯಲ್ಲಿನ ವಾಸ್ತವತೆಯ ಶೂದ್ರತನಗಳನ್ನು ಗಮನಿಸಿದಾಗಲೇ ಗೋಕರ್ಣದ ಗೌಡಶಾನಿಗೆ ಅರ್ಥದ ಆಯಾಮ ಒದಗುತ್ತದೆ. ಹೀಗೆ ಪಾರಂಪಾರಿಕ ಬ್ರಾಹ್ಮಣ ಪ್ರಜ್ಞೆ ಸಮಕಾಲೀನ ಸಂದರ್ಭದಲ್ಲಿ ಅರ್ಥಹೀನವಾಗಿ ಕೇವಲ ಫ್ಯಾಂಟಸಿ ಆಗಿರುವುದನ್ನು ಪಾಟೀಲರು ಗೇಲಿ ಎಬ್ಬಿಸಿದ್ದಾರೆ.

ಈ ನಾಟಕದಲ್ಲಿ ಬರುವ ಸಮಕಾಲೀನರ ಬಗೆಗಿನ ಕೆಲ ಮಾತುಗಳು ಪಾಟೀಲರನ್ನು ನೋಡುವ ದೃಷ್ಟಿಗಳನ್ನು ಬೇರೆಯಾಗಿಸಿಬಿಡುವ ಸಾಧ್ಯತೆ ಉಂಟು. ಆದರೆ ಜೀವಂತ ವಿಮರ್ಶೆ ಉಂಟುಮಾಡುವ ಲವಲವಿಕೆಯನ್ನು ನೆನಪಿಸಿಕೊಂಡರೆ

ಪಾಟೀಲರ ಮಾತುಗಳೂ ಆರೋಗ್ಯಕರವಾದಂಥವೇ ಅನ್ನಿಸುತ್ತದೆ. ಮಾತ್ರವಲ್ಲದೆ, Live and let live ಎಂಬ ಹಿಪ್ಪೊಕ್ರೆಟಿಕ್ ಆದಂಥ ಧೋರಣೆಯನ್ನು ಬಿಟ್ಟು ಕೊಟ್ಟು, ಮೈಚಳಿಬಿಟ್ಟು ಸಲೀಸಾಗಿ ಮಾತಾಡುವ ರೀತಿಯನ್ನು ನಾವು ಸ್ವಾಗತಿಸ ಬೇಕು ಅನ್ನಿಸುತ್ತದೆ.

ನಾಟಕ ನೋಡುವ ಪ್ರೇಕ್ಷಕ ತಾನು ಪ್ರೇಕ್ಷಕ ಮಾತ್ರ ಎಂಬ ಪ್ರಜ್ಞೆಯನ್ನು ಸದಾ ಜಾಗೃತಗೊಳಿಸಿಕೊಂಡಿರಬೇಕು ; ನಾಟಕದಲ್ಲಿ ನಡೆಯುವುದು ಕೇವಲ ಕೃತಕ, ಪರಕೀಯ ಎಂಬುದು ಆತನ ಪಾಲಿಗೆ ಸತ್ಯವಾಗಿರಬೇಕು – ಎಂಬ ತತ್ತ್ವದ ನೆಲೆಗಟ್ಟಿನಲ್ಲಿ ಅಸ್ತಿತ್ವ ಪಡೆದ ಬ್ರೆಕ್ಟನ ಎಪಿಕ್ ಥಿಯೇಟರ್‌ನ ತಂತ್ರವನ್ನು ಸಮರ್ಥವಾಗಿ ಪಾಟೀಲರು ದಕ್ಕಿಸಿಕೊಂಡಿದ್ದಾರೆ ; ರಾವಣನು ತಾನು ರಾವಣನ ಪಾತ್ರಧಾರಿ ಮಾತ್ರ ಎಂಬುದನ್ನು ಶ್ರುತಪಡಿಸುವ ರೀತಿ, ಕಡೆಗೆ ಭಾಗವತನ ಮಾತುಗಳು ಬರುವ ಥರ, ಮಧ್ಯಂತರದ ವೇಳೆಯಲ್ಲಿ ನೀವು ಚಾ ಕುಡಿಯಿರಿ, ನಾವು ಅಷ್ಟಿಷ್ಟು relax ಪಡೆದುಕೊಳ್ಳುತ್ತೇವೆ ಎಂದು ಭಾಗವತ ಹೇಳುವ ರೀತಿ – ಪ್ರೇಕ್ಷಕರನ್ನು ರಂಗದಿಂದ ದೂರದಲ್ಲಿಡುತ್ತದೆ ; ಅಂದರೆ involvement ಅನ್ನು ತಪ್ಪಿಸುತ್ತವೆ. ಆದರೆ ಎಪಿಕ್ ಥಿಯೇಟರದ ಉದ್ದೇಶವನ್ನು ಪಾಟೀಲರು ಗುರಿಯಲ್ಲಿಟ್ಟುಕೊಂಡೇ ಇಲ್ಲ. ಈ ತಂತ್ರವನ್ನು ಬಳಸಿಕೊಂಡು ಅವರು ಹೇಳಬೇಕೆಂದಿರುವ ಅರ್ಥ ಬೇರೆ ಆಗಿದೆ ಎಂಬುದನ್ನು ಮೇಲೆ ಗಮನಿಸಿದ್ದೇವೆ.

5

'ಅಪ್ಪ' ಪಾಟೀಲರ ಹಿಂದಿನ ನಾಟಕ. ಕನಸಿನ ರಮ್ಯತೆ, ವಾಸ್ತವತೆಯ ನಿಷ್ಠುರತೆಗಳ ಸಂಘರ್ಷದ ಸಂದರ್ಭದಲ್ಲಿ ಪ್ರಶ್ನೆಯಾಗಿಬಿಡುವ ಬಸವರಾಜನ ವ್ಯಕ್ತಿತ್ವವನ್ನು ಇದು ಕಡೆಯುತ್ತದೆ. ಬಿ. ಟಿ. ದೇಸಾಯಿಯವರು ಹೇಳುವಂತೆ –

"ದ್ವಂದ್ವದಲ್ಲಿಯೇ ತನ್ನ ಹುಟ್ಟನ್ನೂ ಅದರ ಸಾರ್ಥಕತೆಯನ್ನೂ ಜತೆಗೆ ಕನಸನ್ನೂ ಕನಸು ಅಲ್ಲದುದನ್ನೂ ಕಾಣುವ ವ್ಯಕ್ತಿಯ ದುರಂತ ನಾಟಕವಾಗಿದೆ". ಅದಕ್ಕಿಂತ ಹೆಚ್ಚಾಗಿ 'ಸೂಳೆ'ಯ ಮಗನಾಗಿ ಹುಟ್ಟಿದ ಬಸವರಾಜ ವ್ಯವಸ್ಥೆಯ ಸಂದರ್ಭದಲ್ಲಿ ಅಸಂಗತತೆಯನ್ನೂ ಅವ್ವನ ಬಳಿ ಸಂಗತತೆಯನ್ನೂ ಅನುಭವಿಸುತ್ತಾನೆ; ಜೀವನದಲ್ಲಿ ಅಬ್ಸರ್ಡಿಟಿಯನ್ನು ಅನುಭವಿಸುವ ಬಸವರಾಜ ಅಪ್ಪನನ್ನು ಕುರಿತು ಚಿಂತಿಸಿ ಮತ್ತಷ್ಟು ಅಸಂಗತತೆಯನ್ನು ಕಾಣುತ್ತಾನೆ. ಅಂದರೆ ತನ್ನ ಮಿತಿಯಲ್ಲಿಯೇ ಸಾರ್ಥಕತೆಯನ್ನು ಕಾಣಬಯಸುವುದಿಲ್ಲ ; ಅದನ್ನು ಮೀರುತ್ತಾನೆ ; ಕನಸಿಸುತ್ತಾನೆ; ಇಲ್ಲದ್ದನ್ನು ಬಯಸುತ್ತಾನೆ ; ಆಕಾಶದ ಚಂದ್ರಮನನ್ನು ತಾರೆಂದು ಚಿಕ್ಕಂದಿನಲ್ಲಿ ನಾಟಕದ ಆಟ ಹೂಡುವ ಬಸವರಾಜ ಆ ಚಂದ್ರಮನಷ್ಟೇ ಅಲಭ್ಯನಾದ ಅಪ್ಪನನ್ನು ಸೀರಿಯಸ್ಸಾಗಿ ಬಯಸುತ್ತಾನೆ ಎಂದಾಗ ಅವನ ದುರಂತ ವ್ಯಕ್ತಿತ್ವವನ್ನು ಆ ದುರಂತ

ತೆಯ ತೀವ್ರತೆಯೊಂದಿಗೆ ಗಮನಿಸಿದಂತಾಗುತ್ತದೆ. ಅಂದರೆ ಕನಸು - ಭ್ರಮೆಗಳಲ್ಲಿ ಬದುಕಿ, ನಿಷ್ಠುರ ವಾಸ್ತವತೆಯ ಒರೆಗಲ್ಲಿನಲ್ಲಿ ಅರ್ಥಪೂರ್ಣವಾಗದ್ದಕ್ಕೆ ಕೊರಗಿ ಲಯವಾಗುವ ಬಸವರಾಜ ಈವೆರಡರ ನಡುವಣ ವ್ಯತ್ಯಾಸವನ್ನು ಒಪ್ಪಿಕೊಳ್ಳದೇ ಹೋದದ್ದರಿಂದ ದುರಂತವನ್ನಪ್ಪುತ್ತಾನೆ.

ಇದು ರಂಗದ ಮೇಲೇ ಬೆಳೆಯುವ ನಾಟಕ. ಉಂಡುತಿಂದು ಉಚ್ಚಿಹುಯ್ದು ಹುಡುಗನಾಗಿರುತ್ತಿದ್ದಾಗ ಪ್ರಕಟವಾಗುವ ಬಸವರಾಜನ 'ಲವಲವಿಕೆ' ಆತ ಬೆಳೆಯು ತ್ತಿದ್ದಂತೆ ಸಂಪೂರ್ಣ ಪಲ್ಲಟವಾಗುತ್ತದೆ. ಪ್ರತಿಯೊಂದಕ್ಕೂ ಅರ್ಥ ಹುಡುಕುವ, ತನ್ನ ಪಕಳಿಗಳ ಒಂದೊಂದು ಬಣ್ಣಕ್ಕೂ ಬೀಜರೂಪರಾದವರಾರು ಅಂತ ಚಿಂತಿಸುವ, ಸದಾ ಕೊರೆಗುವ ವ್ಯಕ್ತಿಯಾಗಿಬಿಡುತ್ತಾನೆ ಅನಂತರದಲ್ಲಿ. ಆದರೆ 'ಅವ್ವ' ಬದಲಾಗುವುದಿಲ್ಲ; ಬೆಳೆಯುವುದಿಲ್ಲ. ಎಂದಿನಂತೆ ಕದ ಬಡಿದ ಸದ್ದಾದಾಗ ಕದ ತೆರೆಯುತ್ತಾಳೆ; ಸೀರೆ ಸಡಲಿಸುತ್ತಾಳೆ.

'ಅಪ್ಪ' ರಂಗಕ್ಕಾಗಿಯೇ ಬರೆದ ನಾಟಕ; ರಂಗದಲ್ಲಿಯೇ ಅದರ ಸಾರ್ಥಕ್ಯ.

6

ಕುಂಟಕುಂಟ ಕುರವತ್ತಿ; ಗುರ್ತಿನವರುಗಳನ್ನು ಇಲ್ಲಿ ವಿವರವಾಗಿ ವಿಶ್ಲೇಷಿಸಿಲ್ಲ. ಏಕೆಂದರೆ ಇವು ನನ್ನನ್ನು ಆಕರ್ಷಿಸಲಿಲ್ಲ. ಬಹುಶಃ ಈ ನಾಟಕದ ವಸ್ತುಗಳು ಹೊಸದಲ್ಲದಿರುವುದೇ ಇದಕ್ಕೆ ಕಾರಣ. ಆದರೂ ಅಯನೆಸ್ಕೊ ಮೊದಲಾದವರ ನಾಟಕಗಳಲ್ಲಿ ಕಂಡುಬರುವ ಧೋರಣೆಗಳನ್ನು ಕನ್ನಡೀಕರಿಸಿ – ಭಾಷೆಯನ್ನು ಅದ್ಭುತ ವಾಗಿ ದುಡಿಸಿಕೊಂಡು ಅರ್ಥಪೂರ್ಣವಾದಂಥ ಪ್ರಭಾವವನ್ನು ಬೀರುವಂತೆ ಮಾಡಿರುವ ನಾಟಕಕಾರರ ಪ್ರಯತ್ನವನ್ನು ಮೆಚ್ಚಬೇಕಾದುದೇ ಅನ್ನಿಸುತ್ತದೆ.

7

ಪಾಟೀಲರು ಇಂದು ಸಮಸ್ಯಾತ್ಮಕ ವ್ಯಕ್ತಿ. ರಾಜಕೀಯ, ಸಾಹಿತ್ಯ, ಹೀಗೆ ಎಲ್ಲ ರಂಗಗಳಲ್ಲೂ ಕೈಯಾಡಿಸಿರುವ ಇವರು ಕೆಲವರ ಪಾಲಿಗೆ ಏನೂ ಇಲ್ಲ; ಆದರೆ ಅರ್ಥವಂತಿಕೆ ತಡಕುವ, ಚಿಂತನೆ ಮಾಡುವ ಬುದ್ಧಿಜೀವಿಗಳಿಗೆ ತುಂಬಾ ಮುಖ್ಯ ರಾಗಿದ್ದಾರೆ. ಇವರ ನಾಟಕಗಳು ಇವರು ಬೆಳೆದಂತೆ ಬೆಳೆದಿವೆ; ಬದಲಾದಂತೆ ಆಗಿವೆ; ಇಲ್ಲಿ ಎಂಥದೇ ಮುಚ್ಚು ಮರೆಯಿಲ್ಲ; ಚುರಿಚುಚ್ಚುವಂತೆ ವ್ಯಂಗ್ಯದ ಮಾತು ನಾಟುತ್ತದೆ – ಎಂಬ ಅಂಶಗಳನ್ನು ಗಮನಿಸಿಯೇ ಪಾಟೀಲರನ್ನು ಮಹತ್ವದ ವ್ಯಕ್ತಿ ಎಂದು ನಾನು ಗುರುತಿಸಿದ್ದೇನೆ. ಪಾಟೀಲರ ನಾಟಕಗಳನ್ನು ಗಮನಿಸುವಾಗ ಅವರ ಸಾಮಾಜಿಕ ಹಿನ್ನೆಲೆ, ಪ್ರಸ್ತುತ ರಾಜಕೀಯ ಪರಿಸರ, ಸಾಹಿತ್ಯಿಕ ಕ್ರಾಂತಿಗಳು ಮೊದಲಾದುವನ್ನು ಗಮನಿಸಲೇಬೇಕಾಗುತ್ತದೆ. ಏಕೆಂದರೆ ಪ್ರಸ್ತುತಕ್ಕೆ ಬದ್ಧರಾದ ಕೆಲವೇ ವ್ಯಕ್ತಿಗಳಲ್ಲಿ ಪಾಟೀಲರು ಅಗ್ರಗಣ್ಯರು.

ಬೇಸಿಗೆಯ ಮೂರು ಚಿತ್ರಗಳು

ಎನ್. ಆರ್. ಶಾಸ್ತ್ರಿ

1

ಆಗಸದ ಗೂಡಾರದ ಮೇಲೆ
ಮಟ ಮಟ ಮಧ್ಯಾಹ್ನದ ಬಿಸಿಲು
ಬಿಡಿಸಿದೆ
ಮೃಗಜಲದ ರಂಗವಲ್ಲಿ ;
ಹಸಿರು ಹಳದಿ ಸೆರಗು, ಅಂಚಿನಲ್ಲಿ.

2

ಸುರುಳಿಸುತ್ತಿದ ಬಾಳ ನೆನಪು
ಅರಳಿ
ಕನಸುಗಳ ತಂಪು
ಸೂಸಿತ್ತು—ಸವಿದಿತ್ತು
ಬಿಸಿಲು ಬೆಳದಿಂಗಳ—ಮಕರಂದ
ಸಪ್ಪೆಬಾಳಿನ ಉಪ್ಪುನೀರಿನ ಅಂದ.

3

ಬೇಸಿಗೆಯ ಧಗೆಗೆ
ಕೈ ಕಾಲು ಬತ್ತಿ
ಬಸವಳಿದು ಬೆಂಡಾದ ಮುಖ
ಉಸಿರಾಡುತ್ತಿದೆ
ಅಮ್ಲಜನಕದ ಕೊಠಡಿಯಲ್ಲಿಟ್ಟ
ಹೃದಯರೋಗಿಯಂತೆ.
ಬಿಸಿಲು ಬ್ರಾಂದಿಯ ಕುಡಿದು
ಅಶ್ವತ್ಥ ನೆಳಲ ತಂಪಲ್ಲಿ
ಹಸಿಮಣ್ಣ ತಂಪಿಗೆ

ಹಾಯಾಗಿ ಮಲಗಿತ್ತು.
ಅರೆತೆರೆದ ಕುಪ್ಪಸ
ಕೆಳಗೆ ಜಾರಿದ ಸೆರಗು, ಅರೆಬತ್ತಲು
ಆಯಾಸ ಮರೆಯುವ ಗೃಹಿಣಿಯ ಹಾಗೆ.

ಮುಂಗಾರ ಮೋಡ–ಮುಗಿಲು
ಹಸಿಮಣ್ಣ ಬಯಕೆ—ಬಯಲು.

ಕೈಗಾರಿಕೆ ಹಾಗೂ ಸಂಶೋಧನೆ

ಡಾ. ಕೃ. ಪೋತುವಲ್

ಭಾರತದ ಕೈಗಾರಿಕಾ ಉದ್ಯಮಗಳಲ್ಲಿ ಸಂಶೋಧನಾ ಪ್ರಜ್ಞೆಯ ಅಭಾವವೇ ದೇಶದ ಉದ್ಯಮಗಳ ಅಲ್ಪಪ್ರಮಾಣದ ಉತ್ಪಾದನೆಗೆ ಬಹು ಮುಖ್ಯ ಕಾರಣವೆಂದು ತೋರಿಬರುತ್ತದೆ. ಗಾಡಿಯನ್ನು ಕುದುರೆಯ ಮುಂದೆ ಕಟ್ಟಿದಂತಹ ಪರಿಸ್ಥಿತಿಯೇ ಇದು ಎನ್ನಬಹುದು. ಸ್ವಕೀಯ ವಿಜ್ಞಾನ ಹಾಗೂ ತಾಂತ್ರಿಕತೆಯ ಸರಿಯಾದ ಅರಿವು ದೇಶದಲ್ಲಿ ಇನ್ನೂ ಮೂಡಿಲ್ಲ. ಪಾಂಚವಾರ್ಷಿಕ ಯೋಜನೆಗಳ ಪಕ್ಷಿನೋಟವು ಈ ವಿಷಯಕ್ಕೆ ಪುಷ್ಟಿಯೀಯುತ್ತದೆ. ನಿರ್ದೇಶಿಸಲ್ಪಟ್ಟ ಯಾವುದೇ ಕೈಗಾರಿಕಾ ಯೋಜನೆಗಳು ಸ್ವಕೀಯ ತಾಂತ್ರಿಕತೆಯತ್ತ ತಮ್ಮ ಒಲವನ್ನು ಹೊಂದಿಲ್ಲ. ಸಂಪನ್ಮೂಲಗಳನ್ನು ರೂಢಿಸಿಕೊಂಡು ಆರ್ಥಿಕ ಬೆಳವಣಿಗೆಯತ್ತ ಹೆಜ್ಜೆ ಹಾಕುವ, ಯಾವ ಯೋಜನಾಕ್ರಮವೂ ತನ್ನ ಚೌಕಟ್ಟಿನಲ್ಲಿ ಸ್ವಕೀಯ ಅಥವಾ ಸ್ವಜನ್ಯ ತಾಂತ್ರಿಕತೆಯನ್ನು ಸೇರಿಸಿಕೊಂಡಿಲ್ಲ. ಯೋಜನೆಗಳು, ಒಟ್ಟಿನಲ್ಲಿ, ಸೃಜನಾತ್ಮಕ ತಾಂತ್ರಿಕತೆಯನ್ನು ನಿರ್ಲಕ್ಷಿಸಿವೆ ಎಂಬುದು ಕಟುಸತ್ಯ.

ಯೋಜನೆಗಳು ಕೈಗಾರಿಕಾ ಬೆಳವಣಿಗೆಯತ್ತ ಒಲವು ಹರಿಸದ ಕಾರಣ, ಆರ್ಥಿಕತೆಗೆ ಜೀವಜೀವಾಳವಾದ ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿಗಳು ದುಃಸ್ಥಿತಿಯಲ್ಲಿವೆ. ಆಮದು ಮಾಡಲ್ಪಟ್ಟ ತಾಂತ್ರಿಕ ವಿಜ್ಞಾನ ಹಾಗೂ ಕೈಗಾರಿಕಾ ಅಭಿವೃದ್ಧಿ ವಲಯಗಳು, ಈ ಕಾರಣದಿಂದಾಗಿ, ಅಭಿವೃದ್ಧಿಯ ತಳಪಾಯ ಭದ್ರವಿಲ್ಲದೆ ಸಿಡಿದು ದೂರ ಸರಿದಿವೆ. ಗಮನಕ್ಕೆ ಬರುವ ಅಂಕಿಅಂಶಗಳಿಂದ ಸ್ಪಷ್ಟವಾಗುವ ಅಂಶವೆಂದರೆ, ಬೃಹತ್‌ಬಂಡವಾಳ ಹೊಂದಿರುವ ಕೈಗಾರಿಕೋದ್ಯಮಗಳಲ್ಲಿ ಪ್ರಮುಖ ಸಂಶೋಧನೆ ಹಾಗೂ ಬೆಳವಣಿಗೆಯ ಯೋಜನೆಗಳು ಕಂಡುಬರುತ್ತಿಲ್ಲ. ಕೈಗಾರಿಕಾ ಬೆಳವಣಿಗೆ ಮತ್ತು ಸಂಶೋಧನೆಯ ಮಧ್ಯೆ ಕಂದಕವೊಂದನ್ನು ವಿನಾ ಕಾರಣ ಸೃಷ್ಟಿಸಲಾಗಿದೆ. ಭಾರತದಲ್ಲಿ ಸಂಶೋಧನೆಯಲ್ಲಿ ಹೂಡಲ್ಪಟ್ಟ ಬಂಡವಾಳವನ್ನು ಇತರ ದೇಶಗಳ ಈ ಬಂಡವಾಳದೊಡನೆ ಹೋಲಿಸಿದಾಗ, ಗಣನೀಯ ಧನ ಹೂಡಿದ ಕೈಗಾರಿಕೋದ್ಯಮವು ಸಂಶೋಧನೆಯನ್ನು ನಿರ್ಲಕ್ಷಿಸಿದೆ ಎಂಬುದು ಹೊಳೆಯುತ್ತದೆ. ಬಂಡವಾಳಕ್ಕೆ ತಕ್ಕ ಉತ್ಪನ್ನ ನೀಡುವ ಸಾಮರ್ಥ್ಯ ಆ ಉದ್ಯಮಗಳಿಗಿದೆ.

ಸೃಜನಾತ್ಮಕ ಸಂಶೋಧನೆ ಮತ್ತು ಅಭಿವೃದ್ಧಿಯ ಪಾತ್ರ

ಕೈಗಾರಿಕಾ ಪ್ರಗತಿಯಲ್ಲಿ ಭಾಗವಹಿಸುವ ಸೃಜನಾತ್ಮಕ ಸಂಶೋಧನೆ ಹಾಗೂ ಅಭಿವೃದ್ಧಿ ಯೋಜನೆಗಳ ಪಾತ್ರವನ್ನು ದೇಶದಲ್ಲಿ ನಿರ್ಲಕ್ಷಿಸಿರುವುದೇ ಈ ಮೇಲಿನ ಅಂಶಗಳಿಗೆ ಮನೆಮಾಡಿ ಕೊಟ್ಟಿದೆ. ಇವು ಕೈಗಾರಿಕಾ ಜ್ಞಾನ ಹಾಗೂ ತಾಂತ್ರಿಕತೆಯನ್ನು ಆಮದು ಮಾಡಿಕೊಳ್ಳುವ ನೀತಿಗೆ ಅನುವು ಮಾಡಿಕೊಟ್ಟಿದೆ. ಕೈಗಾರಿಕಾ ಚರಿತ್ರೆಯ ಪುಟಗಳು ಈ ವಾದಕ್ಕೆ ಬೆಂಬಲ ನೀಡುತ್ತವೆ.

ಅನೇಕ ಖಾಸಗಿ ಉದ್ಯಮಿಗಳಿಗೆ ಸೃಜನಾತ್ಮಕ ಕೈಗಾರಿಕಾ ಸಂಶೋಧನೆ ಹಾಗೂ ಅಭಿವೃದ್ಧಿ ಯೋಜನೆಗಳು "ಸಾಧಿಸುತ್ತೇವೆ" ಎಂದು ಪ್ರತಿಪಾದಿಸುವ ಉಪಯುಕ್ತತೆಯ ಬಗ್ಗೆ ಸಂಶಯವಿದೆ. ಪ್ರಸಕ್ತ ಯೋಜನೆಯ ರಚನಾವಿಧಾನದ ಬಗ್ಗೆ ಹಾಗೂ ಉತ್ಪತ್ತಿಗಾಗಿ ಇದುವರೆಗೂ ತೊಡಗಿಸಲ್ಪಟ್ಟ ಬಂಡವಾಳದ ಬಗ್ಗೆ ಗಣನೀಯ ಅನುಮಾನಗಳು ಆಗಿಂದಾಗ್ಯೆ ತಲೆದೋರುತ್ತಲಿವೆ. ಆದರೆ ಈ ವಾದಕ್ಕೆ ಪುಷ್ಟಿಯೊಯುವ ಸರಿಯಾದ ಅಂಕಿ-ಅಂಶಗಳಿಲ್ಲ. ಆದುದರಿಂದ ತಳಪಾಯ ಭದ್ರವಿಲ್ಲದೆ ನಿರ್ಣಯ ಕೈಗೊಂಡ ಈ ವಾದವನ್ನು ಒಪ್ಪಿಕೊಳ್ಳುವುದಾದರೂ ಹೇಗೆ? ಹಾಗಾದರೆ, ಖಾಸಗಿ ಉದ್ಯಮಿಗಳು ಹೀಗೆ ಹೇಳಲು ಕಾರಣವೇನು? ಮುಖ್ಯವಾಗಿ ತಮ್ಮ ಶ್ರಮದಿಂದ ಸಾಧ್ಯವಾದ, ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವ, ಚಲಿಸುತ್ತಿರುವ ಬೆಳವಣಿಗೆ ಮತ್ತು ಹೊಸಹೊಸ ಅನ್ವೇಷಣೆಗಳತ್ತ ಸರಕಾರವು ತನ್ನ ದೃಷ್ಟಿಯನ್ನು ಬೀರಿ, ತಕ್ಕ ಶಾಸನವನ್ನು ರಚಿಸಿ, ಆ ಉದ್ಯಮಗಳನ್ನು ತನ್ನ ಸ್ವಾಧೀನಪಡಿಸಿಕೊಂಡು ತಮ್ಮನ್ನು ಬೀದಿಪಾಲು ಮಾಡುತ್ತದೆ ಎಂಬ ಭಯ ಈ ಉದ್ಯಮಗಳಿಗಿರಬೇಕು ಎನಿಸುತ್ತದೆ.

ಬಂಡವಾಳಕ್ಕೆ ತಕ್ಕ ಉತ್ಪನ್ನವಿಲ್ಲ

ಭಾರತದಲ್ಲಿ ವಿಜ್ಞಾನಿಗಳನ್ನು ಮತ್ತು ತಾಂತ್ರಿಕಜ್ಞರನ್ನು ಆಗಿಂದಾಗ್ಯೆ ಕರೆಸಿ ತಮ್ಮ ಚಟುವಟಿಕೆಗಳ ಬಗ್ಗೆ ವರದಿ ಒಪ್ಪಿಸಲು ಅವರನ್ನು ಕೇಳಿಕೊಳ್ಳಲಾಗುತ್ತಿದೆ, ನಿಜ. ಆದರೆ, ವಿಜ್ಞಾನವು ದೇಶದ ಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸುತ್ತಿಲ್ಲ. ಅದು ಬೆಳವಣಿಗೆಯೊಂದಿಗೆ ತಾಳ ಹಾಕುತ್ತಿಲ್ಲ; ಅದರಲ್ಲಿ ತೊಡಗಿಸಿದ ಬಂಡವಾಳಕ್ಕೆ ತಕ್ಕ ಉತ್ಪನ್ನವಿಲ್ಲ—ಎಂಬ ಭಾವನೆಗಳು ತಾವೇ ತಾವಾಗಿ ಹರಡಿಕೊಂಡಿವೆ, ದೇಶದ ಉದ್ದಗಲಕ್ಕು. ಇಲ್ಲಿ ಎರಡು ಯೋಚನಾ ತಂತುಗಳಿವೆ.

ಈಗ ವಿಜ್ಞಾನದಲ್ಲಿ ತೊಡಗಿಸಲ್ಪಟ್ಟ ಬಂಡವಾಳವು ನಿರೀಕ್ಷಿಸಿದ ಉತ್ಪನ್ನ ಸಾಧಿಸಲು ಏನೇನೂ ಸಾಲದು ಎಂದು ಕೆಲವರ ನಿಲುವು. ಇವರು ಅಪೇಕ್ಷಿಸುವ ಅಂಶಗಳು ಇವು : ಯೋಜನೆಗಳೊಂದಿಗೆ ವಿಜ್ಞಾನ ಹಾಗೂ ತಾಂತ್ರಿಕತೆಯನ್ನು ಹೆಣೆಯುವುದು, ಸಂಶೋಧನೆ ಹಾಗೂ ಅಭಿವೃದ್ಧಿಯ ಮುಂದುವರಿಕೆ, ವಿಸ್ತರಣೆ

ಮತ್ತು ನಿರ್ದೇಶನದಲ್ಲಿ ರಾಜ್ಯಗಳ ಜವಾಬ್ದಾರಿಯುತ ಹೊಣೆಗಾರಿಕೆ ಮತ್ತು ನವೀನ ವಿಜ್ಞಾನದ ವಹಿವಾಟಿನ ಮೇಲ್ವಿಚಾರಣೆ ಹಾಗೂ ಅನ್ವಯ; ವಿಜ್ಞಾನಯುತ, ಕ್ರಮಬದ್ಧ ಮಾನವ ಶಕ್ತಿಯ ನೀತಿ ಮತ್ತು ವಿಜ್ಞಾನರಚನೆ ಹಾಗೂ ಸಂಸ್ಥೆಗಳ ಸರಿಯಾದ ಪಾತ್ರ ನಿರ್ವಹಣೆ.

ಇನ್ನು ಕೆಲವರ ವಾದ ಹೀಗಿದೆ: ರಾಜ್ಯಗಳ ಮೇಲ್ವಿಚಾರಣೆಯಲ್ಲಿರುವ ಸಂಶೋಧನೆ ಹಾಗೂ ಅಭಿವೃದ್ಧಿ ಘಟಕಗಳ ಸಂಶೋಧನೆಗಳು ಕೈಗಾರಿಕೆಗಳೊಂದಿಗೆ ಸಂಬಂಧ ಹೊಂದಿರುವುದಿಲ್ಲ. ಆದುದರಿಂದ ನಿರೀಕ್ಷಿತ ಫಲ ದೊರಕುತ್ತಿಲ್ಲ. ರಾಜ್ಯಗಳು ಸಂಶೋಧನೆಯತ್ತ ತಲೆಹಾಕದೇ ಇರುವುದು ಉತ್ತಮ. ರಚನೆ ಹಾಗೂ ನಿರ್ವಹಣೆಗೆ ನೀಡಲ್ಪಡುವ ಪ್ರಾಮುಖ್ಯತೆಯ ಬಗ್ಗೆ ಅವರು ವಿಮರ್ಶಾತ್ಮಕ ಧೋರಣೆ ತಳೆದಿದ್ದಾರೆ. ಎಸ್. ಎ. ಸಿ. ಸಿ. ಯಂಥ ಸಮಿತಿಗಳು ಈಗ ತಮ್ಮ ಬುದ್ಧಿಶಕ್ತಿಯನ್ನುಪಯೋಗಿಸಿ ನೀಡುವ ಸಲಹೆಗಳಿಗಿಂತ ಪ್ರಸಿದ್ಧ ವಿಜ್ಞಾನಿಗಳ ನಿಷ್ಪಕ್ಷಪಾತ ಹಾಗೂ ಸ್ವತಂತ್ರ ಅಭಿಪ್ರಾಯಗಳು ವಿಜ್ಞಾನದ ನೀತಿಯನ್ನು ಗುರಿಗಾಣಿಸಬೇಕು ಎಂಬುದು ಇವರ ಅಂಬೋಣ.

ಈ ಕ್ರಮವು ಬ್ರಿಟನ್, ಅಮೇರಿಕ, ಜಪಾನ್ ಮತ್ತು ರಷ್ಯಗಳಲ್ಲಿವೆ.

ವಿಜ್ಞಾನವೊಂದು ಸಮೂಹಕ್ರಿಯೆ

ನವವಿಜ್ಞಾನ ಬಹಳಮಟ್ಟಿಗೆ ಸಾಮೂಹಿಕ ಪ್ರಯತ್ನ. ಕೆಲವು ವಲಯಗಳು ವಿಪುಲವಾದ ಮೂಲ ಸಂಪತ್ತಿನ ಕಡೆ ದೃಷ್ಟಿ ಹರಿಸುತ್ತಲಿವೆ. ಹೀಗಿರಲು, ಅದರ ಕ್ರಿಯೆಗಳು ಹಾಗೂ ಆವಶ್ಯಕತೆಗಳು ಕ್ರಮಬದ್ಧ ಆಡಳಿತಕ್ಕೊಳಪಡುವುದು ಅತ್ಯಾವಶ್ಯಕ. ವ್ಯರ್ಥವಾಗುವಿಕೆಯನ್ನು ತಡೆಗಟ್ಟಲು ಹಾಗೂ ಉತ್ತಮ ಉತ್ಪನ್ನ ತರುವಂತೆ ಮಾಡುವುದರಲ್ಲಿ ವಿಜ್ಞಾನದ ಆಡಳಿತಗಾರನ ಪಾತ್ರ ಬಹಳ ಹಿರಿದು. ಆರ್ಥಿಕ ಅಭಿವೃದ್ಧಿಗೆ ಇದು ಅತ್ಯಾವಶ್ಯಕ. 6,000 ಕೋಟಿ ರೂ.ಗಳ ಉತ್ಪಾದನಾ ಮಟ್ಟವನ್ನು ಸಾಧಿಸಲು ಕೈಗಾರಿಕಾ ಘಟಕಗಳು ಸಂಶೋಧನೆಗಳಲ್ಲಿ ಒಟ್ಟು ಹೂಡಿರುವ ಸುಮಾರು 15 ಕೋಟಿ ರೂ. (ಸರಕಾರಿ, ಖಾಸಗಿ ಮತ್ತು ವಿದೇಶಿ ಘಟಕಗಳ) ಮೊತ್ತ ಏನೇನೂ ಸಾಲದು ; ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ! ಈ ಬಂಡವಾಳವು ಸ್ಥೂಲ ರಾಷ್ಟ್ರೀಯ ಉತ್ಪಾದನೆಯ ಶೇ. 0.3 ರಷ್ಟಾಗುತ್ತದೆ. ತನ್ನ ಒಟ್ಟು ಮಾರಾಟದ ಶೇ. 0.06 ರಷ್ಟನ್ನು ಮಾತ್ರ ಕೈಗಾರಿಕಾ ಘಟಕಗಳು ಸಂಶೋಧನೆಗೆ ಮೀಸಲಾಗಿಡುತ್ತವೆ. ಇದರಿಂದ ಕಂಡುಬರುವ ಅಂಶವೆಂದರೆ ಸರಕಾರವೇ (ಪ್ರಮುಖವಾದ ಕೈಗಾರಿಕಾ ಮತ್ತು ಸಾರ್ವಜನಿಕ ಸೇವಾ ವಲಯಗಳು) ವೈಜ್ಞಾನಿಕ ಸಂಶೋಧನೆಗಳ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗಿದೆ. ರಾಜ್ಯಗಳು ಸಾಮಾಜಿಕ ಸಂಶೋಧನೆಯತ್ತ ಒಲವು ಹರಿಸುವುದು ಬಹುವಾಗಿ ಸಾಮಾಜಿಕ

ಹಾಗೂ ರಾಜಕೀಯ ಕಾರಣಗಳಿಂದಾದರೆ ಖಾಸಗೀ ಕೈಗಾರಿಕೆಗಳು ಸಂಶೋಧನೆಗಳನ್ನು ಕೈಗೊಳ್ಳುವುದು ಸ್ಪರ್ಧೆ ಹಾಗೂ ಪೈಪೋಟಿ ತೀವ್ರವಾದಾಗ ಮಾತ್ರ. ಆದರೆ ವಿಶ್ವದ ಪ್ರಗತಿಪರ ರಾಷ್ಟ್ರಗಳಲ್ಲಿ ಕಂಡುಬರುವ ಈ ಯಾವುದೇ ಪರಿಸ್ಥಿತಿ ಭಾರತದಲ್ಲಿ ಈಗಂತೂ ಕಂಡುಬರುತ್ತಿಲ್ಲ.

ರಾಜ್ಯಸರಕಾರಗಳ ಆಶ್ರಯದಲ್ಲಿರುವ ಸಂಶೋಧನಾಲಯಗಳು ಉತ್ತಮ ಯೋಜನೆಗೆ ಮತ್ತು ಆಡಳಿತಕ್ಕೊಳಪಟ್ಟು, ಸರಕಾರಿ ಮತ್ತು ಖಾಸಗಿ ವಲಯಗಳ ಘಟಕಗಳೊಂದಿಗೆ ಸಾಮೀಪ್ಯ ಬಾಂಧವ್ಯ ಸ್ಥಾಪಿಸಿವೆ. ಪರಿಸ್ಥಿತಿ ಹೀಗಿರಲು, ಇದಕ್ಕೆ ವಿಪರೀತವಾಗಿ, ಸರಕಾರಿ ವಲಯಕ್ಕಾಗಿ ಎಲ್ಲ ಸಂಪತ್ತುಗಳನ್ನು ವಿನಿಯೋಗಿಸುತ್ತ ಖಾಸಗಿವಲಯವು ತನ್ನ ಜವಾಬ್ದಾರಿಯನ್ನು ತಾನೇ ಹೊತ್ತು ನಿರ್ವಹಿಸಬೇಕೆಂಬ ಸ್ಥಿತಿಯನ್ನುಂಟುಮಾಡುವುದು ಎಷ್ಟಕ್ಕೂ ಸಲ್ಲದು. ಇದು ಖಾಸಗಿವಲಯವನ್ನು ಕತ್ತು ಹಿಡಿದು ಬಾವಿಗೆ ತಳ್ಳಿದಂತೆ.

ವಿದೇಶಗಳ ಅವಲಂಬನೆ

ಭಾರತವು ಸಂಶೋಧನಾಕಾರ್ಯದಲ್ಲಿ ತೀರ ಹಿಂದುಳಿದಿರುವುದರಿಂದ ವಿದೇಶಿ ತಾಂತ್ರಿಕತೆಯನ್ನವಲಂಬಿಸಬೇಕಾಗಿದೆ. 1957–66 ರ ಅವಧಿಯಲ್ಲಿ ವಿದೇಶಿ ತಾಂತ್ರಿಕ ಜ್ಞಾನವನ್ನು ಪಡೆದ ಸಹೋದ್ಯಮಗಳಲ್ಲಿ ಭಾರತದ ಒಟ್ಟು ವೆಚ್ಚದ ಶೇ. 47ರಷ್ಟು ಸಾಮಗ್ರಿಗಳಿಗಾಗಿ ಹಾಗೂ ಯಂತ್ರಗಳ ಬಿಡಿಭಾಗಗಳ ತಯಾರಿಕೆಗಳಿಗಾಗಿ ಖರ್ಚಾಗಿತ್ತು. ಇದರಲ್ಲಿ 600 ಕೋಟಿ ರೂ.ಗಳನ್ನು ವಿದೇಶಿತಾಂತ್ರಿಕತೆಗಾಗಿ ವೆಚ್ಚಮಾಡಲಾಗಿದೆ. ಪ್ರಮುಖಕೈಗಾರಿಕೆಗಳಿಗೆ ಅನಿವಾರ್ಯವಾದ ತಾಂತ್ರಿಕ-ವೈಜ್ಞಾನಿಕ ಜ್ಞಾನಕ್ಕಾಗಿ ವಿದೇಶಿಯರಮೇಲೆ ನಮ್ಮ ಅವಲಂಬನ ಅನಿವಾರ್ಯವಾಗಿ ಬಿಟ್ಟಿತು. ಇದರ ಜತೆ, ಎರವಲಾಗಿ ಪಡೆದ ತಾಂತ್ರಿಕ ಜ್ಞಾನವನ್ನು ನಮ್ಮದಾಗಿ ಮಾಡಿಕೊಳ್ಳುವ, ನಕಲು ಮಾಡುವ ಅಥವಾ ಕ್ರಮೇಣ ಕೆಲವನ್ನಾದರೂ ಸ್ವದೇಶದಲ್ಲಿ ದೊರಕಿಸಿಕೊಳ್ಳುವ ಯಾವ ಪ್ರಯತ್ನಗಳೂ ನಡೆಯಲಿಲ್ಲ. ದೇಶದ ಸಂಶೋಧನೆ ಹಾಗೂ ಅಭಿವೃದ್ಧಿಯೊಂದಿಗೆ—ಖಾಸಗಿ ಹಾಗೂ ಸರಕಾರಿ—ಸಾಮರಸ್ಯವಿಲ್ಲದಿರುವಿಕೆ ಇನ್ನೂ ಹೆಚ್ಚಿನ ವಿದೇಶಿ ಅವಲಂಬನೆಗೆ ಒತ್ತಾಸೆ ನೀಡಿತು; ತಜ್ಞಜ್ಞಾನ ಹಾಗೂ ತಾಂತ್ರಿಕ ಜ್ಞಾನದ ಅವಿರತ ಆಮದಿಗೆ ಅನುವಿತ್ತಿತು. 1961–67 ರ ಅವಧಿಯಲ್ಲಿ ಒಟ್ಟು 1650 ಸಹೋದ್ಯಮ ಕರಾರುಗಳು ಒದಗಿಬಂದವು. ಇದರಿಂದ ಭಾರತದ ಪರಿಸ್ಥಿತಿಯು ನಾಲ್ಕು ಬಗೆಗಳಲ್ಲಿ ಬವಣೆಗೊಳಗಾಯಿತು :

1. ಅನಾವಶ್ಯಕ ವಿದೇಶಿ ವಿನಿಮಯ ವ್ಯಯದಿಂದ ದೇಶದ ಮೂಲ ಆರ್ಥಿಕತೆಗೆ ಕೊಡಲಿಯೇಟು ;

2. ದೇಶದ ಸ್ಥಳೀಯ ಘಟಕಗಳೊಂದಿಗೆ ಅನಾರೋಗ್ಯಕರ ಪೈಪೋಟಿ ;
3. ಪರದೇಶೀಯ ಘಟಕಗಳಿಗೆ ಕಾರ್ಯಾವಕಾಶ ; ಮತ್ತು
4. ದೇಶದ ಉತ್ಪಾದಕರ ಹಾಗೂ ತಜ್ಞರ ಆದರ್ಶದ ಅವನತಿ.

ವಿಜ್ಞಾನಿಗಳ ಸ್ಥಾನಪಲ್ಲಟ ಹಾಗೂ ಇತರ ಕಾರಣಗಳು

ಇದರ ಪರಿಣಾಮವಾಗಿ, ವಿಶೇಷತಃ, ಸಂಶೋಧನೆಯ ಅಭಿವೃದ್ಧಿಗೆ ವಿಪತ್ತುಂಟಾಯಿತು. ವಿದೇಶಿ ತಜ್ಞತೆಯತ್ತ ಆದ್ಯಗಮನ ಹರಿಸುವಿಕೆಯು ಸ್ವದೇಶಿ ತಜ್ಞತೆಯನ್ನು ಕಡೆಗಣಿಸಲು ಕಾರಣವಾಯಿತು. ಅನೇಕ ಸ್ವದೇಶಿ ವಿಜ್ಞಾನಿಗಳು ಹತಾಶರಾದರು. ತಮ್ಮ ಅವಿರತ ಅನ್ವೇಷಣಾ ಬುದ್ಧಿಗೆ ತಮ್ಮ ದೇಶದಲ್ಲಿ ಅವಕಾಶ, ಉತ್ತೇಜನಗಳು–ಧನರೂಪದಲ್ಲಿ–ಸಿಗದಿರಲು ಅವರು ಅಸಹಾಯಕರಾದರು. ದೇಶೀ ಪ್ರತಿಭೆಯ ಪಲಾಯನಕ್ಕೆ ಅವಕಾಶವಾಯಿತು. ವಿಜ್ಞಾನಿಗಳ ಗಣನೀಯ ಸ್ಥಾನ ಪಲ್ಲಟ ಹಾಗೂ ನಿರುದ್ಯೋಗಗಳು ತಲೆದೋರಿದುವು. ಅತೃಪ್ತಿ, ಅಸಮಾಧಾನ ಹಾಗೂ ಅಸಂತುಷ್ಟಿಗಳಿಗೆ ಅವಕಾಶವಾಯಿತು. ಇದಲ್ಲದೆ, ಭಾರತವು ಎರಡು ಬಗೆಗಳಲ್ಲಿ ಹಣ ತೆರಬೇಕಾಯಿತು : ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿದ ತನ್ನ ಸ್ವಂತ ಬಂಡವಾಳಕ್ಕೆ ತಕ್ಕ ಉತ್ಪನ್ನ ಬರಲಿಲ್ಲ. ದೇಶದ ವಿಜ್ಞಾನಿಗಳು ಹಾಗೂ ತಂತ್ರಜ್ಞರು ತ್ರಿಶಂಕು ಸ್ವರ್ಗ ಹತ್ತಿದರು, ಉದ್ಯೋಗವಿಲ್ಲದಾದರು ಅಥವಾ ಲಾಭಧಾಯಕ ವೃತ್ತಿ ಗಳಿಸಿದಾದರು. ಅಲ್ಲದೆ, ಮುಂದುವರಿದ ದೇಶಗಳ ಜತೆ ತಜ್ಞತೆ ಹಾಗೂ ತಾಂತ್ರಿಕ ಜ್ಞಾನಕ್ಕಾಗಿ ಮಾಡಿಕೊಂಡ ಸಹೋದ್ಯಮಗಳಿಗಾಗಿ ದೇಶವು ಬಹಳ ಹಣವನ್ನು ತೆರಬೇಕಾಯಿತು.

ತೃತೀಯ ಯೋಜನಾವಧಿಯಲ್ಲಿ ಸಂಶೋಧನೆಗೆ ಮೀಸಲಾಗಿಟ್ಟ 250 ಕೋಟಿ ರೂ. ಗಳಲ್ಲಿ ಶೇ. 1. 16 ರಷ್ಟು ಮಾತ್ರ ಯಂತ್ರಶಿಲ್ಪ ಸಂಶೋಧನೆಗೆ ವಿನಿಯೋಗಿಸಲಾಯಿತು. ಬಹಳಂಶವು ರಾಷ್ಟ್ರೀಯ ಸಂಶೋಧನಾಲಯಗಳು ಹಾಗೂ ವಿಶ್ವವಿದ್ಯಾನಿಲಯಗಳು ನಡೆಸುವ ಸಂಶೋಧನೆಗಳಿಗೆ ವೆಚ್ಚವಾಯಿತು. ವಿದೇಶಗಳಲ್ಲಾದರೋ ಶೇ. 40 ರಿಂದ ಶೇ. 45ರ ವರೆಗೆ ಇದೆ ಇದರ ಪ್ರಮಾಣ. ಇನ್ನು ಸ್ವಾಮ್ಯ–ಸನ್ನದುಗಳ ಬಗ್ಗೆ ಹೇಳುವುದಾದರೆ ಶೇ. 90 ರಷ್ಟು ಹಕ್ಕುಗಳೆಲ್ಲ ವಿದೇಶೀ ತಂತ್ರಜ್ಞತೆಯಿಂದ ಕೂಡಿದವುಗಳೇ. ಸರಕಾರ ನಡೆಸುವ ಸಂಶೊಧನೆಗಳ ಬಗ್ಗೆ ಹೇಳುವುದಾದರೆ ರಾಷ್ಟ್ರೀಯ ಸಂಶೋಧನಾ ಅಭಿವೃದ್ಧಿ ಸಮಿತಿಯೊಂದಿನೆ. ರಾಷ್ಟ್ರೀಯ ಸಂಶೋಧನಾಲಯಗಳಲ್ಲಿ ನಡೆಯುವ ಸಂಶೋಧನೆಗಳ ರೂಪರೇಷೆಗಳನ್ನು ನಿರ್ಧರಿಸುವ ಸಂಸ್ಥೆಯಿದು. ಸುಮಾರು 9.82 ಲಕ್ಷ ರೂ. (ಖರ್ಚುಗಳನ್ನು ಬಿಟ್ಟು) ಗಳನ್ನು ಗೌರವ ಧನ ಮತ್ತು ಸಂಭಾವನೆಯ ರೂಪಗಳಲ್ಲಿ ಇದು ಸ್ವೀಕರಿಸಿದೆ ಎಂದು ಅಂದಾಜು ಮಾಡಲಾಗಿದೆ. 1967–68ರ ಸ್ಥೂಲ ರಾಷ್ಟ್ರೀಯ ಉತ್ಪಾದನೆಯಾದ 20.60 ಕೋಟಿ ರೂ.ಗಳಿಗೆ— ಈ ಅನ್ವೇಷಣೆಗಳಿಂದುಂಟಾದುದು— ಮತ್ತು

ಕೈಗಾರಿಕಾ ಉತ್ಪಾದನೆಯಾದ 4,000 ಕೋಟಿ ರೂ. ಗಳಿಗೆ ಹೋಲಿಸಿದಾಗ ಇದು (ದೇಶದ ಒಟ್ಟು ಕೈಗಾರಿಕಾ ಉತ್ಪಾದನೆಯು) ಕೇವಲ ಶೇ. 1.8 ಅಥವಾ ಶೇ. 1 ರಷ್ಟಾಗುವುದು. ಇದರಿಂದ ತಟ್ಟನೆ ಹೊಳೆಯುವ ಅಂಶವೆಂದರೆ, ದೇಶಾಭಿವೃದ್ಧಿಯಲ್ಲಿ ರಾಷ್ಟ್ರೀಯ ಸಂಶೋಧನಾಲಯಗಳ ಪಾತ್ರ ಗೌಣವಾಗಿದೆ ಎಂಬುದು.

ಸ್ವಾವಲಂಬಿ ಕೈಗಾರಿಕಾಭಿವೃದ್ಧಿಯನ್ನು ಸಾಧಿಸಲು ಕೇಂದ್ರ ಸರಕಾರವು ಒಂದು ಯೋಜನೆಯನ್ನು ಇತ್ತೀಚೆಗೆ ಸಿದ್ಧಪಡಿಸಿದೆ, ನಿರೀಕ್ಷಿಸಿದ ಉತ್ಪಾದನಾ ಪ್ರಮಾಣ ಮತ್ತು ಉನ್ನತ ಹಾಗೂ ಬೃಹತ್ ಬಂಡವಾಳ ಹೂಡಿರುವ ಎಲ್ಲ ಕೈಗಾರಿಕಾ ಘಟಕಗಳು ತಮ್ಮ ಉತ್ಪಾದನೆ ಹಾಗೂ ವಿಸ್ತರಣಾ ಯೋಜನೆಗಳನ್ನು ಕೈಗೊಳ್ಳುವ ಮುನ್ನ ಸಂಶೋಧನೆಗಾಗಿ ಕಾರ್ಯಕ್ರಮ ರೂಪಿಸಿ, ಅದರ ಅನುಷ್ಠಾನಕ್ಕೆ ತಕ್ಕ ಕ್ರಮ ಕೈಗೊಳ್ಳಲೇಬೇಕೆಂದು ಹೇಳುವ ಯೋಜನೆ ಇದು. ಇದು ಕಡ್ಡಾಯವೆಂದು ಘೋಷಿಸಲಾಗಿದೆ. ಕೈಗಾರಿಕಾಭಿವೃದ್ಧಿ ಸಚಿವ ಶಾಖೆಯು ಈ ದಿಶೆಯಲ್ಲಿ ತನ್ನ ಗಮನವನ್ನು ತೀವ್ರವಾಗಿ ಹರಿಸುತ್ತಲಿದೆ. ಈ ಬಗ್ಗೆ ಅದು ಅಂಕಿ–ಅಂಶಗಳನ್ನು ಸಂಗ್ರಹಿಸಿದೆ. ಮಧ್ಯಮ ಹಾಗೂ ಸಣ್ಣ ಪ್ರಮಾಣದ ಘಟಕಗಳಿಗಾಗಿ ಸಹಕಾರ ತತ್ತ್ವದ ಆಧಾರದ ಮೇಲೆ ಸಂಶೋಧನಾಲಯಗಳು ಸ್ಥಾಪಿಸಲ್ಪಡುವುದಾಗಿ ಕೇಳಿ ಬರುತ್ತಲಿದೆ. ಇದೊಂದು ಮಾತಂತೂ ನಿಜ : ಈ ದೇಶದಲ್ಲಿ ಕಡ್ಡಾಯವಾದ ವಿನಾ ಯಾವ ಒಂದು ಆರ್ಥಿಕ ಹೆಜ್ಜೆಯೂ ಪರಿಣಾಮಕಾರಿಯಾಗುವುದಿಲ್ಲ.

ನಮ್ಮ ದೇಶದಲ್ಲಿ ತಾಂತ್ರಿಕತೆಯ ಆಮದು ನೀತಿಯಲ್ಲಿ ಲೋಪ-ದೋಷಗಳಿವೆ. ಕಬ್ಬಿಣ-ಉಕ್ಕು, ಅಲ್ಯೂಮಿನಿಯಂ (ಬಡವರ ಚಿನ್ನ) ಮತ್ತು ಕಾಗದದ ಕೈಗಾರಿಕೆಗಳು ಅನೇಕ ದೇಶಗಳಿಂದ ಪಡೆದ ಒಂದೇ ವಿಧದ ತಾಂತ್ರಿಕ ಜ್ಞಾನವನ್ನು ಬಳಸಿಕೊಳ್ಳುತ್ತಿವೆ. ಈ ಅನಾವಶ್ಯಕ ಖರ್ಚನ್ನು ತಡೆಯಬಹುದಾಗಿದೆ. ಅಲ್ಲದೇ ಹಳೆಯದಾದ ತಾಂತ್ರಿಕ ಜ್ಞಾನದ ಬಳಕೆಯೂ ನಡೆಯುತ್ತಲಿದೆ. ಯೋಜನಾ ಆಯೋಗ ಹಾಗೂ ವಿಜ್ಞಾನ ಮತ್ತು ತಾಂತ್ರಿಕತೆಯ ರಾಷ್ಟ್ರೀಯ ಸಮಿತಿಯು ಯಂತ್ರ ಸಾಮಗ್ರಿಗಳ ಕೈಗಾರಿಕಾ ರಂಗದಲ್ಲಿ ಕೈಗೊಂಡ ಅಧ್ಯಯನಗಳು ಈ ಅಂಶದತ್ತ ಬೆಳಕುಬೀರುತ್ತವೆ. ಆಮದರಿಂದ, ತಾಂತ್ರಿಕತೆಯ ಆಮದನ್ನು ನಿಯಂತ್ರಿಸುವ ತಾಂತ್ರಿಕ ಅಭಿವೃದ್ಧಿ ನಿರ್ದೇಶನ ಘಟಕದಲ್ಲಿ ತಕ್ಕ ಪರಿಷ್ಕಾರಗಳು ನಡೆಯುವುದು ಅತ್ಯಾವಶ್ಯಕವಾಗಿದೆ.

ಮುಂದಿನ ದಾರಿಯತ್ತ

ದೇಶದ ಹಿಂದುಳಿದ ತಾಂತ್ರಿಕತೆಗೆ ಅಲ್ಪ ಗುಣಮಟ್ಟದ ತಾಂತ್ರಿಕತೆಯ ಆಮದು ಕಾರಣವಾಗಿದೆ. ಸರಿಯಾದ ಗೌರವಧನ ನೀಡದಿರುವುದು ಇದಕ್ಕೆ ಕಾರಣ. ಇದರ ಪರಿಣಾಮವಾಗಿ, ಉತ್ಪಾದನೆಯ ಗುಣಮಟ್ಟ ಕೀಳಾಗುತ್ತದೆ. ಉತ್ಪಾದನೆಗೆ

ತಗಲುವ ವೆಚ್ಚ ಅಧಿಕವಾಗುತ್ತದೆ. ಈ ದಿಶೆಯಲ್ಲಿ ಜಪಾನ್ ದೇಶದ ಮಾದರಿಯನ್ನು ನಾವು ಅನುಸರಿಸಬಹುದಾಗಿದೆ. ಸ್ವದೇಶಿ ಜ್ಞಾನದ ಬೆಳವಣಿಗೆಗೆ ಉತ್ತೇಜನ ನೀಡುವುದರ ಜತೆಗೆ ಮುಂದುವರಿದ ದೇಶಗಳ ತಾಂತ್ರಿಕ ಜ್ಞಾನವನ್ನು ಪಡೆಯುವುದು ಅತ್ಯಗತ್ಯ. ಅವುಗಳ ಹೊಂದಾಣಿಕೆಯು ದೇಶದ ಪರಿಸ್ಥಿತಿಗನುಸಾರವಾಗಿ ನಡೆಯಲೇ ಬೇಕು, ಅಷ್ಟೇ.

ಅಂದರೆ, ಜಪಾನಿಯರು ಪ್ರಪಂಚದ ಅತ್ಯುತ್ತಮ ತಾಂತ್ರಿಕತೆಯನ್ನು ಆಮದು ಮಾಡುವರು; ದೇಶದ ಪರಿಸ್ಥಿತಿಗೆ ಅದನ್ನು ಹೊಂದಿಸಿಕೊಳ್ಳುವರು, ನಕಲು ಮಾಡುವರು ; ಬಹು ಹೆಚ್ಚಿನ ಗೌರವಧನ ನೀಡುವರು. ಹೀಗಾಗಿ ಅವರು ವಿಶ್ವದ ಇತರ ಪ್ರಗತಿಪರ ದೇಶಗಳೊಂದಿಗೆ ಸರಿಸಮನಾಗಿ ಪೈಪೋಟಿ ನಡೆಸುವ ಸಾಮರ್ಥ್ಯ ಪಡೆದಿದ್ದಾರೆ.

ಆಮದು ಮಾಡಿಕೊಂಡ ತಾಂತ್ರಿಕತೆಯನ್ನು ತಿದ್ದಲು ಹಾಗೂ ಬಳಸಲು ತಕ್ಕ ಕಾರ್ಯಗಳನ್ನು ದೇಶದ ಉದ್ದಗಲಕ್ಕೂ ಹರಡಿರುವ ಸಂಶೋಧನಾಲಯಗಳು ಕೈಗೊಳ್ಳಬೇಕಾಗಿದೆ. ಹೊಸಹೊಸ ಬಗೆಯ ವಿಧಾನಗಳನ್ನನುಸರಿಸಿ ಅದು ದೇಶದ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಕಾರ್ಯವೆಸಗಬೇಕಾಗಿದೆ.

ಪಾಶ್ಚಾತ್ಯ ವಿಮರ್ಶೆಯ ಪ್ರಸಂಗಗಳು
(17ನೆಯ ಶತಮಾನದವರೆಗೆ)

ಸಿ. ಆರ್. ಅಣಜಿ

ನಮ್ಮದೀಗ ವೈಜ್ಞಾನಿಕ ಯುಗ. ನಮಗೆ ದೊರೆಯುವ, ನಾವು ದೊರಕಿಸ ಬಹುದಾದ ಕೃತಿಗಳ ಅಧ್ಯಯನ ಮಾಡಿ ಅವುಗಳಲ್ಲಿ ಯಾವುದು ಅತಿ ಪ್ರಾಚೀನ ವೆಂಬ ವಿಷಯಕ್ಕೆ ಕಚ್ಚಿಕೊಳ್ಳದಿದ್ದರೆ ಈ ಕಾವ್ಯ-ಲಕ್ಷಣ ಗ್ರಂಥ ಆದಿಯು ಬೀಜವೃಕ್ಷ ನ್ಯಾಯವಾಗುವ ಸತ್ವವನ್ನು ಮೆರೆಯುವುದು.

ಆದರೆ ಅಂಥ ನ್ಯಾಯವು ಬಿಡಿಸಲಾರದ ಒಗಟೆಂದು ನಮಗೀಗ ತೋರಲಾರದು. ಕವಿಗಳು ತಮ್ಮ ಕಾರ್ಯವಿಧಾನದಲ್ಲೊಂದು ನಕ್ಷೆಯನ್ನು ರೂಪಿಸಿಕೊಂಡೇ ಬರೆದದ್ದಲ್ಲ. ಆದರೆ ಅತಿ ಹಿರಿಯನಾದ ಹೋಮರ್ ಕವಿಯು ತನ್ನ ರಚನೆಗಳಿಗೆ ಸ್ಫೂರ್ತಿ ದೇವಿಯರ ಸಹಾಯ ಬೇಡಿ ಪ್ರಾರ್ಥಿಸಿರುವನೆಂದರೆ ಅವನು–ಕಾವ್ಯರಚನೆಯು ದೈವೀ ಸ್ಫೂರ್ತಿಯಿಂದ ಸಾಧ್ಯವಾಗುವುದೆಂಬ–ತತ್ವಒಂದನ್ನು ಹೇಳಿದನೆಂದೇ ನಾವೀಗ ಭಾವಿಸಬಹುದಾಗಿದೆ. ಇಲ್ಲಿ ವಿಮರ್ಶೆಯು ಕಾವ್ಯದಷ್ಟೇ ಪುರಾತನವೆಂಬ ಸೂಚನೆ ಇರುವುದನ್ನು ನಾವು ಗಮನಿಸಬಹುದು.

ಗ್ರೀಕ್ ಕಾಮೆಡಿಕಾರ ಅರಿಸ್ಟೋಫೆನಿಸ್‌ನ The Frogs (405 B.C.) ನಾಟಕ ದಲ್ಲೊಂದು ಪ್ರಸಂಗ : ಪ್ರಸಿದ್ಧ ಟ್ರಾಜೆಡಿಕಾರ ಯೂರಿಪಿಡಿಸ್ ಭೂಮಿಯನ್ನು ಬಿಟ್ಟ. ಅವನಿಲ್ಲದ ನಾಟಕಲೋಕ ನಿಸ್ಸಾರ. ನಾಟಕೋತ್ಸವಗಳ ಮಹಾ ಪೋಷಕ ಹಾಗೂ ರಂಗಭೂಮಿಯ ಅಧಿದೈವ ಡಯೋನಿಸಸ್ ಆತನನ್ನು ಕರೆತರಲು ಸತ್ತವರ ಲೋಕ (Hades)ಕ್ಕೆ ಹೋಗುತ್ತಾನೆ. ಆದರೆ ಅಲ್ಲಿ ಡಯೋನಿಸಸ್‌ನ ಅಧ್ಯಕ್ಷತೆಯಲ್ಲಿ ಯೂರಿಪಿಡಿಸ್‌ನಿಗೂ ಅವನಿಗಿಂತ ಮೊದಲೇ ಆ ಲೋಕವನ್ನು ಸೇರಿದ್ದ ಇಸ್ಕಿಲಸ್ ನಿಗೂ ಒಂದು ಸ್ಪರ್ಧೆ ಏರ್ಪಡುತ್ತದೆ. ಅದರಲ್ಲಿ ಇಸ್ಕಿಲಸ್ ಗೆಲ್ಲುತ್ತಾನೆ.

ಡಯೋನಿಸಸ್ ಯಾರನ್ನು ಕರೆತರಬೇಕು ? ಈ ಪ್ರಶ್ನೆಗಿಂತ ಕುತೂಹಲಕಾರಿ ಯಾದುದು ಆ ಮಹಾಕವಿಗಳ ತುಲನೆಗೆ ಏರ್ಪಡಿಸಲಾಗುವ ಕ್ರಮ. ಅದಕ್ಕಾಗಿ ನೇರವಾಗಿ ಒಂದು ತಕ್ಕಡಿಯನ್ನೇ ತಂದಿರುತ್ತಾರೆ. ಈರ್ವರು ಕವಿಗಳೂ ಅಧ್ಯಕ್ಷನ ಆಜ್ಞೆಯಮೇರೆಗೆ ತಮ್ಮ ಕೃತಿಗಳಿಂದ ಒಂದೊಂದು ಪಙ್ತಿಯನ್ನು ಉದ್ಧರಿಸಬೇಕು. ಆಗ ತಕ್ಕಡಿ ಯಾವಕಡೆಗೆ ಒಲೆಯುವುದೋ ಆ ಕವಿಯು ಹೆಚ್ಚಿನ ತೂಕ.

ಇದು ಸ್ಪಷ್ಟವಾಗಿ ತುಲನಾತ್ಮಕ ವಿಧಾನದ ಗೇಲಿ. ಆದರೆ ಶ್ರೇಷ್ಠತೆಯನ್ನೊಪ್ಪಿಕೊಳ್ಳುವಲ್ಲಿ ಅವಧಾನದ ಪ್ರಾಮುಖ್ಯತೆಯನ್ನು ಅಲ್ಲಗಳೆಯುವಂತಿಲ್ಲ ನಾವು.

ಪ್ಲೇಟೋನ ಇಯೋನ್ (Ion) ಕ್ರಿ.ಶ. ಐದನೆಯ ಶತಮಾನದ ಪ್ರಥಮ ದಶಕದ ಕೃತಿ. 399ರಲ್ಲಿ ಸಾಕ್ರೆಟಿಸ್‌ನ ಮರಣಾನಂತರದಲ್ಲಿ ರಚಿತವಾದುದು. ಇಯೋನ್ ಒಬ್ಬ ಸಂಚಾರಿ ಗಾಯಕ (rhapsode). ಅವನು ಕಾವ್ಯವನ್ನು ಹಾಡುತ್ತಾ ಜನರ ಮನರಂಜಿಸುತ್ತಾ ಸಂಚಾರಮಾಡುವವ. ಅವನು ಹೋಮರನೊಬ್ಬನನ್ನು ಮಾತ್ರ ಬಲ್ಲ. ಉಳಿದ ವಿಷಯಗಳು ಬಂದಾಗ ನಿಶ್ಚಿಂತೆಯಿಂದ ನಿದ್ದೆಹೋಗಿ ಬಿಡುವವ. ನಗರರಾಜ್ಯಗಳ ಜೀವನದ ಕಹಿ ಅನುಭವಗಳ ರುಚಿಯನ್ನರಿತಿರುವಂಥ ಸಾಕ್ರಟಿಸ್ ಇಯೋನ್‌ನ ಮರ್ಮವನ್ನರಿಯುವ ದಿಶೆಯಲ್ಲಿ ಉತ್ಸುಕನಾಗಿರುವಂತೆ ಕೆಲವು ಸೂಕ್ಷ್ಮ ಪ್ರಶ್ನೆಗಳನ್ನು ಕೇಳಿ ಕೆಲವು ಅಸ್ವಸ್ಥ ಉತ್ತರಗಳನ್ನು ಮಾತ್ರ ಪಡೆಯಲು ಸಮರ್ಥನಾಗುತ್ತಾನೆ. ಈ ಸಂವಾದದಲ್ಲಿ-ಇಯೋನ್‌ನ ಕಸುಬಿನಲ್ಲಿ ಸ್ವಪ್ರಯತ್ನದ 'ತಂತ್ರ' ಎಂಬುದೊಂದಿಲ್ಲವೆಂಬ ಅಂಶ ವ್ಯಕ್ತವಾಗುತ್ತದೆ. ಅವನ ಕಲೆಯಲ್ಲಿ ಸಾಕ್ರಟಿಸ್ ಹೇಳುವ art and knowledge (technē kai episteme) ನಂಥ ಸಂಬಂಧವಿಲ್ಲ.

ಕಲೆ ಮತ್ತು ಜ್ಞಾನ-ತಿಳುವಳಿಕೆ: ಕಲೆಯಲ್ಲಿ ಸ್ವಪ್ರಯತ್ನದ ಭಾಗವಿದೆ ಎಂಬುದಕ್ಕೆ ಇಯೋನ್ ಹೊರತಾಗುತ್ತಾನೆ. ವೈಚಾರಿಕತೆಗೆ ಪ್ರಧಾನ ಅವಲಂಬನೆ ಎನಿಸಿರುವ ಗ್ರೀಕ್ ಸಾಹಿತ್ಯ ಹಾಗೂ ಉತ್ತಮ ಜೀವನದ ಈ ಪ್ರಸಂಗದಲ್ಲಿಯ ಪ್ರಶ್ನೆ ಕಾವ್ಯಕಲೆಯಲ್ಲಿ ತಂತ್ರವೆಂಬುದಿದೆಯೇ ? ಎಂಬ ಮೌಲಿಕ ಪ್ರಶ್ನೆಗಳಲ್ಲೊಂದು.

ಕಲೆಯು 'ಒಂದು'. ಒಂದೇ. ಇದು ಮುಂದಿನ ಅಂಶ. ಪ್ಲೇಟೋನ Symposiumನ ಕೊನೆಯಲ್ಲೊಂದು ಸಂದರ್ಭ. ಒಂದು ಸಂಪೂರ್ಣ ರಾತ್ರಿಯ ಪಾನಸ್ಪರ್ಧೆಯಲ್ಲಿ ಎಲ್ಲರನ್ನೂ ಹಿಂದೆ ಹಾಕಿರುವ ಸಾಕ್ರಟಿಸ್ ಎಚ್ಚರದಲ್ಲಿ ಕುಳಿತಿದ್ದಾನೆ. ಅವನ ಒಂದು ಪಕ್ಕದಲ್ಲಿ ಟ್ರಾಜಿಕ್ ಕವಿ ಆಗಥನ್, ಇನ್ನೊಂದು ಪಕ್ಕದಲ್ಲಿ ಅರಿಸ್ಟೋಫೆನಿಸ್ ಕುಳಿತಿದ್ದಾರೆ. ಅರುಣೋದಯದ ಹೊಂಬೆಳಕಿನಲ್ಲಿ ಒಂದು ಜೊಂಪಿನಲ್ಲೆಂಬಂತೆ ಅವರನ್ನೊಪ್ಪಿಸಲು ಪ್ರಯತ್ನಿಸುತ್ತಿದ್ದಾನೆ ಸಾಕ್ರಟಿಸ್. ಕಾವ್ಯವು 'ಒಂದು' ಕಲೆಯಾದುದರಿಂದ ಟ್ರಾಜಿಕ್ ಕವಿಯು ಹರ್ಷಕಾವ್ಯವನ್ನೂ ಹಾಗೆಯೇ ಹರ್ಷನಾಟಕಗಳ ಕವಿಯು 'ಗಂಭೀರ' ಕಾವ್ಯವನ್ನೂ ಬರೆಯಲು ಸಾಧ್ಯ ಎಂಬುದು ಅವನ ಅಂಬೋಣ.

ಮುಂದಿನ ಚರ್ಚೆಯಲ್ಲಿ ಅವನ ವಾದವು ಕವಿಗಳು ಒಂದು ವೈಜ್ಞಾನಿಕ ತಂತ್ರದಿಂದ ಕಾರ್ಯಸಾಧನೆ ಮಾಡುವುದಿಲ್ಲ ಎಂಬುದಕ್ಕೆ ವಿರುದ್ಧವಾಗುತ್ತದೆ. ಕವಿಗಳು

ತಂತ್ರಒಂದನ್ನು ಉಪಯೋಗಿಸಿಕೊಂಡೇ ಇರುತ್ತಾರೆಂಬುದು ನಂತರದ ಅನುಭವವಾಗಿರಬಹುದು. ಇಲ್ಲಿ ಸಾಕ್ರಟಿಸ್‌ನ ವಾದದ 'ವಿಧಾನ'ವು ಗಮನೀಯವೂ ಆಕರ್ಷಕವೂ ಆಗಿರುವುದನ್ನು ಒಪ್ಪಬೇಕಾಗುತ್ತದೆ.

ಕಾವ್ಯದ (ಕವಿತೆಯ) ಸಮರ್ಥನೆಯ ಕುರಿತಾದ ತನ್ನ ಪ್ರಬಂಧದಲ್ಲಿ ಸರ್ ಫಿಲಿಪ್ ಸಿಡ್ನೀ ಕವಿಗಳಿಗೆ (ಕವಿತೆಗೆ) ಇರುವ ವಿರೋಧಗಳ ಪಟ್ಟಿಮಾಡುತ್ತಾ ಕೊನೆಯಲ್ಲಿ

'... and lastly and chiefly they cryout with an open mouth as if they outshot Robinhood, that Plato banished them out of his Commonwealth...'

ಹೀಗೆನ್ನುತ್ತಾನೆ. ಇದರ ಮೂಲವು ಪ್ಲೇಟೋನ Republic Xನೆಯ ಪುಸ್ತಕದಲ್ಲಿ ಬರುವ ಪ್ರಸಿದ್ಧ ವಿಚಾರ. ಅವನ ಆದರ್ಶ ರಾಜ್ಯದಲ್ಲಿ ಕವಿಗಳಿಗೆ (ನಾಟಕಕಾರರಿಗೆ) ಸ್ಥಾನವಿಲ್ಲ. ಅಂಥವನೊಬ್ಬನು (panto minic gentleman) ತನ್ನ ಕಲೆಯ ಪ್ರದರ್ಶನಕ್ಕೆ ಅನುಮತಿ ಬೇಡಿ ಬಂದರೆ ಆದರ್ಶ ರಾಜ್ಯದ ಪಿತೃಗಳ ಉತ್ತರ ಕಠಿಣವಾದುದು. ತಾವು ಅವನ ಕಲೆಯನ್ನು ಗೌರವಿಸುವುದಾಗಿಯೂ ಬೇಕಾದರೆ ಅವನನ್ನು ಪೂಜಿಸುವುದಾಗಿಯೂ ಹೇಳುವರು. ಆದರೆ ತಮ್ಮ ರಾಜ್ಯದಲ್ಲಿ ಅಂಥ ಜನರಿಗೆ ಅವಕಾಶವೇ ಇಲ್ಲವೆಂಬುದನ್ನು ಸ್ಪಷ್ಟಪಡಿಸುವವರು ಅವರು. ಪರಿಣಾಮವಾಗಿ ಪ್ಲೆಟೋ ಒಬ್ಬ ತೀವ್ರ ಕಾವ್ಯ (ಕವಿ) ದ್ವೇಷಿ ಎಂಬಂತೆ ವಾದಿಸಲಾಗುತ್ತದೆ.

ಆದರೆ ಆದರ್ಶಪುರುಷರ ರಾಜ್ಯದಲ್ಲಿ ಕವಿತೆಯು ಎಷ್ಟರಮಟ್ಟಿಗೆ ಸಾಧು ಎಂಬುದಕ್ಕೆ ಪ್ಲೆಟೋ ವಿಧಿಸಿರುವ ಮಿತಿಯನ್ನು ಗಮನಿಸಬೇಕು.

...We are ready to acknowledge that Homer is the greatest of poets and first of tragedy writers but we must remain firm in our conviction that hymns to gods and praises of famousmen are the only Poetry which ought to be admitted into our state...

Republic X 607

ಕಾವ್ಯಮೀಮಾಂಸೆಯ ಪ್ರಸಿದ್ಧ ಪದಗಳಲ್ಲೊಂದಾದ ಅನುಕರಣೆ (mimesis, imitation) ಯ ಕಲ್ಪನೆಗೆ ಎಡೆದೊರೆಯುವುದು Republic ನ II ಮತ್ತು III ನೆಯ ಪುಸ್ತಕಗಳಲ್ಲಿ. ಅಲ್ಲಿ ಅವನು ಕವಿತೆಯು ಸಟೆ, ದುಷ್ಟಸಟೆ fictions wicked fictions) ಗಳೊಡನೆ ವ್ಯವಹರಿಸುತ್ತದೆಂಬ ವಿಷಯ ಎತ್ತುತ್ತಾನೆ. ಈ ವ್ಯವಹಾರದಿಂದ ಕವಿತೆಯು ಸತ್ಯವನ್ನು ಮರೆಮಾಜುವುದು. ಅಲ್ಲದೆ, ಅನುಕರಣೆಗೆ ಮಾದರಿ

ಕೀಳಾದಾಗ ಪರಿಣಾಮವೂ ಕೀಳೇ. 'Let our slaves and hired strangers act our Comedies for us' ಎಂದು ತನ್ನ Laws ಗಳಲ್ಲಿ ಹೇಳುತ್ತಾನೆ ಪ್ಲೆಟೋ.

ಅವನ ಪ್ರಕಾರ mimesis ಪದವು ಮೂಲ ವಿಮರ್ಶೆಯಲ್ಲಿ ಮನುಷ್ಯನನ್ನು ಸತ್ಯದಿಂದ ದೂರ ಕೊಂಡೊಯ್ಯುವುದೆಂದಾಗುತ್ತದೆ :

> ಸೃಷ್ಟಿಕರ್ತನು ಎಲ್ಲ ವಸ್ತುಗಳನ್ನೂ ಮಾಡಿನವನು. ಆದರಲ್ಲಿ ಮಂಚ (ideal bed) ವನ್ನು ಪುನಃ ಸೃಷ್ಟಿಸುವವನು ಬಡಗಿ. ಈಗ ಮಂಚದ ಚಿತ್ರವನ್ನು ಚಿತ್ರಕಾರ ಬರೆದನೆಂದರೆ ಅವನು ಒಂದು ಆಕಾರದ ಹೋಲಿಕೆಯನ್ನು ಮಾತ್ರ ಸೃಷ್ಟಿಸುವವನಾಗುತ್ತಾನೆ. ಈ ಕ್ರಮದಲ್ಲಿ ಮೂಲದಿಂದ ಬಡಗಿಯು ಒಂದು ಮಡಿಯೂ ಚಿತ್ರಕಾರನು ಎರಡು ಮಡಿಯೂ ಸತ್ಯದಿಂದ ದೂರ (twice removed from truth.)
>
> ಅಲ್ಲದೆ, ಅನುಕರಣೆಯಿಂದ ಮನುಷ್ಯನು ಸತ್ಯದಿಂದ ದೂರಹೋಗುವಂತೆ ಕವಿತಾಪ್ರಕಾರದ ಅನುಕರಣೆಗೆ ಗೊತ್ತುಗುರಿ ಇಲ್ಲದಾಗ ಅದು ಮನುಷ್ಯನನ್ನು ಅವಶ್ಯಕತೆಗಿಂತ ಹೆಚ್ಚು ಮೃದುಗೊಳಿಸಿ ಕ್ರಮೇಣ ನಿರುಪಯೋಗಿಯನ್ನಾಗಿ ಮಾಡುವುದು.

ಅರಿಸ್ಟಾಟಲ್ ಮೆಸಿಡೋನಿಯಾದ ಸ್ಟಾಗೈರಾದಲ್ಲಿ ಕ್ರಿಸ್ತಪೂರ್ವ 384ರಲ್ಲಿ ಹುಟ್ಟಿದ. ಅವನ ತಂದೆಯು ಮೆಸಿಡೋನಿಯಾದ ರಾಜ ಅಲೆಗ್ಸಾಂಡರ್ ದಿ ಗ್ರೇಟ್‌ನ ತಾತ ಅವಿನ್ಟಸ್‌ನ ಸ್ನೇಹಿತ ಹಾಗೂ ವೈದ್ಯನಾಗಿದ್ದ. ಬಾಲ್ಯದಿಂದಲೂ ಅರಿಸ್ಟಾಟಲ್‌ನಿಗೆ ವಿಜ್ಞಾನದ ಮೂಲ ಪುರುಷನಾಗಲು ಯೋಗ್ಯ ವಾತಾವರಣವಿದ್ದೇ ಇದ್ದಿತು. ಅವನು ತನ್ನ ಮನೆ ಬಿಟ್ಟು ಅಥೆನ್ಸ್‌ಗೆ ಆಗಮಿಸುವವರೆಗಿನ ಬಗೆಗೆ ಅನೇಕ ಕಥೆಗಳಿವೆ. ಅವನು ಸುಮಾರು 18ನೆಯ ವಯಸ್ಸಿಗೆ ಪ್ಲೆಟೋನ ಅಕೆಡೆಮಿ ಸೇರಿದನು.

Mimesis, Imitation ಪದ ಸ್ಪಷ್ಟವಾದದು ಅರಿಸ್ಟಾಟಲ್‌ನ ಮೀಮಾಂಸೆಯಲ್ಲಿ. ಪ್ಲೆಟೋ ಅಂಥದೊಂದು ಪ್ರಕ್ರಿಯೆಯನ್ನು ಸೂಚಿಸಿದವನಷ್ಟೆ. ಅವನು ಅದನ್ನೊಂದು ಸಿದ್ಧಾಂತವಾಗಿ ಪ್ರತಿಪಾದಿಸಿದನೆ ? ಅರಿಸ್ಟಾಟಲನು ತಾನಿತ್ತ ಅರ್ಥವನ್ನು ಪ್ಲೆಟೋನಿಗೆ ಉತ್ತರವಾಗಿ ಕೊಟ್ಟನೆ ?

ಅರಿಸ್ಟಾಟಲನು ಅನುಕರಣೆಯನ್ನು ಒಂದು ನೈಜಕ್ರಿಯೆಯಾಗಿ ಹೇಳುತ್ತಾನೆ. ಒಂದು ಹೆಜ್ಜೆ ಮುಂದೆ ಹೋಗಿ ಅದೊಂದು ಪರಮ ಸತ್ಯವೆನ್ನುತ್ತಾನೆಂದು ಬೇಕಾದರೂ ಹೇಳಬಹುದು. ಅವನಿಗೆ ಟ್ರ್ಯಾಜೆಡಿ, ಕಾಮೆಡಿ, 'ದೀಥಿರೊಂಬೋಸು ಗೀತೆ', ಕೊಳಲು ಲೈರುಗಳ ಸಂಗೀತ–ಇವೆಲ್ಲವೂ ಅನುಕರಣೆಯ ವಿವಿಧ ಮುಖಗಳು. ಇದಕ್ಕೆ ಕಾರಣ ಮಾನವನ ಪ್ರಕೃತಿಯಲ್ಲೇ ಬೇರೂರಿರುವ ಅನುಕರಣಶೀಲತೆ. ಅನುಕರಣದಲ್ಲಿ ಕೀಳಾದುದೇನೂ ಇಲ್ಲವೆನ್ನುತ್ತಾನೆ ಅರಿಸ್ಟಾಟಲ್. ಏಕೆಂದರೆ

ಅನುಕರಿಸುವವನ ಮಾಧ್ಯಮದ ಮೂಲಕ ಮೂಲದಿಂದ ವಿಭಿನ್ನವೂ ಸುಂದರವೂ ಆದ ಸೃಷ್ಟಿಯೊಂದು ಹೊಮ್ಮುವುದು.

ಕುತೂಹಲಕ್ಕಾಗಿ ಪ್ಲೇಟೋ ಅರಿಸ್ಟಾಟಲ್ ಇವರ ವಿಚಾರಗಳನ್ನು ಇನ್ನು ಸ್ವಲ್ಪ ಗಮನಿಸಿ ಮುಂದೆ ಸಾಗಬಹುದು.

Ideal bed ಎಂದನಲ್ಲ ಪ್ಲೇಟೋ ಅದು ಸೃಷ್ಟಿ, ದೈವಸೃಷ್ಟಿ. ಈ 'ದೇವ'ರ ಕಲ್ಪನೆಯೊಡನೆ ನಾವು ಅವನ ಅತೀತದ (transcendental ಸತ್ಯ) ಮೆಟಫಿಸಿಕ್ಸ್ ಪ್ರವೇಶಿಸುತ್ತೇವೆ. ಅಲ್ಲಿಂದ idea (ಕಲ್ಪನೆ)ಗಳ ಸ್ವರೂಪ ; ಆ ಮೂಲಕ ಸುಂದರ (The beautiful) ಪ್ರೇಮ (love, erōs) ಇವುಗಳ ಮೀಮಾಂಸೆ, ಹೀಗೆ ಮುಂದು ವರೆಯುವುದು. Ideaದ ಇನ್ನೊಂದು ಮುಖವು ರೇಖಾಬದ್ಧ ಆಕಾರ(mathematika, geometric forms) ಗಳ ಇರುವಿಕೆಗೆ ಸಂಬಂಧಿಸುತ್ತದೆ. ದೇವರು ರೇಖಾಗಣಿ ತಜ್ಞ. ಅವನು ತನ್ನ ಪೀಠ (School) ದ ಪ್ರವೇಶದ್ವಾರದ ಮೇಲೆ 'ರೇಖಾಗಣಿತ ಗೊತ್ತಿಲ್ಲದವರಾದರೂ ಒಳಗೆ ಬರದಿರಲಿ' (Let no one ignorant of geometry enter. Ageometretor medeis eisito) ಎಂದು ಕೆತ್ತಿಸಿದ್ದಾನಂತೆ.

'Art imitates Nature' ಎಂಬ ಅರಿಸ್ಟಾಟಲನ ವಾಕ್ಯವು ಹವಾಮಾನ ಶಾಸ್ತ್ರದ್ದೆಂದು ತಿಳಿದುಬರುತ್ತವೆ. ಅದೂ ಸಹ ಪಾಕಶಾಸ್ತ್ರದಿಂದ ಜೀರ್ಣಶಕ್ತಿ ಗೊದಗುವ ಸಹಾಯ ಕುರಿತಾದುದೆಂದು ಕೇಳುತ್ತೇವೆ. ಇಂಥ ಕಾರಣಗಳಿಂದಲೇ ಅರಿಸ್ಟಾಟೆಲಿಯನ್ ವಿದ್ವಾಂಸರು ಅವನ ಕಾವ್ಯಮೀಮಾಂಸೆಯನ್ನು 'acromatic', ಉಳಿದ ಗ್ರಂಥಗಳ ಸಹಾಯದಿಂದ ಅರ್ಥೈಸಬೇಕಾದುದು ಎಂದು ಕರೆದಿದ್ದಾರೆ.

2

ಅಲೆಗ್ಸಾಂಡರನಲ್ಲಿ ಅರಿಸ್ಟಾಟಲ್ ಒಬ್ಬ ಶಿಷ್ಯನಿಗಿಂತ ಹೆಚ್ಚಾಗಿ ಒಂದು ಶಕ್ತಿ ಯುತ ಉಪಕರಣವನ್ನು ಕಂಡದ್ದಿರಬೇಕು. ತನ್ನ ತತ್ವಜ್ಞಾನವನ್ನು ಪ್ರಾಯೋಗಿಕ ವಾಗಿ ಸಾಧಿಸಬಲ್ಲ ವೀರನನ್ನು ಕಂಡಿದ್ದಿರಬಹುದು. ತಾನು ತತ್ವಜ್ಞಾನಿಗಳನ್ನೂ ತೆಗೆಯ ಬಲ್ಲೆನೆಂಬ ಆತ್ಮವಿಶ್ವಾಸದಲ್ಲಿ ಕೆಲಿಸ್ತೆನಿಸ್ ಎಂಬ ತತ್ವಜ್ಞಾನಿಗೆ ಮರಣ ದಂಡನೆ ವಿಧಿಸಿದನಂತೆ ಅಲೆಗ್ಸಾಂಡರ್. ಅರಿಸ್ಟಾಟಲನಿಗೆ ಅಲೆಗ್ಸಾಂಡರ್ ಶಿಷ್ಯ ನಾದರೆ ಕೆಲಿಸ್ತೆನಿಸ್ ಸಂಬಂಧಿ. ಈ ಸಂದಿಗ್ಧದಲ್ಲಿ, ಅಥೆನ್ಸಿನಲ್ಲಿ ಮೆಸಿಡೋನಿಯನ್ ಪಾರ್ಟಿಯ ವಿರುದ್ಧ ಭರದಿಂದ ತರದೂದು ನಡೆಯುತ್ತಿದ್ದಂತೆ, ಹಠಾತ್ತನೆ ಅಲೆಗ್ಸಾಂಡರ್ ಸತ್ತ (ಕ್ರಿಸ್ತಪೂರ್ವ 323). ಹರ್ಷೋದ್ಗಾರಗಳ ನಡುವೆ ಅಥೆನ್ಸ್ ಸ್ವತಂತ್ರವೆಂದು ಸಾರಲ್ಪಟ್ಟಿತು. ಮೆಸಿಡೋನಿಯನ್ ಪಾರ್ಟಿಯನ್ನು ತೆಗೆದೊಗೆಯಲಾಯಿತು. ಅರಿಸ್ಟಾಟಲ್ ಅಥೆನ್ಸ್ ಬಿಟ್ಟು ಹೊರಟ. ಕೆಲವು ತಿಂಗಳುಗಳು ಅಲೆದಾಟದ ನಂತರ ತೀರಿಹೋದ (322 ಕ್ರಿ. ಪೂ.).

ಆ ಒಂದು ವರ್ಷದಲ್ಲಿ ಗ್ರೀಸ್ ತನ್ನ ಶ್ರೇಷ್ಠ ದೊರೆ, ಅಲೆಗ್ಸಾಂಡರ್, ಶ್ರೇಷ್ಠ ವಾಗ್ಮಿ ಡೆಮೋಸ್ತೆನಿಸ್ (ಅಲೆಗ್ಸಾಂಡರನ ಬದ್ಧ ದ್ವೇಷಿಯಾದ ಈತ ತನ್ನ ಅರುವತ್ತನೆಯ ವಯಸ್ಸಿನಲ್ಲಿ ವಿಷಪಾನಮಾಡಿ ಸತ್ತ) ಹಾಗೂ ಶ್ರೇಷ್ಠ ತತ್ವಜ್ಞಾನಿ ಅರಿಸ್ಟಾಟಲ್‌ರನ್ನು ಕಳೆದುಕೊಂಡಿತು. ಅಥೆನ್ಸಿನ ಅಸ್ತಮಾನವು ರೋಮ್‌ನ ಅರುಣೋದಯಕ್ಕೆ ಸರಿಹೊಂದಿತು. ರೋಮ್ ಸಾಮ್ರಾಜ್ಯದ್ದು ವೈಚಾರಿಕ ಪ್ರಭೆಗಿಂತಲೂ ಶಕ್ತಿಯ ಹೊಳಪು. ಅರಿಸ್ಟಾಟಲ್‌ನಿಗೂ ಅನಂತರ ನಮ್ಮ ಲಕ್ಷ್ಯ ಸೆಳೆಯುವ ರೋಮನ್ ಕವಿ ಹೊರೆಸನಿಗೂ ಸುಮಾರು ಎರಡು ಶತಮಾನಗಳ ಹೆಲೆನಿಸ್ಟಿಕ್ ಸಂಸ್ಕೃತಿಯ ಅಂತರ. ಈ ಮಧ್ಯಂತರ ಎರಡು ಶತಮಾನಗಳಲ್ಲಿ ಸಾಹಿತ್ಯಿಕ ಅಧ್ಯಯನವು ವಿಶೇಷವಾಗಿ ಅಟಲಿಡ್‌ರ ಕೇಂದ್ರವಾಗಿದ್ದ ಪರ್ಗಮಮ್ ಮತ್ತು ಟಾಲೆಮಿಗಳ ಆಸ್ಥಾನ ಅಲೆಗ್ಸಾಂಡ್ರಿಯಗಳಲ್ಲಿ ನಡೆಯುತ್ತಿದ್ದಿತು.

ಹೊರೆಸನು ಕವಿ. ಅವನ ಕವಿತೆಯ ವಿಷಯವೇ 'ವಿಮರ್ಶೆ' ಎಂಬುದು ಅವನ ವಿಶೇಷ. ಜನರು ಸಾಮಾನ್ಯವಾಗಿ ಕೇಳಲಿಚ್ಛಿಸುವಂಥ ಪ್ರಶ್ನೆಯೊಂದಕ್ಕೆ ಅವನು ಉತ್ತರ ಕೊಡುತ್ತಾನೆ. ಕವಿತೆಯು ಸ್ವಾಭಾವಿಕವಾಗಿ ಹುಟ್ಟುವುದೇ ಅಥವಾ ಕಲೆ (ಪ್ರಯತ್ನ ಪೂರ್ವಕ ಕ್ರಿಯೆ)ಯಿಂದ ಸಾಧ್ಯವೆನ್ನುವುದೇ ?

'ಸ್ಫೂರ್ತಿ' ಇಲ್ಲದ ಅಧ್ಯಯನ ಅಥವಾ ಅಧ್ಯಯನದಿಂದ ಸ್ಫುಟಗೊಳ್ಳದ ಕವಿತ್ವ ಎರಡರಿಂದಲೂ ಅಸಾಧ್ಯವೆನ್ನುತ್ತಾನೆ ಹೊರೆಸ್.

Be Homer's work your study and delight
Read them by day and meditate by night.

ಅರಿಸ್ಟಾಟಲನ mimesis ಪ್ರಕೃತಿಯ ಅನುಕರಣೆಯಾದರೆ ಹೊರೆಸನ ಕಾಲಕ್ಕೆ ಆ ಅನುಕರಣೆಗೆ ಒತ್ತು ಕ್ಲಾಸಿಕಲ್ ಮಾದರಿಗಳ ಅವಲೋಕನಕ್ಕೆ ಪ್ರೇರಣೆಮಾಡಿತು. ಅರಿಸ್ಟಾಟಲ್ ಕಲೆಯು 'ಒಂದೇ' ಎಂದು ಪ್ರತಿಪಾದಿಸಿದಾಗ ಅವನ ವಿಧಾನದ ಬಗ್ಗೆ ಗಮನ ಸೆಳೆದಿರುವುದು ಸರಿಯಷ್ಟೆ. ಆ ಪ್ರತಿಪಾದನ ವಿಧಾನವೇ ಒಂದು ಸಕ್ರಮವಾದ ಶಾಸ್ತ್ರ ಹಾಗೂ ಕಲೆಯಾದ Rhetoric. ಹೊರೆಸ್ ಯುವಕನಾಗಿದ್ದಾಗ ಫಿಲೋಡೆಮಸ್ (Philodemus of Gadara) ಎಂಬ ಪ್ರೊಫೆಸರನ ಪ್ರಭಾವಕ್ಕೆ ಒಳಗಾಗಿರಬಹುದೆಂದು ನಂಬಲವಕಾಶವಿದೆ. ಆತನ ಬೋಧನೆಯಲ್ಲಿ ವಿಶೇಷವಾಗಿ ಎಪಿಕ್ಯೂರಿಯನ್ ಹಾಗೂ ರ್ಹೆಟಾರಿಕ್‌ನ ವಿರೋಧ ತತ್ವಗಳು ತುಂಬಿದ್ದುವಂತೆ. ಇದರಿಂದ ಕವಿಯಾದವನು 'ಹೇಳು'ವಾಗ ಏನು ಹೇಳುತ್ತಾನೆಂಬ ಬಗ್ಗೆ ಗಮನ ಬೇಕೆಂಬ ಜಾಗೃತಿ ಬಂದಿರಲಿಕ್ಕೆ ಸಾಕು. ಹೀಗಾಗಿ ಹೊರೆಸನ ಕಾಲಕ್ಕಾಗಲೇ 'ಕವಿ'ಯ ಬಗ್ಗೆ ಸಾಕಷ್ಟು ಗಮನವಿತ್ತು. ಕವಿಯ 'ಸ್ಫೂರ್ತಿ'ಯ ಬಗೆಗೂ ಒಂದು ರೊಮ್ಯಾಂಟಿಕ್ ಚಿಂತೆಯ ಅಂಶ ಹೊರೆಸ್‌ನಲ್ಲಿ ಕಂಡು ಬರುತ್ತದೆ.

ಆ ಚಿಂತೆಯು ಅತ್ಯುನ್ನತಿಯೇ '''Peri Hupsous'' ಎಂಬೊಂದು ಪ್ರಬಂಧದ ವಿಷಯ. ಆ ಪ್ರಬಂಧದ ಲಭ್ಯವಿರುವಷ್ಟು ಭಾಗದಲ್ಲಿಯಾದರೂ ಅಂಥ ಚಿಂತೆ ವ್ಯಕ್ತವಾಗಿದೆ.

Peri Hupsous ನ ಕರ್ತೃ ಅನಾಮಧೇಯನೆನ್ನಬಹುದಾದ 'Longinus' ಎಂಬುವನು. ಡಯೋನಿಸಸ್ (of Hali Carnassus) ಎಂಬುವ ರ್ಹೆಟಾರಿಕಲ್ ವಿಮರ್ಶಕನ ಸ್ನೇಹಿತನಾದ ಸೆಸಿಲಿಯುಸ್ (Caecilius of Calcacte) ನಿಗೆ ಉತ್ತರವೆಂಬಂತೆ ಆ ಪ್ರಬಂಧವು ನಿರೂಪಿತವಾಗಿದೆ. ಅದರ ಮುದ್ರಿತ ಪಾಠ (text) ಹದಿನಾರನೆಯ ಶತಮಾನದ್ದು. ಪ್ರಥಮ ಮುದ್ರಣವು 1554 ರಲ್ಲಿ ಬಾಸ್ಲೆನಗರದಲ್ಲಿ ಬರ್ಟೆಲ್ಲೋ ಎಂಬುವನಿಂದಾದಂತೆ ತಿಳಿದು ಬರುತ್ತದೆ. ಹೊರೆಸನ ಸಮಕಾಲೀನ ಸ್ಥಿತಿಯೂ ಸಹ ಕ್ರಮೇಣ ಕ್ಷೀಣವಾಗಿ ಕವಿತೆ–ಕವಿತ್ವಪರಿಸ್ಥಿತಿಯು ತೀರನಿರಾಶಾಯುತವಾಗಿದ್ದಿರಬೇಕು. ಆದ್ದರಿಂದ ಅಲೌಕಿಕಸ್ಫೂರ್ತಿಯ ಕಡೆಗೆ ಲಕ್ಷ್ಯ ಹಾಕಿರುವ ಲಾಂಜಿನಸ್‌ನ ಪ್ರಬಂಧದ ಹೆಸರೇ '(On) the sublime' ಎಂದಿರಬಹುದು.

ಸ್ಫೂರ್ತಿಯ ಉನ್ನತಿಕೆಯ (elevation) ನ ಐದು ಮೂಲಗಳನ್ನು Peri Hupsous ಹೇಳುತ್ತದೆ.

ಮಹಾ ಕಲ್ಪನೆಗಳನ್ನು ಮೂಡಿಸಿಕೊಳ್ಳುವ ಶಕ್ತಿ (noesis) ಸ್ಫುರಿತವಾದ ಉತ್ಕಟಭಾವ (vehement passion, pathos) ಸಾಕಾರ ಅಲಂಕಾರಿಕತೆ (formation of figures, schemata) ಶಬ್ದಸಂಪತ್ತಿ (phrasis) ಹಾಗೂ ಲಕ್ಷಣವಾದ ಗಾಂಭೀರ್ಯಪೂರ್ಣ ಸಂಕಲನ (composition).

ಇದೇ ವಿಚಾರದಲ್ಲಿ ಆಗಸ್ಟನ್ ವಿದ್ವಾಂಸ ಸೆಸಿಲಿಯುಸ್ ಹೇಳಿದುದನ್ನು ಉತ್ತಮಗೊಳಿಸಿ ವಿಸ್ತರಿಸುತ್ತಿರುವುದಾಗಿ Hupsous ಹೇಳುತ್ತದೆ. ತನ್ಮೂಲಕ, ಹ್ರಾಸಗೊಂಡ ಸ್ಫೂರ್ತಿಗೆ ಶಕ್ತಿತುಂಬಿ ಉನ್ನತಿಯೆಡೆಗೆ ಅಭಿಮುಖಿಗೊಳಿಸುವ ಪ್ರಯತ್ನ on the sublime ಇರಬೇಕು.

ಪ್ಲೋಟಿನಸ್ ಕ್ರಿ. ಶ. 244ರಲ್ಲಿ ಅಲೆಗ್ಸಾಂಡ್ರಿಯಾದಿಂದ ರೋಮ್‌ಗೆ ಬಂದು 270 ರಲ್ಲಿ ತನ್ನ ಅವಸಾನದವರೆಗೆ ಅಲ್ಲಿಯೇ ಇದ್ದ. ಹೊರೆಸ್, ಲಾಂಜಿನಸ್, ಇವರೊಡನೆ ರೋಮನ್ ಕ್ಲಾಸಿಸಿಸಂನ ಪ್ರಮುಖರಲ್ಲಿ ಇವನು ಮೂರನೆಯವ. ಲಾಂಜಿನಸ್‌ಗಿಂತ ಒಂದು ಹೆಜ್ಜೆ ಮುಂದೆಹೋಗಿ ಇವನಲ್ಲಿ ವಿಷಯವು ತತ್ವಚಿಂತನೆಯ ಮಟ್ಟಕ್ಕೇರುವುದು. ಇವನ ಕ್ಷೇತ್ರ ಸೌಂದರ್ಯ ಮೀಮಾಂಸೆ–ಇಂದಿನ ದೃಷ್ಟಿಯಿಂದ ನಾವು ನೋಡಬಹುದಾದರೆ.

ಪ್ಲೋಟಿನಸ್‌ನದು ಬ್ರಹ್ಮ (The Divine one) ಅಥವಾ ಇರುವಿಕೆ (being) ಇಂದ ಹೊಮ್ಮಿ ಅದಕ್ಕೆ ಹಿಂದಿರುಗುವಿಕೆಯ ತತ್ವವಿಚಾರ. ಈ ಹೊಮ್ಮುವಿಕೆಯನ್ನು

'tolma' ಎಂದಿದ್ದಾನೆ. ಓಂದಿರುಗುವಿಕೆ, ಐಕ್ಯ, ಎಂಬುದು 'epistrophē' ಈತನಿಗೂ, ಪೆ ಟೋನಂತೆ, ಇಲ್ಲಿ ಪ್ರಪಂಚ ಮತ್ತು ಅದರ ವಲಯ 'ಇದೆ' ; 'ಅಲ್ಲಿ' ಸತ್ಯವಿದೆ. ನಮ್ಮ ತಿಳಿವಿನ ಅರಿವಿನಿಂದ (ಮನೋವಿಕಾಸ ಅಥವಾ ಆತ್ಮವಿಕಾಸ?) ಒಂದು ರೀತಿಯ ಸ್ವಪ್ರಪಂಚ ಹೊಮ್ಮುವುದು. ಅದರ ದರ್ಜೆ ಅಥವಾ 'ಪದರು ಗಳು' ಮೂರು :– ಆತ್ಮ, psuche, soul, ಬುದ್ಧಿ, nous, intelligence ಮತ್ತು ಏಕತೆ, to hen, oneness. ಈ ತ್ರೈರೂಪ (trinity) ವು ವ್ಯಷ್ಟಿ, ಸಮಷ್ಟಿ ಗಳಾಗಿ ತೋರುವುದು.

ಈ ಮೂಲಕ ಹೊರಡುವ ವಿಚಾರವು ಮೀಮಾಂಸೆಯಾಗಿ ವಿಕಾಸವಾಗು ವುದು. ಪ್ಲೋಟಿನಸ್‌ನ ಒಂದು ವಾಕ್ಯವನ್ನು ಗಮನಿಸಬಹುದು.

......an ugly thing is something that has not been entirely mastered by pattern...The matter not yielding at all points ..to ideal form......

—Ennead 1. vi-2

ಪ್ಲೋಟಿನಸ್‌ನ ವಿಚಾರಗಳು ಆರು ಎನಿಡ್ (Ennead)ಗಳಲ್ಲಿ ದೊರೆ ಯುತ್ತವೆ. ಪ್ರತಿ ಎನೀಡ್ ಎಂಬುದು ಒಂಬತ್ತು ಪ್ರಬಂಧಗಳ ಗುಚ್ಛ. ಈ ಗುಚ್ಛಗಳು ಅವನ ಮರಣಾನಂತರ ಅವನ ಶಿಷ್ಯ ಪಾರ್ಫಿರಿ ಎಂಬಾತನಿಂದ ಸಂಪಾದಿಸಲ್ಪಟ್ಟು ಲಭ್ಯವಾದವು. ನೈತಿಕ ಹಾಗೂ ಮೀಮಾಂಸೆ ವಿಷಯಗಳಿಂದ ಪರಮೈಕತೆ ಎಡೆಗಿರುವ ಔನ್ನತ್ಯವನ್ನವಲಂಬಿಸಿದಂತೆ ಒಂದು ಆರೋಹಣ ಕ್ರಮದಲ್ಲಿ ಅವುಗಳನ್ನಾತ ಸಂಪಾದಿಸಿದ್ದಾನಂತೆ.

3

ಐದನೆಯ ಶತಮಾನದಿಂದ ಪ್ರಾಚೀನ ವಿದ್ಯೆಯಲ್ಲಿನ ಆಸಕ್ತಿಯ ಪುನರುದಯ (15 ನೆಯ ಶತಮಾನ)ದವರೆಗೆ ನೇರವಾಗಿ ವಿಮರ್ಶಾತತ್ವ ವಿಚಾರವಾಗಲೀ ಅಥವಾ ಹೊಸ ತತ್ವಗಳ ಪ್ರಾದುರ್ಭಾವವಾಗಲೀ ಕಂಡುಬರುವಂತೆ ತೋರುವುದಿಲ್ಲ. ಅದುವರೆಗಿನ ಚರ್ಚೆಗಳ ವಿಷಯವು ವಿದ್ವಾಂಸರ ನಡುವೆ ಮಿಳಿತವಾಯಿತಷ್ಟೆ. ಸರ್ವತೋಮುಖವಾಗಿ 'ಮಧ್ಯಂತರ'ವಾದ ಈ ಕಾಲವು ಏಕತೆ, ಕ್ರಮಬದ್ಧತೆ ಮತ್ತು ಸ್ಥಿತಿ (being)ಯಲ್ಲಿ ಸೌಂದರ್ಯವನ್ನು ಕಂಡಿತು.

ಈ ಕಾಲಕ್ಕೆ ಗಣಿತ, ರೇಖಾಗಣಿತ, ಸಂಗೀತ ಮತ್ತು ಖಗೋಳ ಶಾಸ್ತ್ರಗಳು ವಿದ್ಯೆಯ Higer Curriculum ಎಂಬುದರಲ್ಲಿದ್ದವು. ಇವಕ್ಕೆ Quadrivium ಎಂದು ಹೆಸರು. ನಂತರ ಈ Quadriviumನೊಡನೆ ಛಂದಸ್ಸು ಸೇರಿತು. ಛಂದಸ್ಸಿಗೆ ಆಗ ಪಠ್ಯಗ್ರಂಥಗಳಿದ್ದುವೇ ? ಎಂಬ ಪ್ರಶ್ನೆಗೆ ನಿರ್ದಿಷ್ಟ ಉತ್ತರವನ್ನು

ಒತ್ತಾಯಿಸುವುದು ಕಷ್ಟ. Venerable Bedeಯ Ars Metrica ಎಂಬುದೊಂದು ಪುಸ್ತಕವು ಲ್ಯಾಟಿನ್‌ನಿಂದ ಪ್ರಾದೇಶಿಕಭಾಷೆ ಹುಟ್ಟಿದಾಗ ಉಂಟಾದ ಬದಲಾವಣೆಯ ಅನೇಕ ಕುರುಹುಗಳನ್ನು ತೋರುತ್ತದೆ. ಛಂಧಸ್ಸಿನಿಂದ (metre proper) ಲಯಪ್ರಧಾನತೆ (rhythmus)ಗೆ ಅವಕಾಶಸಿಕ್ಕುದು ಅಂಥದೊಂದು ಬದಲಾವಣೆ. ಇತ್ತೀಚಿನ Phonetic ದೃಷ್ಟಿಯಿಂದ ಅಭ್ಯಸಿಸುವಾಗ ಇನ್ನೂ ಸೂಕ್ಷ್ಮ ಅತಿ ಸೂಕ್ಷ್ಮ ವ್ಯತ್ಯಾಸಗಳನ್ನು ಗುರ್ತಿಸಬಹುದೆಂಬುದೊಂದು ಹೊಸ ವಿಷಯವಾಗಲಾರದು.

Quadriviumನ ನಾಲ್ಕು ಶಾಸ್ತ್ರಗಳೊಡನೆ ಅವುಗಳ ಗಣನಾಸಂಬಂಧಿ (mathematical implications) ವಿಚಾರಗಳು ಸೇರಿದಾಗ ನವೀನ ತತ್ವಗಳು ಹುಟ್ಟಿದವು. ಖಗೋಳಶಾಸ್ತ್ರವನ್ನು The music of spheres ಎಂದು ಕರೆದರಂತೆ. Quadrivium ನೊಡನೆ ವಿಮರ್ಶೆಯೂ ಬೆರೆತಾಗ ಶಬ್ದ ಹಾಗೂ ಬೆಳಕು ಮತ್ತು ಅವುಗಳ ತತ್ವಗಳು ವಿಮರ್ಶೆಯಲ್ಲಿ ಮಹತ್ವದ ಪಾತ್ರಗಳನ್ನು ಕಲ್ಪಿಸಿಕೊಂಡವು. ಆದರೆ ಈ ಯುಗದ ವಿಮರ್ಶೆಯು Quadriviumನ ಚತುಃ ಶಾಸ್ತ್ರಗಳಿಗಿಂತ ಹೆಚ್ಚಾಗಿ lower curriculumನ ವಿದ್ಯಾತ್ರಯ (trivium)ದೊಡನೆ ಹೆಚ್ಚು ಸಂಬಂಧಿಸುವಂತೆ ತೋರುತ್ತದೆ. ವಿದ್ಯಾತ್ರಯವೆಂದರೆ ವ್ಯಾಕರಣ, ತರ್ಕ (logic, dialectic) ಮತ್ತು ರ್‍ಹೆಟಾರಿಕ್. ಸಾಹಿತ್ಯವಿಮರ್ಶೆಯೆಂದರೆ ರ್‍ಹೆಟಾರಿಕ್ ಎಂಬಂಥ ಹೊಂದಾಣಿಕೆ ಬೆಳೆದುದು ಕಂಡುಬರುತ್ತದೆ. ಮಧ್ಯಯುಗಗಳ ವಿಶಾಲ ನೋಟದಲ್ಲಿ ನಮಗೆ ಕಂಡುಬರುವುದು ಮಾನವೀಯ ದೃಷ್ಟಿಯ ಸಾಹಿತ್ಯಿಕ ವಿಮರ್ಶೆಗಿಂತಲೂ ತಾತ್ವಿಕರಿಂದ ನಡೆದ ತತ್ವಾಭಿಮುಖ ಚರ್ಚೆ. ಕೊನೆಗೆ ಬೊಕಾಷಿಯೋ ತನ್ನ De Genologia Deorum ನಲ್ಲಿ ಹೊಸ ಕವಿತಾ ಪ್ರಕಾರಗಳ ವಿಷಯಕವಾದ ಒಂದು ವಾದ ಮುಂಡಿಸಿದನೆಂದರೆ ಈ ತಾತ್ವಿಕ ಚರ್ಚೆ ಸಾಕಷ್ಟು ಭಾರವೆನಿಸಿರಬೇಕು.

ಇಂಗ್ಲಿಷ್‌ನಲ್ಲಿ 13ನೆಯ ಶತಮಾನದ The owl and the nightingale ಎಂಬ ಪದ್ಯವು ಅತಿ ಪ್ರಾಚೀನ ವಿಮರ್ಶೆ ಎನ್ನಬೇಕು. ಈ ಪದ್ಯದಲ್ಲಿ ನೈತಿಕ ಶ್ಲೇಷೆಯನ್ನು ಅಲ್ಲಗಳೆಯುವಂತಿಲ್ಲ. ಗೂಗೆಯ ವಾದದಲ್ಲಿ ತನ್ನದೇ ಆದ ಗಂಭೀರ ಪದ (song)ದ ಬಗೆಗೆ ಗೌರವವಿದ್ದರೆ. ನೈಟಿಂಗೇಲ್‌ನ ವಾದದಲ್ಲಿ ಪ್ರೇಮಗೀತೆ ಹೊಸ ಭಾವಗಳ ಪರವಾದ ವಾದವನ್ನು ಸೂಚಿಸಿದವರೂ ಇದ್ದಾರೆ. ಎಂದರೆ ಇಂದಿನಿಂದ ಅಥವಾ ಹದಿನೇಳನೆಯ ಶತಮಾನದಿಂದ ಕಾಣಬೇಕೆಂದರೂ ಇಲ್ಲಿ ಪ್ರಾಚೀನ-ನವೀನ ಚರ್ಚೆ ಇರುವುದು ತಿಳಿಯುತ್ತದೆ.

ಕಾನ್‌ಸ್ಟಾಂಟಿನೋಪಲ್ ಪತನ (ಕ್ರಿ.ಶ. 1453)ನ ನಂತರ ಬೈಜಾಂಟೈನ್ ಹಸ್ತಪ್ರತಿಗಳು ಪಶ್ಚಿಮದೇಶಗಳೆಡೆಗೆ ಹೆಚ್ಚುಹೆಚ್ಚಾಗಿ ಸಾಗಾಣಿಕೆಯಾದವು. ಇದರ ಪರಿಣಾಮವಾಗಿ ಇಟಲಿಯಲ್ಲಿ ನವೋದಯ ಕಾಲದಲ್ಲಿ ಸಾಹಿತ್ಯತತ್ವ ಮತ್ತು ವಿಮರ್ಶೆ ತ್ವರಿತವಾಗಿ ಬೆಳೆದವು. ಆ ಕಾಲದ ಚಟುವಟಿಕೆಯಲ್ಲಿ ಲೇಖನ ಮತ್ತು

ಪರಿಷ್ಕರಣಗಳು ಪ್ರಮುಖವಾಗಿದ್ದವು. ಇತ್ತೀಚಿನ ನಮ್ಮ ಸಾಹಿತ್ಯ ಚರಿತ್ರೆಗಳಲ್ಲಿ ಮುದ್ರಣ ಮತ್ತು ಮುದ್ರಕರ ಬಗೆಗೂ, ಲೇಖಕರ ಬಗೆಗೂ (How writers lived) ಬರುವಂತೆ ನವೋದಯ ಕಾಲಕ್ಕೆ ಕೃತಿಗಳ ಬಗೆಗೆ ಒಂದು ವಿಷಯಸಂಗ್ರಹ ಬಂದರೆ ತಪ್ಪಿಲ್ಲವೆನಿಸುತ್ತದೆ.

ನವೋದಯುದ ಸುಮಾರಿಗೆ ಹೊರೆಸನ Ars poeticaದ ಪರಿಚಯವಿತ್ತು. ಅರಿಸ್ಟಾಟಲನ ಕಾವ್ಯಮೀಮಾಂಸೆಯು–Averros ಎಂಬಾತನು ಅರಾಬಿಕ್ ಭಾಷೆಯಲ್ಲಿಟ್ಟುಕೊಂಡಿದ್ದ ಸಂಗ್ರಹರೂಪದಲ್ಲಿ ಅಜ್ಞಾತ ಲ್ಯಾಟಿನ್ ಭಾಷಾಂತರಗಳಲ್ಲಿ ಹಸ್ತಪ್ರತಿಯ ರೂಪದಲ್ಲೇ ಇದ್ದಿತು. ಅದರ ಸಂಪೂರ್ಣ ಲ್ಯಾಟಿನ್‌ನ ಪ್ರಥಮ ಸಂಪುಟವು (ಕ್ರಿ.ಶ. 1498)ರಲ್ಲಿ Georgio valla ಎಂಬುವನಿಂದ ವೆನಿಸ್‌ನಲ್ಲಿ ಪ್ರಕಟವಾಯಿತು. Alezzandro de pazzi ಎಂಬಾತನಿಂದ ಕ್ರಿ.ಶ. 1536 ರಲ್ಲಿ ಗ್ರೀಕ್ ಹಾಗೂ ಲ್ಯಾಟಿನ್‌ಗಳ ಸಮ್ಮುಖ ಪಾಠ ಪ್ರಕಟಿಸಲ್ಪಟ್ಟಿತು. ಪ್ರಥಮ ಗ್ರೀಕ್ ಪಾಠವು Aldine ನ Rhetores Graeci ಯಲ್ಲಿ ಕ್ರಿ.ಶ. 1508 ರಲ್ಲಿ ಪ್ರಕಟವಾಗಿತು. Francisco Robertello ನ ಪ್ರಥಮ ಸಂಪಾದಿತ (Critical) ಸಂಪುಟ ಲ್ಯಾಟಿನ್ ಕಾಮೆಂಟರಿಯೊಡನೆ ಕ್ರಿ.ಶ. 1548ರಲ್ಲಿಯೂ Bernardo Segni ಯ ಪ್ರಥಮ ಇಟಾಲಿಯನ್ ಅನುವಾದವು ಕ್ರಿ.ಶ. 1549 ರಲ್ಲಿಯೂ ಬಂದವು. [ಇತ್ತೀಚಿನ ಇಂಗ್ಲಿಷ್ ಪ್ರತಿ S. H. Butcher ಅವರ Aristotle's Theory of Poetry and Fine Art, ಗ್ರೀಕ್ ಹಾಗೂ ಇಂಗ್ಲಿಷ್ ಪಾಠಗಳ ಸಮ್ಮುಖ ಮುದ್ರಣ ಹಾಗೂ Gassner ಅವರ ಪ್ರಬಂಧದೂಡನೆ ಅತ್ಯಂತ ಆಕರ್ಷಕ ಹಾಗೂ ನಿಖರ ಪಾಠವಾಗಿ ಬಂದಿದೆ ಎನಿಸುವುದು. Bywater ಅವರ ಭಾಷಾಂತರವು ಅಷ್ಟು ಆಕರ್ಷಕ ಮುದ್ರಣವನ್ನು ಕಂಡಿಲ್ಲವೆಂದೇ ಹೇಳಬೇಕು]. ಇಂಥದೊಂದು ಕ್ರಮದಲ್ಲಿ Peri Hupsous, ಕ್ವಿಂಟಲಿಯನ್ನನ Institutio Oratoria ಮುಂತಾವುಗಳ ಶೋಧನ, ಪರಿಷ್ಕರಣ, ಪ್ರಕಾಶನ ಕಾರ್ಯ ನವೋದಯ ಕಾಲದಲ್ಲಿ ನಡೆಯಿತು.

ನವೋದಯ ಕಾಲದಲ್ಲಿ ಹೊರಬಂದ ಗ್ರಂಥಗಳನ್ನು ಸ್ಥೂಲವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು :–

1. ಕವಿತೆ ಹಾಗೂ ಹೊರೆಸನ ಬರವಣಿಗೆಯಂಥ ಕವಿತಾ ರೂಪದ ವಿಮರ್ಶೆ.

2. ಕಾವ್ಯಮೀಮಾಂಸೆ.

3. ಕ್ಲಾಸಿಸಿಸ್ಟ್ ಅಥವಾ ಪ್ಯೂರಿಸ್ಟರೆಡೆಗೆ ಗುರಿಯಿಟ್ಟ ಪ್ರಬಂಧಗಳು. ಆಷಿಮ್ ಡುಬೆಲ್ಲೆಯ Deffence et illustration de la langue Francoyse, Sir Philip Sidney ಯ Aplogie for poetric ಮುಂತಾದುವು. ಹಾಗೂ

4. ರೊಮ್ಯಾಂಟಿಕ್ ತತ್ತ್ವಗಳ ಕ್ಲಾಸಿಕ್ ಆಪಾದನೆಗಳಿಗೆ ಉತ್ತರ ರೂಪವಾಗಿ ಸೃಷ್ಟಿಯಾದ ಲೇಖನಗಳು : ಟಾಸ್ಸೋನ Dissoursi ಅರಿಯೋಸ್ಟೋನ ಭಾಷಾಂತರಕ್ಕೆ Sir John Harringtonನ ಇಂಗ್ಲಿಷ್ ಪ್ರಸ್ತಾವನೆ. ಇಲಿಯಡ್‌ನ ಏಳು ಪುಸ್ತಕಗಳಿಗೆ ಜಾರ್ಜ್ ಚಾಪ್‌ಮನ್‌ನ ಮುನ್ನುಡಿ ಮುಂತಾದವು.

ಇದೇ ಕಾಲದಲ್ಲಿ ಕ್ಲಾಸಿಕಲ್ ಮತ್ತು ಇಂಗ್ಲಿಷ್ ಛಂದಸ್ಸುಗಳ ಬಗೆಗಿನ ಚರ್ಚೆಯೂ ಪುನರುತ್ಥಾನವಾಗಿ ಹಾರ್ವೆ, ಸ್ಪೆನ್ಸರ್ ಮುಂತಾದ ಪ್ರಯೋಗಶಾಲಿಗಳ ಕಾರ್ಯಕ್ಕೆ ಉತ್ತೇಜನ ದೊರೆಯಿತು.

ಹದಿನಾರನೆಯ ಶತಮಾನದ ಅಂತ್ಯದಲ್ಲಿ ಕಾವ್ಯಪ್ರಪಂಚವೆಂದರೆ ಅಲೌಕಿಕ ವಸ್ತುಗಳ (pegasus, muses, dwarfs, giants, etc.) ಸಂತೆ ಎಂಬ ಅಭಿಪ್ರಾಯ ಬಲವಾಗಿಯೇ ಇದ್ದಿತು. ಆ ಪರಿಸ್ಥಿತಿಗೆ ಹೋಲಿಸಿದರೆ ಬೊಕಾಷಿಯೋ ಟಾಸ್ಸೋ ಮುಂತಾದವರು ತುಂಬ ಪ್ರಗತಿಶೀಲರೆನ್ನಬೇಕು.

'to teach and delight' ಎಂಬುದು ಕವಿತೆಯ ಗುರಿಯಾಗಿರಬೇಕೆಂದು ಸಿಡ್ನೀ ಹೇಳುತ್ತಾನೆ. ಅದು ನೀತಿಪ್ರದವೂ ಆಗಿರಬೇಕು–Poetry ought to be moral–ಎಂಬುದೊಂದು ನಿಶ್ಚಿತ ಅಭಿಪ್ರಾಯವೂ ಇತ್ತು. ಇಲ್ಲಿ 'ought' ಎಂಬುದು ಕಾವ್ಯಸಂಬಂಧಿಯೇ, ನೀತಿಸಂಬಂಧಿಯೇ ? ಎಂಬ ಪ್ರಶ್ನೆ ಅಖಂಡವಾಗಿ ಚರ್ಚೆಯಾದರೂ ಆ ಚರ್ಚೆ ಮೌಲ್ಯಗಳ ವಿರೋಧವನ್ನು ತೀರ್ಮಾನಿಸದೇ ಉಳಿಯಿತು. ಪ್ಲೇಟೋ ಕವಿತೆಗೆ ಮಿತಿಯನ್ನೇಕೆ ಇಟ್ಟ ಅಥವಾ ತನ್ನ ಆದರ್ಶ ರಾಜ್ಯದಿಂದ ಹೊರಗಟ್ಟಿದನೆಂಬುದನ್ನು ಬಹುಶಃ ಈ ಪರಿಸ್ಥಿತಿಯು ಸೂಚಿಸೀತು. (ಅಷ್ಟು ಹಿಂದಿನ ಪ್ಲೇಟೋನನ್ನು ಆಧುನಿಕರೇಕೆ ಒಪ್ಪಿಕೊಳ್ಳಬೇಕೆಂಬ ಪ್ರಶ್ನೆಗೆ ಬಹುಶಃ ಉತ್ತರ ಸಿಕ್ಕಲಾರದು.)

ಕವಿತೆಯ ಉಪಯೋಗ ಮತ್ತು ಅದರ ವಿಪರೀತ (abuse)ವು 16ನೆ ಶತಮಾನದ ಕಾವ್ಯವಿಮರ್ಶೆಯ ಪ್ರಮುಖ ಪ್ರಶ್ನೆಯಾಗಿ ಚರ್ಚೆಗೆ ಯಾವುದೇ ತೀರ್ಮಾನ ಸಾಧ್ಯವಾಗದಂಥ ಪರಿಸ್ಥಿತಿಯಲ್ಲಿ ಆ ಶತಮಾನವು ಕೊನೆಗೊಂಡಿತು.

ಹದಿನೇಳನೆಯ ಶತಮಾನವು ಇಂಗ್ಲಿಷ್ ಸಾಹಿತ್ಯದ ಸುವರ್ಣಯುಗದಂತೆ ಆಗಷ್ಟನ್ ಯುಗವಾಗಿ, ಆನ್‌ರಾಣಿಯ ಯುಗವಾಗಿ, ರೆಸ್ಟೋರೇಷನ್ ಕಾಲವಾಗಿ, ನಿಯೋಕ್ಲಾಸಿಕ್ ಪಂಥದ ಮೂಲವಾಗಿ, ಡ್ರೈಡನ್‌ಯುಗವಾಗಿ ಪ್ರಸಿದ್ಧವಾಯಿತು.

References

Literary Criticism – a Short History : Wimsatt & Brooks.
English Critical Essays : E. D. Jones (Ed.)
Western Philosophical Thought : Bertrand Russel.
The Story of Philosophy : Will Durant.

‘ದ್ಯಾವನೂರು’ – ಒಂದು ವ್ಯಾಖ್ಯಾನ

ಬಿ. ಕೆ. ಕರಿಗೌಡ

ಮಾನವನ ಸಾಂಘಿಕ ಅಭೀಪ್ಸೆಯ ‘ಗತಿಬಿಂಬ’ವೇ ಸಮಾಜವಾದ್ದರಿಂದ, ಆ ‘ಸಮಕಾಲೀನ’ ಸಮುದಾಯದ ಸಂವಹನದ ಮಾಧ್ಯಮವಾದ ಭಾಷೆಯು ಕೂಡಾ ಆ ಸಮಾಜದಿಂದಲೇ ಸೃಷ್ಟಿಯಾಗುತ್ತದೆ. ಈ ದಿಕ್ಕಿನಲ್ಲಿ ಸಾಹಿತ್ಯಸೃಷ್ಟಿಸುವ ಆ ಲೇಖಕನ ಸಮಷ್ಟಿಪ್ರಜ್ಞೆ ತನ್ನ ಸಮಾಜದಲ್ಲಿನ ಮೌಲ್ಯಗಳ ಜೊತೆಯಲ್ಲಿ ಸ್ಪಂದಿಸುವುದರ ಜೊತೆಗೆ, ತನ್ನನ್ನು ಜೀವನಾನುಭವಗಳಿಗೆ ಸಮಗ್ರವಾಗಿ ಒಡ್ಡಿಕೊಂಡು ಬದುಕನ್ನು ಶೋಧಿಸಬೇಕಾಗುತ್ತದೆ. ಈ ತಾತ್ವಿಕತೆಯ ವಾಸ್ತವ ಪ್ರಜ್ಞೆಯಲ್ಲಿ ಅರಳಿರುವ ದೇವನೂರ ಮಹಾದೇವ ಅವರ ಈ ಕೃತಿಯನ್ನು ಪ್ರಸ್ತುತ ಸಂದರ್ಭದಲ್ಲಿ ಸಾಹಿತ್ತಿಕವಾಗಿ ಮತ್ತು ಸಾಮಾಜಿಕವಾಗಿ ಇದರ ಸಾಂಸ್ಕೃತಿಕ ಮೌಲ್ಯಗಳನ್ನು ಸಮೀಕ್ಷಿಸಲು ಬಳಸಿಕೊಳ್ಳುತ್ತೇನೆ.

ಯಾವುದೇ ಒಂದು ಸಾಹಿತ್ತಿಕ ಕೃತಿ ಯಶಸ್ಸು ಪಡೆಯಬೇಕಾದರೆ, ಆ ಲೇಖಕನ ಅನುಭವ ಮತ್ತು ಅಭಿವ್ಯಕ್ತಿಗಳ ಶಿಲ್ಪ ಕಾರಣವಾಗುತ್ತದೆ. ಇವೆರಡರ ಮಧ್ಯೆ ಕಂದರ ಏರ್ಪಟ್ಟಿರುವುದೆ ನಮ್ಮ ಬಹುಪಾಲು ಸಾಹಿತಿಗಳ ದುರಂತ. ಆದರೆ ದೇವನೂರರು ಈ ಶಿಲ್ಪವನ್ನು ರೂಢಿಸಿಕೊಂಡಿರುವುದರಿಂದ ಈ ಕೃತಿ ಸಾಮಾಜಿಕವಾಗಿ ಪೂರ್ಣ ಯಶಸ್ಸು ಪಡೆದಿದೆ. ಅಷ್ಟೇ ಅಲ್ಲದೆ, ಇವರಿಗೆ ಕಲಾತ್ಮಕತೆ ರೂಢಗತವಾಗಿರುವುದರಿಂದ ಸಾಹಿತ್ತಿಕವಾಗಿಯೂ ಇದರ ಸ್ಥಾನ ಬಹು ಪ್ರಧಾನವಾದುದು. ಇದು ಒಬ್ಬ ನಿಜವಾದ ಕವಿಗೆ ಇರಬೇಕಾದ ಗುಣ ಎಂದರೆ ತಪ್ಪೇನಲ್ಲ.

ಜೀವಂತ ಸಮುದಾಯದೊಡನೆ ಬೆರೆಯದ ಪ್ರತಿಷ್ಟಿತವರ್ಗದ ಲೇಖಕನೊಬ್ಬ ಹರಿಜನರ ಬಗ್ಗೆ ಬರೆಯುವುದಕ್ಕಿಂತ, ಆ ಸಮುದಾಯದ ತಿವ್ರವಾದ ಸಂವೇದನೆಗಳನ್ನು ಅನುಭವಿಸಿದ, ಆ ವಲಯದ ಲೇಖಕನೇ ಅದನ್ನು ಬರೆದಾಗ ಹೆಚ್ಚು ಅರ್ಥವಂತಿಕೆ ಪಡೆದುಕೊಳ್ಳಲು ಸಾಧ್ಯ. ಈ ದೃಷ್ಟಿಯಲ್ಲಿ ಈ ಕಥೆಗಳು ‘ಭಾರತಿಪುರ’, ‘ದಾಟು’ ಕಾದಂಬರಿಗಳಿಗಿಂತ ಬಹು ಪಾಲು ಮುಂದೆ ಸಾಗಿವೆ. ದೇವನೂರರವರು ಇದರಲ್ಲಿ ಪಾರಂಪರ್ಯವಾಗಿ ಅಂಟಿಬಂದ ಜಡ್ಡುಹತ್ತಿದ ಅರ್ಥಸತ್ತ ರೂಢಿಗಳ ಬಗ್ಗೆ ಮತ್ತು ಒಂದು ಜನಾಂಗದ ಬದುಕಿನ ಸಂಕೀರ್ಣ ಅವಸ್ಥೆ-ವ್ಯವಸ್ಥೆಯ ಬಗ್ಗೆ ಕೆದಕಿ ಜಾಲಿಸಿ ಅರ್ಥೈಸುವ ಪ್ರಯತ್ನವೊಂದನ್ನು ಇಲ್ಲಿ ಮಾಡಿದ್ದಾರೆ.

ಈ ಕಥಾ ಸಂಕಲನವಲ್ಲಿ, 'ಏಳು ಪ್ರಸಂಗ'ಗಳಿವೆ. ಆದರೆ 'ದ್ಯಾವನೂರು' ಎಂಬ ಕಥೆ ಈ ಸಂಕಲನದಲ್ಲಿ ಇಲ್ಲ. ಈ ಎಲ್ಲಾ ಕಥೆಗಳು 'ದೇವನೂರಿ'ನ ಸುತ್ತಮುತ್ತಲಿನ ನೆಲೆಗಟ್ಟಿನ ಮೇಲೆ ಹುಟ್ಟಿ ಬೆಳವಣಿಗೆ ಪಡೆಯುವುದರಿಂದ ಈ ಕೃತಿಗೆ ಈ ಹೆಸರು ಅರ್ಥವತ್ತಾಗಿದೆ. ಈ ಎಲ್ಲಾ ಕಥೆಗಳ ಸಮೀಕ್ಷೆಗೆ ಒಳಹೊಕ್ಕುವ ಮೊದಲು ಕಥೆಗಾರರು ಸೂತ್ರಬದ್ಧವಾಗಿ 'ಪೀಠಿಕೆ' ಯಂತೆ, ಕೋಟ್ ಮಾಡಿರುವ, 'ಖಂಡವಿದಕೊ ಮಾಂಸವಿದಕೊ, ಗುಂಡಿಗೆಯ ಬಿಸಿರಕ್ತವಿದಕೊ' ಎಂಬುದರ ಅರ್ಥಗ್ರಹಿಕೆ ಇಲ್ಲಿ ಸೂಕ್ತ. ಈ ವಾಕ್ಯವನ್ನು ಓದುತ್ತಿದ್ದಂತೆಯೆ ಹುಲಿಯ ಮುಂದಿನ ಗೋವಿನ ನಿಸ್ಸಹಾಯಕತನದ ಸಮರ್ಪಣಭಾವದ ಕಥೆ ನಮ್ಮ ಕಣ್ಮುಂದೆ ಸುಳಿಯುತ್ತದೆ. ಹಾಗೆಯೇ ಇಲ್ಲಿನ ಎಲ್ಲಾ ಕಥೆಗಳಲ್ಲಿ ಯಾವುದೋ ಒಂದು ಜನಾಂಗದ ಅಸಹಾಯಕ ತನದ ಸಂಪೂರ್ಣ ಸಮರ್ಪಣಭಾವ ಘನೀಭವಿಸಿದ್ದರೂ, ಅಂತರ್ಯದಲ್ಲಿ ಮಾತ್ರ ದ್ವೇಷ ರೊಚ್ಚು ಇದ್ದೇಇದೆ ಎಂಬುದನ್ನು ಇಲ್ಲಿಯ ಕೆಲವು ಜೀವಂತ ಪಾತ್ರಗಳು ಪ್ರತಿನಿಧಿಸಿವೆ. ಹೀಗೆ ಅಮೂರ್ತವಾಗಿ ಮೋಸಗೊಳಿಸಿರುವ ನಮ್ಮ 'ಹುಸಿಪರಂಪರೆ', ವ್ಯಕ್ತಿ-ವ್ಯಕ್ತಿಗಳ ಮಧ್ಯೆ ಗಾಢಸಂಬಂಧಕ್ಕೆ ಬಿಟ್ಟಿಲ್ಲ. ಈ ಮಾತುಗಳ ಆವಶ್ಯಕತೆ, ಈ ಕಥೆಗಳು ಈ ಜಾಡಿನ ರಚನೆಯೆಂಬುದರ ಸಮರ್ಥನೆಗಾಗಿ ಮಾತ್ರ.

ಈ ಎಲ್ಲಾ ಕಥೆಗಳಲ್ಲಿ ಶೂದ್ರರಲ್ಲಿಯೇ ಇರುವ ಸಾಮಾಜಿಕವಾಗಿ ಮೇಲು ವರ್ಗ ಮತ್ತು ಕೆಳವರ್ಗಗಳ ವೈದೃಶ್ಯವನ್ನು ಇಲ್ಲಿ ಕಾಣಬಹುದು. ಈ ಸಂಗ್ರಹದ ಮೊದಲನೆಯ ಕಥೆಯಾದ, 'ಮಾರಿಕೊಂಡವರು' ಕಥೆಯಲ್ಲಿನ ಬೀರ ಕೇಳವರ್ಗದ ದಲಿತವ್ಯಕ್ತಿ. ನಮ್ಮ ಸಮಾಜದಲ್ಲಿನ ಹೊಲೆಯರು ಎಷ್ಟೋ ಜೀತಕ್ಕೆ, ಲೈಂಗಿಕ ಸಂಬಂಧಕ್ಕೆ ಬೇರೊಂದು ಜನಾಂಗದ ಅಧೀನಕ್ಕೊಳಗಾಗಿದ್ದರೂ ಒಳಗೆ ಮಾತ್ರ ರೊಚ್ಚು ಇದ್ದೇಇರುತ್ತದೆ. ಆದರೆ ಈ ರೊಚ್ಚು ಬಾಹ್ಯದಲ್ಲಿ ಅಸಹಾಯಕ ಸ್ಥಿತಿಯನ್ನು ಪಡೆದುಕೊಂಡಿರುತ್ತದೆ ಎಂಬಂಥ ಒಂದು ವಸ್ತುಸ್ಥಿತಿಯನ್ನು ಪ್ರತಿನಿಧಿಸಲು ಹೊರಟಂಥ ಕಥೆ ಇದು. ಮತ್ತು ಆರ್ಥಿಕ ಸಂಬಂಧಗಳಲ್ಲಿ ನಿರಂತರ ಶೋಷಣೆಗೆ ಒಳಗಾಗಿರುವ ಜನಾಂಗದ ಸ್ಥಿತಿಗತಿಗಳನ್ನು ಇದು ಅಭಿವ್ಯಕ್ತಿಸುತ್ತದೆ. ಗೌಡರ ಮಗ ಕಿಟ್ಟಪ್ಪನಿಗೆ, ಹೊಲೆಯರ ಬೀರ ಮತ್ತು ಅವನ ಪತ್ನಿ ಲಕ್ಷ್ಮಿ ಇಬ್ಬರೂ ತಮ್ಮನ್ನು ದೈಹಿಕವಾಗಿಯೂ ಇಲ್ಲಿ ಮಾರಿಕೊಂಡಿದ್ದಾರೆ. ಇದನ್ನು ಲೇಖಕರ ಬರವಣಿಗೆಯಲ್ಲಿಯೇ ಹೇಳುವುದಾದರೆ, "ಕಿಟ್ಟಪ್ಪ ಕೊಟ್ಟಿರುವ ರಗ್ಗು ಲಕ್ಷ್ಮೀನ ಕವಚಿಕೊಂಡಿದೆ; ಕಿಟ್ಟಪ್ಪ ಕಟ್ಟಿಸಿರುವ ಮನೆ ಇಬ್ಬರನ್ನೂ ಕವಚಿಕೊಂಡಿದೆ". ಕಿಟ್ಟಪ್ಪ ಲಕ್ಷ್ಮಿಯೊಡನೆ ಹೊಂದಿರುವ ಸಂಬಂಧ ಬೀರನಿಗೆ ಗೊತ್ತು. ಬೀರ ಕುಡಿದಾಗ ಕಿಟ್ಟಪ್ಪ ಬೀರನ ತಲೆಯಲ್ಲಿ 'ಥರಾವರಿ' ಮೂಡತೊಡಗಿದರೂ ಮಾರನೆಯ ದಿನ ಬೀರನ ನಿರ್ಧಾರ ಅಸಹಾಯಕ ಸ್ಥಿತಿಗೆ ಬರುತ್ತದೆ. ರಾತ್ರಿ ಲಕ್ಷ್ಮಿಯ ಹತ್ತಿರ ಬೀರ "ನಿನ್ನಮಿಂಡ ಬರ್ಲಿ ತೀರ್ಸಿಬಿಡುತ್ತೇನೆ" ಎಂದು ಪ್ರತಿಜ್ಞೆ ಮಾಡಿದ್ದವನು ಬೆಳಿಗ್ಗೆ

ತನ್ನ ದಣಿ ಕಿಟ್ಟಪ್ಪನನ್ನು ಎದುರುಗೊಂಡಾಗ ಅವರಿಬ್ಬರ ಯಾದೃಚ್ಛಿಕವಾದ ನಗು ಲಕ್ಷ್ಮಿಗೆ ಭಯಾನಕತೆಯ ವಾತಾವರಣವನ್ನು ಕಲ್ಪಿಸಿ, ಜೀರನ ಅಸಹಾಯಕತನದ ಧ್ವನ್ಯಾರ್ಥವನ್ನು ಈ ಕಥೆ ಪಡೆದುಕೊಳ್ಳುತ್ತದೆ.

ಮಾರಿಕೊಂಡವರು ಧಾಟಿಯಲ್ಲಿಯೇ ಸಾಗುವ ಮತ್ತೊಂದು ಕಥೆ 'ಗ್ರಸ್ತರು'. ಆದರೆ ಇಲ್ಲಿಯ ಸಮಸ್ಯೆಯೇ ಬೇರೆ. ವಿಚಾರವಂತನಾದ ಒಬ್ಬವ್ಯಕ್ತಿ ತನಗೆ ಸರಿಕಾಣದ ಕೆಲವು ನಂಬಿಕೆಗಳ ಬಗ್ಗೆ ವೈಯಕ್ತಿಕ ಪ್ರತಿಕ್ರಿಯೆ ವ್ಯಕ್ತಪಡಿಸಿದಾಗ, ಆ ಸಮಾಜ ಅವನನ್ನು ಅದಃಪತನಕ್ಕೆ ಕೊಂಡೊಯ್ಯುವ ಕಥೆ ಇದು. ಇದರ ನಾಯಕ ಸಾಮಾಜಿಕವಾಗಿ ಮೇಲುವರ್ಗದವನಾದರೂ ತನ್ನೂರಿನ ಗೌಡರ ಅಧೀನದಲ್ಲಿ ಅದುಮಿಟ್ಟವನು. ಆಳುವವರ್ಗಕ್ಕೆ ಗ್ರಸ್ತನಾದ ಗೌಡರು ಸ್ವಾಮಿಗಳ ಕಾಲಿಗೆ ಬಿದ್ದು ಈ ನಾಯಕನಿಗೆ ಕೆಲ್ಸ ಕೊಡ್ಸಿರುತ್ತಾರೆ. ಆಗ ಆ ನಾಯಕ ತನ್ನ ಭಾಷಣವೊಂದರಲ್ಲಿ, 'ಧರ್ಮ ಕರ್ಮ ಮಠಸ್ವಾಮಿಗಳೆಲ್ಲ ಸೋಗು' ಅಂತ ಹೇಳಿದ್ದರಿಂದ, ತನ್ನ ಕೆಲ್ಸ ಕಳೆದುಕೊಂಡು ಊರಿಗೆ ಬರುತ್ತಾನೆ. ಆದರೆ ತನ್ನ ಜಮೀನು ಗೌಡರ ಅಸಲು ಬಡ್ಡಿಗೆ ಸಮವಾಗಿ, ಲಕುವದಿಂದ ನರಳುತ್ತಿದ್ದ ತನ್ನ ತಾಯಿಯು ಗ್ರಸ್ತಳಾಗಿ ಪ್ರಾಣಬಿಟ್ಟಾಗ ನಾಯಕನು "ನಾವಿನ್ನೂ ಬದುಕಿದ್ದೀವಾ" ಎಂಬ ಜಿಜ್ಞಾಸೆಯಲ್ಲಿ ಗ್ರಸ್ತನಾಗಿ ಮೂಲೆಗೆ ಕುಸಿದು ಬೀಳುತ್ತಾನೆ.

ವಿದ್ಯಾವಂತನಾದ ಒಬ್ಬ ಮೇಲುವರ್ಗದ ಯುವಕ ಹೊಲೆಯರ ಹುಡುಗಿಯೊಬ್ಬಳನ್ನು ಪ್ರೀತಿಸಿ, ಬಸುರಿಸಿ, ಅವಳೊಡನೆ ಸಂಸಾರಿಸಲೂ ಸಿದ್ಧನಾದಾಗ, ತನ್ನ ಸಮಾಜ, ಎಲ್ಲಕ್ಕಿಂತ ಹೆಚ್ಚಾಗಿ ಮಗಳನ್ನು ಮದುವೆಯಾಗುತ್ತಾನೆ ಎಂದು ತಿಳಿದು ಹಣ ಕೊಟ್ಟು ಓದಿಸಿದ ತನ್ನ ಮಾವ, ಇವೆಲ್ಲವನ್ನು ಎದುರು ಹಾಕಿಕೊಂಡಾಗ ಅವನು ಎದುರಿಸುವ ಅನಾಹುತಗಳನ್ನು, ಸಮಸ್ಯೆಗಳನ್ನು ಸಮಗ್ರಿಸುವ ಕಥೆಯೆಂದರೆ, 'ಒಂದು ದಹನದ ಕಥೆ.' ಇಲ್ಲಿಯ ಪ್ರಮುಖ ಸಮಸ್ಯೆಯೆಂದರೆ ನಾಯಕನ ಅಜ್ಜಿ ಸತ್ತಾಗ, ಅವಳನ್ನು ಶವಸಂಸ್ಕಾರ ಮಾಡುವಾಗ ತನ್ನೂರಿನ ಜನಾಂಗ ಮತ್ತು ತನ್ನ ರಕ್ತಸಂಬಂಧಿಗಳು ಬಹಿಷ್ಕರಿಸುವ ರೀತಿಯನ್ನು ನೋಡಿದರೆ ನಮ್ಮ ಸಮಾಜದಲ್ಲಿ ಇಂತಹ ಮೌಢ್ಯತೆಯುಳ್ಳ ಜನ ಇನ್ನೂ ಇದ್ದಾರಲ್ಲ ಅನ್ನಿಸುತ್ತದೆ! ಹನ್ನೆರಡು ವರ್ಷಗಳ ಕಾಲ ನಗರದಲ್ಲಿ ಅಜ್ಜಿಯೊಡನೆ ಮತ್ತು ಕರೆದುಕೊಂಡು ಬಂದ ಆ ಹೊಲೆಯರ ಹುಡುಗಿಯೊಡನೆ ಸಂಸಾರ ನಡೆಸಿದ ಇವನು, ಅಜ್ಜಿಯು ಸಾಯುವ ಕಾಲದ ಬಯಕೆಯಂತೆ ತನ್ನೂರಿಗೆ ಕರೆದು ತಂದಾಗ, ಅವಳು ಅಲ್ಲಿ ಸಾಯುತ್ತಾಳೆ. ಈ ಅಜ್ಜಿಯೂ ಜಾತಿಕೆಟ್ಟು ತನ್ನ ಮೊಮ್ಮಗನೊಡನೆ ಹೋದಳಲ್ಲ ಎಂಬುದೇ ಆ ಊರಿನ ಜನಾಂಗಕ್ಕೆ ಇರುವ ದ್ವೇಷ. ಕೊನೆಗೆ ನಾಯಕನೆ ಮನೆಯ ಮುಂದೆ ಇದ್ದ ಬದ್ದ ಗಳಗಳನ್ನೆಲ್ಲಾ ಜೋಡಿಸಿ ಅದರ ಮೇಲಿಟ್ಟು ಬೆಂಕಿ ತೋರಿಸುತ್ತಾನೆ. "ಊರಿಗೆ ಊರೇ ಅವನ ಹಿಂದೆ ಓಡಿಬರುತ್ತಿರುವಂತೆ ಭಾಸವಾದಾಗ' ಅವನು ಇದ್ದ

ಬದ್ದ ಬಲವನ್ನೆಲ್ಲಾ ಒಟ್ಟಾಯಿಸಿ ಓಡುವ ಸನ್ನಿವೇಶ ಕಥೆಯು ಶಿಲ್ಪಕ್ಕೆ ಭಂಗತಂದಿದೆ ಅನ್ನಿಸುತ್ತದೆ.

ಜಾತೀಯತೆ ನಮ್ಮ 'ಹುಸಿ-ಪರಂಪರೆ' ಸೃಷ್ಟಿಸಿದ ಸಂಕೀರ್ಣ ವ್ಯವಸ್ಥೆಗಳಲ್ಲಿ ಒಂದಾಗಿರುವುದರಿಂದ, ಇದರಲ್ಲಿ ಅಂತ್ಯಜರು ಇನ್ನೂ ಒಂದು ಘಟಕವಾಗಿಯೇ ಉಳಿದಿದ್ದಾರೆ. ಇವರಿಗೆ ಬದುಕಿನ ವೈಭವದ ಬಗ್ಗೆ ಚಿಂತನೆ ಬೇಕಿಲ್ಲ. ಹಬ್ಬ ಹರಿದಿನಗಳಲ್ಲಿ ದೊರೆಯುವ ಮನೋರಂಜನೆಯಿಂದಲೇ ಸಂತೃಪ್ತರಾಗಬಲ್ಲರು. ರಾತ್ರಿಯಾಗಿ ಊರಿನ ಜನ ಮನೆಗೆ ತೆರಳಿ, 'ಹೆಂಡ್ತಿಗೆ ಸೀರೆ ಬಿಚ್ಚಿ ಬೆತ್ತಲೆಮಾಡಿ ನೋಡಿದರೂ' ಕಾಲದ ಪ್ರಜ್ಞೆಯೂ ಇಲ್ಲದೆ ಕುಣಿಯಬಲ್ಲರು ಎಂಬುದಕ್ಕೆ 'ಅಮಾಸ' ಕಥೆಯಲ್ಲಿನ ಮಾರಿಗುಡಿಯ ಜಾತ್ರೆಯ ಸಂದರ್ಭವೇ ಸಾಕು. ಬಹುಶಃ ಇದು ಅವರಿಗೆ ಅನಿವಾರ್ಯ ಅನ್ನಿಸಬಹುದೇನೋ ! 'ಅಮಾಸ' ಎಂಬುವನು ಈ ಕಥೆಯಲ್ಲಿ ಬರುವ ಹುಡುಗನ ಹೆಸರು. ಆ ಹುಡುಗನಿಗೆ ಆ ಹೆಸರು ಹೇಗೆ ಬಂತು ? ಅವನ ತಾಯ್ತಂದೆಗಳಾರು ? ಎಂಬ ಪ್ರಶ್ನೆಗಳು ಕಥೆಯಲ್ಲಿ ಹಾಗೆಯೇ ಉಳಿದುಬಿಡುತ್ತವೆ. ಸಾಮಾನ್ಯವಾಗಿ ಅವನು ಮಾರಿಗುಡಿಯ ಕುರಿಯಯ್ಯನ ಹತ್ತಿರ ಇರುತ್ತಿದ್ದರಿಂದ, "ಮಾರಿಗುಡಿಯೆಂದರೆ ಅಮಾಸ, ಅಮಾಸನೆಂದರೆ ಮಾರಿಗುಡಿ" ಎಂಬಷ್ಟು ಮಾತ್ರ ಎಲ್ಲರಿಗೂ ಗೊತ್ತು. ಕುರಿಯಯ್ಯನೆಂಬುವನು ತನ್ನ ಜೀವನ ಪರ್ಯಂತ ಗೌಡರ ಮನೆಯ ಕುರಿಗಳನ್ನು ಕಾಯ್ದು ಅನ್ವರ್ಥ ಹೆಸರನ್ನೊತ್ತು ಮಾರಿಗುಡಿಯ ಮೂಲೆ ಯೊಂದರಲ್ಲಿ ಈಗ ವಾಸವಾಗಿದ್ದಾನೆ. ಇವನ ಹಸಿವು ಸುಧಾರಿಸಬೇಕಾದರೆ ಮಾರಿ ಗುಡಿಯ ಪಕ್ಕದಲ್ಲಿದ್ದ ಹಾಸ್ಟೆಲ್‌ನಲ್ಲಿ ಬೆಲ್ಲು ಹೊಡೆದಾಗ, ಅಮಾಸ ಅಲ್ಲಿಗೆ ಹೋಗಿ ಬಂದಾಗಲೇ. ಹೀಗೆ ಇವರಿಬ್ಬರ ಜೀವನವನ್ನು ಕಥೆಗಾರರು ಚಿತ್ರಿಸಿಕೊಂಡು ಬರುತ್ತಾ ಮಾರಿಗುಡಿಯ ಹಬ್ಬದ ಪ್ರಸಂಗಕ್ಕೆ ಬಂದಾಗ ಇನ್ನೂ ಹೆಚ್ಚು ಅರ್ಥ ವತ್ತಾಗುತ್ತಾರೆ. ಸಾಂಪ್ರದಾಯಿಕವಾಗಿ ಈ ಜನಕ್ಕೆ ಈ ಹಬ್ಬ ನಡೆದು ಬಂದಿದೆ; ಹುಲಿಯಾಸ ಹಾಕಿಕೊಂಡು ಕುಣಿಯುವ ಪ್ರಸಂಗವಂತು ಎದೆಕದಡುವಂಥದ್ದು. ಮರಿಹುಲಿಯಾಸ ಹಾಕಿ ಕುಣಿಯುತ್ತಿದ್ದ ಅಮಾಸನ ಕುಣಿತಕ್ಕೆ ಆಕರ್ಷಿತರಾದ ಗೌಡರು ತನ್ನ ಮನೆಯ ಜೀತದಾಳಿನಿಂದ ಆ ಮರಿಹುಲಿಯಾಸ ಹಾಕಿದ್ದವನು ಅಮಾಸನೆ ಎಂದು ಗೊತ್ತಾದಾಗ, "ಎಲಾ ಇವ್ನ ಆಗ್ಲೆ ಇಷ್ಟು ಬೆಳೆದು ಬಿಟ್ಟವ್ನ" ಎಂಬ ಗೌಡರ ಉದ್ಗಾರ ಅಮಾಸನನ್ನು ಸಮಸ್ಯೆಗೊಡ್ಡಿ, ಅಮಾಸನ ಪಾತ್ರ ಸೃಷ್ಟಿ ಸಾಫಲ್ಯವಾಗುತ್ತದೆ.

ಹಳ್ಳಿಯ ಪಟೇಲನೊಬ್ಬನ ದಬ್ಬಾಳಿಕೆತನದ ಅಭಿವ್ಯಕ್ತಿಯನ್ನೊಳಗೊಂಡ ಮತ್ತೊಂದು ಕಥೆ 'ಡಾಂಬರು ಬಂದುದು'. ಸುಮಾರು ಎಂಬತ್ತು ಮನೆಗಳಿರುವ ಹಳ್ಳಿಯೊಂದರಲ್ಲಿ ಬಸ್ಸು ಓಡಾಡುವ ರಸ್ತೆಗೆ ಮೂರು ಮೈಲಿ ಇರುವ ದಾರಿ ಯೊಂದನ್ನು ಟಾರ್ ರಸ್ತೆಯನ್ನಾಗಿ ಮಾಡಲು ಸರ್ಕಾರ ಹಣ ಮಂಜೂರು

ಮಾಡಿದಾಗ, ಆ ಊರಿನ ಪಟೇಲನೇ ಕಂಟ್ರಾಕ್ಟರಾಗುತ್ತಾನೆ. ಮಂಜೂರು ಮಾಡಿದ ಹಣದಲ್ಲಿಯೇ ಉಳಿಸಿ ದೇವಸ್ಥಾನವನ್ನು ಊರ್ಜಿತಗೊಳಿಸಲು ನಿರ್ಧರಿಸುವ ಪಟೇಲನಿಗೆ ಜನ ವ್ಯಕ್ತಪಡಿಸುವ ಪ್ರತಿಕ್ರಿಯೆ ನಿಜಕ್ಕೂ ಸೂಕ್ತವಾಗಿದೆ. ಇದು ಎಲ್ಲಾ ಹಳ್ಳಿಗಳಿಗೂ ಅನ್ವಯಿಸತಕ್ಕಂಥ ಕಥೆಯಾಗಿದೆ. ಪಟೇಲನ ಮತ್ತು ಜನರ ಮಧ್ಯೆ ವೈಷಮ್ಯ ಏರ್ಪಟ್ಟಾಗ ಅದು ಸರ್ಕಾರದವರೆಗೂ ಮುಟ್ಟಿ, ರಸ್ತೆಯ ಕೆಲಸ ಅರ್ಧದಲ್ಲಿಯೇ ಅವನತಿಯನ್ನು ಅನುಭವಿಸುತ್ತದೆ. ಛಾವಡಿಯಲ್ಲಿ ಪಟೇಲ ಮತ್ತು ಊರಿನ ಜನ ಸೇರಿಕೊಂಡು ಮಾಡುವ ನ್ಯಾಯದ ಪ್ರಸಂಗವಂತು ಆ ಊರಿನ ಜನಜೀವನದ ವಾತಾವರಣವನ್ನು ತಿಳಿಸುವುದರ ಮೂಲಕ ಕಥೆ ಯಶಸ್ಸನ್ನು ಪಡೆದುಕೊಂಡಿದೆ.

ಈ ಸಂಗ್ರಹದ ಮತ್ತೆರಡು ಕಥೆಗಳಾದ, 'ದತ್ತ' ಮತ್ತು 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಕಥೆಗಳು ಈ ಲೇಖಕರ ಸತ್ವಯುತ ಅಭಿವ್ಯಕ್ತಿಗೆ ಸಾಕ್ಷಿಯಾಗಿವೆ.

'ದತ್ತ' ಒಂದು ಹಳ್ಳಿಯ ಜನಜೀವನದಲ್ಲಿ ಬಿಳಲು ಬಿಟ್ಟ ಕಥೆ. ಈ ಸಂಪ್ರದಾಯ ನಮ್ಮ ಸಮಾಜದಲ್ಲಿರುವ ಪದ್ಧತಿಯೇ ಆಗಿದೆ. 'ಹೊಸತಾಗಿ ಹುಟ್ಟಿದೆ ಅಂತ ತಿಳಿದುಕೊಂಡಾದರೂ ಊರಿಗೆ ಬಾ' ಎಂದು ಮುಂತಾಗಿ ಬರೆದಿದ್ದ ತಂದೆಯ ಪತ್ರದಿಂದ ಆನಂದ ತನ್ನ ತಂಗಿ, ತನ್ನ ತಾಯಿ, ತನ್ನ ಅಣ್ಣ, ಅತ್ತಿಗೆಯವರನ್ನು ಅದರಿಂದ ಮೂಡಿಸಿಕೊಳ್ಳುತ್ತಾ ತನ್ನೂರಿಗೆ ಮರಳಿದಂದಿನಿಂದ ಕಥೆ ಪ್ರಾರಂಭ ವಾಗುತ್ತದೆ. ಆನಂದ ದತ್ತುವಾಗಿ ಹೋದಾಗ ಏಳು ವರ್ಷದ ಹುಡುಗ. ಈಗ ಪ್ರಬುದ್ಧನಾಗಿ ಬೆಳೆದಿರುವ ಅವನಿಗೆ ತನ್ನೂರಿನ ಪರಿಚಯ ಮಾಸು ಮಾಸಲು. ಈಗ ಆನಂದ ಈ ಪರಿಸರದವನಾಗಬೇಕಾಗಿದೆ. ಅವನನ್ನು ಮೊದಲು ನೋಡ ಬೇಕಾದರೆ ಎಣ್ಣೆಯಲ್ಲಿ ಮುಖ ನೋಡಬೇಕೆಂಬ ತನ್ನ ತಾಯ್ತಂದೆಗಳ ನಂಬಿಕೆಗಳ ಬಗ್ಗೆ ಅವನಲ್ಲಿ ಪ್ರತಿಕ್ರಿಯೆ ಇದ್ದರೂ, ಮಾರಿಗುಡಿಯಲ್ಲಿ ಹಿರಿಯರ ಮಧ್ಯೆ ಕೇಂದ್ರ ವ್ಯಕ್ತಿಯಾಗಿದ್ದರೂ ಸ್ತಬ್ಧನಾಗಿಬಿಡುತ್ತಾನೆ. ಅದು ಅಲ್ಲಿ ಅವನಿಗೆ 'ಮೋಡಿ' ಅನ್ನಿಸಿ ಈ ಸನ್ನಿವೇಶ ಅವನಿಗೆ 'ಕೃತಕ'ವೆನಿಸುತ್ತದೆ. ತನ್ನ ಸಾಕುತಂದೆ ಸತ್ತಾಗ ಆನಂದನ ಬಗ್ಗೆ ಅಂದುಕೊಂಡ–ಅಪವಾದಗಳ ಬಗ್ಗೆ ಅವನಲ್ಲಿ ಏನೂ ಪ್ರತಿ ಕ್ರಿಯೆಯೇ ವ್ಯಕ್ತವಾಗುವುದಿಲ್ಲ. ಒಂದು ರೀತಿಯಲ್ಲಿ ಇವನು, ಮಿತಭಾಷಿ. ಆನಂದ ಮನೆ ತಲುಪಿದಮೇಲೆ ಕಥೆ ನಮ್ಮನ್ನು ಇನ್ನೊಂದು ಘಟ್ಟಕ್ಕೆ ಕೊಂಡೊಯ್ಯುತ್ತದೆ. ಕೇವಲ ಒಂಬತ್ತು ದಿನದ ಆಗಂತುಕನಂತೆ ರಾತ್ರಿ ರಾತ್ರಿಯೇ ಪಲಾಯನ ಮಾಡುವ ಅವನ ವ್ಯಕ್ತಿತ್ವ ಆ ವಾತಾವರಣಕ್ಕೆ ಒಗ್ಗದೆ ಹೋದದನ್ನು ಧ್ವನಿಸುತ್ತದೆ. ಮತ್ತು ಮದುವೆಯ ಬಂಧನಕ್ಕೆ ಸಿಕ್ಕಿಸಲು ತನ್ನ ತಂದೆತಾಯಿಗಳು ನಿಶ್ಚಯಿಸಿರುವುದು ಅವನಿಗೆ ಗೊತ್ತಾದಾಗ ತನ್ನ ತಂಗಿಯ ಹತ್ತಿರ 'ಮದ್ವೆ ಆಗೋಲ್ಲ' ಎಂಬ ತನ್ನ ನಿರ್ಧಾರವನ್ನು ವ್ಯಕ್ತಪಡಿಸುತ್ತಾನೆ. ಆದರೆ

ಅವನಿಗೆ ಅವನ ತಂಗಿಯನ್ನು ನೋಡಿದಾಗ, "ತಮ್ಮನ ಥರ ಈ ಮಣ್ಣಲ್ಲಿ ಮೂಡಿದಂತೆ" ಅನ್ನಿಸುವುದಿಲ್ಲ. 'ಇವರೆಲ್ಲ ಈ ನೆಲಕ್ಕೆ ಮಾಡಿದವರು' ಅಂದುಕೊಂಡ ಅವನು ತನ್ನ ತಂಗಿಯ ಹತ್ತಿರ 'ನಾನು ನಿನಗೆ ಅಣ್ಣ ಅನ್ನಿಸ್ತಾದ?' ಎಂದು ಕೇಳುವ ಪ್ರಶ್ನೆಗೆ, 'ನಾನು ನಿಂಗೆ ಅಣ್ಣಾನೆ ಅಲ್ವಾ?' ಎಂಬ ಪ್ರಶ್ನೆಯನ್ನು ಅವಳಿಂದ ಪಡೆದುಕೊಳ್ಳುತ್ತಾನೆ. ಆ ರಾತ್ರಿಯೇ ಮನೆಯಿಂದ ಎದ್ದು ಹೊರಟುಹೋಗಿದ್ದ ಅವನ ಅಸಹಾಯಕ ಸ್ಥಿತಿಯನ್ನು ಕಥೆಗಾರರು ಕೊಟ್ಟ ಬಳಿಕ ತಂಗಿ ಮಾತ್ರ ಇನ್ನೂ ನಿದ್ದೆಯಿಂದ ಎಚ್ಚೆತ್ತಿರಲಿಲ್ಲ' ಎಂಬ ತೀವ್ರವಾದ ಪರಿಣಾಮದ ಕಡೆಗೆ ಕಥೆಯ ಸಮಸ್ಯೆಯನ್ನು ಧಾಟಿಸುತ್ತಾರೆ.

ಸಮಕಾಲೀನ ಸಮಸ್ಯೆಗಳಲ್ಲಿ ದಟ್ಟವಾದ ಹಸಿವೂ, ದ್ಯಾರಿದ್ರ್ಯ, ಜೀತ, ಮೌಢ್ಯಗಳೂ ಒಂದು. ಇಂತಹ ವಸ್ತುವಾಗುಳ್ಳ ಕಥೆ, 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ'. ಇದರ ಕೇಂದ್ರವ್ಯಕ್ತಿ ಹೊಲೆಯರ ರಂಗಪ್ಪ. ಇವನ ಹಸಿವಿನ ಜೀವಂತ ಕೊಲೆಯೇ ಇದರ ವಸ್ತು. ಇವನ ಸುತ್ತಾ ಇವನ ಮಗನ, ಹೆಂಡತಿಯ ಹಸಿವಿನ ಸಮಸ್ಯೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ; "ರಂಗಪ್ಪನಿಗೆ ಒಂದು ಜೋಪಡಿ, ಒಂದು ಹೆಂಡತಿ, ಒಂದು ಆರೇಳು ವರ್ಷದ ಹುಡುಗನನ್ನು ಬಿಟ್ಟರೆ ಅವನದೆನ್ನುವ ಆಸ್ತಿ ಏನೂ ಇಲ್ಲ." ಅವನು ಹುಟ್ಟಿದಾರಭ್ಯದಿಂದ ಆ ಊರಗೌಡರ ಹೊಲದಲ್ಲಿ ಜೀತ ಮಾಡುತ್ತಾ ಬಂದಿರುವನು. "ಅವನು ಮಾಡೋ ಉಳುಮೆಗೆ ಗೌಡರ ಹಟ್ಟಿ ಕಂಬ ನಿಂತಿದೆ" ಎಂಬುದು ಆ ಮೂಡಲ ಸೀಮೆಯ ಅಂಚಿನ ಊರಿನ ಜನರಲೆಲ್ಲಾ ಪ್ರಚಾರದಲ್ಲಿದೆ. ಈ ಕಥೆ ಅನ್ವರ್ಥವಾಗಿದ್ದು, ಕಾಲ, ಸಂಪ್ರದಾಯದ ದೃಷ್ಟಿಯಿಂದಲೂ ಪ್ರಮುಖವಾಗುತ್ತದೆ.

ಗೌಡರು ಕಂಡೀಷನ್ನಾಗಿ ಕೊಟ್ಟಿದ್ದ ನಾಲ್ಕು ಸೇರು ಜೋಳ ಮುಗಿದು, ಮಗು ಹಸಿದಿರುವ ಸುದ್ದಿ ತಿಳಿದ ರಂಗಪ್ಪ, ಗೌಡರ ಮನೆ ಹತ್ತಿರ ಹೋಗಿಬರುತ್ತೇನೆಂದು ತನ್ನ ಹೆಂಡತಿಗೆ ಹೇಳಿ ಹೊರಟಲ್ಲಿಂದ ಅವನ ಜೀತವನ್ನು ನಿರ್ವಿಕಾರವಾಗಿ ಕಥೆಗಾರರು ಆರು ಹಂತಗಳಲ್ಲಿ ಬೆಳಸಿ, ಏಳನೆಯ ಹಂತದಲ್ಲಿ ಅರ್ಥಪೂರ್ಣವಾದ ಆರಂಭದ ಪ್ರಶ್ನೆಯ ಮೂಲಕ ಮುಕ್ತಾಯ ಮಾಡಿದ್ದಾರೆ.

ರಂಗಪ್ಪ ಗೌಡ್ರಮನೆ ತಲುಪುವವರೆಗೂ ಊರೊಟ್ಟಿನ ಕೆಲಸಗಳಲ್ಲಿ ಎದುರು ಮಾತನಾಡದೆ ಭಾಗಿಯಾಗಲೇ ಬೇಕಾಗುತ್ತದೆ. ಸುಸ್ತಾದ ಅವನು ಆರಾಮಾಗಿ ಬದುಕುವ ಶಾಸ್ತ್ರಿಮೇಷ್ಟ್ರ ಮನೆಯಲ್ಲಿ ನೀರು ಕುಡಿಯುವ ಪ್ರಸಂಗವಂತು ವಸ್ತುನಿಷ್ಠವಾಗಿಯೇ ಇದೆ. ಮೇಷ್ಟ್ರ ಮಗಳು ಶಾರದೆ ನೀರು ಹುಯ್ಯುವ, ಮತ್ತು ರಂಗಪ್ಪ ಕೈಬೊಗಸೆಮಾಡಿ ಕುಡಿಯುವ ಸನ್ನಿವೇಶ ಶಾಸ್ತ್ರಿಗಳ ಮಡಿವಂತಿಕೆಯನ್ನು ಸೂಚಿಸುತ್ತದೆ. ಲೇಖಕರು ಕಥೆ ಹೇಳುವ ಧಾಟಿ ಒಂದೇ ಆದರೂ ಭಾಷೆ ಹೇಗೆ ಹಂತಹಂತಗಳಲ್ಲಿ ಪಾತ್ರಕ್ಕೆ, ಸನ್ನಿವೇಶಕ್ಕೆ ತಕ್ಕಂತೆ ಬದಲಾಗುತ್ತಾ ಹೋಗುತ್ತದೆ ಎಂಬುದಕ್ಕೆ

ಈ ಪ್ರಸಂಗ ಮತ್ತು 3ನೆ ಭಾಗದಲ್ಲಿ ರಂಗಪ್ಪನ ಹೆಂಡತಿ – ಮಗ ಮಾತನಾಡಿ ಕೊಳ್ಳುವ ಪ್ರಸಂಗವೇ ಸಾಕ್ಷಿ. ಮತ್ತು ಇವರಿಬ್ಬರ ಸಂಭಾಷಣೆಯು ಪ್ರಾದೇಶಿಕ ವಾತಾವರಣವನ್ನೂ ಕಲ್ಪಿಸುತ್ತದೆ. ಈ ಕಥೆಯ ಸೌಷ್ಠವ ಕೂಡಾ ವಿಶಿಷ್ಟ ವಾದದ್ದಾಗಿದೆ.

ಲೇಖಕ ಸೃಷ್ಟಿಸುವ ಪದಗಳ ಹಿಂದೆ ಅವನ ವ್ಯಕ್ತಿತ್ವದ ಆಳವಾದ ಮುದ್ರೆ ಯಾವ ಭಾವತನ್ಮಯತೆಗೂ ಇಲ್ಲಿ ಒಳಗಾಗಿಲ್ಲ. ಇದನ್ನು ಕಾಣಬೇಕಾದರೆ, ಈ ಕಥೆಯಲ್ಲಿನ ಗೌಡರ ಮನೆಯ ಭವ್ಯತೆಯನ್ನು ವರ್ಣಿಸುವಲ್ಲಿ, 'ರಾಚಿತು' ಎಂಬ ಶಬ್ದ ಮತ್ತು ಗೌಡರ ವ್ಯಕ್ತಿತ್ವವನ್ನು ಪರಿಚಯಿಸುವಲ್ಲಿ, 'ಗೌಡರ ಮುಚ್ಚಿ ಕಿರುಬನ ತೋರಿಸಬಹುದು; ಕಿರುಬನ ಮುಚ್ಚಿ ಗೌಡರ ತೋರಿಸಬಹುದು' ಎಂಬ ಕೆಲವೇ ಮಾತುಗಳಲ್ಲಿ ಹಿಡಿದಿಟ್ಟಿದ್ದಾರೆ.

ರಂಗಪ್ಪನ ಪೂರ್ವ ನಿಯೋಜನೆಯಂತೆ, ಗೌಡರು ನಂಜನಗೂಡಿಗೆ ಹೊರಟು ಹೋಗಿದ್ದಾಗ ಅವರ ಪತ್ನಿಯಿಂದಲೇ, "ನಾವೇ ಮಾನವಾಗಿ ಬದುಕಿಕೊಂಡು ಹೋಗೋದು ಕಷ್ಟ, ಎಲ್ಲಿಂದ ನಿನಗೆ ತರ್ಲಿ, ಬಂದೋನು ಬಂದಿದ್ದೀಯಾ ಒಂದು ಸೌದೆ ಕೊಂಟಿದೆ ವಸಿ ವಡಕೊಟ್ಟುಹೋಗು" ಎಂಬ ತಿರಸ್ಕಾರ ಮತ್ತು ಅಧಿಕಾರದ ಪುರಸ್ಕಾರ ದೊರೆತಾಗ ಅವನು ಇದ್ದ ಬದ್ದ ಬಲವನ್ನೆಲ್ಲಾ ಕೊಂಟಿಗೆ ತೊಡಗಿಸ ಬೇಕಾಗುತ್ತದೆ. ಕೊಂಟಿನಲ್ಲಿ ಮೂಡುವ ಗೌಡ್ರು, ನರ್ಸಮ್ಮ, ಶಾಸ್ತ್ರಿಮೇಷ್ಟ್ರ-ರವರ ಚಿತ್ರವಂತು ನಮ್ಮ ಕಥಾಸಾಹಿತ್ಯದಲ್ಲಿಯೇ ಅಪೂರ್ವವಾಗಿದೆ.

ಪಕ್ಕದ ಜಗಲಿಯ ಮೇಲೆ ನರ್ಸಮ್ಮ ಮತ್ತು ಗೌಡರ ಹೆಂಡತಿ ಗೌರಮ್ಮ ಇವರ ಸಂಭಾಷಣೆಯಲ್ಲಿ ವ್ಯಕ್ತವಾಗುವ ಎರಡು ವರ್ಗಗಳ ಅಂತರವನ್ನು ಕಂಡು ಕೊಳ್ಳಬಹುದು. ರಂಗಪ್ಪನ ಜನಾಂಗ ಜೀತಮಾಡಿದರೂ ಕೂಳಿಲ್ಲದೆ ತೆರಳ ಬೇಕಾಗುತ್ತದೆ. ಆದರೆ ನರ್ಸಮ್ಮನಂತವರು, 'ಕಾಳು ಕಡ್ಡಿಯನ್ನು ಕೊಳ್ಳದೆ' ತಿಂದು ಜೀವಿಸುವಂತ ಪಾತ್ರವಾಗಿದ್ದಷ್ಟೇ ಅಲ್ಲ, ಸಮಾಜದ ಪಾತ್ರವೂ ಹೌದು ಎಂಬುದಕ್ಕೆ ನಿದರ್ಶನವಾಗಿದೆ. ಇಲ್ಲಿಯ ಸಮಸ್ಯೆ ಗಂಭೀರವಾಗಿದ್ದು, ನರ್ಸಮ್ಮನ ಪ್ರಸಂಗವನ್ನು ಕಥೆಗಾರರು ಬಂದಣಿಕೆ ಅನ್ನಿಸದಷ್ಟರ ಮಟ್ಟಿಗೆ ಕಥೆಯಲ್ಲಿ ಮೈಗೂಡಿಸಿದ್ದಾರೆ. ಕೊಂಟು, ಕೊಡಲಿಯ ಮುಂದೆ ಕೂತಿದ್ದ ರಂಗಪ್ಪ ಬೆನ್ನಿಗಂಟಿದ ಹೊಟ್ಟೆಯನ್ನು ಹೊತ್ತು ನೆಲಕ್ಕೆ ಕೈಯೂರಿ ಮೇಲೇಳುವ ಚಿತ್ರವಂತು ನಮ್ಮ ಸಮಾಜದಲ್ಲಿರುವ ವಾಸ್ತವತೆಯ ಪ್ರತೀಕವೇ ಆಗಿದೆ. ಇಲ್ಲಿಯ ರಂಗಪ್ಪನ ಸಮಸ್ಯೆ ವೈಯಕ್ತಿಕವಾಗಿ, ಕಥೆಯ ಸಮಸ್ಯೆ ಸಾಮಾಜಿಕ ಸ್ತರದಲ್ಲಿ ನಿಂತು ಕಲಾತ್ಮ ಕತೆಯ ಶಿಲ್ಪವನ್ನು ದುಡಿಸಿಕೊಂಡಿದೆ.

ಒಟ್ಟಾರೆ ಸಮಕಾಲೀನ ಸಂದರ್ಭದಲ್ಲಿ ಈ ಕಥೆಗಳ ಶ್ರೇಷ್ಠತೆಗೆ ಗಮನಾರ್ಹವಾದ ಕೆಲವು ಅಂಶಗಳನ್ನು ಹೀಗೆ ಸಂಗ್ರಹಿಸಬಹುದು.

(1) ಈ ಎಲ್ಲಾ ಕಥೆಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ರೊಚ್ಚಿದೆ; ಆದರೆ ಈ ರೊಚ್ಚು ಸಾಮಾಜಿಕ ಸಂದರ್ಭದಲ್ಲಿ ನಿಸ್ಸಹಾಯಕವಾದದ್ದು.

(2) ಈ ಎಲ್ಲಾ ಕಥೆಗಳು ಪರಿಸರದ ವಿರೋದಾಭಾಸಗಳನ್ನು ವ್ಯಾಖ್ಯಾನಿಸುವುದರ ಜೊತೆಗೆ, ಅದರ ಹಿಂದಿರುವ ಕ್ರೂರತರ ಕಾರಣಗಳನ್ನು ಕೂಡಾ ಸಾಂಸ್ಕೃತಿಕವಾಗಿ ದಾಖಲುಪಡಿಸುತ್ತವೆ.

(3) ಈ ಕಥೆಗಳಲ್ಲಿನ ಸಾಂದ್ರತೆ ಮತ್ತು ಸೌಷ್ಠವತೆಗಳು ಆಧುನಿಕ ಸಾಹಿತ್ಯಕ್ಕೆ ಕೊಟ್ಟ ಪ್ರಮುಖ ಕೊಡುಗೆಗಳಾಗಿವೆ.

(4) ಈ ಕಥೆಗಳಲ್ಲಿನ ಆಶಯ ಮತ್ತು ಅಭಿವ್ಯಕ್ತಿಗಳು ಈ ಕಥೆಗಾರರ ಒಂದೇ ಸೃಜನಶೀಲ ವ್ಯಕ್ತಿತ್ವದ ರೇಖೆಯಲ್ಲಿ ಘಟಿಸುವ ಶಿಲ್ಪಗಳಾಗಿವೆ; ಇವುಗಳ ಈ ಸಂಬಂಧ ಕೂಡಾ ಕನ್ನಡಕ್ಕೆ ಹೊಸತರದ್ದಾಗಿದೆ.

(5) ಇಲ್ಲಿಯ ಕಥೆಗಳ 'ಬದುಕು' ಕನ್ನಡ ಸಾಹಿತ್ಯದಲ್ಲಿಯೇ ವಿಶಿಷ್ಟವಾದದ್ದು; ಈ ವಸ್ತುನಿಷ್ಠ ಬದುಕಿನೊಡನೆಯೇ ಮೈದಾಳುವ ಇಲ್ಲಿಯ ಕಲಾತ್ಮಕತೆ ಇನ್ನೂ ಹೆಚ್ಚು ಗಾಢವಾದದ್ದೇ.

ಇಂಥ ಸಮರ್ಥ ಸಾಹಿತ್ಯಸೃಷ್ಟಿಗೆ ಕಾರಣರಾದ ದೇವನೂರ ಮಹಾದೇವ ಅವರು ನಿಜಕ್ಕೂ ಸ್ವಾಗತಾರ್ಹರಾಗಿದ್ದಾರೆ; ಕನ್ನಡ ಸಾಹಿತ್ಯದ ಸಮೃದ್ಧತೆಗೆ ಕಾರಣರಾದ ತೇಜಸ್ವಿ, ಲಂಕೇಶರಂತೆಯೇ ದೇವನೂರರು ಕೂಡಾ ಇನ್ನೂ ಹೆಚ್ಚು ಸಮರ್ಥವಾದದ್ದನ್ನು ಕನ್ನಡಕ್ಕೆ ಕೊಡಬಲ್ಲರು ಎಂಬ ಕುತೂಹಲವನ್ನು ಓದುಗರಲ್ಲಿ ಹುಟ್ಟಿಸಿದ್ದರೆ ಆಶ್ಚರ್ಯವೇನೂ ಅಲ್ಲ.

ಭಗವದ್ಗೀತೆಯಲ್ಲಿ ಜೀವವಿಕಾಸ ತತ್ತ್ವಗಳು

ಎಸ್. ಸುಂದರ ರಾಜನ್

ಹಿಂದೂ ಧರ್ಮ ಅಥವಾ ಹಿಂದೂ ಜೀವನ ವಿಧಾನವು, ಜಗತ್ತಿನ ಚಿಂತನೆಗೆ ಭಾರತ ದೇಶವು ನೀಡಿರುವ ಅತ್ಯಂತ ಮಹತ್ವದ ಕೊಡುಗೆ. ಪುರಾತನವಾದ ಈ ಧರ್ಮವು ಸಹಸ್ರಾರು ವರ್ಷಗಳಿಂದ ಉಳಿದುಕೊಂಡು ಬಂದಿದೆ. ಇದಕ್ಕೆ ಮುಖ್ಯ ಕಾರಣ, ಈ ಧರ್ಮದಲ್ಲಿರುವ, ಕಾಲಕ್ಕೆ ತಕ್ಕಂತೆ ಬದಲಾಗುವ ಚೈತನ್ಯ.

ಹಿಂದೂಧರ್ಮವು ಅತ್ಯಂತ ವೈಜ್ಞಾನಿಕವಾದದ್ದು. ಈ ಧರ್ಮದ ತಳಹದಿ ವೈಜ್ಞಾನಿಕ ಸತ್ಯವೇ ಆಗಿದೆ. ಈ ಧರ್ಮದ ಚಿಂತನಕಾರರು ವೈಜ್ಞಾನಿಕ ಸತ್ಯಗಳನ್ನು ಧರ್ಮದ ರೂಪದಲ್ಲಿಟ್ಟು, ಜನರಿಗೆ ತಿಳಿಸುತ್ತಿದ್ದರು. ಇದಕ್ಕೆ ಕಾರಣ, ಆ ಕಾಲದಲ್ಲಿದ್ದ ಜನರ ಮನೋಭಾವನೆ ಹಾಗೂ ಆಗಿನ ಕಾಲದಲ್ಲಿದ್ದ ಸಾಮಾಜಿಕ ಸ್ಥಿತಿಗತಿಗಳು. ಬಹುಶಃ ಆಗಿನ ಕಾಲದಲ್ಲಿ ವೈಜ್ಞಾನಿಕ ಸಂಗತಿಗಳನ್ನು ನೇರವಾಗಿ ಹೇಳಿದ್ದರೆ, ಜನ ನಂಬುತ್ತಿರಲಿಲ್ಲ, ಹಾಗೂ ಖಂಡಿಸುತ್ತಿದ್ದರೆಂದು ಕಾಣುತ್ತದೆ. (ಈ ಸಂದರ್ಭದಲ್ಲಿ ಪಶ್ಚಿಮ ದೇಶಗಳಲ್ಲಿ ವೈಜ್ಞಾನಿಕ ಸತ್ಯಗಳನ್ನು ನೇರವಾಗಿ ಹೇಳಹೊರಟವರ ಗತಿಯೇನಾಯಿತೆಂಬುದನ್ನು ನೆನಪಿಗೆ ತಂದುಕೊಳ್ಳಬಹುದು.) ಅದಕ್ಕಾಗಿಯೇ ಹಿಂದೂಧರ್ಮದ ಚಿಂತನಕಾರರು ವೈಜ್ಞಾನಿಕ ಸಂಗತಿಗಳನ್ನು ತಿಳಿಸಲು ಧರ್ಮವನ್ನು ಆಧಾರವನ್ನಾಗಿ ಬಳಸಿಕೊಂಡರು ಎಂದು ಕಾಣುತ್ತದೆ. ಅದರಿಂದಾಗಿ ಜನರ ವಿರೋಧ ಬರಲಿಲ್ಲ. ನೇರವಾಗಿ 'ನಾನು ಹೇಳುತ್ತೇನೆ– ಪ್ರಪಂಚ ಹೀಗೆ ಉದ್ಭವವಾಯಿತು' ಎನ್ನುವುದಕ್ಕೂ, 'ಭಗವಾನ್ ಶ್ರೀಕೃಷ್ಣ ಹೇಳಿದ್ದಾನೆ ಈ ಪ್ರಕಾರದಲ್ಲಿ ಪ್ರಪಂಚ ಉದ್ಭವವಾಯಿತು' ಎನ್ನುವುದಕ್ಕೂ ಬಹಳ ವ್ಯತ್ಯಾಸವಿದೆ. ಎರಡನೆ ವಿಧಾನ ಉತ್ತಮವಾದುದು ಏಕೆಂದರೆ, ಅದು ಜನರಿಗೆ ರುಚಿಸುತ್ತದೆ. ಇಲ್ಲಿಯು ಮುಖ್ಯ ಉದ್ದೇಶ ದೇವರೇ ಹೇಳಿರಲಿ ಯಾರೇ ಹೇಳಿರಲಿ, ಸತ್ಯ ಸಂಗತಿ ಜನರಿಗೆ ತಿಳಿಸಬೇಕೆಂಬುದು.

ಹಿಂದೂಧರ್ಮದ ವಿಚಾರವನ್ನು ತಿಳಿಸುವ ಅನೇಕ ಉದ್ಗ್ರಂಥಗಳಿವೆ, ಶಾಸ್ತ್ರ, ಪುರಾಣಗಳಿವೆ. ಆದರೆ, ಅವೆಲ್ಲವುಗಳಲ್ಲಿಯೂ ಅತ್ಯಂತ ಸರಳವಾದದ್ದು ಹಾಗೂ ಸಾಮಾನ್ಯ ಜನರಿಗೆ ನಿಲುಕುವಂತಹುದು ಭಗವದ್ಗೀತೆ. ಒಂದು ವಿಧದಲ್ಲಿ ನೋಡಿದರೆ, ಹಿಂದೂಧರ್ಮದ ಸಾರ ಸಂಗ್ರಹವೇ ಭಗವದ್ಗೀತೆ. ಭಗವದ್ಗೀತೆಯನ್ನು ಅನೇಕರು ಅನೇಕ ವಿಧಗಳಿಂದ ಪರಿಶೀಲಿಸಿದ್ದಾರೆ. ಇದಕ್ಕೆ ಕಾರಣ ಪ್ರತಿಬಾರಿ

ಓದಿದಾಗಲೂ ಅದರಲ್ಲಿ ವಿಶೇಷ ಅರ್ಥ ದೊರೆಯುವುದೇ ಆಗಿರಬೇಕು. ಈ ಲೇಖನದಲ್ಲಿ ಜೀವಶಾಸ್ತ್ರದ ದೃಷ್ಟಿಯಿಂದ ಭಗವದ್ಗೀತೆಯ ಕೆಲವು ಶ್ಲೋಕಗಳನ್ನು ವಿವೇಚಿಸಲಾಗಿದೆ.

ಸಾಮಾನ್ಯ ಅಭಿಪ್ರಾಯದ ಪ್ರಕಾರ ಜಗತ್ತೆಲ್ಲವೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟಿತು. ಎಲ್ಲ ಜೀವರಾಶಿಗಳೂ ಪ್ರತ್ಯೇಕವಾಗಿ ಬಂದವು. ಆದರೆ, ಜೀವವಿಕಾಸ ತತ್ತ್ವದ ಪ್ರಕಾರ ಜಗತ್ತಿನ ಜೀವರಾಶಿಗಳೆಲ್ಲವೂ ಕ್ರಮೇಣ ಒಂದರಿಂದ ಇನ್ನೊಂದು ವಿಕಾಸ ಹೊಂದಿದವು. ಇದು ನಿಜವೇ ? ಭಗವದ್ಗೀತೆ ಸಂಪೂರ್ಣವಾಗಿ ಪ್ರತ್ಯೇಕ ಸೃಷ್ಟಿಯನ್ನು ಪ್ರತಿಪಾದಿಸುತ್ತದೆಯೇ ಅಥವಾ ಅದರಲ್ಲಿ ಜೀವವಿಕಾಸ ಸತ್ಯವನ್ನು ಬಿಂಬಿಸಿರುವ ಅಂಶಗಳೇನಾದರೂ ಇವೆಯೇ ಎಂಬುದನ್ನು ನಾವು ನೋಡಬೇಕಾಗಿದೆ. ಈ ಲೇಖನದಲ್ಲಿ ಉದಾಹರಿಸಿರುವ ಶ್ಲೋಕಗಳನ್ನು ಪೂರ್ಣಮುಕ್ತ ಮನಸ್ಸಿನಿಂದ ಓದಿ ತಿಳಿದುಕೊಂಡರೆ, ಆಧುನಿಕ ಜೀವಶಾಸ್ತ್ರಕ್ಕೂ ಭಗವದ್ಗೀತೆಯಲ್ಲಿ ಹೇಳಿರುವುದಕ್ಕೂ ಬಹಳಷ್ಟು ಸಾಮ್ಯ ಕಂಡುಬರುತ್ತದೆ. ಜೀವಶಾಸ್ತ್ರದಲ್ಲಿ ಯಾವುದನ್ನು ಅವಲೋಕನೆ (observation) ಹಾಗೂ ಪ್ರಯೋಗಗಳ (experiments) ಮೂಲಕ ಕಂಡುಹಿಡಿಯಲಾಗಿದೆಯೋ ಅದನ್ನು ಭಗವದ್ಗೀತೆಯಲ್ಲಿ ಅಂತರಾನುಭವದಿಂದ ಕಾವ್ಯಮಯವಾಗಿ ಹೇಳಿದೆ ಎಂಬುದು ಅರ್ಥವಾಗುತ್ತದೆ.

ಜಗತ್ತಿನ ಉದಯ

ಜಗತ್ತಿನ ಶ್ರೇಷ್ಠ ಖಗೋಳಶಾಸ್ತ್ರಜ್ಞರ ಪ್ರಕಾರ, ನಕ್ಷತ್ರಗಳು ಹಾಗೂ ಗ್ರಹಗಳು ಅನಿಲದ ಒಂದು ಜ್ವಲಿಸುತ್ತಿರುವ ಉಂಡೆಯಿಂದ ಉಂಟಾಗಿವೆ. ಜಾರ್ಜ್ ಗೇಮೋವ್ ಪ್ರಕಾರ, ನಕ್ಷತ್ರಮಂಡಲದ ಮಧ್ಯದಲ್ಲಿ ಒಂದು ಆದಿಬೀಜ (primordial atom) ಇದ್ದಿತು. ಅದರಲ್ಲಿ, ಅನಿಲದ ಒತ್ತಡ ಬಹಳವಾಗಿದ್ದು, ಅದು ಸಿಡಿದು, ನಕ್ಷತ್ರಗಳು, ಅನಂತರ ಗ್ರಹಗಳು ಉಂಟಾದವು. ಭಗವದ್ಗೀತೆಯ ಈ ಶ್ಲೋಕದ ಪ್ರಕಾರ......

"ಬೀಜಂ ಮಾ ಸರ್ವ ಭೂತಾನಾಂ ವಿದ್ಧಿ ಪಾರ್ಥ ಸನಾತನಂ"

ಅ. 7, ಶ್ಲೋ. 10.

(ಶ್ರೀಕೃಷ್ಣ ಹೇಳುತ್ತಾನೆ – ಎಲೈ ಅರ್ಜುನನೇ. ಸರ್ವಭೂತಗಳ ಉತ್ಪತ್ತಿಗೆ ಕಾರಣರೂಪವಾದ ಅನಾದಿ ಬೀಜವು ನಾನೆಂಬುದಾಗಿ ತಿಳಿ.)

ಇಲ್ಲಿನ ವೈಜ್ಞಾನಿಕ ಸಂಗತಿಯೆಂದರೆ, ಭಗವದ್ಗೀತೆಯನ್ನು ಬರೆದ ಕಾಲದಲ್ಲಿನ ಭಾರತೀಯರಿಗೆ ಜಗತ್ತಿನ ಉತ್ಪನ್ನ ಒಂದು ಆದಿ ಬೀಜದಿಂದ ಆಯಿತು ಎಂಬುದು ತಿಳಿದಿತ್ತು ಎಂಬುದು.

ಗ್ರಹಗಳು ಹಾಗೂ ನಕ್ಷತ್ರಗಳ ಉದಯದ ಬಗ್ಗೆ ಅನೇಕ ಸಿದ್ಧಾಂತಗಳಿವೆ. ಒಂದು ಸಿದ್ಧಾಂತದ ಪ್ರಕಾರ – ಮೊದಲು ನಕ್ಷತ್ರಗಳು ಅನಿಲದ ಉಂಡೆಗಳಾಗಿ ಹುಟ್ಟಿಕೊಂಡವು. ನಂತರ, ಅವುಗಳಿಂದ ಗ್ರಹಗಳು ಬಂದವು. ನಮ್ಮ ಸೌರವ್ಯೂಹ ದಲ್ಲೂ ಮೊದಲು ಸೂರ್ಯ (ಒಂದು ನಕ್ಷತ್ರ) ಉಂಟಾದನು. ನಂತರ ಗ್ರಹಗಳು ಬಂದವು.

ಗೀತೆಯ ಈ ಶ್ಲೋಕದಲ್ಲಿ –

"ಅಪರಂ ಭವತೋ ಜನ್ಮ ಪರಂ ಜನ್ಮ ವಿವಸ್ವತಃ"

ಅ. 4. ಶ್ಲೋ. 4.

(ಅರ್ಜುನ ಹೀಗೆ ಹೇಳುತ್ತಾನೆ–ಎಲೈ ಭಗವಂತನೇ, ನಿನ್ನ ಜನ್ಮ ಈಗ ಆಗಿರು ವುದು .ಸೂರ್ಯನ ಜನ್ಮವಾದರೋ ಸೃಷ್ಟಿಯ ಆದಿಯಲ್ಲೇ ಆಗಿರುವುದು.)

ಇಲ್ಲೂ ಸಹ ಗಮನಿಸಬೇಕಾದ ವೈಜ್ಞಾನಿಕ ಅಂಶ – ಸೂರ್ಯನ ಹುಟ್ಟು ಆದಿಯಲ್ಲಿ ಆಯಿತೆಂಬುದು.

ಜೀವ ಜಗತ್ತಿನ ಉದಯ

ಜೀವವಿಕಾಸ ತತ್ತ್ವದ ಸೂತ್ರಗಳ ಪ್ರಕಾರ ಈ ಭೂಮಿಯಮೇಲೆ ಜೀವವು ಒಂದು ಕಣರೂಪದಲ್ಲಿ ಉಂಟಾಯಿತು. ಆ ಕಾಲದಲ್ಲಿ ಭೂಮಿಯಮೇಲಿದ್ದ ರಸಾಯನಿಕಗಳ ವಿಶಿಷ್ಟ ಮಿಶ್ರಣದಿಂದ ಜೀವಕಣ ಉಂಟಾಯಿತು. ನಂತರ, ಇದು ಅಭಿವೃದ್ಧಿ ಹೊಂದಿ, ವಿವಿಧ ರೂಪಗಳನ್ನು ತಾಳಿತು. ಜೀವವಿಕಾಸದ ಮೊದಲ ಹಂತದಲ್ಲಿ, ಸೂಕ್ಷ್ಮಜೀವಿಗಳು (micro organisms) ಉಂಟಾದವು. ನಂತರ ಅವು ಬರಬರುತ್ತಾ ಬೃಹತ್‌ಜೀವಿಗಳಾಗಿ (macro organisms) ವಿಕಾಸ ಹೊಂದಿ ದವು. ಗೀತೆಯ ಈ ಕೆಳಗಿನ ಶ್ಲೋಕದಲ್ಲಿ –

"ಅವ್ಯಕ್ತಾದೀನಿ ಭೂತಾನಿ ವ್ಯಕ್ತ ಮಧ್ಯಾನಿ ಭಾರತ
ಅವ್ಯಕ್ತ ನಿಧಾನಾನ್ಯೇವ ತತ್ರಕಾ ಪರಿವೇದನಾ"

ಅ. 2. ಶ್ಲೋ. 28.

[ಶ್ರೀಕೃಷ್ಣ – ಎಲೈ ಭರತ ಶ್ರೇಷ್ಠನೇ, ಕಂಡುಬರುವ ಈ ಸ್ಥಾವರ (ಅಚಲ - ವೃಕ್ಷ ಮುಂತಾದವು) ಜಂಗಮ (ಮನುಷ್ಯ ಪಶು ಮುಂತಾದ ಸಂಚರಿಸುವ ಪ್ರಾಣಿ ಗಳು) ರೂಪವಾದ ಪ್ರಪಂಚವೆಲ್ಲವೂ ಮೊದಲು ಸೂಕ್ಷ್ಮಸ್ಥಿತಿಯಲ್ಲಿದ್ದು ಮಧ್ಯದಲ್ಲಿ ಸ್ಥೂಲಸ್ಥಿತಿಯನ್ನು ಹೊಂದಿ, ಅಂತ್ಯದಲ್ಲಿ ಸೂಕ್ಷ್ಮಸ್ಥಿತಿಯನ್ನು ಹೊಂದುವುವಾದುದ ರಿಂದ ಇದಕ್ಕೆ ಏಕೆ ವ್ಯತ್ಯಾಸವು ?]

ಈ ಮೇಲಿನ ಶ್ಲೋಕದಲ್ಲಿನ ಮೊದಲರ್ಧ ಭಾಗ ನಿಜಕ್ಕೂ ವೈಜ್ಞಾನಿಕ ಸತ್ಯ. ಏಕೆಂದರೆ, ಅದು ಸೂಕ್ಷ್ಮ ಜೀವಿಗಳಿಂದ ಬೃಹತ್‌ಜೀವಿಗಳ ವಿಕಾಸವನ್ನು ಸೂಚಿಸುತ್ತದೆ. ಶ್ಲೋಕದ ಉತ್ತರಾರ್ಧ ಸೂಚಿಸುವ–ಬೃಹತ್‌ಜೀವಿಗಳೆಲ್ಲವೂ ಕೊನೆಗೆ ಸೂಕ್ಷ್ಮಜೀವಿಗಳಾಗುತ್ತವೆಯೇ ಎಂಬುದು ಇನ್ನೂ ಕಾದು ನೋಡಬೇಕಾದ ವಿಷಯ. ಜೀವ ಜಗತ್ತಿನ ಭವಿಷ್ಯದ ಬಗ್ಗೆ ಜೀವಶಾಸ್ತ್ರಜ್ಞರು ಇನ್ನೂ ಏನನ್ನೂ ಹೇಳಲಾಗಿಲ್ಲ. ಆದರೆ, ಒಂದು ಮಾತಂತೂ ನಿಜ. ಬುದ್ಧಿ ವಿಕಾಸ ಆದ ಹಾಗೆಲ್ಲಾ, ದೇಹದ ಗಾತ್ರ ಕಡಿಮೆಯಾಗಬಹುದೆಂದು ಜೀವಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಮಧ್ಯ ಜೀವಯುಗ (Mesozoic era) ದಲ್ಲಿದ್ದ ಸರೀಸೃಪ (Dinosaurs) ಗಳ ಶರೀರ ಅತ್ಯಂತ ಬೃಹತ್ ಗಾತ್ರದ್ದಾಗಿತ್ತು. ನಂತರ, ಭೂಮಿಯನ್ನು ಆಳುತ್ತಿರುವ ಸಸ್ತನಿಗಳೆಲ್ಲಾ (ತಿಮಿಂಗಲದ ಹೊರತು) ಸರೀಸೃಪಗಳಿಗಿಂತ ಸಣ್ಣದೇಹವನ್ನು ಪಡೆದಿವೆ. ಬಹುಶಃ ಈ ಶ್ಲೋಕದ ಉತ್ತರಾರ್ಧದ ಅರ್ಥ, ಜೀವಿಗಳ ಈ ಶರೀರದ ಗಾತ್ರ ಬರಬರುತ್ತಾ ಕಡಿಮೆಯಾಗುತ್ತದೆ ಎಂದಿರಬೇಕು. ಆದರೆ ಈಗಿರುವ ಜೀವಿಗಳು ಮತ್ತೊಮ್ಮೆ ಸೂಕ್ಷ್ಮಜೀವಿಗಳಾಗಬಹುದೇ ಇಲ್ಲವೇ ಎಂಬ ಬಗ್ಗೆ ಇನ್ನೂ ಏನೂ ಹೇಳಲಾಗುವುದಿಲ್ಲ.

ಈ ಜಗತ್ತಿನ ಜೀವಿಗಳಲ್ಲಿರುವ ಶರೀರ ಸಾವಯುವ (organic) ಪದಾರ್ಥಗಳಿಂದ ಉಂಟಾಗಿದೆ. ಈ ಸಾವಯುವ ಪದಾರ್ಥಗಳು ಕಾರ್ಬೋಹೈಡ್ರೇಟುಗಳು (carbohydrates) ಮತ್ತು ಪ್ರೋಟೀನ್‌ಗಳು ಇತ್ಯಾದಿಗಳ ರೂಪದಲ್ಲಿವೆ. ಈ ಮೂಲಭೂತ ಪದಾರ್ಥಗಳಿಂದ ದೇಹವು ರಚಿಸಲ್ಪಟ್ಟಿದೆ.

ಗೀತೆಯ ಈ ಕೆಳಕಂಡ ಶ್ಲೋಕದಲ್ಲಿ ಈ ಭಾವ ನಿರೂಪಿತವಾಗಿದೆ.

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನ ಸಂಭವಃ

ಅ. 3. ಶ್ಲೋ. 14.

ಇಲ್ಲಿ ಅನ್ನವೆಂದರೆ, ಬೇಯಿಸಿದ ಅಕ್ಕಿಯಿಂದುಂಟಾದ ವಸ್ತುವೆಂದು ಅರ್ಥ ಮಾಡಬಾರದು. ಅನ್ನವೆಂದರೆ ಮೂಲಭೂತ ಆಧಾರ ಪದಾರ್ಥಗಳೆಂದು ತಿಳಿಯಬೇಕು. ಇವುಗಳಿಂದ, ಅಂದರೆ ಮೂಲ ಭೂತ ಆಹಾರ ಪದಾರ್ಥಗಳಿಂದ ದೇಹ ಬಲ ಉಂಟಾಗಿದೆಯೆಂದು ಅರ್ಥ. ಜೀವಿಗಳ ದೇಹ ಉಂಟಾಗುವುದು ದೇವರಿಂದ ಅದು ಒಂದು ರಹಸ್ಯ, ಮಾನವರ ಅರಿವಿಗೆ ಬರಲಾರದು. ಹಾಗೂ ಅವುಗಳ ದೇಹ ಒಂದು ಜೈವಿಕ ಶಕ್ತಿ (vital force) ಯಿಂದ ಕೂಡಿರುತ್ತವೆ ಎಂಬ ಅಭಿಪ್ರಾಯವಿದ್ದ ಕಾಲದಲ್ಲಿ ಜೀವಿಗಳ ದೇಹಕ್ಕೂ ಮತ್ತು ಮೂಲಭೂತ ಆಹಾರ ಪದಾರ್ಥಗಳಿಗೂ ಸಂಬಂಧ ಕಲ್ಪಿಸುವ ಮತ್ತು ದೇಹಕ್ಕೆ ಚೈತನ್ಯವನ್ನುಂಟು ಮಾಡುವುದು. ಈ ಮೂಲಭೂತ ಸಾವಯುವ ಪದಾರ್ಥಗಳು ಎನ್ನುವ ಈ ಸಂಗತಿ ಅತ್ಯಂತ ಪ್ರಾಮುಖ್ಯವಾದುದು.

ಪ್ರಕೃತಿಯು ಮೂಲಕ ಜೀವಿಗಳ ಉದಯ

ಸಮಸ್ತ ಜೀವಿರಾಶಿಯೂ ಪ್ರಕೃತಿ (nature) ಯಿಂದ ಉಂಟಾಗುತ್ತವೆ. ಮತ್ತು ಪ್ರಕೃತಿಗೆ ಹೊಂದಿಕೊಂಡು ಹೋಗುತ್ತವೆ; ಜೀವಿಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಸಂತಾನೋತ್ಪತ್ತಿ ನಡೆಸಿ ಬದುಕುತ್ತವೆ. ಹೀಗೆಂದು ಜೀವಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಅದೂ ಅಲ್ಲದೆ ಜೀವವು ಈ ಭೂಮಿಯಮೇಲೆ ಹುಟ್ಟಿದಂದಿನಿಂದ ಇದುವರೆಗೂ ಸಂತಾನೋತ್ಪತ್ತಿಯ ಸಾಮರ್ಥ್ಯದ ಮೂಲಕ ಉಳಿದುಕೊಂಡು ಬಂದಿದೆ. ಹುಟ್ಟಿದ ಜೀವಿಗಳು ನಾಶವಾದರೂ ಜೀವವು ನಾಶವಾಗಲಾರದು. ಏಕೆಂದರೆ, ಅದು ಇನ್ನೊಂದು ಜೀವಿಗೆ (ಸಂತಾನಕ್ಕೆ) ಜನ್ಮವಿತ್ತು ರೂಪಿಸಿರುತ್ತದೆ. ಈ ಅರ್ಥ ಈ ಕೆಳಗಿನ ಶ್ಲೋಕದಲ್ಲಿ ಅತ್ಯಂತ ಸುಂದರವಾಗಿ ಪ್ರತಿಪಾದಿಸಲ್ಪಟ್ಟಿದೆ.

ಅಪರೇಯ ಮಿತಸ್ತ್ವಸ್ಯಾಂ ಪ್ರಕೃತಿಂ ವಿದ್ಧಿಮೇ ಪರಾಂ
ಜೀವ ಭೂತಾಂ ಮಹಾಬಾಹೋ ಯ ಯೇದಂಧಾರ್ಯ ತೇ ಜಗತ್

ಅ. 7. ಶ್ಲೋ. 5.

(ಎಲೈ ಮಹಾಬಾಹುವಾದ ಅರ್ಜುನನೇ, ಈ ಪ್ರಕೃತಿಯು ಅಪರ (ಮಾಯೆ) ವೆನಿಸುವುದು. ಇದಕ್ಕಿಂತಲೂ ಉತ್ಕೃಷ್ಟವಾದ ಜೀವ ಭೂತವಾದ ನನ್ನ ಪ್ರಕೃತಿ ಯನ್ನು ತಿಳಿಯುವವನಾಗು. ಜೀವರೂಪವಾದ ಆ ಪ್ರಕೃತಿಯಿಂದ ಈ ಜಗತ್ತು ಧಾರಣ ಮಾಡಲ್ಪಟ್ಟಿರುವುದು.)

ಇಲ್ಲಿ ಪ್ರಕೃತಿಯು ಅಪರವೆಂದರೆ, ಬೇಗನೆ ನಶಿಸಿ (transient) ಹೋಗತಕ್ಕ ದ್ದೆಂದರ್ಥ. ಈ ಪ್ರಕೃತಿಯು ದೇಹರೂಪದ ಪ್ರಕೃತಿ. ಜೀವಭೂತವಾದ ಪ್ರಕೃತಿಯು ಯಾವಾಗಲೂ ಉಳಿಯುವಂಥದ್ದು. ಆದ್ದರಿಂದಲೇ ಈ ಜೀವ ಜಗತ್ತು ಉಳಿದು ಕೊಂಡು ಬಂದಿದೆ.

ಅದೇ ರೀತಿ ಜೀವಿಗಳೆಲ್ಲವೂ ಪ್ರಕೃತಿಯಿಂದಲೇ ಉಂಟಾದವು ಎಂದು ಈ ಕೆಳಕಂಡ ಶ್ಲೋಕ ಪ್ರತಿಪಾದಿಸುತ್ತದೆ.

ಏತದ್ಯೋ ನೀನಿ ಭೂತಾನಿ ಸರ್ವಾಣೀತ್ಯುಪಧಾರಯ

ಅ. 7 .ಶ್ಲೋ. 6.

(ಸಮಸ್ತ ಭೂತಗಳೂ ಈ ಪ್ರಕಾರವಾಗಿ ಪೂರ್ವೋಕ್ತವಾದ ಪ್ರಕೃತಿಯೇ ಕಾರಣಗಳಾಗುಳ್ಳವುಗಳೆಂದು ನಿಶ್ಚಯಿಸು).

ಇಲ್ಲಿ ಪ್ರಕೃತಿಯೇ ಕಾರಣಗಳಾಗುಳ್ಳವುಗಳು ಎಂದರೆ, ಪ್ರಕೃತಿಯಿಂದ ಉಂಟಾದವು ಎಂದರ್ಥ.

ಗೀತೆಯನ್ನು ಬರೆದ ಕಾಲದಲ್ಲಿನ ಭಾರತೀಯರು ಅಂತಿಮವಾಗಿ ಒಂದು ಬಗೆಯ ದೈವಸೃಷ್ಟಿಯಲ್ಲಿ ನಂಬಿಕೆಯನ್ನಿಟ್ಟಿದ್ದರೂ ಪ್ರಕೃತಿಗೂ (nature) ಸಾಕಷ್ಟು

ಪ್ರಾಮುಖ್ಯತೆಯನ್ನು ಕೊಟ್ಟಿದ್ದರು ಎಂಬುದು ಈ ಕೆಳಕಂಡ ಶ್ಲೋಕಗಳಿಂದ ತಿಳಿದುಬರುತ್ತದೆ.

ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದ ವಿಸೃಜಾಮ್ಯಹಮ್

ಅ. 9. ಶ್ಲೋ. 7.

(ಪ್ರಳಯಕಾಲದಲ್ಲಿ ಚರಾಚರ ಪ್ರಪಂಚವೆಲ್ಲವೂ ನನ್ನ ಪ್ರಕೃತಿಯಲ್ಲಿ ಸೇರುವುದು. ಕಲ್ಪಾದಿಯಲ್ಲಿ ಅವುಗಳನ್ನು ನನ್ನ ಮಾಯೆಯದ್ವಾರ (ಎಂದರೆ, ಪ್ರಕೃತಿಯದ್ವಾರಾ) ನಾನು ಸೃಷ್ಟಿಸಿದೆನು).

ಪ್ರಕೃತಿಂ ಸ್ವಾಮ ಉಪ್ಪಭ್ಯ ವಿಸೃಜಾಯಿ ಪುನಃ ಪುನಃ
ಭೂತಗ್ರಾಯ ಮಿಯಂ ಕೃತ್ಸ್ನಯ ದಶಂ ಪ್ರಕೃತೇರ್ವಶಾತ್

ಅ. 9. ಶ್ಲೋ. 8.

(ನನ್ನ ಸ್ವಾಧೀನದಲ್ಲಿರುವ ಮೂಲಪ್ರಕೃತಿಯನ್ನು ಆಶ್ರಯಿಸಿ ನನ್ನ ಪ್ರಕೃತಿಯು ಅಧೀನದಲ್ಲಿರುವ ಪ್ರಾಣಿವರ್ಗವನ್ನು ಪುನಃ ಆ ಪ್ರಕೃತಿಯಿಂದಲೇ ಸೃಷ್ಟಿಸುವೆನು.)

ಇಲ್ಲಿ ಪ್ರಾಣಿವರ್ಗ ಎಂದರೆ, ಎಲ್ಲಾ ಜೀವಿಗಳು ಎಂದು ಅರ್ಥ ಮಾಡಿ ಕೊಳ್ಳಬೇಕು.

ಮಾಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್
ಹೇತುನಾನೇನೆ ಕೌಂತೇಯ ಜಗದ್ವಿ ಪರಿವರ್ತತೆ

(ಎಲೈ ಕುಂತೀ ಪುತ್ರನಾದ ಅರ್ಜುನನೇ, ನಾನೇ ಆಧಾರವಾದ ನಿಮಿತ್ತದಿಂದ ಈ ಪ್ರಕೃತಿಯು ಚರಾಚರ ಪ್ರಪಂಚವನ್ನು ನಿರ್ಮಿಸುತ್ತದೆ. ಈ ಕಾರಣದಿಂದಲೇ ಜಗತ್ತು ಪುನಃ ಪುನಃ ಉತ್ಪತ್ತಿಯಾಗುತ್ತಲಿರುವುದು.)

ಇಲ್ಲಿ 'ನಾನೇ ಆಧಾರ' ಎಂಬುವನ್ನು 'ಒಂದು ಮೂಲಭೂತ ಚೈತನ್ಯ ಎಂದು ಅರ್ಥ ಮಾಡಿಕೊಂಡರೆ, ಅದರಿಂದ ಈ ಜಗತ್ತು ಉಂಟಾಗುತ್ತದೆ. ಮತ್ತು ಈ ಜಗತ್ತು ನಶ್ವರ (transient) ಆದ್ದರಿಂದ ಪುನಃ ಪುನಃ ಉಂಟಾಗುತ್ತಿರುತ್ತದೆ ಎಂಬುದು ಮನದಟ್ಟಾಗುತ್ತದೆ. ಈ ಜಗತ್ತು ಮೂಲತಃ ನಕ್ಷತ್ರಗಳ ಜಗತ್ತು. ಅವುಗಳಿಂದಲೇ ಇತರ ಎಲ್ಲವೂ ಉಂಟಾದುವು. ಈ ನಕ್ಷತ್ರಗಳು ಕೂಡಾ ಕ್ಷಣಿಕವಾದವುಗಳು ; ಅವೂ ಮರಣಹೊಂದುತ್ತವೆ ಮತ್ತು ಹೊಸದಾಗಿ ಹುಟ್ಟುತ್ತವೆ. ಎಂದು ನಕ್ಷತ್ರಗಳು ಮರಣ ಹೊಂದುತ್ತವೆ ಎಂದರೆ, ಅವುಗಳಲ್ಲಿನ ಚೈತನ್ಯ ರೂಪದ ಇಂಧನ (fuel–H_2) ದಹಿಸಿ ಹೋಗಿ ಚೈತನ್ಯರಹಿತ ಹೀಲಿಯಂ (Helium) ಉಳಿಯುತ್ತದೆ, ಅಲ್ಲಿಗೆ ನಕ್ಷತ್ರಗಳು ಸತ್ತವು ('dead') ಎಂದು ಅರ್ಥ.

ನಕ್ಷತ್ರ ಮಂಡಲದಲ್ಲಿ ಖಗೋಳಶಾಸ್ತ್ರಜ್ಞರ ಅಭಿಪ್ರಾಯದಂತೆ ಪ್ರತಿ ಕ್ಷಣವೂ ಅನೇಕ ಸಹಸ್ರ ನಕ್ಷತ್ರಗಳು ಸಾಯುತ್ತವೆ ಮತ್ತು ಹುಟ್ಟುತ್ತವೆ.

ಜೀವವಿಕಾಸತತ್ತ್ವ ಹಾಗೂ ಸಾಮಾಜಿಕ ನ್ಯಾಯ

ಜೀವವಿಕಾಸತತ್ತ್ವವನ್ನು ನಿಜವಾಗಿ ಅರಿತವರಿಗೆ, ಅದರಲ್ಲಿ ಅಡಗಿದ ನೀತಿಯೊಂದು ಅರ್ಥವಾಗುತ್ತದೆ. ಜೀವವಿಕಾಸತತ್ತ್ವದ ಪ್ರಕಾರ ಈ ಪ್ರಪಂಚದಲ್ಲಿನ ಎಲ್ಲ ಜೀವಿಗಳೂ ಒಂದರಿಂದ ಒಂದು ಬಂದವು. ಅಂದರೆ, ಮೂಲಭೂತವಾಗಿ ಒಂದಕ್ಕೊಂದು ಸಂಬಂಧ ಹೊಂದಿವೆ ಎಂದು. ಇದರ ನಿಜವಾದ ನೀತಿ ಜೀವಿಗಳಲ್ಲಿ ಮೇಲು ಕೀಳು ಎಂಬುದಿಲ್ಲ ಎಂದು. ಏಕೆಂದರೆ, ಪ್ರತಿ ಜೀವಿಯೂ ಒಂದರೊಡನೊಂದು ಅವಿಚಲವಾದ ಸಂಬಂಧವನ್ನು ಪಡೆದಿದೆ. ಜೀವಿಗಳಲ್ಲಿ ಯಾವಾಗಲೂ ಯಾವುದನ್ನಾಗಲೀ ಮೇಲು ಹಾಗೂ ಕೀಳು ಎಂದು ಭಾವಿಸಬಾರದು ಎಂಬುದು ಕೇವಲ ಸಾಮಾಜಿಕ ನ್ಯಾಯವೇ ಅಲ್ಲದೆ ಜೀವವಿಕಾಸತತ್ತ್ವದ ಮೂಲ ಸೂತ್ರಕೂಡ ಆಗಿದೆ. ಜೀವ ಜಗತ್ತಿನ ಇತಿಹಾಸವನ್ನು ವಿವರವಾಗಿ ಪರಿಶೀಲಿಸಿದರೆ, ಈ ಭೂಮಿ ಪೂರ್ವದಲ್ಲಿ ಅನೇಕ ಜೀವಿಗಳ ಹತೋಟಿಗೆ ಒಳಪಟ್ಟಿತ್ತು. ಒಂದೊಂದು ಕಾಲದಲ್ಲೂ ಒಂದೊಂದು ಗುಂಪು ಪ್ರಬಲವಾಗಿತ್ತು ಎಂದು ಗೊತ್ತಾಗುತ್ತದೆ. ವರ್ತಮಾನಕಾಲದಲ್ಲಿ ಮಾನವ ಜೀವಿ ಪ್ರಬಲವಾಗಿರುವಂತೆ ಮಧ್ಯಜೀವಿಯುಗ (Mesozoic era) ದಲ್ಲಿ ಭೂಮಿ ಸಂಪೂರ್ಣವಾಗಿ ಸರೀಸೃಪಗಳ ಹತೋಟಿಗೆ ಒಳಪಟ್ಟಿತ್ತು. ಆಗಿನ ಸಸ್ತನಿಗಳು ಎಲ್ಲೋ ಮೂಲೆಯಲ್ಲಿ ಅಡಗಿಕೊಂಡು ಜೀವಿಸುತ್ತಿದ್ದವು. ಮಧ್ಯಜೀವಿಯುಗದಲ್ಲಿ ಯಾವನಾದರೂ ಒಬ್ಬ ಪ್ರವಾದಿಯಿದ್ದಿದ್ದೇ ಆಗಿದ್ದರೆ, ಮುಂದೆ ಒಂದಾನೊಂದು ಕಾಲದಲ್ಲಿ ಈ ಚಿಕ್ಕ ಸಸ್ತನಿಗಳ ವಶಂಜರು ಈ ಭೂಮಿಯನ್ನಾಳುತ್ತಾರೆ ಎಂದು ಭವಿಷ್ಯ ನುಡಿಯಲು, ಅವನಿಗೂ ಎಂಟೆದೆ ಬೇಕಾಗುತ್ತಿತ್ತು. ಆದರೆ, ವರ್ತಮಾನ ಕಾಲದಲ್ಲಿ ನಮಗೆ ಗೊತ್ತಿರುವಂತೆ ಸಸ್ತನಿಗಳ ಗುಂಪೊಂದು (ಮಾನವ) ಭೂಮಿಯಮೇಲೆ ಹತೋಟಿಯನ್ನಿಟ್ಟುಕೊಂಡಿದೆ. ಆದರೆ, ಈ ಹತೋಟಿ ಯಾವಾಗಲೂ ಇರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಪರಿಸರ ಇದ್ದಕ್ಕಿದ್ದ ಹಾಗೇ ಬದಲಾವಣೆ ಹೊಂದಿದರೆ, ಇನ್ನಾವುದೇ ಜೀವಿಗಳ ವರ್ಗ ಜಾಸ್ತಿ ಬೆಳವಣಿಗೆ ಪಡೆದು, ಭೂಮಿಯಮೇಲೆ ಹತೋಟಿ ಪಡೆಯಬಹುದು. ಭಗವದ್ಗೀತೆಯನ್ನು ಬರೆದವರಿಗೆ ಈ ಸಾರ್ವಕಾಲಿಕ ಸತ್ಯದ ಅರಿವಿತ್ತೆಂದು ಕಾಣುತ್ತದೆ. ಅದಕ್ಕೆ ಗೀತೆಯಲ್ಲಿ ಪ್ರತಿಪಾದಿಸುವುದು ಕೇವಲ ಒಂದು ಪ್ರಭೇದ (species) (ಮಾನವ)ದೊಳಗಿನ ವಿವಿಧ ಜೀವಿಗಳ ನಡುವಣ ನ್ಯಾಯವನ್ನಲ್ಲ, ಬದಲು, ಪ್ರಕೃತಿಯ ಎಲ್ಲಾ ಪ್ರಭೇದಗಳ ನಡುವಣ ಸಾಮಾಜಿಕನ್ಯಾಯ (Social justice). ಗೀತೆಯ ಈ ಕೆಳಗಿನ ಶ್ಲೋಕದಲ್ಲಿ ಈ ತತ್ತ್ವಪ್ರತಿಪಾದಿತವಾಗಿದೆ.

ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇ ಗವಿಹಸ್ತಿನಿ
ಶುನಿ ಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ

ಅ. 5. ಶ್ಲೋ 18.

(ಜ್ಞಾನಿಗಳು ವಿದ್ಯಾದಿವಿನಯ ಸಂಪನ್ನನಾದ ಬ್ರಾಹ್ಮಣನಲ್ಲಿಯೂ, ಗೋವಿನಲ್ಲಿಯೂ, ಆನೆಯಲ್ಲಿಯೂ, ನಾಯಿಯಲ್ಲಿಯೂ ಮತ್ತು ಚಂಡಾಲನಲ್ಲಿಯೂ ಸಮಾನವಾದ ಗೌರವವುಳ್ಳವರಾಗಿದ್ದು, ತಮ್ಮ ಆತ್ಮರೂಪವಾದ ಬ್ರಹ್ಮನನ್ನೇ ನೋಡುತ್ತಾರೆ.)

ಇಲ್ಲಿ ಬ್ರಾಹ್ಮಣ ಮತ್ತು ಚಂಡಾಲ ಎಂಬುವು ಹುಟ್ಟಿನಿಂದ ಬಂದವುಗಳಲ್ಲ. ಬ್ರಾಹ್ಮಣತ್ವ ಎಂಬುದು ಯಾರು ಬೇಕಾದರೂ ಪಡೆದುಕೊಳ್ಳಬಹುದಾದಂತಹ ಸತ್ಕರ್ಮಗಳನ್ನು ಮಾಡಿದರೆ, ದೊರಕುವ ಯೋಗ್ಯತೆ, ಸಿದ್ಧಿ. ಅದೇ ರೀತಿ ಚಂಡಾಲ ಎಂದರೆ, ದುಷ್ಕರ್ಮಗಳನ್ನು ಮಾಡುವವನು ಎಂದರ್ಥ. ಇವೆಲ್ಲರಲ್ಲೂ ಸಮಾನವಾದ ಬ್ರಹ್ಮನನ್ನು ಪಂಡಿತರು ನೋಡುತ್ತಾರೆ, ಎಂದರೆ ಅವೆಲ್ಲವುಗಳನ್ನು ಅವರು ಗೌರವಿಸುತ್ತಾರೆ ಎಂದರ್ಥ.

ಇದೇ ಸಂದರ್ಭದಲ್ಲಿ, ಹಿಂದೂ ಧರ್ಮದಲ್ಲಿ ಕಾಣಬರುವ ಪ್ರಾಣಿರೂಪದ ದೇವರುಗಳ ಪ್ರಸ್ತಾಪವು ಉಚಿತವೆನಿಸುತ್ತದೆ. ಹಿಂದೂಗಳು ದೇವರ ಅಂಶವನ್ನು ಗೋವಿನಲ್ಲಿ (ಕಾಮಧೇನು), ಸಿಂಹದಲ್ಲಿ (ನರಸಿಂಹ), ನಾಯಿಯಲ್ಲಿ (ದತ್ತಾತ್ರೇಯ ದೇವನೊಂದಿಗಿರುವ ಶುನಕಗಳು), ವಾನರನಲ್ಲಿ (ಆಂಜನೇಯ), ಹಾವಿನಲ್ಲಿ (ಸುಬ್ರಹ್ಮಣ್ಯಸ್ವಾಮಿ) ಕಂಡರು. ಹೊರನೋಟಕ್ಕೆ ಗೋವನ್ನೂ, ವಾನರನನ್ನೂ ಪೂಜಿಸುವುದು ಹಾಸ್ಯಾಸ್ಪದವಾಗಿ ಕಂಡರೂ ಇದರಲ್ಲಿ ಒಂದು ವಿಶೇಷ ಅರ್ಥವಡಗಿದೆ. ಈ ಪ್ರಾಣಿಗಳನ್ನು ಪೂಜಿಸುವುದು ಎಂದರೆ, ಮಾನವ ತಾನೇ ಶ್ರೇಷ್ಠನಲ್ಲ, ಈ ಪ್ರಾಣಿಗಳಲ್ಲೂ ತನಗಿಂತ ಒಳ್ಳೆಯ ಗುಣ, ಶಕ್ತಿ ಅಡಗಿದೆ ಎಂಬುದನ್ನು ಅರಿತುಕೊಂಡಿದ್ದಾನೆ ಎಂದರ್ಥ. ಜೀವವಿಕಾಸತತ್ತ್ವ ಪ್ರತಿಪಾದಿಸುವುದೂ ಇದನ್ನೇ. ಈಗ ಮಾನವ ರೂಪವನ್ನು ಪೂಜಿಸುವುದು ಹಾಸ್ಯಾಸ್ಪದವೆನಿಸಿದರೆ, ಹತ್ತಾರು ಸಾವಿರ ವರ್ಷಗಳು ಕಳೆದ ಮೇಲೆ, ಮಾನವ ರೂಪದ ದೇವರನ್ನು ಪೂಜಿಸುವುದೂ ಹಾಸ್ಯಾಸ್ಪದವೆನಿಸಬಹುದು. ಏಕೆಂದರೆ, ಅಷ್ಟು ಹೊತ್ತಿಗೆ ಮಾನವ ರೂಪ ಸಂಪೂರ್ಣ ಬದಲಾವಣೆ ಹೊಂದಿ, ಈಗಿನ ರೂಪಕ್ಕೆ ಯಾವ ಹೋಲಿಕೆಯೂ ಇಲ್ಲದೆಯೇ ಇರಬಹುದು. ಆದ್ದರಿಂದ, ಆರಾಧನೆಯು ವಿವಿಧ ರೂಪದಲ್ಲಿರುವ ಜೀವಾತ್ಮನನ್ನು ಗೌರವಿಸುವುದೆಂದೇ ಅರ್ಥ.

ಗೀತೆಯಲ್ಲಿ ಪ್ರತಿಪಾದಿಸಿರುವ ಸತ್ಯಗಳು ಮತ್ತು ಭೌತಿಕ ಹಾಗೂ ಜೈವಿಕ ಸೂತ್ರಗಳು ಈ ಗ್ರಹದ ಮೇಲೆ ಮಾನವ ಉಳಿದಿರುವವರೆಗೂ ಚರ್ಚಿಸಿ ಅರ್ಥ

ಮಾಡಿಕೊಳ್ಳಬಲ್ಲಂತಹ ಅಂಶಗಳು. ಗೀತೆಯ ಪರಮೋದ್ದೇಶ ಸತ್ಯದ ವಿವಿಧ ರೂಪಗಳನ್ನು ಸರಳವಾಗಿ ಸಾಮಾನ್ಯ ಮಾನವರಿಗೆ ಅರ್ಥ ಮಾಡಿಕೊಡುವುದೇ ಆಗಿದೆ.

ಪ್ರಕೃತಿಯ ಹಾಗೂ ಜೀವ ಜಗತ್ತಿನ ಆಳವಾದ ಅಭ್ಯಾಸ ಮಾಡಿದವರಿಗೆ ಇವೆಲ್ಲವನ್ನೂ ನಿಯಂತ್ರಿಸುವ ಮೂಲಭೂತ ಚೈತನ್ಯವಿದೆ ಎಂಬರಿವುಂಟಾಗುತ್ತಿದೆ. ಈ ಅರಿವನ್ನು ಪ್ರಾಚೀನ ಭಾರತೀಯ ದಾರ್ಶನಿಕರು ಹಾಗೂ ಋಷಿಗಳು ಖಚಿತವಾದ ವೈಜ್ಞಾನಿಕ ಭಾಷೆಯಲ್ಲಿ ಹೇಳಿಲ್ಲ, ನಿಜ. ಆದರೆ, ಈ ವೈಜ್ಞಾನಿಕ ಸಂಗತಿಗಳನ್ನೇ ಕಾವ್ಯಮಯ ಹಾಗೂ ಧಾರ್ಮಿಕ ರೂಪದ ಶಬ್ದಗಳ ಮೂಲಕ ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಭಗವದ್ಗೀತೆಯನ್ನು ಸಂಪೂರ್ಣ ಅರ್ಥ ಮಾಡಿಕೊಂಡ ಯಾವನೇ ಜೀವ ಶಾಸ್ತ್ರಜ್ಞನಿಗೆ ಆಧುನಿಕ ಜೀವ ವಿಕಾಸ ತತ್ತ್ವಗಳಿಗೂ ಭಗವದ್ಗೀತೆಯ ತತ್ತ್ವಗಳಿಗೂ ಇರುವ ಸಾಮ್ಯ ಕಂಡುಬರುತ್ತದೆ. ಗೀತೆಯಲ್ಲಿ ವೈಜ್ಞಾನಿಕ ಸತ್ಯ ಇದೆ ಎಂದರೆ, ವಿಜ್ಞಾನದ ಎಲ್ಲ ಸಂಶೋಧನೆಗಳನ್ನೂ ಇದರಲ್ಲಿ ಕಾಣಬಹುದು ಎಂದಲ್ಲ. ಸತ್ಯ ಒಂದೇ ಆದರೂ ಅದಕ್ಕೆ ವಿವಿಧ ಮುಖಗಳಿವೆ, ಮತ್ತು ಅದನ್ನು ಕಾಣಲಿಕ್ಕೆ ಅನೇಕ ದಾರಿಗಳಿವೆ. ಪ್ರತಿಯುಗದಲ್ಲೂ ಸತ್ಯವನ್ನು ಹೊಸ ಹೊಸ ದೃಷ್ಟಿಕೋನಗಳಿಂದ ಪರಿಶೀಲಿಸುತ್ತಲಿರುವುದಾದರೂ, ಅದರ ಮೂಲಭೂತ ಸತ್ಯ ಎಂದಿಗೂ ಬದಲಾಗಿಲ್ಲ. ಈಗ ಹೇಳಿರುವುದನ್ನೇ ಮುಂದೆ ಬರುವ ಕಾಲದಲ್ಲಿ ಇನ್ನೂ ಖಚಿತವಾಗಿ ನಿರ್ದೇಶಿಸಿ ಹೇಳಬಹುದು. ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಆದ್ದರಿಂದಲೇ ಗೀತೆಯಲ್ಲಿ ಜೀವವಿಕಾಸ ತತ್ತ್ವದ ಸತ್ಯಸಂಗತಿಗಳನ್ನು ಆಗಿನ ಕಾಲದ ಜನರ ಮನಮುಟ್ಟುವಂತೆ ಧಾರ್ಮಿಕ ಭಾಷೆಯ ಮೂಲಕ ಗೀತೆಯಲ್ಲಿ ಹೇಳಿರುವುದು.

ಹದ್ದು ಮತ್ತು ಮಾಂಸ

ಎಚ್. ಎಸ್. ಭೀಮನಗೌಡರ

ನಮ್ಮ ಮೇಲ್ಮನೆಯ ಮಲ್ಲಮ್ಮ
ಸ್ನಾನಮುಗಿಸಿ ಇಷ್ಟಗಲ ಕುಂಕುಮವಿಟ್ಟು
ಗಂಡನಹಾದಿ ನೋಡಲು ಹೊರಪೆಜ್ಜೆಯಿಟ್ಟಾಗ
ಗೋಟಿ ರುಮಾಲ ಸುತ್ತಿ ಬಂಕದಲ್ಲಿ ಕುಳಿತ
ಗೌಡರು ಎಲೆಯಡಿಕೆ ಬಿಚ್ಚಿದ್ದು ;

ಅಲ್ಲಿ ಮೇಲೆ ನೀಲಿ ಮುಗಿಲಲ್ಲಿ
ಹಾಯಾಗಿ ಮೀಯುವ ಹದ್ದು ;

ಕಣ್ಣ ಬಾಣ ಕದ್ದು ಕದ್ದು
ತಿಪ್ಪೆಯಲ್ಲಿ ಕೆಂಪಗೆ ಕಾಣುವ
ಕತ್ತೆಯ ಮಾಂಸದ ಮೇಲೆ ಬಿದ್ದು ;

ಗೌಡರೆ, ನಿನ್ನೆ ಕಳ್ಳು ಕುಡಿದು
ನನ್ನ ಹೊಡೆದು ಬಡೆದು
ಹೊಲೆಯರ ಕಮಲೆಯ ಮನೆಗೆ ಹೋದವರು
ಈವರೆಗೂ ಬರದಿದ್ದರೆ ನಾನೇನು ಮಾಡಲಿ ?

ಎಂದಾಗ ಗೌಡರ ಬಾಯಿ ರಂಗುರಂಗಾಗಿತ್ತು.

ಮಡಿವಾಳಯ್ಯನ ವಚನಗಳು (ಅಪ್ರಕಟಿತ)

(ಹಿಂದಿನ ಸಂಚಿಕೆಯಿಂದ)

ಎಸ್. ಉಮಾಪತಿ

ಗಂಜಲದೊಳಗಣ ಪಂಡಿತಾರೂಢನು
ಗಂಗೆಯ ಮಿಂದಡೆ ಹಿಂಗಿತೆ ಅದರ
ಪೂರ್ವಾಶ್ರಯವು ?
ಜಂಗುಳ ದೈವ ಜಾತ ಸೂತಕವಳಿಯ
ಬೇಕೆಂದು, ಗುರುತೋಱಿದ ಅಷ್ಟ
ವಿಧಾರ್ಚನೆ ಕ್ರಮಂಗಳ ಆದಿಯಲ್ಲಿ
ಮನವು ಸುಸಂಗಿಯಾಗದೆ ಇರ್ದಡೆ
ಸೂಕರ ಗಂಗೆಯ ಮಿಂದಂತಾಯಿತು
ಎಂದ ಕಲಿದೇವರ ದೇವಯ್ಯ ॥ 25 ॥

ಶಿವಾಚಾರ ಘನವೆಂಬುದ ಕೇಳಿ
ಭವಿತನವ ಬಿಟ್ಟು ಭಕ್ತರಾಗಿ
ಮುಕ್ತಿಯ ಪಡೆಯಲೊಲ್ಲದೆ ;
ಎಂಜಲ ತಿನಿಸಿ ತಮ್ಮಂತೆ ನರಕ
ದೊಳಗಾಗಬೇಕೆಂದು, ಮುನ್ನಿನ
ಹಿರಿಯರ ಬಟ್ಟೆಯ ಬಳಿವಿಡಿದು
ಬಂದು ಅನ್ಯದೈವವ ಬಿಟ್ಟು,
ಶಿವ ಭಕ್ತಿಯ ಮಾಡ ಬೇಡವೆಂಬ
ಕುನ್ನಿಗಳ ಮಾತ ಕೇಳಲಾಗದೆಂದ
ಕಲಿದೇವರ ದೇವಾ ॥ 26 ॥

ಬಿದ್ದು ಸತ್ತು ಬಸುವ ತಿಂಬ ಹೊಲತಿಗೆ
ಹೊಲೆ ಗಂಡು ಶುದ್ಧನೀರ ಮಿಂದರೆ
ಅವಳ ಮೊದಲ ಹೊಲೆ ಹೋಯಿತ್ತೆ ?
ಮದ್ದುವ ಸೇವಿಸುವ ಹೊಲೆಯರು
ದೈವಕ್ಕೆಱಗಿ ಕುಲದಲ್ಲಿ ಶುದ್ಧರಾಹೆ
ವೆಂಬ ಪರಿ ಎಂತೋ ?
ಮಲಭಾಂಡದ ಕುಲವೆಲ್ಲಾ ಒಂದೆ !
ಗೆಲವಿಂಗೆ ಹೆಣಗುವ ಹದಿನೆಂಟು
ಜಾತಿಗಳು ಗುರುವಿನ ನೆಲೆಯ

ನಱಿಯದೆ ಕೆಟ್ಟ ಪ್ರಾಣಿಗಳ
ಏನೆಂಬೆನಯ್ಯ ಕಲಿದೇವರ ದೇವಾ ॥ 27 ॥

ಕೆಸಱೊಳಗೆ ಬಿದ್ದ ಪಶುವಿನಂತೆ
ಸನ್ನ ದೇಹವ *ನಾನು* ತೊಳೆಯಲಾಱೆ
ಗುರು ಕಾರುಣ್ಯವುಳ್ಳ ಭಕ್ತರು
ನುಡಿಗಡಣದಲ್ಲಿ ಎಡಹಿದರೆ
ಸದ್ಭಕ್ತಿ ಪ್ರಾಯಶ್ಚಿತ್ತವ ಕೊಟ್ಟು
ಶ್ರೀ ವಿಭೂತಿಯನಿಡಲೊಲ್ಲದೆ ;
ಸದಾಚಾರ ಗುರುಲಿಂಗ ಜಂಗಮವ
ನಱಿಯದೆ ದುರಾಚಾರಿಗಳ ನುಡಿಗೆ
ಪ್ರಾಯಶ್ಚಿತ್ತವಂ ಕೊಟ್ಟು ವಿಭೂತಿಯ ನಿಟ್ಟ
ತೆಱನೆಂತೆಂದಡೆ ;
ಅಶುದ್ಧ ಪಾಕುಳದೊಳಗೆ ಬೀಳುವ
ಪಾಪ ಪರಿಹರವೆಂದ ಕಲಿದೇವರ ದೇವಾ ॥ 28 ॥†

ಕಾಲ ಕರ್ಮಕಂಜಿ ಶಿವನ
ಶೀಲ ಭಕ್ತಿಯ ಹಿಡಿದು
ಗುರುಲಿಂಗ ಜಂಗಮದ ಪಾದ
ತೀರ್ಥ ಪ್ರಸಾದವ ಕೊಂಡು,
ಕರ್ಮ ದುರಿತವ ಗೆಲಿದು,
ಶೀಲ ಶಿವಭಕ್ತಿ ಇಲ್ಲದ ದ್ರೋಹಿಗಳು
ಹಾಲು ಹಯನ ಮೀಸಲವೆಂದು
ಕೂಡಿಸಿ ಕೊಂಬರು,
ಅವರು ಶೂಲಕ್ಕೆ ಬಿದ್ದು ಹೊಲೆಜನ್ಮಕೆ
ಮಾದಿಗರಾಗಿ ಉಪವಾಸಾವಿದ್ದು
ಹಸಿದುಂಬ ಕ್ರೂರಕರ್ಮಿಗಳ
ಮುಖವ ನೋಡಲಾಗದೆಂದ
ಕಲಿದೇವರ ದೇವ ॥ 29 ॥

ಹುಟ್ಟಿಸುವ ಹೊಂದಿಸುವ ಶಿವನ
[ನಿಷ್ಠೆಯಿಲ್ಲದ] ಸಾಹಿತ್ಯವ ಕೊಂಡು
ಕ್ರೀಯವಿಲ್ಲದಿದ್ದರೆ ಭಕ್ತರೆಂತೆಂಬೆನಯ್ಯ !
ಅಟ್ಟಕೂಳೆಲ್ಲವಂ ಅನ್ಯದೈವದ

*ಮೂಲ : ನಾನಾರು

†ಇದೇ ಸಂಪಾದಕನಿಂದ 1973 ರಲ್ಲಿ ಪ್ರಕಟಿತವಾಗಿರುವ ಮಡಿವಾಳಯ್ಯನ ವಚನಗಳು ಎಂಬ ಗ್ರಂಥದ 34ನೆಯ ವಚನವನ್ನು ಸ್ವಲ್ಪಮಟ್ಟಿಗೆ ಈ ವಚನವು ಹೋಲುತ್ತದೆ.

ಹೆಸರ ಹೇಳಿ ಭುಂಜಿಸುವ
ಚೆಟ್ಟಿ ಮಾಳ ಅಕ್ಕ ತತದಿಗಿ (?)
ಎಂದು ತಮ್ಮ ಗೋತ್ರಕ್ಕೆ ಬೊಟ್ಟನಿಡುವರು
ಮುಖ್ಯರಾಗಬೇಕೆಂದು ಅಟ್ಟ ಅಡಿಗೆ
ಮೀಸಲುವೆಂದು ಅಶುದ್ಧವ ತಿಂಬ
ಕಾಗೆಗೆ ಕೂಳಚೆಲ್ಲಿ ತಮ್ಮ
ಪಿತರುಂಡರೆಂದು, ಮಿಕ್ಕ
ಕೂಳ ತಮ್ಮ ಲಿಂಗಕ್ಕೆ ತೋರಿ
ಭುಂಜಿಸುವ ಭಕ್ತರೆನಿಸಿಕೊಂಬ
ಭ್ರಷ್ಟ ಜಾತಿಗಳು ಕೆಟ್ಟ ಕೇಡಿಂಗೆ
ಕಡೆಯಿಲ್ಲವೆಂದ ನಮ್ಮ
ಕಲಿದೇವರ ದೇವ ‖ 30 ‖

ತನುಮನ ಧನವೆಲ್ಲ ಶಿವನ ಒಡವೆ
ಎಂದು ಆರಾಧಿಸುವ ಅನ್ಯ ದೈವವಿದ್ದವರ
ಮನೆಯಲ್ಲಿ ಅನ್ನವ ಕೊಳ್ಳದಾತನೆ ಶಿವಪ್ರತಿ
ಮಿಕ್ಕನ ಭೂತ ಪ್ರಾಣಿಗಳೆಲ್ಲ
ಭಕ್ತರೆನಿಸಿಕೊಂಬುದು ಮಾತಿನ
ಮಾಲೆಗೆ ತನುವ ಕೊಡುವರು
ಮನವ ಕೊಡುವರು ಧನವ ಕೊಡುವರು
ಶಿವನ ಘನವ ನೆನವ ಪ್ರಕಾಶ
ವನರಿಯರು
ಅನ್ಯಜಾತಿಯ ಹೆಸರಿನ ಭೂತಿನ
ಓಗರವ ಭುಂಜಿಸುವರು
ಮರಳಿ ಶಿವಭಕ್ತರೆನಿಸಿಕೊಂಬ
ಅನಾಚಾರಿಯರ ನುಡಿಯ ಕೇಳ
ಲಾಗದೆಂದ ಕಲಿದೇವರ ದೇವಯ್ಯ ‖ 31 ‖

ಎತ್ತು ಬಿತ್ತಿತ್ತು ಒಕ್ಕಲಿಗನಿಂದ
ಉತ್ತಮರಿಲ್ಲೆಂದು ನುಡಿವರು
ಹೊತ್ತರೆದ್ದು ಶಿವಲಿಂಗಾರ್ಚನೆಯ
ಮಾಡಲರಿಯರು
ಎತ್ತಾಗಿ ಬಿತ್ತಿದ ನಮ್ಮ ಬಸವಣ್ಣನು
ಹೊತ್ತು ಹೊರದನು ಜಗವನು
ಮತ್ತೆ ಮರಳಿ ಅನ್ಯದೈವವ
ನೆನೆಯಲೇಕೋ ! ಎತ್ತು ಬಿತ್ತಿತ್ತು
ಹಾಲು ಹಯನವು ಬಸವನಿಂದ ಆಯಿತ್ತು

ಇಂತೀ ಬೆಳದ ಬಸವನ ಪ್ರಸಾದವನೊಲಿದು
ಮೃತ್ಯು ಮಾರಿಯ ಎಂಜಲ ಮಾಡಿಕೊಂಡು
ಭುಂಜಿಸುವ ತೊತ್ತು ಜಾತಿಗಳ ನುಡಿಯ
ಕೇಳಲಾಗದೆಂದ ಕಲಿದೇವರ ದೇವಾ ॥ 32 ॥

ಕೀಳು ಮೇಲಾವುದೆಂದೆಱಿಯದೆ
ಹದಿನೆಂಟು ಜಾತವೆಲ್ಲ ತರ್ಕಕಿಕ್ಕಿ
ಕೂಳ ಸೊಕ್ಕಿನಲ್ಲಿ ಕಣ್ಣಿಗೆ ಕಾಳ
ಗತ್ತಲೆ ಕವಿದು ; ಸತ್ಯ ಸದಾಚಾರದ
ಹಕ್ಕೆಯನಱಿಯದೆ ; ಸೂಳೆ ಸುರೆ ಅನ್ಯ
ದೈವದ ಎಂಜಲ ಭುಂಜಿಸುವ
ಕೀಳು ಜಾತಿಗಳ ಶಿವ ನಿಮ್ಮ ನೆನೆವ
ಭಕ್ತರುಗಳ ಅನುವನಱಿಯದೆ
ಏಳೇಳು ಜನ್ಮ ನರಕಕ್ಕೊಳಗಾದರು
ನೋಡಾ ! ಕಲಿದೇವರ ದೇವಾ ॥ 33 ॥

ಕೊಂಬನೂದುವ ಹೊಲೆಯಗೆ ಕಂಕುಮ
ಮೊದಲಲ್ಲದೆ ವಿಭೂತಿ ಸಲ್ಲುವುದೇನಯ್ಯ !
ಗುರು ಉಪದೇಶವಂ ಹೇಳಿ ವಿಭೂತಿಯ
ಪಟ್ಟವಂ ಕಟ್ಟಿ ಲಿಂಗಲಾಂಛನವಂ ಮಾಡಿದ
ಬಳಿಕ. ಗುರುನಿಂದಕನಾಗಿ ಹಣೆಯಲ್ಲಿ
[ವಿಭೂತಿಯ] ನಿಟ್ಟರೆ
ಆ ಕೊಂಬಿನ ಹೊಲೆಯನಿಂದ ಕನಿಕಷ್ಟ
ಕಾಣಾ ಎಂದ ಕಲಿದೇವರ ದೇವಯ್ಯ ! ॥ 34 ॥

ಬಿತ್ತು ಬೆಳಸು ಸರ್ವಜೀವಕಿವನೊಬ್ಬನೆ
ಮತ್ತೆ ಮರಳಿ ಅನ್ಯ ದೈವಕ್ಕೆಱಗಲೇಕೊ ?
ಪೃಥ್ವಿ ರಾಜ್ಯವನಾಳುವವರು ಕಾದಿ ಹೋದವರ
ಗೊತ್ರವಧೆಯಂ ಮಾಡಿ ಸತ್ತು ಹೋದ
ಪಾಂಡವರು ಜಗಕ್ಕೆ ಬಿತ್ತು ಬೆಳೆಯ
ಕೊಟ್ಟರೆಂಬ ನೀತಿಹೀನರ ನುಡಿಯ ಕೇಳ
ಲಾಗದು ಎಂದ ಕಲಿದೇವರ ದೇವಾ ॥ 35 ॥

ಪರಧನ ಪರಸತಿಗಳುಪಿದರೆ
ಮುಂದೆ ನರಕವೆಂದು ಗುರುವಾಕ್ಯ
ಸಾಱುತಿದೆ
ಪರಧನ ಪರಸತಿಗಳುಪಿ ಹತವಾಗಿ
ಹೋದ ದುರ್ಯೋಧನ

ಪಾಂಡವರ ಕಥೆಯ ಕೇಳಿ ಹರಿವ
ನದಿಯ ಮಿಂದು ಗೋದಾನವ ಮಾಡುವ
ನರಕಿಗಳ ನುಡಿಯ ಕೇಳಲಾಗದೆಂದ
ಕಲಿದೇವರ ದೇವಾ ॥ 36 ॥

ಲೋಕಾಧಿ ಲೋಕ ಹದಿನಾಲ್ಕು ಲೋಕಕ್ಕೆ
ಕರ್ತೃ ಒಬ್ಬನೆ ಶಿವನೆಂದು
ಶ್ರುತಿ ಶಾಸ್ತ್ರಗಳು ಸಾಱುತ್ತಿವೆ
ಗುರು ದೀಕ್ಷೆಯ ಕೊಟ್ಟ ಮಾರ್ಗವ
ಮೀರಿದವಂಗೆ ಸೂಕರ ಜನ್ಮ
ತಪ್ಪದೆಂದು ಶ್ರುತಿಸಾಕ್ಷಿಯ
ಹೊಗಳುತ್ತಿವೆ
ಹರನ ಹರಿಗೆ ಸರಿ ಎಂದು ಅರಾಧಿಸುವ
ದುರಾಚಾರಿಗಳ ನುಡಿಯ ಕೇಳಲಾಗ
ದೆಂದ ಕಲಿದೇವರ ದೇದಯ್ಯ ॥ 37 ॥

ಆದಿಲಿಂಗಯೋನಿ ಶಂಭುವಿನ ಬೋಧೆಯ
ಕೇಳಿಕೊಂಡು ಯಮ ಬಾಧೆಗೆ ಒಳಗಾದವರ
ವೇದವೇದಂರಾರಧಿಸಿತೊ (?)
ವೇದಬಾಹ್ಯರ ನುಡಿಯ ಕೇಳಲಾಗದೆಂದನು
ಕಲಿದೇವರ ದೇವಯ್ಯ ॥ 38 ॥

ಸಾಧನೆಯ ಕಲಿತು ಆಣೆಯ
ತಪ್ಪಿಸಲಱಿಯದವನ ಕಯ್ಯ
ಅಲಗಿದ್ದರೇನಯ್ಯ !
ಮಾಡುವುದಕ್ಕೆ ಕರ್ಮ ದುರಿತದ
ವರ್ಮವನಱಿಯದವನು
ಸಕಲ ಶಾಸ್ತ್ರವನೋದಿದರೇನಯ್ಯ !
ಗಿಣಿಯೋದಿ ತನ್ನ ಅಶುದ್ಧವ ತನ್ನ
ಮೂಗಿನಲ್ಲಿ ಕಚ್ಚಿತೆಗದಂತೆ, ಆಯಿತ್ತೆಂದ
ಕಲಿದೇವರ ದೇವಯ್ಯ ॥ 39 ॥

ಹಲವು ಕಾಲದ ಋಷಿಯರೆಲ್ಲರು
ಶಿವ ಭಕ್ತಿಯ ನೆಲೆಯನಱಿತು
ಬ್ರಾಹ್ಮಣರೆನಿಸಿಕೊಂಡರು
ಇವರ ನೆಲೆಯನಱಿಯದ ನಿಂದಕರು
ಗೆಲವಿಂಗೆ ಹೆಣಗುವ ಪರಿಯ ನೋಡಾ
ಹಲವು ದೈವಂಗಳಿಗೆಱಗಿ ಕುಲದಲ್ಲಿ

ಶಿಷ್ಯರೆನಿಸಿಕೊಂಬರು
ಮೊದಲೆ ಹುಟ್ಟಿದ ರುದ್ರನ ಹೆಸರ ಹೇಳಿ
ಬ್ರಾಹ್ಮಣನಲ್ಲದೆ ಭುಜದಲ್ಲಿ ತೊಡೆಯಲ್ಲಿ
ಅಂಗದಲ್ಲಿ ಹುಟ್ಟಿದ ಶೂದ್ರ ವೈಶ್ಯ
ಕ್ಷತ್ರಿಯಂಗೆ ಹೊಡೆ*ವಡುವ ಗುರುದ್ರೋಹಿಗಳು
ತಮ್ಮ ಹೆಸರು ವೇದಬ್ರಾಹ್ಮಣರೆನಿಸಿ ಕೊಂಡು
....
....
....
ಎಂತೆಂದುದಾಗಿ ;
ಗೋವನರ್ಚಿಸಿ ಪೂಜಿಸಿ ಅನಂತ ಪರಿಯಲ್ಲಿ
ಶರಣೆಂಬರು
ಮರಳಿ ಗೋಹಿಂಸೆಯ ಮಾಡುವರು.
ಗೋನಾಯಿಗಳು ನುಡಿದಂತೆ ನಡೆಯರು
ನುಡಿ ಹೊಲೆ ಹಿಂಗದು. ಇಂತಿವರ ವೇದ
ಬ್ರಾಹ್ಮಣರೆಂದವರಿಗೆ ನಾಯಕ ನರಕ
ತಪ್ಪದೆಂದ ಕಲಿದೇವರ ದೇವಾ ॥ 40 ॥

ದೇವರು ಮುಂತಾಗಿ ನಡೆ
ದೇವರು ಮುಂತಾಗಿ ನುಡಿ
ದೇವರು ಮುಂತಾಗಿ ಅನುಭಾವಿಸಲು
ಬಲ್ಲನೆ ದೇವ ಬ್ರಾಹ್ಮಣ ರೆನಿಸಿ
ಕೊಂಡರೆ ದೇವರುಮೆಚ್ಚುವನು
ದೇವದಾನವ ಮಾನವ ದೇವನ
ಸುದ್ದಿಯನಱಿಯದೆ ವಾದಿತನಕ್ಕೆ
ಹೋರಿ ಹೋರಿ ನಾಯಃಸಾವಸತ್ತರು
ಗುರುಲಿಂಗ ಮುಂತಾಗಿ ನಡೆ
ಗುರುಲಿಂಗ ಮುಂತಾಗಿ ನುಡಿ
ಗುರುಲಿಂಗ ಮುಂತಾಗಿ ಅನುಭಾವಿಸ
ಬಲ್ಲರೆ ಗುರುದೇವನೆನಿಸಿ ಕೊಳಬೇಕು.
ಗುರುಲಿಂಗವ ಹಿಂದು ಮಾಡಿ
ತಾ ಮುಂದಾಗಿ ಗುರುದೇವನೆನಿಸಿ ಕೊಂಡರೆ
ಗುರುತಾ ಮೆಚ್ಚುವನೆ ?
ಗುರುಲಿಂಗ ಜಂಗಮದ ಪರಿಯನಱಿಯದೆ
ಸುರೆಯ ದೈವದ ಎಂಜಲ ಭುಂಜಿಸುವವರು

---

*ರ (ಮೂಲ)

ತಾವು ಗುರುತನಕ್ಕೆ ಹೋರಿ ಹೋರಿ
ನರಕದಲ್ಲಿ ಬಿದ್ದರು
ಭಕ್ತಿ ಮುಂತಾದ ನಡೆ
ಭಕ್ತಿ ಮುಂತಾದ ನುಡಿ
ಭಕ್ತಿ ಮುಂತಾದ ನುಡಿಯ ಅನುಭಾವಿಸ
ಬಲ್ಲಡೆ ಬಣಜಿಗನು ತಾ ಭಕ್ತನೆ ?
ಭಕ್ತಿಯಿಲ್ಲದ ವ್ಯರ್ಥ ಜೀವಿಗಳು,
ಭಕ್ತನ ಸರಿ ಎನಿಸಿಕೊಂಡರೆ
ಶಿವನು ಮೆಚ್ಚುವನೆ ?
ಸತ್ಯ ಸದಾಚಾರದ ಹದನನಱಿಯದೆ
ಮೃತ್ಯು ಮಾರಿಯ ಎಂಜಲ ತಿಂದು
ಮರ್ತ್ಯದಲ್ಲಿ ಹೋರಿ ಹೋರಿ ವ್ಯರ್ಥವಾಗಿ
ಕೆಟ್ಟರು
ಶಿವಭಕ್ತನು ಗುರುದೇವ ನಮ್ಮ
ಬ್ರಾಹ್ಮಣನು ಬಸವರಾಜ ದೇವರ
ಸಂತತಿಗಲ್ಲದೆ ಮತ್ತಾರಿಗುಂಟು
ಕಲಿ ದೇವರ ದೇವಾ ॥ 41 ॥

ವೇದವನೋದಿದರೆ ಸಿಕ್ಕನು
ಶಾಸ್ತ್ರವನೋದಿದರೆ ಶಿವಗತಿ ಸಿಕ್ಕದು
ಮಾಘವ ಮಿಂದರೆ ಶಿವಗತಿ ಸಿಕ್ಕದು
ಮೌನವ ಹಿಡಿದರೆ ಶಿವಗತಿ ಸಿಕ್ಕದು
ಹಲ್ಲ ಕಿರಿದರೆ ಶಿವಗತಿ ಸಿಕ್ಕದು
ಬಲ್ಲೆನೆಂದರೆ ಶಿವಗತಿ ಸಿಕ್ಕದು
ಬಾಯ ಹೊಲಿದುಕೊಂಡರೆ ಶಿವಗತಿ ಸಿಕ್ಕದು
ಉಟ್ಟುದನೊಕ್ಕೊಂಡರೆ ಶಿವಗತಿ ಸಿಕ್ಕದು
ಮಣ್ಣಮಟ್ಟೆಯನಿಟ್ಟರೆ ಶಿವಗತಿ ಸಿಕ್ಕದು
ನಿಚ್ಚ ಮಡಿಯನುಟ್ಟರೆ ಶಿವಗತಿ ಸಿಕ್ಕದು
ನೆಟ್ಟನೆ ಅಱೆಯ ಕಲ್ಲ ಮೇಲೆ ಬೀಳಲು
ಶಿವಗತಿ ಸಿಕ್ಕದು
ಕಣ್ಣ ಮುಚ್ಚಲು ಶಿವಗತಿ ಸಿಕ್ಕದು
ನಿತ್ಯ ಕಯ್ಯ ಮುಗಿಯುಲು ಶಿವಗತಿ ಸಿಕ್ಕದು
ಅಕ್ಷತಿಯ ಬೊಟ್ಟನಿಟ್ಟರೆ ಶಿವಗತಿ ಸಿಕ್ಕದು
ಬಾಯ ತೆಱದರೆ ಶಿವಗತಿ ಸಿಕ್ಕದು
ಮುಟ್ಟ ಬೇಡ ಎಂದರೆ ಶಿವಗತಿ ಸಿಕ್ಕದು
ಉಪವಾಸ ಮಾಡಿದರೆ ಶಿವಗತಿ ಸಿಕ್ಕದು
ಅಷ್ಟಮದವಳಿದು ಶ್ರೀಗುರು ಲಿಂಗವ

ಪೂಜೆಮಾಡಬಲ್ಲರೆ ಕೈಲಾಸದ ಬಟ್ಟೆ
ಬೇರೆ ಇಲ್ಲಾ ! ಎಂದ ಕಲಿದೇವರ ದೇವಯ್ಯ ॥ 42 ॥

ಎಂಜಲ ತಿಂಬ ಜಡದೊಳಗೆ ಹದಿನೆಂಟು
ಜಾತಿಯು ಎಂಜಲ ಭುಂಜಿಸಿ ಉತ್ತಮ
ರೆನಿಸಿಕೊಂಬ ಭವ ಜೀವಿಗಳು ಕೇಳಿರೋ !
ಕುಂಜರನಾಗಿ ನಡೆದು ಸುಜಾತರೆನಿಸಿಕೊಂಬಿರಿ
ಅಜವಧೆ ಗೋವಧೆಮಾಡುವ
ಅನಾಚಾರಿಗಳು ನೀವು ಕೇಳಿರೋ !
ಬ್ರಾಹ್ಮಣ ವಾಕ್ಯವ ಕಲಿತು
ಬ್ರಾಹ್ಮಣರೆನಿಸಿ ಕೊಂಬಿರಿ
ವರ್ಮವಿಡಿದು ನೋಡಹೋದರೆ
ನಿಮ್ಮಿಂದ ಕರ್ಮಗಳಿಲ್ಲ
ನಿಮ್ಮ ಧರ್ಮದ ಬಟ್ಟೆಯ ನೀವಱಿಯದೆ ಹೋದಿರಿ
ಚಿತ್ತವಿಲ್ಲದೆ ಶಿವಭಕ್ತರ ಬುದ್ಧಿಯ ವಿಡಿದು
ನಡೆಯಲೊಲ್ಲದೆ ಕೆಟ್ಟು ಹೋದಿರಿ !
ಸುಧೆ ಹೀನ ಶುದ್ಧವೆಂದು ಕೊಂಬಿರಿ !
ಸುರೆಯ ಸೇವಿಸುವ ಬೋವರೆಂಜಲು
ಎಣ್ಣೆ ಶುದ್ಧವೆಂದು ಕೊಂಬಿರಿ
ಬುದ್ದಲೆಯ ಎಂಜಲು
ಹಾಲು ಮೊಸರು ಮಜ್ಜಿಗೆ ಶುದ್ಧವೆಂಬಿರಿ
ಶೂದ್ರರೆಂಜಲು
ಹಾಲು ಮೊಸರು ತುಪ್ಪ ಆವ
ಜಾತಿಯ ಮನೆಯಲ್ಲಿ ಇದ್ದರೆ
ಶುದ್ಧವೆಂದು ಕೊಂಬಿರಿ
ಹೊಲೆಯ ಭಕ್ಷಿಸಿ ಮಿಕ್ಕ ತೊಗಲಲ್ಲಿ
ಬುದ್ದಲೆಯೊಳಗೆ ತುಪ್ಪವತುಂಬಿಹುದೊ
ಆ ಹೊಲೆಯರ ಎಂಜಲ ತೊಗಲ ಸಿಗ್ಗಳೆಯಲ್ಲಿ
ಉದಕವ ಕೊಂಬಿರಿ ; ಹದಿನೆಂಟು ಜಾತಿಗೆ ಅಧಿಕ
ವೆನಿಸಿ ಕೊಂಬಿರಿ ದ್ವಿಜರೆಲ್ಲರಿಗೆ ಲೆಕ್ಕವಿಲ್ಲದ ನರಕವೆಂದ ಕಲಿದೇವರ ದೇವಯ್ಯ !
॥ 43 ॥

ವೇದದಿಂದ ವೆಗ್ಗಳವಿಲ್ಲವೆಂಬಿರಿ
ವೇದ ಶಿವನ ಕಂಡುದಿಲ್ಲ
ಶಾಸ್ತ್ರವೆಗ್ಗಳ ಎಂಬಿರಿ
ಶಾಸ್ತ್ರವು ಶಿವನ ಕಂಡುದಿಲ್ಲ
ವೇದವೆಂಬುದು ವಿಪ್ರರಬೋಧೆ
ಶಾಸ್ತ್ರವೆಂಬುದು ಸಂತೆಯ ಗೋಷ್ಠಿ

ಅನುಭಾವದಿಂದ ತನ್ನೊಳಗಣ
ತನುವ ತಾನಱಿತಂತ ಭಕ್ತರಿಂದ
ವೆಗ್ಗಳವಿಲ್ಲ ಎಂದ ಕಲಿದೇವರ ದೇವಯ್ಯ ॥ 44 ॥

ಅಷ್ಟಮದ ಸಪ್ತವ್ಯಸನ ಷಡುವರ್ಗಂಗಳ
ಒತ್ತಿನಿಲಿಸಿ ಎಲ್ಲಕ್ಕೆ ಶಿವನೊಬ್ಬನೆ
ಶಿವಜ್ಞಾನವೆಂದಱಿಯದ ವಿಪ್ರರು
ಆನೆ ಅಶ್ವ ಹೋತು ಕೋಣ *ಬಿಂಜಣದಿಂದ
ಕಡಿದು ಬೆಂಕಿಯು ಮೇಲೆ ಹಾಕಿ ತಾನು
ಪರಬ್ರಹ್ಮನಾದೆನೆಂದು ನರಕಕ್ಕೆ
ಹೋದರೊಂದು ಕೋಟಾನು ಕೋಟಿ ಬ್ರಹ್ಮರು
ವೇದದ ಅರ್ಥವನಱಿಯದೆ
ಜೀವನ ಬಾಧೆಯಂ ಮಾಡುವ
ವಧಾಷ್ಟ ಕರ್ಮಕ್ಕೆ ಒಳಗಾದರು
ದ್ವಿಜರೆಂದು ಆದಿಯ ಪ್ರಮಥರು
ಕಂಡಂತುದೆಂತೆಂದರೆ :
ಆನೆ ಎಂಬುದು ಮದ. ಮತ್ಸರವೆಂಬುದು
ಅಶ್ವ. ಕೋಣನೆಂಬುದು ಕ್ರೋಧ.
ಅಂಗವಿಕಾರವೆಂಬುದು ಹೋತು.
ಇಂತು ನಾಲ್ಕು ವರ್ಗಂಗಳು ಶಿವಜ್ಞಾನವೆಂಬುದು
ಅಗ್ನಿಯಲ್ಲಿ ದಹನ ಮಾಡುವರು ನಮ್ಮವರು
ಇಂತೀ ವಿವರವಿಲ್ಲಾದೆ ತಾವು
ಪರಬ್ರಹ್ಮರೆನಿಸಿಕೊಂಬರು
ಜೀವಹಿಂಸೆಯ ಮಾಡುವ ವಿಪ್ರರ ಮುಖವ
ನೋಡಲಾಗದು ಎಂದ ಕಲಿದೇವರ ದೇವಾ ॥ 45 ॥

ಚಂದ್ರ ತಾರಾ ಮಂಡಲಕ್ಕೆ ಒಂದೆರಡು
ಯೋಜನ ಪ್ರಮಾಣು ಹರಿವ ಕಂಗಳು
ಒಂದು ಸಾಸವೆ ರಜ ತನ್ನ ತಾಗದು
ಛಂದಸ್ಸು ನಿಘಂಟು ವ್ಯಾಕರಣ
ಅದ್ವೈತ ವೇದ ಶಾಸ್ತ್ರ ಪುರಾಣವ
ನೋದಿಕೊಂಡು ಮುಂದಣವರಿಗೆ
ಹೇಳುವರಲ್ಲದೆ ತನ್ನೊಳಗಣ
ಶುದ್ಧಿಯ ತಾನಱಿಯದೆ
ಅನ್ಯರಿಗೆ ಉಪದೇಶವ ಹೇಳುವ
ಬಿನಗು ಜಾತಿಗಳ ನುಡಿಯ ಕೇಳ
ಲಾಗದೆಂದ ಕಲಿದೇವರ ದೇವಯ್ಯ ! ॥ 46 ॥

---

* ಬಿನ್ನಾಣದಿಂದ (?)

ಕಡಲೊಳಗಣ ಮೊಸಳೆಯು ನಡುವಹಿಡಿದು
ಕಡೆಗೆ ಸಾರಿಹೋಹೆನೆಂಬವರುಂಟೆ ?
ಜಗದೊಳಗೆ ಮಡದಿ ಮಕ್ಕಳು
ಮಾತಾಪಿತರು ಬಾಂಧವರು ಮಾಯಾ
ಮೋಹಕ್ಕೆ ದಂದುಗವಿಡಿದು ನಡವ
ತುಡುಗುಣಿಯು ಮನದಿಚ್ಛೆಗೆ ಹರಿದು
ಕಡೆಯಗಾಣದೆ ಕರ್ಮದ ಕಡಲೊಳಗೆ
ಮುಳುಗಿ ಹೋದರೆಂದ ಕಲಿದೇವರ ದೇವಾ ॥ 47 ॥

ವಚನದ ರಚನೆಯು ನುಡಿವ
ಬಯಲ ರಂಜಕರೆಲ್ಲ ಭಕ್ತರಪ್ಪರೆ ಅಯ್ಯ !
ವಚನ ತನ್ನಂತಿರದು
ತಾನು ವಚನದಂತಿರನು
ಅದೆಂತೆಂದಡೆ ;
ತನು ಮನ ಧನವೆಲ್ಲವ ಹಿಂದಿಟ್ಟು ಕೊಂಡು
ಮಾತಿನ ಬಣಬೆಯ ಮುಂದಿಟ್ಟುಕೊಂಡು
ಒಡೆಯನ ಕಂಡು ನಾಯಿ ಬಾಲವ
ಬಡಿದು ಕೊಂಬಂತೆ, ಆ ತೆಱನಾಯಿತೆಂದ
ಕಲಿದೇವರ ದೇವಯ್ಯ ! ॥ 48 ॥

ರೂಪನರ್ಪಿತವ ಮಾಡುವರು ತಮತಮಗೆ
ರುಚಿಯನರ್ಪಿತವ ಮಾಡುವ
ಭೇದವನಱಿಯರು ನೋಡಾ !
ಅವರನೆಂತು ಭಕ್ತರೆಂಬೆ ನೋಡಾ !
ಅವರನೆಂತು ಪ್ರಸಾದಿಗಳೆಂಬೆ !
ರೂಪನೆ ಲಿಂಗಕ್ಕೆ ಕೊಟ್ಟು ರುಚಿಯ ತಾ
ಭುಂಜಿಸುವ ವ್ರತಗೇಡಿಗಳಿಗೆ
ಪ್ರಸಾದ ಉಂಟೆ ಕಲಿದೇವಯ್ಯ ! ॥ 49 ॥*

---

*ಡಾ॥ ಎಲ್. ಬಸವರಾಜು, ಇವರಿಂದ ಪಡೆದ ವಚನಸಾರ ಎಂಬ ತಾಳೆಯೋಲೆ ಗ್ರಂಥದಿಂದ ಈ ವಚನವನ್ನು ಪ್ರತಿ ಮಾಡಲಾಗಿದೆ.
ವಚನಸಾರ – ಗರಿ ನಂ. 54 ವಚನ ಸಂಖ್ಯೆ 829.

1 ರಿಂದ 48 ವಚನಗಳನ್ನು ದಾವಣಗೆರೆ ನಿವಾಸಿಗಳಾದ ಮೈಲಾರದ ಮಹಂತಪ್ಪ, ಹಳೇ ಪೇಟೆ ಇವರಿಂದ ದೊರೆತ ತಾಳೆಯೋಲೆ ಗ್ರಂಥದಿಂದ ಪ್ರತಿಮಾಡಲಾಗಿವೆ. ಶರಣ ಸಾಹಿತ್ಯವನ್ನು ರಕ್ಷಿಸಿಕೊಂಡು ಬಂದ ಶರಣ ಸಂತತಿಯ ವಂಶಜರು ಶ್ರೀಮಾನ್ ಮೈಲಾರದ ಮಹಂತಪ್ಪನವರು, ನನಗೆ ತಿಳಿದಿರುವ ಮಟ್ಟಿಗೆ ಮಡಿವಾಳಯ್ಯನ ವಚನಗಳನ್ನು ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಒಂದೆಡೆ ಹೊಂದಿರುವ ಏಕೈಕ ಪ್ರತಿಯೊಂದನ್ನು ಉದಾರಮನಸ್ಸಿನಿಂದ ಉಪಯೋಗಿಸಲು ಕೊಟ್ಟುದಕ್ಕೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಪ್ರಸಾಮಾನ್ಯ ಸಂಭವತೆ ವಿತರಣೆ

ಟಿ. ಶ್ರೀವೆಂಕಟರಮಣ

1 ಪ್ರವೇಶ

ಮಾನವ ಚಟುವಟಿಕೆಯ ಯಾವುದೇ ಕ್ಷೇತ್ರದಲ್ಲಿ ಸಿಗುವ ಅಂಕಿ ಅಂಶಗಳು ಮೇಲ್ನೋಟಕ್ಕೆ ಅಸ್ತವ್ಯಸ್ತವಾಗಿ ತೋರಿದರೂ ಅವುಗಳ ಏರಿಳಿತದಲ್ಲಿ ಒಂದು ಲಯ ಒಂದು ಕ್ರಮವಿರುತ್ತವೆ. ಆದ್ದರಿಂದ ಈ ಅಂಕಿಅಂಶಗಳನ್ನು ಒಂದಲ್ಲ ಒಂದು ಸೈದ್ಧಾಂತಿಕ ಚೌಕಟ್ಟಿನೊಳಗೆ ಹೆಚ್ಚುಕಡಿಮೆ ಓರಣವಾಗಿ ಅಳವಡಿಸಬಹುದು. ಸಂಖ್ಯಾಕಲನ ವಿಜ್ಞಾನ ಅಂಥ ಹಲವು ಚೌಕಟ್ಟುಗಳನ್ನು ಕುರಿತು ತಿಳಿಸುತ್ತದೆ. ದ್ವಿಪದ, ಪ್ವೊಜೋನ್ ಮತ್ತು ಪ್ರಸಾಮಾನ್ಯ ವಿತರಣೆಗಳು ಮೂರು ನಿದರ್ಶನಗಳು. ಮೊದಲ ಎರಡು ವಿರತಯಾದೃಚ್ಛಿತಚರಗಳ ವಿತರಣೆಗಳು. ಅವುಗಳ ವಿವರಗಳಿಗೆ ನೋಡಿ [1]. ಪ್ರಸಾಮಾನ್ಯವಿತರಣೆ ಅವಿಚ್ಛಿನ್ನಚರದ ಒಂದು ವಿತರಣೆ. ಅದರ ವೈಶಿಷ್ಟ್ಯಗಳಿಂದಾಗಿ ಮತ್ತು ಹೆಚ್ಚಿನ ಎಲ್ಲ ವಿತರಣೆಗಳು ಅದಕ್ಕೆ ಅಭಿಸರಿಸುವುದರಿಂದಾಗಿ ಪ್ರಸಾಮಾನ್ಯವಿತರಣೆಗೆ ಸಂಖ್ಯಾಕಲನವಿಜ್ಞಾನದಲ್ಲಿ ಕೇಂದ್ರ ಸ್ಥಾನವಿದೆ. ಪ್ರಸ್ತುತ ಲೇಖನದಲ್ಲಿ ಸಾರ್ವತ್ರಿಕ ಏರಿಳಿತದ ಪರಿಕಲ್ಪನೆಯಿಂದ ಮೊದಲಿಸಿ ಪ್ರಸಾಮಾನ್ಯವಿತರಣೆಯ ಮತ್ತು ಅದರ ಉಪಯುಕ್ತತೆಯ ಪರಿಚಯ ಮಾಡಿಕೊಡಲು ಯತ್ನಿಸಲಾಗಿದೆ.

2 ಸಾರ್ವತ್ರಿಕ ಏರಿಳಿತ

ವ್ಯಕ್ತಿಯ ಎತ್ತರ, ಎಕರೆಗೆ ಭತ್ತದ ಉತ್ಪನ್ನ, ದಿನದ ಲಾಭ, ಪರೀಕ್ಷೆಯಲ್ಲಿ ದೊರೆತ ಅಂಕ ಇತ್ಯಾದಿ ಯಾವ ಲಕ್ಷಣವನ್ನು ಗಮನಿಸಿದರೂ ಏರಿಳಿತ ಎಲ್ಲೆಡೆ ಕಂಡುಬರುತ್ತದೆ. ಅಂದರೆ ಪ್ರಕೃತಿಯಲ್ಲಿ ಏರಿಳಿತ ಸಹಜ, ಅನಿವಾರ್ಯ ಮತ್ತು ಸಾರ್ವತ್ರಿಕ. ಈ ಏರಿಳಿತದ ಪ್ರರೂಪ ಸ್ಥಿರ ಅಥವಾ ಅಸ್ಥಿರವಾಗಿರಬಹುದು. ಅಂತೂ ಅದನ್ನು ವಿವರಿಸಲು ಸರಳ ವಿಧಾನಗಳು ಬೇಕು. ಅವುಗಳ ರಚನೆ ಅಗತ್ಯ ಮತ್ತು ಲಾಭದಾಯಕ. ಸಂಖ್ಯಾಕಲನ ವಿಜ್ಞಾನ ಅಂಥ ವಿಧಾನಗಳನ್ನು ನೀಡುತ್ತದೆ. ಅವುಗಳಲ್ಲೊಂದು ಮೌಲ್ಯಗಳ ಆವರ್ತಾಂಕವಿತರಣೆಯನ್ನು ಪಡೆಯುವುದು. ಇನ್ನೊಂದು ಅಂಥ ವಿತರಣೆಯ ಕೇಂದ್ರೀಯಪ್ರವೃತ್ತಿ ಮತ್ತು ಪ್ರಸರಣಗಳ ಮಾನ

ಗಳನ್ನು ಪಡೆಯುವುದು. ಪರಿಶಿತದ ಪ್ರರೂಪಗಳನ್ನು ವಿವರಿಸುವ ಈ ವಿಧಾನ ಗಳನ್ನು ಕೆಳಗೆ ನಿದರ್ಶಿಸಿ ವಿವರಿಸಲಾಗಿದೆ :

ಗಣಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಿಗೆ ಅನುಸಾರವಾಗಿ 100 ವಿದ್ಯಾರ್ಥಿಗಳ ವಿತರಣೆ ಕೋಷ್ಟಕ 2.1 ರಲ್ಲಿರುವಂತೆ ಇದೆಯೆಂದು ಭಾವಿಸಿ :

ಕೋಷ್ಟಕ 2,1

ಅಂಕಗಳು	ವಿದ್ಯಾರ್ಥಿಗಳ ಸಂಖ್ಯೆ
30—39	2
40—49	3
50—59	11
60—69	20
70—79	32
80—79	25
90—99	7
ಮೊತ್ತ	100


ಕ್ರಮೀಕೃತ ತರಗತಿಗಳಲ್ಲಿ ಚರದ ಎಷ್ಟೆಷ್ಟು ಮೌಲ್ಯಗಳಿವೆಯೆಂಬುದನ್ನು ತೋರಿಸುವ ಇದೊಂದು ಆವರ್ತಾಂತ ವಿತರಣೆ. ಇಲ್ಲಿ ಅಂಕಗಳ ವ್ಯಾಪ್ತಿ 30 ರಿಂದ 99ರ ವರೆಗಿದೆ. ತರಗತಿ 70–79ರಲ್ಲಿ ವಿದ್ಯಾರ್ಥಿಗಳ ಆವರ್ತಾಂಕ ಅತ್ಯಧಿಕವಾಗಿದ್ದು, ಆ ತರಗತಿಯ ನೆರೆಯಲ್ಲಿ ಹೆಚ್ಚಿನ ಮೌಲ್ಯಗಳ ಸಂದಣಿಯಿದೆ. ಇದು ವಿತರಣೆಯಲ್ಲಿರುವ ಕೇಂದ್ರೀಯಪ್ರವೃತ್ತಿ. ಇದರ ಅತ್ಯುತ್ತಮಮಾನ ಅಂಕಗಣಿತೀಯ ಮಧ್ಯಕ $\bar{x}$. ವೈಯಕ್ತಿಕ ಮೌಲ್ಯಗಳು ಯಾವುದೇ ಕೇಂದ್ರೀಯ ಮೌಲ್ಯದ ತೀರ ಸಮೀಪವಿರುವ ಬದಲು ಅದರ ಇಕ್ಕಡೆಗಳಲ್ಲಿ ಹರಡಿರುತ್ತವೆ. ಇದು ವಿತರಣೆಯ ಪ್ರಕರಣ. ಇದರ ಅತ್ಯಂತ ಮುಖ್ಯ ಮಾನ ಶಿಷ್ಟವಿಚಲನೆ s. ಈ ಮಾನಗಳನ್ನು ಗಣಿಸುವ ವಿಧಾನ ಹೀಗಿದೆ : ತರಗತಿಗಳ ಮಧ್ಯ ಬಿಂದುಗಳನ್ನು $x_1, x_2, \ldots, x_n$ ಎಂದೂ ಅನುರೂಪ ಆವರ್ತಾಂಕಗಳನ್ನು $f_1, f_2, \ldots, f_n$ ಎಂದೂ ಸೂಚಿಸಿದರೆ ಆಗ

$$\bar{x} = \frac{1}{N} \sum_{i=1}^{n} f_i \, x_i \, , \; N = \sum_{i=1}^{n} f_i \qquad \ldots(2\cdot1)$$

ಮತ್ತು

$$s^2 = \frac{1}{N} \sum_{i=1}^{n} f_i \left(x_i - \bar{x} \right)^2 \qquad (2\cdot2)$$

ಮೇಲಿನ ನಿದರ್ಶನದಲ್ಲಿ $\bar{x} = 72{\cdot}50$, $s^2 = 172$ ಮತ್ತು $s = 13{\cdot}1$. ಆವರ್ತಾಂಕ ವಿತರಣೆಗಳನ್ನು ಗ್ರಾಫೀಯವಾಗಿ ಹಲವು ರೀತಿಗಳಲ್ಲಿ ಪ್ರದರ್ಶಿಸಬಹುದು. ಪರಸ್ಪರ ಲಂಬವಾಗಿರುವ x, y – ಅಕ್ಷಗಳ xy–ಸಮತಲದಲ್ಲಿ x ದಿಕ್ಕಿನಲ್ಲಿ ತರಗತಿಗಳನ್ನೂ y ದಿಕ್ಕಿನಲ್ಲಿ ಆವರ್ತಾಂಕಗಳನ್ನೂ ಗುರುತಿಸಬಹುದು. ಬಳಿಕ, ಉದಾಹರಣೆಗೆ, ಈ ತರಗತಿಗಳನ್ನು ತಳವಾಗಿಟ್ಟುಕೊಂಡು ವಿಸ್ತೀರ್ಣಗಳು ಅನುರೂಪ ಆವರ್ತಾಂಕಗಳಿಗೆ ಅನುಪಾತೀಯವಾಗಿರುವಂತೆ ಆಯತಗಳನ್ನು ರಚಿಸುವುದು. ಕೋಷ್ಟಕ 2.1 ರ ವಿತರಣೆಗೆ ಇಂಥ ಆಲೇಖವನ್ನು ಚಿತ್ರ 2.1 ತೋರಿಸುತ್ತದೆ :



ಚಿತ್ರ 2.1 ಆಯತೀಯ ಆಲೇಖ

ಇದಕ್ಕೆ ಆವರ್ತಾಂಕಗಳ ಆಯತೀಯ ಆಲೇಖವೆಂದು ಹೆಸರು. ಇಲ್ಲಿರುವ ಎಲ್ಲ ಆಯತಗಳ ಒಟ್ಟು ವಿಸ್ತೀರ್ಣ ಆವರ್ತಾಂಕಗಳ ಮೊತ್ತಕ್ಕೆ ಅನುಪಾತೀಯವಾಗಿರುವುದು. ಅದಲ್ಲದೆ, ತರಗತಿ ಮಧ್ಯಾಂತರಗಳು ಪರಸ್ಪರ ಸಮವಾಗಿರುವಾಗ ಈ ಆಯತಗಳ ಎತ್ತರಗಳು ಕೂಡ ಅನುರೂಪ ಆವರ್ತಾಂಕಗಳಿಗೆ ಅನುಪಾತೀಯವೆಂಬುದನ್ನು ಗಮನಿಸಿ. ಮೌಲ್ಯಗಳ ಒಟ್ಟು ಸಂಖ್ಯೆ ಸಾಂತವಾಗಿರುವಾಗ ಆವರ್ತಾಂಕ ವಿತರಣೆಯನ್ನು ಸರಿಸುಮಾರಾಗಿ ಪ್ರತಿನಿಧಿಸಲು ಆಯತೀಯ ಆಲೇಖ ಒಂದು ಅನುಕೂಲ ವಿಧಾನ. ಯಾವುದೇ ತರಗತಿಯಲ್ಲಿ ಚರದ ಮೌಲ್ಯಗಳು ತರಗತಿಯ ಉದ್ದಕ್ಕೂ ಏಕರೀತಿಯಾಗಿ ಹಬ್ಬಿವೆಯೆಂದು ಇಲ್ಲಿ ತಿಳಿಯಲಾಗಿರುವುದರಿಂದ ಇದೊಂದು ಸನ್ನಿಹಿತವಿಧಾನ ಮಾತ್ರ. ವಾಸ್ತವವಾಗಿ ಚರದ ಮೌಲ್ಯಗಳು ಏಕ

ರೀತಿಯಾಗಿ ಹಬ್ಬಿರುವುದು ಅಪರೂಪ. ತರಗತಿಯ ಮಧ್ಯಾಂತರವನ್ನು ಇಳಿಸುತ್ತ ಹೋದಂತೆಯಂತೂ ಈ ಅಭಿಗೃಹೀತ ತುಸುಮಟ್ಟಿಗಾದರೂ ಸಿಂಧುವಾಗಿರುವುದು ಮತ್ತೂ ಅಪರೂಪ. ಅದಲ್ಲದೆ ಪ್ರತಿಚಯದ ಗಾತ್ರ (ಇಲ್ಲಿ ಒಟ್ಟು ಆವರ್ತಾಂಕ) ಸ್ಥಿರವಿರುವಾಗ ತೀರ ಅಗಲ ಕಿರಿದಾಗ ತರಗತಿಗಳಿದ್ದರೆ ಅಕ್ಕಪಕ್ಕದ ತರಗತಿಗಳ ಆವರ್ತಾಂಕಗಳಲ್ಲಿ ತುಂಬ ಹೆಚ್ಚಿನ ಏರಿಳಿತಗಳಿದ್ದು, ಕೆಲವೊಂದು ಆವರ್ತಾಂಕಗಳು ಸೊನ್ನೆಯಾಗಿರಲೂಬಹುದು. ವಿತರಣೆಯ ಸಹಜ ಸ್ವರೂಪವನ್ನು ಇದು ಅಡಗಿಸುವುದು. ಅದಕ್ಕಾಗಿ ಪ್ರತಿಚಯ ಗಾತ್ರವನ್ನು ಅನಿರ್ದಿಷ್ಟವಾಗಿ ಏರಿಸಲಾಗಿದೆಯೆಂದು ನಾವು ತಿಳಿದರೆ, ತರಗತಿಗಳು ಅಗಲ ಕಿರಿದಾಗಿರುವಾಗಲೂ ಪ್ರತಿ ತರಗತಿಯಲ್ಲೂ ಸಾಕಷ್ಟು ಮೌಲ್ಯಗಳಿವೆಯೆಂದು ತಿಳಿಯಬಹುದು. ಇಂಥ ಸನ್ನಿವೇಶದಲ್ಲಿ ಆಯತೀಯ ಆಲೇಖದ ಮೇಲ್ಭಾಗವನ್ನು ರಚಿಸುವ ಸೋಪಾನ ಶ್ರೇಣಿ ಒಂದು ಸುಗಮ ವಕ್ರದ ರೂಪ ತಳೆಯುವುದು. ಇಂಥ ವಕ್ರಕ್ಕೆ ಆವರ್ತಾಂಕ ವಕ್ರವೆಂದು ಹೆಸರು. x – ಅಕ್ಷದ ಯಾವುದೇ ಬಿಂದುವಿನಿಂದ ಆ ವಕ್ರದ ಉತ್ತರ ಅನುರೂಪ ಆವರ್ತಾಂಕಕ್ಕೆ ಅನುಪಾತೀಯವಾಗಿದ್ದು, ಯಾವುದೇ ಎರಡು ಮಿತಿಗಳ ನಡುವಿರುವ ವಕ್ರದ ಕೆಳಗಿನ ವಿಸ್ತೀರ್ಣ ಆ ಮಿತಿಗಳ ನಡುವಿರುವ ಚರಮೌಲ್ಯಗಳ ಆವರ್ತಾಂಕಕ್ಕೆ ಅನುಪಾತೀಯವಾಗಿರುವುದು. ಪ್ರತಿಚಯಗಾತ್ರವನ್ನು ಅನಿರ್ದಿಷ್ಟವಾಗಿ ಏರಿಸುತ್ತ ಹೋಗುವುದು ಅಂದರೇನು ಎಂಬುದು ಒಂದು ಸಹಜ ಪ್ರಶ್ನೆ. ಕೋಷ್ಟಕ 2.1ರಲ್ಲಿರುವ 100 ವಿದ್ಯಾರ್ಥಿಗಳನ್ನು ಬೆಂಗಳೂರುನಗರದ ಎಲ್ಲ ಕಾಲೇಜು ವಿದ್ಯಾರ್ಥಿಗಳ ಸಮಷ್ಟಿಯಿಂದ ಪಡೆದ ಒಂದು ಪ್ರತಿಚಯವೆಂದು ತಿಳಿಯಬಹುದು. ಪ್ರತಿಚಯಗಾತ್ರವನ್ನು ಏರಿಸುತ್ತ ಹೋಗುವುದೆಂದರೆ ಪ್ರತಿಚಯದಲ್ಲಿ ಸಮಷ್ಟಿಯ ಹೆಚ್ಚೆಚ್ಚು ಭಾಗವನ್ನು ಸೇರಿಸಿಕೊಳ್ಳುವುದು. ಆದ್ದರಿಂದ ಮೇಲೆ ವಿವರಿಸಿದ ಸುಗಮವಕ್ರ ಸಮಷ್ಟಿವಿತರಣೆಗೆ ಸಂಬಂಧಿಸಿದೆಯೆಂದು ತಿಳಿಯಬೇಕಾಗುತ್ತದೆ. ಅನುಷ್ಠಾನದಲ್ಲಿ ಇಂಥ ವಕ್ರಗಳನ್ನು ಅನುಭವದಿಂದ ಕಣ್ಣಿನ ಅಂದಾಜನ್ನು ಬಳಸಿ ಅಥವಾ ಕೆಲವೊಮ್ಮೆ ಸೂಕ್ತತರಹದ್ದು ಯಾವುದೆಂದು ತೋಚಿದರೆ ಅದರ ಗಣಿತೀಯ ಸ್ವಭಾವಗಳನ್ನು ಬಳಸಿ ಎಳೆಯಲಾಗುವುದು.

3 ಪ್ರಸಾಮಾನ್ಯ ವಿತರಣೆ

ಆವರ್ತಾಂಕ ವಿತರಣೆಯಲ್ಲಿರುವ ಹೆಚ್ಚಿನ ಎಲ್ಲ ಮಾಹಿತಿಯನ್ನು ಕೇಂದ್ರೀಯ ಪ್ರವೃತ್ತಿ ಮತ್ತು ಪ್ರಸರಣೆಗಳ ಒಂದೊಂದು ಮಾನಗಳಲ್ಲಿ ತುಂಬಿಸಲು ಬರುವುದಿದ್ದರೆ ಅದು ಅನುಕೂಲತಮ ಪರಿಸ್ಥಿತಿಯೆಂಬುದು ಸ್ವಯಂಸ್ಪಷ್ಟ. ಹೆಚ್ಚಿನ ವ್ಯಾವಹಾರಿಕ ಉದ್ದೇಶಗಳಿಗೆ ಸಾಕಾಗುವಷ್ಟು ಈ ಆದರ್ಶಸ್ಥಿತಿಯನ್ನು ಸಮೀಪಿಸುವುದು ಕೇವಲ ಸನ್ನಿವೇಶಗಳಲ್ಲಿ ಸಾಧ್ಯವಿದೆ. ಅಂಥ ಅನುಕೂಲ ಸನ್ನಿವೇಶವನ್ನು ಗುರುತಿಸುವುದು ಮಾತ್ರ ಅನುಷ್ಠಾನದಲ್ಲಿ ಎದುರಾಗುವ ಒಂದು ಸಮಸ್ಯೆ.

ಮೇಲಿನ ಉದ್ದೇಶಕ್ಕೆ ಕೇಂದ್ರೀಯ ಪ್ರವೃತ್ತಿಯ ಅತ್ಯುತ್ತಮಮಾನ ವಿತರಣೆಯ ನಿರೀಕ್ಷಿತಮೌಲ್ಯ ಮತ್ತು ಪ್ರಸರಣದ ಹೆಚ್ಚಾಗಿ ಬಳಸಲಾಗುವ ಮಾನ ಶಿಷ್ಟವಿಚಲನೆ. ಸಮಷ್ಟಿಯಲ್ಲಿ ಇವು ಅನುಕ್ರಮವಾಗಿ μ ಮತ್ತು σ ಎಂದು ಭಾವಿಸಿ. ಈ ಎರಡು ಮಾನಗಳು ದತ್ತವಿರುವಾಗ ವೀಕ್ಷಣೆಗಳ ಯಾವ ಪ್ರಮಾಣ ನಿಗದಿ ಮಾಡಿದ ಮಿತಿಗಳೊಳಗೆ ಇರುವುದೆಂದು ಹೇಳಲು ಬರುವುದು ನಾವು ಬಯಸುವ ಆದರ್ಶಸ್ಥಿತಿ. ಉದಾಹರಣೆ : $\mu = 16$, $\sigma = 2$ ಎಂದಿರುವಾಗ $\mu \pm \sigma$ (ಅಂದರೆ ಇಲ್ಲಿ 14 ಮತ್ತು 18) ಗಳ ನಡುವೆ ವೀಕ್ಷಣೆಗಳ ಯಾವ ಪ್ರಮಾಣವಿದೆ ? $\mu - 4\sigma$ ಮತ್ತು $\mu - \sigma$ (ಅಂದರೆ ಇಲ್ಲಿ 8 ಮತ್ತು 14) ಗಳ ನಡುವೆ ಯಾವ ಪ್ರಮಾಣ ವಿದೆ ? ಇತ್ಯಾದಿ ವಿಚಾರಗಳನ್ನು ತಿಳಿಸಲು ಬರುವುದು. ಇದು ಸಾಧ್ಯವಿದ್ದರೆ μ, σ ಮೌಲ್ಯಗಳು ತಿಳಿದಿರುವಾಗ ಆವರ್ತಾಂಕ ವಿತರಣೆಯನ್ನು ಪೂರ್ಣವಾಗಿ ಪುನರ್ರಚಿಸಲು ಬರುವುದು. ಅಂದರೆ ಈ ಸನ್ನಿವೇಶದಲ್ಲಿ ವಸ್ತುಲಕ್ಷಣದ ಏರಿಳಿತದ ಪ್ರರೂಪವನ್ನು ವಿವರಿಸುವ ಆವರ್ತಾಂಕವಕ್ರದ ಸಮೀಕರಣವನ್ನು ನಿಖರವಾಗಿ ವ್ಯಾಖ್ಯಿಸಲು ಸಾಧ್ಯವಿದೆ. ಪ್ರಸಾಮಾನ್ಯವಕ್ರವನ್ನು ವ್ಯಾಖ್ಯಿಸಲು ಈ ಜ್ಞಾನ ಪರ್ಯಾಪ್ತವೆಂಬುದು ಒಂದು ವಿಶೇಷ ಆಕರ್ಷಣೆ. ಅದಲ್ಲದೆ, ಪ್ರಕೃತಿಯಲ್ಲಿ ದೊರೆಯುವ ಹಲವಾರು ವಿತರಣೆಗಳು ಪ್ರಸಾಮಾನ್ಯವಕ್ರಕ್ಕೆ ಸ್ಥೂಲವಾಗಿ ಸರಿಹೊಂದುತ್ತವೆಂಬುದು ಇಲ್ಲಿರುವ ಒಂದು ವಿಶೇಷ ವ್ಯಾವಹಾರಿಕ ಅನುಕೂಲತೆ.


ಪ್ರಸಾಮಾನ್ಯವಕ್ರದ ಸಮೀಕರಣವನ್ನು

$$y = \frac{1}{\sigma\sqrt{2\pi}} e^{-\frac{1}{2}\left(\frac{x-\mu}{\sigma}\right)^2} , -\infty < x < \infty \; \sigma > o \qquad ...(3.1)$$

ಎಂದು ಬರೆಯಬಹುದು.

ಇಲ್ಲಿ π , e ನಿಶ್ಚಿತಸ್ಥಿರಗಳು. $\pi = 3{\cdot}14159$; $e = 2.71828$. ಪ್ರಸಾಮಾನ್ಯವಕ್ರಕ್ಕೆ ಹಲವು ಪರ್ಯಾಯ ಹೆಸರುಗಳಿವೆ : ಪ್ರಸಾಮಾನ್ಯನಿಯಮ, ದೋಷಗಳ ಪ್ರಸಾಮಾನ್ಯವಕ್ರ, ಗೌಸನವಕ್ರ, ಲಪ್ಲಾಸನವಕ್ರ ಇತ್ಯಾದಿ. ಪ್ರಸಾಮಾನ್ಯವಿತರಣೆಯ ಮೊದಲ ಹೆಚ್ಚಿನ ಬಳಕೆಯನ್ನು ಗಣಿತವಿದ್ವಾಂಸರಾದ ಲಪ್ಲಾಸ್ (1749–1827) ಮತ್ತು ಗೌಸ್ (1777–1855) ಖಗೋಳವಿಜ್ಞಾನ ಸಂಬಂಧಿ ಅಧ್ಯಯನಗಳಲ್ಲಿ ಮಾಡಿಕೊಂಡರು. ನಿಶ್ಚಿತ ಪರಿಸರದಲ್ಲಿ ದ್ವಿಪದ ವಿತರಣೆ ಈ ವಿತರಣೆಗೆ ಅಭಿಸರಿಸುವುದನ್ನು ಫ್ರಾನ್ಸಿನ ಗಣಿತಜ್ಞ ಅಬ್ರಹಾಮ್ ದೆ ಮೋವ್ರ್ 1753 ರಲ್ಲಿ ಮೊತ್ತಮೊದಲು ತೋರಿಸಿದನೆಂದು ನಂಬಲಾಗಿದೆ. ಪ್ರಸಾಮಾನ್ಯವಕ್ರಕ್ಕೆ ಗಂಟೆಯ ಆಕಾರವಿದ್ದು ಅದು $x = \mu$ ನಲ್ಲಿರುವ y– ನಿರ್ದೇಶಕವನ್ನು ಕುರಿತು ಸಮಾಂಗವಾಗಿದೆ. ನೋಡಿ ಚಿತ್ರ 3.1.

$x = \mu$ ನಲ್ಲಿ ಪಾದರೇಖೆಗೆ ಲಂಬವಾಗಿ ಸಮತಲಕನ್ನಡಿಯನ್ನಿರಿಸಿದರೆ ಆಗ ವಕ್ರದ ಎಡಭಾಗದ ಪ್ರತಿಬಿಂಬ ಬಲಭಾಗ. ಹೀಗಾಗಿ ಆ ಕನ್ನಡಿಯಿಂದ ಸಮದೂರದಲ್ಲಿರುವ y- ನಿರ್ದೇಶಕಗಳು ಪರಸ್ಪರ ಸಮ. ಈ ವಕ್ರ ಎಡಕ್ಕೆ ಅನಂತದಲ್ಲಿ ಪಾದರೇಖೆಯಿಂದ ಕವಲೊಡೆದು, ಮೊದಮೊದಲು ತಗ್ಗಿದ್ದು, ತಗ್ಗಿಂದ ಏರುತ್ತ $x = \mu$ ನಲ್ಲಿ



ಚಿತ್ರ 31. ಪ್ರಸಾಮಾನ್ಯವಕ್ರ

ಅತ್ಯುನ್ನತಿ ಪಡೆದು ಬಳಿಕ ಏರಿದಂತೆಯೇ ಇಳಿಯುತ್ತ ಕೊನೆಕೊನೆಗೆ ತಗ್ಗುವ, ಬಲಕ್ಕೆ ಅನಂತದಲ್ಲಿ ಪಾದರೇಖೆಯೊಡನೆ ಬೆರೆಯುವ ಅವಿಚ್ಛಿನ್ನವಕ್ರರೇಖೆ. ಆರಂಭದಲ್ಲಿ ಪಾದರೇಖೆಯಕಡೆಗೆ ಉಬ್ಬಿರುವ ಈ ವಕ್ರ $x = \mu - \sigma$ ದಲ್ಲಿ ಮೇಲೆ ಉಬ್ಬಲಾರಂಭಿಸಿ, ಮಧ್ಯದ ಉಬ್ಬನ್ನು ಪಡೆದು ಮತ್ತೆ $x = \mu + \sigma$ ದಿಂದ ಬಲಕ್ಕೆ ಪಾದರೇಖೆಯ ಕಡೆಗೆ ಉಬ್ಬನ್ನು ತೋರ್ಪಡಿಸುತ್ತದೆ. ಅಂದರೆ $x = \mu$ ನಿಂದ σ ಮಾನಗಳಷ್ಟು ಎಡಕ್ಕೆ ಮತ್ತು ಬಲಕ್ಕೆ ಈ ವಕ್ರ x-ಅಕ್ಷದ ಕಡೆಗೆ ತನ್ನ ನತೋದರತೆಯನ್ನು ಕಳೆದುಕೊಳ್ಳುತ್ತದೆ. ಆದ್ದರಿಂದ ಸಾಪೇಕ್ಷವಾಗಿ σ ಚಿಕ್ಕದಿರುವಾಗ ವಕ್ರಮಧ್ಯದ ಉಬ್ಬು ಹೆಚ್ಚಿದ್ದು ಶಿಖರತೆ ತೋರಿಬರುತ್ತದೆ; ಸಾಪೇಕ್ಷವಾಗಿ σ ದೊಡ್ಡದಿರುವಾಗ ಇದು ಕಂಡುಬರುವುದಿಲ್ಲ. ವಕ್ರದ ಕೆಳಗಿರುವ ಹೆಚ್ಚಿನ ವಿಸ್ತೀರ್ಣ $\mu \pm 3 6$ ಮಿತಿಗಳೊಳಗೆ ಇರುವುದು ಒಂದು ವೈಶಿಷ್ಟ್ಯ. μ ಮತ್ತು σ ಈ ವಕ್ರವನ್ನು ಪೂರ್ಣವಾಗಿ ವ್ಯಾಖ್ಯಿಸುವುದು ಇನ್ನೊಂದು ವೈಶಿಷ್ಟ್ಯ. ದತ್ತ μ, σ ಮೌಲ್ಯಗಳಿಗೆ ಅನುರೂಪವಾಗಿ ಒಂದೇ ಒಂದು ಪ್ರಸಾಮಾನ್ಯ ವಕ್ರವಿರುವುದರಿಂದ ಈ ಎರಡನೆ ವೈಶಿಷ್ಟ್ಯ ಸಾಧ್ಯ.

ಪಾದರೇಖೆ ಮತ್ತು ಪ್ರಸಾಮಾನ್ಯವಕ್ರದ ನಡುವಿರುವ ಜಾಗದ ಒಟ್ಟು ವಿಸ್ತೀರ್ಣ ಒಂದು ಚವರಮಾನ. $y = f(x)$ ಎಂದು ಬರೆದರೆ ಆಗ


$$\int_{-\infty}^{\infty} f(n)\, dx = 1 \qquad \ldots \qquad (3{\cdot}2)$$

ಪ್ರಸಾಮಾನ್ಯವಿತರಣೆಯ ನಿರೀಕ್ಷಿತಮೌಲ್ಯ ಮತ್ತು ಶಿಷ್ಟವಿಚಲನೆ ಅನುಕ್ರಮವಾಗಿ μ ಮತ್ತು σ. ಅಂದರೆ ಪ್ರತೀಕಗಳಲ್ಲಿ

$$\mu = \int_{-\infty}^{\infty} f(x)\, dx \qquad \ldots \quad (3.3)$$

ಮತ್ತು $$\sigma^2 = \int_{-\infty}^{\infty} (x-\mu)^2 f(x)\, dx \qquad \ldots \quad (3.4)$$

χ– ಅಕ್ಷದಮೇಲೆ ವಕ್ರದ ಸ್ಥಾನವನ್ನು ನಿರ್ಧರಿಸುವುದು μ, ಅದರ ಶಿದರ ಶಿಖರತೆಯನ್ನು ನಿರ್ಧರಿಸುವುದು σ. ನೋಡಿ ಚಿತ್ರ (3.2). ಪ್ರಸಾಮಾನ್ಯವಕ್ರದ ಸಮಾಂಗತೆಯಿಂದಾಗಿ ಹಲವು ಅನುಕೂಲತೆಗಳಿವೆ :



ಚಿತ್ರ 3.2

(i) $x=\mu$ ನಲ್ಲಿರುವ y– ನಿರ್ದೇಶಕದ ಎಡಕ್ಕಿರುವ ಒಟ್ಟುವಿಸ್ತೀರ್ಣ 0.5 ; ಬಲಕ್ಕಿರುವ ಒಟ್ಟು ವಿಸ್ತೀರ್ಣ ಕೂಡ 0.5. ಅಂದರೆ

$$\int_{-\infty}^{\mu} f(x)\, dx = \int_{\mu}^{\infty} f(x)\, dx = 0.5 \qquad \ldots \quad (3.5)$$

(ii) $x=\mu$ ನಲ್ಲಿರುವ y–ನಿರ್ದೇಶಕ ಅತ್ಯಂತ ಎತ್ತರದ್ದು. ಆ ಎತ್ತರ (3.1) ರಲ್ಲಿ $x=\mu$ ಎಂದು ಆದೇಶಿಸಿ

$$f(\mu) = \frac{1}{\sigma\sqrt{2\pi}} \qquad \ldots \quad (3.6)$$


(i) ವಕ್ರದ ಸ್ಥಾನವನ್ನು ನಿರ್ಧರಿಸುವುದು μ.

(ii) ವಕ್ರದ ಶಿಖರತೆಯನು ನಿರ್ಧರಿಸುವುದು σ^2

ಅದಲ್ಲದೆ ಈ ನಿರ್ದೇಶಕದ ಎಡಬಲಗಳಲ್ಲಿ ಸಮದೂರಗಳಲ್ಲಿರುವ y–ನಿರ್ದೇಶಕಗಳು ಪರಸ್ಪರ ಸಮ. ಅಂದರೆ

$$f(\mu-a) = f(\mu+a), \quad a>0 \quad \ldots \quad (3.7)$$

ಮಧ್ಯೆ ಇರುವ ವಿಸ್ತೀರ್ಣಗಳೂ ಒಂದಕ್ಕೊಂದು ಸಮ. ಅಂದರೆ



ಚಿತ್ರ 3.2. μ, aಗಳ ಜ್ಯಾಮಿತೀಯ ಅರ್ಥವಿವರಣೆ

$$\int_{\mu-a}^{\mu} f(x)\, dx = \int_{\mu}^{\mu+a} f(x)\, dx \quad \ldots \quad (3.8)$$

(iii) μ ವನ್ನು ಕುರಿತು ಪ್ರತಿ ವಿಷಮಭ್ರಾಮಕವೂ ಸೊನ್ನೆ. ಅಂದರೆ $\mu_3 = \mu_5 = \ \ldots \ = 0.$

ಇಲ್ಲಿ $\mu_r = \int_{-\infty}^{\infty} (x-\mu)^r f(x)\, dx.$

ಸಮಭ್ರಾಮಕಗಳ ನಡುವೆ ಒಂದು ಸರಳ ಸಂಬಂಧವಿದೆ :

$$\mu_{2s} = \int_{-\infty}^{\infty} (x-\mu)^{2s} f(x)\, dx \quad (\text{ಇಲ್ಲಿ } s \text{ ಧನಪೂರ್ಣಾಂಕ})$$

$$= (2s-1)\ \sigma^2\ \mu 2s-2$$

$$= \ldots\ldots\ldots\ldots\ldots\ldots\ldots\ldots$$

$$= (2s-1)\ (2s-3) \ldots 3.1.\sigma^{2s} \quad \ldots \quad (3.9.)$$

ಹೀಗಾಗಿ $\mu_4 - 3\sigma_4$, $\mu_6 = 15\sigma^6$ ಇತ್ಯಾದಿ.

(3.1)ರಲ್ಲಿ $(x-\mu)^2$ ಏರಿದಂತೆ y ಭರದಿಂದ ಕಡಿಮೆಯಾಗುವುದನ್ನು ಗಮನಿಸಿ. ಆದ್ದರಿಂದ $x=\mu$ ಬಿಂದುವಿನಿಂದ ಎಡಕ್ಕೆ ಅಥವಾ ಬಲಕ್ಕೆ ಸರಿದಂತೆ ಪ್ರಸಾಮಾನ್ಯ

ವಕ್ರ ತಗ್ಗುತ್ತ ಸಾಗಿ ಅನಂತದಲ್ಲಿ ಪಾದರೇಖೆಯೊಡನೆ ಲೀನವಾಗುವುದು. ಅಂದರೆ $x = \pm\infty$ ಯಲ್ಲಿ ಪಾದರೇಖೆ ವಕ್ರಕ್ಕೆ ಸ್ಪರ್ಶಕವಾಗಿದೆ. ಆದರೂ $x = \mu \pm 4\sigma$ ಗಳ ಬಳಿಕ ವ್ಯಾವಹಾರಿಕ ಉದ್ದೇಶಗಳಿಗೆ ವಕ್ರ ಪಾದರೇಖೆಯನ್ನು ಸ್ಪರ್ಶಿಸಿದಂತೆಯೇ. ಕೆಲವು ನಿರ್ದಿಷ್ಟ $\mu \pm k\sigma$ ಮೌಲ್ಯಗಳಿಗೆ ಅನುರೂಪ y– ನಿರ್ದೇಶಕಗಳ ಆಚೆಗಿರುವ ಒಟ್ಟುವಿಸ್ತೀರ್ಣವನ್ನು ಕೋಷ್ಟಕ (3.1) ತೋರಿಸುತ್ತದೆ :

ಕೋಷ್ಟಕ 3.1

$\mu \pm k\sigma$	$\mu \pm k\sigma$ ಕ್ಕಿಂತ ಆಚೆಗಿರುವ ಒಟ್ಟು ವಿಸ್ತೀರ್ಣ
$\mu \pm \sigma$	0·3173
$\mu \pm 1{\cdot}5\sigma$	0·1336
$\mu \pm 2{\cdot}0\sigma$	0·0455
$\mu \pm 2{\cdot}5\sigma$	0·0124
$\mu \pm 3{\cdot}0\sigma$	0·0027
$\mu \pm 3{\cdot}5\sigma$	0·00046
$\mu \pm 4{\cdot}0\sigma$	0·00006

ಆದ್ದರಿಂದ $\mu \pm 3\sigma$ ಗಳ ಆಚೆಗಿರುವ ಒಟ್ಟು ವಿಸ್ತೀರ್ಣ ಅತ್ಯಲ್ಪ (0·27%) $\mu \pm 4\sigma$ ಗಳ ಆಚೆಗಂತೂ ಏನೇನೂ ಇಲ್ಲ. ಹೀಗಾಗಿ, ಪ್ರಸಾಮಾನ್ಯ ವಿತರಣೆಗೆ ಸನ್ನಿಹಿತವಿರುವ ವಿತರಣೆಗಳಲ್ಲಿ ಮೌಲ್ಯಗಳ ಹೆಚ್ಚು ಕಡಿಮೆ $\frac{2}{3}$ ಅಂಶ ಮಧ್ಯಕ ಮೌಲ್ಯದಿಂದ ಒಂದು ಶಿಷ್ಟವಿಚಲನೆಯಷ್ಟು ಎಡ ಮತ್ತು ಬಲದೊಳಗೆ ಇರುತ್ತದೆ, ಕೇವಲ 5% ದಷ್ಟು ಬಿಟ್ಟು ಉಳಿದದ್ದೆಲ್ಲ ಎರಡು ಶಿಷ್ಟವಿಚಲನೆಯಷ್ಟು ದೂರ ದೊಳಗೆ ಇರುತ್ತದೆ ಮತ್ತು ವ್ಯಾವಹಾರಿಕ ದೃಷ್ಟಿಯಲ್ಲಿ ಎಲ್ಲವೂ ಮೂರು ಶಿಷ್ಟವಿಚಲನೆಯೊಳಗೆ ಇರುತ್ತದೆ.

ಪರಸ್ಪರ ನಿರವಲಂಬಿ ಪ್ರಸಾಮಾನ್ಯಚರಗಳ ಮೊತ್ತ ಕೂಡ ಪ್ರಸಾಮಾನ್ಯ ಚರವೆಂಬುದು ಅನುಕೂಲ ವಿಚಾರಃ x_1, x_2 ನಿರವಲಂಬಿ ಪ್ರಸಾಮಾನ್ಯಚರಗಳು ಮತ್ತು ಅನುರೂಪ ಪ್ರಾಚಲಗಳು μ_1, σ_1^2 ; μ_2 , σ_2^2. ಆಗ $x_1 \pm x_2$ ಕೂಡ ಪ್ರಸಾಮಾನ್ಯಚರ ಮತ್ತು ಅದರ ಪ್ರಾಚಲಗಳು $\mu_1 \pm \mu_2$, $\sigma_1^2 + \sigma_2^2$.

ಎರಡು ಸಂದರ್ಭಗಳಲ್ಲೂ ಚಲನೀಯು $\sigma_1^2 + \sigma_2^2$ ಎಂಬುದನ್ನು ಗಮನಿಸಿ. ಸಾರ್ವತ್ರಿಕವಾಗಿ $x_i, i = 1, 2, \ldots, k$ ಪರಸ್ಪರ ನಿರವಲಂಬಿ ಪ್ರಸಾಮಾನ್ಯಚರಗಳು, ಪ್ರಾಚಲಗಳು μ_i, σ_i^2 ಮತ್ತು c_i ನಿರ್ದಿಷ್ಟ ಸ್ಥಿರಾಂಕಗಳಾಗಿರುವಾಗ

$\sum_{i=1}^{k} C_i \chi_i$ ಪ್ರಸಾಮಾನ್ಯಚರ ಮತ್ತು ಅದರ ಪ್ರಾಚಲಗಳು

$$\sum_{i=1}^{k} C_i \mu_i \quad , \quad \sum_{i=1}^{k} C_i^2 \sigma_i^2 .$$

4 ಪ್ರಸಾಮಾನ್ಯ ಅನುಕಲನಾಂಕದ ಕೋಷ್ಟಕಗಳು

a, b ಗಳು ಯಾವುದೇ ಎರಡು ಸ್ಥಿರಾಂಕಗಳಾಗಿದ್ದು $a < b$ ಆಗಿರುವಾಗ ಪ್ರಸಾಮಾನ್ಯವಕ್ರದ ಕೆಳಗಿದ್ದು $x = a$ ಯ ಎಡಕ್ಕೆ, $x = b$ ಯ ಬಲಕ್ಕೆ ಅಥವಾ $x = a$, $x = b$ ಗಳ ಮಧ್ಯೆ ಇರುವ ವಿಸ್ತೀರ್ಣಗಳನ್ನು ಗಣಿಸಬಹುದು. ಆದರೆ ಇದು μ. σ ಮೌಲ್ಯಗಳ ಮೇಲೆ ಕೂಡ ಅವಲಂಬಿಸಿರುವುದರಿಂದ ಪ್ರತಿ (μ, σ) ಮೌಲ್ಯ ಜೊತೆಗೂ ಪ್ರತ್ಯೇಕ ಗಣನೆ ಅವಶ್ಯ. ಇದು ಕಷ್ಟಸಾಧ್ಯ. ಅದೃಷ್ಟವಶಾತ್ ಒಂದು ಸರಳಪರಿವರ್ತನೆಯ ಮೂಲಕ ಪ್ರಸಾಮಾನ್ಯ ಚರವನ್ನು ಶೀಷ್ಟಿಕರಿಸಿ ಅದರ ನಿರೀಕ್ಷಿತಮೌಲ್ಯ o, ಚಲನೀಯು 1 ಆಗಿರುವಂತೆ ಮಾಡಬಹುದು. ಆ ಪರಿವರ್ತನೆ ಹೀಗಿದೆ : χ ಪ್ರಸಾಮಾನ್ಯಚರವಾಗಿದ್ದು ಅದರ ನಿರೀಕ್ಷಿತಮೌಲ್ಯ μ ಮತ್ತು ಚಲನೀಯು σ^2 ಆಗಿರುವಾಗ

$$t = \frac{\chi - \mu}{\sigma} \qquad \ldots \qquad (4.1)$$

ಕೂಡ ಒಂದು ಪ್ರಸಾಮಾನ್ಯಚರ. ಅದರ ನಿರೀಕ್ಷಿತ ಮೌಲ್ಯ o, ಚಲನೀಯು 1. ಈ ಸನ್ನಿವೇಶದಲ್ಲಿ ವಕ್ರದ ಸಮೀಕರಣ

$$y = \frac{1}{\sqrt{2\pi}} e^{-\frac{1}{2} t^2} \qquad \ldots \qquad (4.2)$$

ಈ ವಕ್ರದ ಕೆಳಗಿರುವ ವಿಸ್ತೀರ್ಣವನ್ನು ಕೋಷ್ಟೀಕರಿಸಲಾಗಿದೆ. ನೋಡಿ [2] ಇದರ ಸಹಾಯದಿಂದ ದತ್ತ μ, σ ಮೌಲ್ಯಗಳಿಗೆ ಅನುರೂಪವಾದ ವಕ್ರವನ್ನು ಕುರಿತು ಮೇಲೆ ವಿವರಿಸಿದಂಥ ವಿಸ್ತೀರ್ಣಗಳನ್ನು ನೇರವಾಗಿ ಪಡೆಯಬಹುದು. ಉದಾ. $\mu = 2$, $\sigma^2 = 9$ ಮತ್ತು $b = 8$ ಇರುವಾಗ $x = \sigma$ ರ ಬಲಕ್ಕಿರುವ ವಿಸ್ತೀರ್ಣ $t = \frac{8-2}{3} = 2$ ರ ಬಲಕ್ಕೆ ಶಿಷ್ಟೀಕೃತವಕ್ರದ ಕೆಳಗಿರುವ ವಿಸ್ತೀರ್ಣಕ್ಕೆ ಸಮ. ಕೋಷ್ಟಕದಿಂದ ಇದು 0.0228. ಈ ಕೋಷ್ಟಕ ಅನುಷ್ಠಾನದಲ್ಲಿ ತುಂಬ ಸಹಾಯಕವಾಗಿದೆ.

5 ಇತರ ಆವರ್ತಾಂಕವಕ್ರಗಳು

ಹಲವು ವ್ಯಾವಹಾರಿಕ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಪ್ರಸಾಮಾನ್ಯವಕ್ರ ಸಹಾಯಕವಾಗಿದೆ. ವಿತರಣೆಯ ನಡುವಿನಲ್ಲಿ ಆವರ್ತಾಂಕಗಳ ಸಂದಣಿಯಿದ್ದು ಕೊನೆಗಳಲ್ಲಿ ಇವು ವಿರಳವಾಗಿರುವ ಪ್ರಸಾಮಾನ್ಯವಕ್ರದ ಸಾರ್ವತ್ರಿಕ ಪ್ರರೂಪ ಪದೇಪದೇ ಇದಿರಾಗಿತ್ತಿರುತ್ತದೆ. ಹಾಗಿದ್ದರೂ ಪ್ರಸಾಮಾನ್ಯವಕ್ರದ ತಪ್ಪುಬಳಕೆ ಆಗಾಗ ನಡೆಯುವುದುಂಟು : ಅಂದರೆ ಅವ್ಯಕ್ತವಿತರಣೆಗಳು ಪ್ರಸಾಮಾನ್ಯವೆಂದು ಬಗೆದು ಮುಂದುವರಿಯುವುದು ಯಾವಾಗಲೂ ಸುರಕ್ಷಿತಮಾರ್ಗವಲ್ಲ. ನಡುವಿಂದ ಬಳಿಗಳಿಗೆ ಸರಿದಂತೆ ಆವರ್ತಾಂಕಗಳು ಅವಿರತವಾಗಿ ಇಳಿಯುವಷ್ಟರಮಟ್ಟಿಗೆ ಪ್ರಸಾಮಾನ್ಯವಿತರಣೆಯನ್ನು ಹೋಲತ್ತಿದ್ದು ಆದರೆ ಸಮಾಂಗವಲ್ಲದ ಹಲವು ಆವರ್ತಾಂಕಪ್ರರೂಪಗಳಿವೆ. ಇಂಥಲ್ಲಿ ಕೇಂದ್ರದಿಂದ ಒಂದೇ ಪಾರ್ಶ್ವಕ್ಕೆ ಕೊನೆ ಮೌಲ್ಯಗಳು ಹೆಚ್ಚಾಗಿ ಸಂಭವಿಸುತ್ತಿದ್ದು ಇನ್ನೊಂದು ಪಾರ್ಶ್ವದಲ್ಲಿ ಅವುಗಳ ವಿರಳತೆಯಿರುತ್ತದೆ. ನೋಡಿ ಚಿತ್ರ 5.1.



(i) ಎಡಕ್ಕೆ ಅಸಮಂಗವಕ್ರ (ii) ಬಲಕ್ಕೆ ಅಸಮಂಗ ವಕ್ರ

ಚಿತ್ರ 5.1 ಅಸಮಾಂಗ ವಕ್ರಗಳು

6 ಪ್ರತಿಚಯದಿಂದ ಸಮಷ್ಟಿಗೆ

ಯಾವುದಾದರೊಂದು ಚರದ ಹಲವು (n) ಮೌಲ್ಯಗಳು ದೊರೆತಿರುವ ಸನ್ನಿವೇಶ. ಈ ಮೌಲ್ಯಗಳನ್ನು ಒಂದು ಸಮಷ್ಟಿಯಿಂದ ಪಡೆದ ಪ್ರತಿಚಯವೆಂದು ತಿಳಿದು ಸಮಷ್ಟಿಯ ಮಧ್ಯಕಮೌಲ್ಯ (μ) ಮತ್ತು ಪ್ರಸರಣ (σ) ಗಳನ್ನು ಅಂದಾಜಿಸಬೇಕಾಗಿದೆ. ಪ್ರತಿಚಯ ಮಧ್ಯಕಮೌಲ್ಯ $\bar{x}$. ಇದರ ಕೇಂದ್ರೀಯ ಪ್ರವೃತ್ತಿ ಮತ್ತು ಪ್ರಸರಣಗಳ ಬಗ್ಗೆ ತಿಳಿವಳಿಕೆ ಗಳಿಸಿ, ಆ ಮೂಲಕ μ ಮತ್ತು σ ಗಳನ್ನು ಅಂದಾಜಿಸುವ ಉದ್ದೇಶ. ದತ್ತಗಾತ್ರ n ಉಳ್ಳ ಹಲವು ಯಾದೃಚ್ಛಿಕ ಪ್ರತಿಚಯಗಳನ್ನು ಆ ಸಮಷ್ಟಿಯಿಂದ ಪಡೆದರೆ ಆಗ ಪ್ರತಿಚಯಮಧ್ಯಕಗಳ ಆವರ್ತಾಂಕವಿತರಣೆ ದೊರಕುವುದು. ಎಲ್ಲ ವಿತರಣೆಗಳಂತೆ ಇದಕ್ಕೂ ತನ್ನದೇ ಆದ ಕೇದ್ರೀಯಪ್ರವೃತ್ತಿ ಮತ್ತು ಪ್ರಸರಣವಿರುವುದು. ಇವನ್ನು ಸಮಷ್ಟಿಮಧ್ಯಕ ಮತ್ತು ಶಿಷ್ಟವಿಚಲನೆಗಳಲ್ಲಿ ತಿಳಿಸಬಹುದು. ಈ ವಿತರಣೆಯ ಮಧ್ಯಕ ಸಮಷ್ಟಿ ಮಧ್ಯಕ μ ನ ಬಳಿಯಿರುವ ಪ್ರವೃತ್ತಿತೋರಿಸುತ್ತದೆ; ಆದರೆ ಶಿಷ್ಟವಿಚಲನೆ σ ದ

ಮೇಲೆ ಅಲ್ಲದೆ ಪ್ರತಿಚಯಗಾತ್ರ n ನ ಮೇಲೆ ಕೂಡ ಅವಲಂಬಿಸಿರುತ್ತದೆ. n ಮೌಲ್ಯ ಜಾಸ್ತಿಯಾದಂತೆ $\bar{x}$ ಮೌಲ್ಯಗಳ ಹರಡಿಕೆ ಕಡಿಮೆ.

ಈ ವಿಚಾರಗಳನ್ನು ಕುರಿತು ಸಂಖ್ಯಾಕಲನೀಯ ಸಿದ್ಧಾಂತ ಕೆಲವು ಖಚಿತ ಮಾಹಿತಿ ನೀಡುತ್ತದೆ: $\bar{x}$ ನ ನಿರೀಕ್ಷಿತ ಮೌಲ್ಯ μ, ಶಿಷ್ಟವಿಚಲನೆ $\frac{\sigma}{\sqrt{n}}$. ಅಂದರೆ ಪ್ರತಿಚಯುಗಳ ಸಂಖ್ಯೆ ಸಾಕಷ್ಟು ಹೆಚ್ಚಿರುವಾಗ $\bar{x}$ ಮೌಲ್ಯಗಳ ಮಧ್ಯಕ μ ಮತ್ತು ಅವುಗಳ ಶಿಷ್ಟಚಲನೆ $\frac{\sigma}{\sqrt{n}}$ ಎಂದು. ಸ್ಥೂಲವಾಗಿ ತಿಳಿಯಬಹುದು. ಹೀಗಾಗಿ, $n=4$ ಆಗಿರುವಾಗ $\bar{x}$ ವಿತರಣೆಯ ಶಿಷ್ಟವಿಚಲನೆ $\frac{\sigma}{2}$, ಅಂದರೆ ಅದು ಸಮಷ್ಟಿ ಶಿಷ್ಟ ವಿಚಲನೆಯ ಅರ್ಧದಷ್ಟು ಮಾತ್ರವಿರುವುದು. $n=16$ ಆಗಿರುವಾಗ ಇದು ಕಾಲಂಶದಷ್ಟು ಮಾತ್ರ, ಇತ್ಯಾದಿ. ಈ ಸಂಗತಿಗಳು ಸಮಷ್ಟಿ ಪ್ರಸಾಮಾನ್ಯವೇ ಅಲ್ಲವೇ ಎಂಬುದರ ಮೇಲೆ ಹೊಂದಿಕೊಂಡಿಲ್ಲ. ಸಮಷ್ಟಿ ಪ್ರಸಾಮಾನ್ಯವಾಗಿರು ವಾಗಲಂತೂ $\bar{x}$ ನ ವಿತರಣೆ ಕೂಡ ಪ್ರಸಾಮಾನ್ಯವೇ. ಅದಲ್ಲದೆ ಮಧ್ಯಕ ಮತ್ತು ಶಿಷ್ಟವಿಚಲನೆಗಳು ಪ್ರಸಾಮಾನ್ಯವಿತರಣೆಯನ್ನು ಪೂರ್ಣವಾಗಿ ವ್ಯಾಖ್ಯಿಸುವುದರಿಂದ μ,σ ತಿಳಿದಿರುವ ಪ್ರಸಾಮಾನ್ಯ ಸಮಷ್ಟಿಯಿಂದ ಪ್ರತಿಚಯನ ನಡೆಸುತ್ತಿರುವಾಗ ದತ್ತಗಾತ್ರವುಳ್ಳ ಪ್ರತಿಚಯದ ಮಧ್ಯಕದ ಏರಿಳಿತದ ಪ್ರರೂಪ ಪೂರ್ಣ ತಿಳಿದಂತೆಯೇ. ವಿಶೇಷವಾಗಿ ರಚಿಸಿದ ಸಮಷ್ಟಿಗಳಿಂದ ಹಲವಾರು ಪ್ರತಿಚಯುಗಳನ್ನು ಪಡೆದು ಮೇಲಿನ ಸಂಗತಿಗಳನ್ನು ಪ್ರಾಯೋಗಿಕವಾಗಿ ಕೂಡ ತಾಳೆನೋಡಬಹುದು. ಉದಾ : ನೋಡಿ ಅಧ್ಯಾಯ 4.

7 ಪ್ರತಿಚಯನ ಸಿದ್ಧಾಂತದಲ್ಲಿ ಪ್ರಸಾಮಾನ್ಯವಕ್ರದ ಪ್ರಾಮುಖ್ಯ


ಸಮಷ್ಟಿವಿತರಣೆ ಪ್ರಸಾಮಾನ್ಯವಲ್ಲದಿರುವಾಗಲೂ $\bar{x}$ ನ ವಿತರಣೆ ಪ್ರಸಾ ಮಾನ್ಯವಿತರಣೆಗೆ ಸಮೀಪವಿರುವ ಪ್ರವೃತ್ತಿ ತೋರಿಸುವುದು ದೊಡ್ಡ ವ್ಯಾವಹಾರಿಕ



ಚಿತ್ರ 7.1 ಲಂಬ ತ್ರಿಕೋನೀಯ ಸಮಷ್ಟಿ

ಅನುಕೂಲತೆ. ಪ್ರತಿಚಯಗಾತ್ರ ಹೆಚ್ಚಾದಂತೆ ಮತ್ತು ಸಮಷ್ಟಿವಿತರಣೆ ಪ್ರಸಾಮಾನ್ಯ ವಿತರಣೆಗೆ ಸಮೀಪವಿದ್ದಂತೆ $\bar{x}$ ನ ವಿತರಣೆ ಪ್ರಸಾಮಾನ್ಯವಿತರಣೆಗೆ ಅಭಿಸರಿಸುವುದು.

ಇಲ್ಲೊಂದು ಸೋಜಿಗಬರಿಸುವ ಸತ್ಯಸಂಗತಿಯಿದೆ. ಸಮಷ್ಟಿ ಪ್ರಸಾಮಾನ್ಯತೆಯಿಂದ ಸಾಕಷ್ಟುದೂರವಿದ್ದು, n ಮೌಲ್ಯ 4ರಷ್ಟು ಚಿಕ್ಕದಿರುವಾಗಲೂ $\bar{x}$ ನ ವಿತರಣೆ ಪ್ರಸಾಮಾನ್ಯವಿತರಣೆಗೆ ಸಾಕಷ್ಟು ಸನ್ನಿಹಿತವಾಗಿರುವುದು. ನೋಡಿ ಚಿತ್ರ 7.1, 7.2. ಅನುಷ್ಠಾನದಲ್ಲಿ ಪ್ರಾಮುಖ್ಯವುಳ್ಳ ವಿತರಣೆಗಳ ದೊಡ್ಡತರಗತಿಗೆ ಅತ್ಯುತ್ತಮ ಅಂದಾಜಾಗಿರುವುದು ಪ್ರಾಸಾಮಾನ್ಯವಿತರಣೆಯ ಒಂದು ಹೆಗ್ಗಳಿಕೆ. ಅದಕ್ಕೆ ಕೇಂದ್ರಸ್ಥಾನ ದೊರೆಯಲು ಪ್ರಬಲಕಾರಣವಿದು. ಅಪ್ರಸಾಮಾನ್ಯ ಸಮಷ್ಟಿಗಳಿಂದ



ಚಿತ್ರ 7.2 ಲಂಬ ತ್ರಿಕೋಣೀಯ ಸಮಷ್ಟಿ

ಬಂದ ಪ್ರತಿಚಯ ಮಧ್ಯಕಗಳ ವಿತರಣೆ ಕೂಡ ಪ್ರಸಾಮಾನ್ಯತೆಗೆ ಸನ್ನಿಹಿತವಾಗಿರುವುದು. ವ್ಯವಹಾರದೃಷ್ಟಿಯಲ್ಲಿ ಒಂದು ವರವಿದ್ದಂತೆ. ಈ ಕಾರಣಗಳಿಂದ ಪ್ರಸಾಮಾನ್ಯವಿತರಣೆಯ ಬಳಕೆ ಬಹಳ ವ್ಯಾಪಕವಾಗಿದೆ.

8. ಸಂಬಂಧಿತ ಓದಿಗಾಗಿ

1. ಟಿ. ಶ್ರೀವೆಂಕಟರಮಣ : ದ್ವಿಪದ ಮತ್ತು ಪ್ವಾಸೋನ್ ಸಂಭಾವ್ಯತಾವಿತರಣೆಗಳು, ಸಾಧನೆ : ಸಂಪುಟ 2, ಸಂಚಿಕೆ 4, ಪು, 167-197, ಅಕ್ಟೋಬರ್-ಡಿಸಂಬರ್ 1973

9. ಆಧಾರಗಳು

2. Bowker, A.H. and Lieberman, G. J.: 'Engineering Studies,' Asia Publishing House, Bombay.

3. Fisher, R. A. and Yates, F.: 'Statistical Tables for Biological, Agricultural and Medical Research' Oliver and Boyd Ltd., Edinburgh, England.

4. Grant, E. L.: 'Statistical Quality Control' 3rd ed. Mc Graw-Hill Book Company, Inc. New-York.

5. Meyer, P. L.: 'Introductory Probability and Statistical Applications' 2nd ed. Addison – Wesley Publishing Company, Reading, Massachusetts.

ಪಾರಿಭಾಷಿಕ ಪದಗಳು

ಅನುಕಲನಾಂಕ : integral
ಅಂಕಗಣಿತೀಯಮಧ್ಯಕ : arithmetic mean
ಆಲೇಖ : diagram
ಆವರ್ತಾಂಕವಿತರಣೆ : frequency distribution
ಏರಿಳಿತ : variation
ಕೇಂದ್ರೀಯ ಪ್ರವೃತ್ತಿ : central tendency
ಚಲನೀಯ : variance
ತರಗತಿ : class
ದ್ವಿಪದ ವಿತರಣೆ : binomial distribution
ನಿರೀಕ್ಷಿತ ಮೌಲ್ಯ : expected value
ಪರಸ್ಪರ ನಿರವಲಂಬಿ : mutually independent
ಪ್ರತಿಚಯನ : sample
    ಯಾದೃಚ್ಛಿಕ ಪ್ರಾತಿಚಯ : random sample
ಪ್ರತಿಚಯ : sampling
ಪ್ರರೂಪ : pattern
ಪ್ರಸರಣ : dispersion
ಪ್ರಸಾಮಾನ್ಯ ವಿತರಣೆ : normal distribution
ಪ್ರಾಚಲ : parameter
ಪ್ವ್ಯಾಜೋನ್‌ವಿತರಣೆ : poisson distribution
ಭ್ರಾಮಕ : moment
ಯಾದೃಚ್ಛಿಕಚರ : random variable
    ಅವಿಚ್ಛಿನ್ನ ಯಾದೃಚ್ಛಿಕಚರ : continuous random variable
    ವಿರತ ಯಾದೃಚ್ಛಿಕಚರ : discrete random variable
ವಕ್ರ : curve
ವ್ಯಾಪ್ತಿ : range
ಶಿಷ್ಟವಿಚಲನೆ : standard deviation
ಸನ್ನಿಹಿತ : approximate
ಸಮಷ್ಟಿ : population
ಸಮಾಂಗ : symmetric
ಸಂಖ್ಯಾಕಲನ ವಿಜ್ಞಾನ : statistics
ಸಾಂತ : finite

ಕನ್ನಡ ಭಾಷೆಯಲ್ಲಿ ಕಾಕಲ್ಯಘರ್ಷಧ್ವನಿ [ಹ್]

ಹಂಪ. ನಾಗರಾಜಯ್ಯ

1.00 ಕನ್ನಡ ಭಾಷೆಯು ಚರಿತ್ರೆಯಲ್ಲಿ ಹಕಾರದ ಪಾತ್ರ ಗಣ್ಯವಾದುದು. ಹಕಾರವನ್ನು, ಅದರ ಉಚ್ಚಾರಸ್ಥಾನ - ಕರಣ - ವಿಧಾನಗಳ ದೃಷ್ಟಿಯಿಂದ, ಧ್ವನಿ ವಿಜ್ಞಾನದ ಪರಿಭಾಷೆಯಲ್ಲಿ ಕಾಕಲ್ಯಘರ್ಷವೆಂದು ಹೇಳಬಹುದು.

1.01 ಇಂದಿನ ಕನ್ನಡ ಭಾಷೆಯಲ್ಲಿ ಹ್ ಒಂದು ಧ್ವನಿವಾ, ಅಂದರೆ ಸಮಾನ ಪರಿಸರದ ಶಬ್ದಗಳಲ್ಲಿನ ಅರ್ಥವನ್ನು ವ್ಯತ್ಯಾಸ ಮಾಡುವ (ಉಪಯುಕ್ತ ವ್ಯತ್ಯಾಸಪಡೆದ) ಧ್ವನಿ. ಕೆಲವು ಅಲ್ಪಾಂತರ ಯುಗ್ಮಗಳನ್ನು ಪರಿಶೀಲಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ.

ಶಬ್ದಾದಿಯಲ್ಲಿ-	ಕಲ್ಲು	ನಗೆ	ಬಾಳು	ಕಿಡಿ	ಕೀರು	
	ಹಲ್ಲು	ಹಗೆ	ಹಾಳು	ಹಿಡಿ	ಹೀರು	
	ಗುಲ್ಲು	ಗುಡಿ	ಕೂಳು	ಮೆಚ್ಚು	ಜೇನು	
	ಹುಲ್ಲು	ಹುಡಿ	ಹೂಳು	ಹೆಚ್ಚು	ಹೇನು	
	ತೊಲ	ಗೋಳು				
	ಹೊಲ	ಹೋಳು				
ಶಬ್ದದ ಮಧ್ಯೆ-	ಅಂತರ	ಆಹಾರ	ಮರಹು	ಸಂಚಾರ	ಸರಿ	ಸಿರಿ
	ಅಂತಹ	ಆಚಾರ	ಮರಳು	ಸಂಹಾರ	ಸಹಿ	ಸಿಹಿ

ಈ ಎಲ್ಲ ಅಲ್ಪಾಂತರ ಯುಗ್ಮ (ಸಮಾನ ಪರಿಸರ) ರೂಪಗಳಲ್ಲೂ ಒಂದು ವ್ಯಂಜನ ವರ್ಣದ ಬದಲು ಅದೇ ಸ್ಥಾನದಲ್ಲಿ ಹಕಾರ ಬಂದಿರುವುದರಿಂದ ಎಲ್ಲ ಕಡೆಯಲ್ಲೂ ಅರ್ಥ ವ್ಯತ್ಯಾಸವಾಗಿದೆ. ಇಂದಿನ ಕನ್ನಡ ಭಾಷೆಯಲ್ಲಿ ಹಕಾರ ಹೇಗೆ ಸಾರ್ಥಕ ವ್ಯತ್ಯಾಸ ಪಡೆದ ಧ್ವನಿಯಾಗಿದೆಯೆಂಬುದನ್ನು ಮೇಲಿನ ಹಲವಾರು ಜೋಡಿ ರೂಪಗಳು ಸ್ಥಿರೀಕರಿಸುತ್ತವೆ.

1.02 ಕನ್ನಡ ಭಾಷೆಯು ಸ್ಥಿತ್ಯಂತರಗಳ ಚರಿತ್ರೆಯಲ್ಲಿ ಹೊಚ್ಚ ಹೊಸ ಗನ್ನಡದಿಂದ ಹಿಂದು ಹಿಂದಕ್ಕೆ ಹಿಮ್ಮೊಗನಾಗಿ ಹೊರಟು, ಹಕಾರದ ಹೆಜ್ಜೆಗುರುತು ಗಳನ್ನು ಅನುಸಂಧಾನ ಮಾಡುವುದರಿಂದ ಕೆಲವು ಗಮನಾರ್ಹ ಸಂಗತಿಗಳು ಬಯಲಾಗುತ್ತವೆ. ಹೊಸಗನ್ನಡದಲ್ಲಿ ಹಕಾರದ ಅಸ್ತಿತ್ವವನ್ನೂ ಇಂದಿನ ಧ್ವನಿ ವ್ಯವಸ್ಥೆಯಲ್ಲಿ ಅದು ಪಡೆದಿರುವ ಉಪಯುಕ್ತ ವ್ಯತ್ಯಾಸವನ್ನೂ ಪುನರ್

ಪರಿಶೀಲಿಸುವ ಅಗತ್ಯವಿಲ್ಲ, ಮೇಲೆ 1.01ರಲ್ಲಿ ಉದಾಹರಿಸಿರುವ ಯುಗ್ಮಮಾಲೆಯೇ ಎಲ್ಲವನ್ನೂ ತಿಳಿಸುತ್ತದೆ.

1.03 ನಡುಗನ್ನಡ ಕಾಲದಲ್ಲೂ ಹಕಾರವಿತ್ತೆಂಬುದನ್ನು ನಡುಗನ್ನಡ ಕಾಲದ ಷಟ್ಪದಿ - ಸಾಂಗತ್ಯ ಕೃತಿಗಳು (ಗ್ರಂಥಸ್ಥ ಸಾಹಿತ್ಯ) ಸ್ಪಷ್ಟವಾಗಿ ಸಾರುತ್ತವೆ. ಹಕಾರದ ಇರುವಿಕೆಯನ್ನು ದೇಶ್ಯಶಬ್ದಗಳಲ್ಲೂ ಸ್ವೀಕರಣರೂಪಗಳಲ್ಲೂ ಕಾಣಬಹುದು. ಇದು ತಿಳಿದ ವಿಷಯವಾದುದರಿಂದ ಇದರ ಸ್ಥಾಪನೆಗೆ ತೊಡಗದೆ, ವಸ್ತುಸ್ಥಿತಿಯನ್ನು ಯಥಾವತ್ತಾಗಿ ಅಂಗೀಕರಿಸಿ ಹಳಗನ್ನಡಕ್ಕೆ ಅಡಿಯಿಡಬಹುದು.

1.04 ಹಳಗನ್ನಡದ ಅವಧಿಯಲ್ಲೂ ಹಕಾರ ಕನ್ನಡಭಾಷೆಯಲ್ಲಿತ್ತು, ಆದರೆ ದೇಶ್ಯ ಶಬ್ದಗಳಲ್ಲಿ ಅಲ್ಲ; ಅನ್ಯದೇಶ್ಯ ಶಬ್ದಗಳಲ್ಲಿ, ಮುಖ್ಯವಾಗಿ ಸಂಸ್ಕೃತ ಭಾಷಾರೂಪಗಳಲ್ಲಿ ಹಕಾರವಿತ್ತು. ಶ್ರೀವಿಜಯ ಪಂಪ ಪೊನ್ನ ರನ್ನ ಮೊದಲಾದ ಕವಿಗಳ ಕೃತಿಗಳಲ್ಲೂ ಶಾಸನಗಳಲ್ಲೂ ದೊರೆಯುವ ನೂರಾರು ಪ್ರಯೋಗಗಳಲ್ಲಿ ಈ ಅಂಶ ವ್ಯಕ್ತವಾಗುತ್ತದೆ. ಅದಕ್ಕೂ ಹಿಂದಿನ ಅವಸ್ಥೆಗೆ, ಪೂರ್ವದ ಹಳಗನ್ನಡ ಕಾಲಕ್ಕೆ ಪ್ರವೇಶಿಸಿದಾಗಲೂ, ಹಲ್ಮಿಡಿಯಿಂದ ಹಿಡಿದು ಆರು ಏಳು ಮತ್ತು ಕೆಲವು ಎಂಟನೆಯ ಶತಮಾನದ ಶಾಸನಗಳಲ್ಲಿ ಹಕಾರದ ರೂಪಗಳು ಅನ್ಯದೇಶ್ಯ ಶಬ್ದಗಳಲ್ಲಿ ದೊರೆಯುತ್ತವೆ; ಆದರೆ ಎಲ್ಲಿಯೂ ಈ ಮೂರೂವರೆ ಶತಮಾನಗಳಲ್ಲಿ ದೇಶ್ಯಶಬ್ದಗಳಲ್ಲಿ ಹಕಾರದ ಪ್ರಯೋಗ ಕಂಡುಬರುವುದಿಲ್ಲ.

ಇದುವರೆಗೆ ಮಾನ್ಯವಾಗಿರುವ ಕನ್ನಡ ಭಾಷೆಯ ನಾಲ್ಕು ಸ್ಥಿತ್ಯಂತರಗಳಲ್ಲೂ ಹಕಾರ ಕಂಡುಬರುತ್ತದೆ. ಕನ್ನಡ ಭಾಷೆಯ ಪ್ರಾರಂಭದ ಅವಸ್ಥೆಯಿಂದಲೂ, ಬಹುಶಃ ಮೂಲ ಕನ್ನಡ ಕುಡಿಯಿಟ್ಟ ಕಾಲದಿಂದಲೂ ಕಾಕಲ್ಯಘರ್ಷಧ್ವನಿ ಕನ್ನಡ ಭಾಷೆಯ ಧ್ವನಿವ್ಯವಸ್ಥೆಯಲ್ಲಿ ಸ್ಥಾನಪಡೆದಿತ್ತು.

1.05 ಕನ್ನಡಭಾಷೆ ದ್ರಾವಿಡಭಾಷಾಪರಿವಾರಕ್ಕೆ ಸೇರಿದ ಭಾಷೆ. ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನದಿಂದ ಪುನರ್ ರಚಿತವಾದ ಮೂಲ ದ್ರಾವಿಡ ಧ್ವನಿ ವ್ಯವಸ್ಥೆಯಲ್ಲಿ ಈ ಕಾಕಲ್ಯಘರ್ಷಧ್ವನಿ ಸೇರುವುದಿಲ್ಲ. (ಹಂಪನಾ : ದ್ರಾವಿಡ ಭಾಷಾವಿಜ್ಞಾನ, ೨ನೆ ಮುದ್ರಣ ೧೯೭೨, ಪುಟಗಳು ೨೭೬–೨೮೭). ಅಂದ ಮೇಲೆ ಮೂಲದ್ರಾವಿಡದಿಂದ ಕನ್ನಡ ಭಾಷೆ ಕವಲೊಡೆದು ಬೇರೆಯಾದ ಮೇಲೆಯೇ ಈ ಧ್ವನಿ ಕನ್ನಡಭಾಷೆಯಲ್ಲಿ ಕಾಣಿಸಿಕೊಂಡಿದೆಯೆಂದು ತಿಳಿಯಬೇಕಾಗುತ್ತದೆ.

1.06 ಕಾಕಲ್ಯಘರ್ಷಧ್ವನಿ ಕನ್ನಡ ಭಾಷೆಯನ್ನು ಪ್ರವೇಶಿಸಿದ್ದು ಸಂಸ್ಕೃತ ಮೂಲದಿಂದ. ಕನ್ನಡಭಾಷೆಗೆ ಅದರ ಮೂಲ ಸ್ವರೂಪದ ದಶೆಯಲ್ಲೇ ಮೊತ್ತ ಮೊದಲು ಪ್ರಭಾವ ಬೀರಿದ ಭಾಷೆ ಸಂಸ್ಕೃತ. ಕನ್ನಡಭಾಷೆ ಮಹಾಪ್ರಾಣವರ್ಣಗಳನ್ನೂ ಅಲ್ಲಿಂದಲೇ ಪಡೆದಿದೆ. ಇದರಲ್ಲಿ ಪ್ರಾಕೃತಭಾಷೆಗಳ ಪ್ರಭಾವವನ್ನು ಕಡೆಗಣಿಸುವಂತಿಲ್ಲ. ಸಂಸ್ಕೃತದ ಗಾಢಪ್ರಭಾವ ಕನ್ನಡಭಾಷೆಯ ಶಬ್ದಕೋಶದ

ಬೆಳವಣಿಗೆಯಲ್ಲೂ ಧ್ವನಿವ್ಯವಸ್ಥೆಯಲ್ಲೂ ವಿಪುಲ ಪ್ರಮಾಣದಲ್ಲಿ ನಡೆಯಿತು. ಹೀಗೆ ಪ್ರಭಾವದ ಪ್ರಭಾವಳಿಯಲ್ಲಿ ಬಂದ ಧ್ವನಿಕಿರಣ ಈ ಕಾಕಲ್ಯಘರ್ಷಧ್ವನಿ. ಇದು ಮೊದಲನೆಯ ಘಟ್ಟ, ಅದರ ಪ್ರವೇಶದ ಹಂತ. ಅನಂತರ ದೇಶ್ಯಶಬ್ದಗಳಲ್ಲೂ ಪಕಾರ ಹಕಾರವಾಗಿ ವ್ಯತ್ಯಾಸ ಪಡೆದದ್ದು ಎರಡನೆಯ ಹಂತ (ಹಂಪನಾ : ದ್ರಾವಿಡ ಭಾಷಾವಿಜ್ಞಾನ ೧೯೭೨, ೩೫೦–೩೫೮). ಕನ್ನಡ ಭಾಷೆಯಲ್ಲಿ ಮೂಲದ್ರಾವಿಡ*ಪ್ (ಅಘೋಷ ಉಭಯೋಷ್ಠ್ಯಸ್ಪರ್ಶ) ಧ್ವನಿ ಹಳಗನ್ನಡಾನಂತರದ ಕಾಲದಲ್ಲಿ ಶಬ್ದದ ಆದಿ, ಹಾಗೂ ಶಬ್ದದ ನಡುವೆ ವಿರಳಾಕ್ಷರವಾಗಿದ್ದಾಗ ಮತ್ತು ನಿರನುನಾಸಿಕಗಳೊಡನಿದ್ದಾಗ (ನೋಹಿ, ಇರುವೆ ಎಂಬೆರಡು ಅಪವಾದಗಳನ್ನು ಬಿಟ್ಟು) ಕಾಕಲ್ಯಘರ್ಷ ಧ್ವನಿಯಾಗಿ ವ್ಯತ್ಯಾಸ ಪಡೆಯಿತು.

ಶಬ್ದಾದಿಯಲ್ಲಿ : **ಪಣ್ಣು ಪಂದಿ ಪಾಲು → ಹಣ್ಣು ಹಂದಿ ಹಾಲು**
ಶಬ್ದದ ನಡುವೆ : **ಕಳುಪು ಕಾಪು ಹೊಳಪು → ಕಳುಹು ಕಾಹು ಹೊಳಹು**

ಸಂಯುಕ್ತಾಕ್ಷರವಾಗಿದ್ದಾಗಲೂ ಅನುನಾಸಿಕಗಳೊಡನಿದ್ದಾಗಲೂ ವ್ಯತ್ಯಾಸ ಪಡೆಯಲಿಲ್ಲ :

ಉಪ್ಪು ಕಪ್ಪು ತಪ್ಪು ಚಪ್ಪಾಳೆ ಸಪ್ಪಳ ಸೊಪ್ಪು
ಕಂಪು ಗುಣ್ಪು ತಂಪು ಪೆಂಪು ಬಿಣ್ಪು ಸೊಂಪು

ಅಘೋಷ ಓಷ್ಠ್ಯಸ್ಪರ್ಶ ಧ್ವನಿ ಒಮ್ಮೆಲೇ ಕಾಕಲ್ಯಘರ್ಷ ಧ್ವನಿಯಾಗಿ ವ್ಯತ್ಯಾಸ ಪಡೆಯದೆ, ಮೊದಲು ಓಷ್ಠ್ಯಘರ್ಷವಾಗಿ [ϕ], ಅನಂತರ ಕಾಕಲ್ಯ ಘರ್ಷವಾಯಿತೆಂಬ ಸೂಚನೆಯೂ ಇದೆ.

1.07 ಕನ್ನಡ ಭಾಷೆಯಲ್ಲಿ ಈ ಪ್→ಹ್ ವ್ಯತ್ಯಾಸ ಯಾವಾಗ ನಡೆಯಿತೆಂಬ ಪ್ರಶ್ನೆ ಸಹಜ. ಕನ್ನಡ ಕೈಪಿಡಿಯಲ್ಲಿನ (ಸಂಪುಟ 1 ಭಾಗ 4) ಕನ್ನಡ ಭಾಷಾ ಚರಿತ್ರೆ ಎಂಬ ಭಾಗದಲ್ಲಿ "ಹಳಗನ್ನಡ ಶಬ್ದಗಳಲ್ಲಿನ ಪಕಾರವು ಹೊಸಗನ್ನಡದಲ್ಲಿ ಬಹುಶಃ ಹಕಾರವಾಗಿ ಪರಿಣಮಿಸುತ್ತದೆ" (ತೃತೀಯ ಮುದ್ರಣ 1955, ಪು. 319) ಎಂದು ಹೇಳಿದೆ. ಇದು ಸರಿಯಲ್ಲ, ಹೊಸಗನ್ನಡಕ್ಕೂ ಬಹಳ ಮುಂಚೆಯೇ, ಈ ವ್ಯಸ್ತ್ಯಾಸ ನಡೆದಿದೆ. ಕೆಲವರು ನಡುಗನ್ನಡ ಕಾಲದಲ್ಲಿ ಈ ಮಾರ್ಪಟು ಆಯಿತೆಂದು ಹೇಳಿದ್ದಾರೆ. ಅದೂ ಸಮಂಜಸವಾಗುವುದಿಲ್ಲ, ಅದಕ್ಕೂ ಮೊದಲೇ ಈ ವ್ಯತ್ಯಾಸ ನಡೆದಿದೆ. 'ಪಕಾರ ಹಕಾರವಾದ ಮೊಟ್ಟಮೊದಲ ನಿದರ್ಶನ ಅಥವಾ ದರ್ಶನ ನಮಗೆ ಆಗುವುದು ಹತ್ತನೆಯ ಶತಮಾನದ ಶಾಸನದಲ್ಲಿ' (ಹಂಪಾನಾ, ದ್ರಾಭಾವಿ, ಅದೇ, 351) ಎಂದು ಹೇಳಿರುವುದನ್ನೂ ಇಲ್ಲಿ ಪರಿಶೀಲಿಸಬೇಕಾಗುತ್ತದೆ. ಏಕೆಂದರೆ ಇದು ಈಗ ಬಹುಜನ ವಿದ್ವಾಂಸರಿಂದ ಮಾನ್ಯ ವಾಗಿರುವ ಸಂಗತಿ.

1.08 ಹತ್ತನೆಯ ಶತಮಾನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೊಂಗಾಲ, ರತ್ನತ್ರಯರಾದಿಯಾಗಿ ಹಲವು ಹಿರಿಯ ಕವಿಗಳು ಕೃತಿರಚನೆ ಮಾಡಿದ ಕಾಲ. ಇವರ ಯಾವ ಕಾವ್ಯದಲ್ಲೂ ದೇಶ್ಯ ಶಬ್ದಗಳಲ್ಲಿ ಪಕಾರ ಹಕಾರವಾಗಿಲ್ಲ. ಆದರೆ ಈ ಕಾಲದ ಕೆಲವು ಶಾಸನಗಳಲ್ಲಿ ಪಕಾರದ ವ್ಯತ್ಯಾಸ ಕಂಡುಬರುತ್ತದೆ :

1. ಸಂದ ಲೋಕಕ್ಕೆ ಹೋಹಾನ್, ಶ್ರೀರಂಗಪಟ್ಣ, 134, 910
2. ಊರಟಿವಿನೊಳೆ ಹೊಗೆನೆಂದು, S11, 61, 13, 931-32
3. ಪನ್ನರ್ಮತ್ತರ್ಹಾಡುವೂಜ್ಗಿ, S11, IX–1, 69, 931
4. ಹನ್ನಿರ್ವಟು ಗದ್ಯಾಣಂ, IA, X11, ಪುಟ 251, 1.15.971
5. ಬಮ್ಮರ ಹರಿಯಣ್ಣ ಹೇಟ್ಟ ಶಾಸನ, ಸೊರಬ 262, 1075

ಇಲ್ಲಿನ ಅಯ್ದು ಪ್ರಯೋಗಗಳಲ್ಲಿ ನಾಲ್ಕು ಶಬ್ದಾರಂಭದಲ್ಲೂ, ಒಂದು ಶಬ್ದದ ನಡುವೆಯೂ ಪಕಾರವನ್ನು ಹಕಾರವನ್ನಾಗಿಸಿಕೊಂಡಿವೆ. ಹತ್ತನೆಯ ಶತಮಾನದ ಆರಂಭದಲ್ಲಿ, ಪಂಪನಿಗೂ ಮೊದಲೇ ಪದಾರಂಭದ ಪಕಾರವನ್ನು ಹಕಾರಕ್ಕೆ ತಿರುಗಿಸಿ ಕೊಂಡಿರುವುದು ಗಮನಾರ್ಹವಾಗುತ್ತದೆ. ಹತ್ತು ಮತ್ತು ಹನ್ನೊಂದನೆಯ ಶತಮಾನದಲ್ಲಿ ಹಕಾರದ ಜತೆಗೆ ಪಕಾರದ ರೂಪಗಳೂ ಪುದುವಾಳನ್ನು ಬಾಳುತ್ತಿದ್ದವು. ಮೇಲೆ ಉದಾಹರಿಸಿದ ಸೊರಬ ಶಾಸನದ ಕಾಲದಲ್ಲೇ ರಚಿತವಾದ ಶಾಸನವೊಂದನ್ನು ನೋಡಿ :

ಸಂಧಿ ವಿಗ್ರಹಿ ದಾಮರಾಜಂ ಸಾಸನಗಬ್ಬಮಂ ಪೇಟ್ದು ಬರೆದಂ, ಶಿವಮೊಗ್ಗ 10, 1085

1.09 ಯಾವುದೇ ಭಾಷೆಯಾಗಲಿ, ವ್ಯವಹಾರ ಭಾಷೆ ಮೊದಲು, ಬರವಣಿಗೆ ಅನಂತರ. ಅದರಂತೆ 910 ರ ಶಾಸನವೊಂದರಲ್ಲೇ ಪ್ → ಹ್ ವ್ಯತ್ಯಾಸದ ರೂಪ ಕಾಣಿಸಬೇಕಾದರೆ ಸಹಜವಾಗಿಯೇ, ಅದಕ್ಕಿಂತ ಕೆಲವು ದಶಕಗಳ ಮೊದಲೇ, ಅಂದರೆ ಒಂಬತ್ತನೆಯ ಶತಮಾನದಲ್ಲೇ ಈ ಪರಿವರ್ತನೆ ಕನ್ನಡ ಭಾಷಾ ಸಮಾಜ ದವರ ನಿತ್ಯದ ಆಡುಮಾತಿನಲ್ಲಿ ಕಾಣಿಸಿರಬೇಕೆಂದು ನಿರೀಕ್ಷಿಸಬಹುದು. ವಾಸ್ತವವಾಗಿ ಈ ನಿರೀಕ್ಷೆ ಘಟಿಸಿದೆಯೆಂಬುದನ್ನು ಸಮರ್ಥಿಸುವ ಒಂಬತ್ತನೆಯ ಶತಮಾನದ ಮೂರು ಶಾಸನಗಳಿವೆ :

1. ನಿಮಿತ್ತಂಗಳ ಬಲ್ಲಹಗೆ, S11, X1-1, 1-23, 862
2. ಹಡಗಿಲೆ ನಾಮ ಗ್ರಾಮಂ ; S11, XX, 4-12, 863
3. ಸಿಸುಳ ಹಾಟಿಯ್ವುದಿಂಬರು, BK1, 14, 11, 872

ಇವು ಹಕಾರದ ಚರಿತ್ರೆಯಲ್ಲಿ ಬಹು ಗಮನಾರ್ಹ ದಾಖಲೆಗಳು. ಇವು ಇದುವರೆಗಿನ ವಿದ್ವಾಂಸರ ವಿವರಣೆಯಲ್ಲಿ ಪಕಾರ → ಹಕಾರ ಪರಿವರ್ತನೆಯ ಕಾಲದ ನಿಲುವನ್ನು ಸುಮಾರು ಒಂದು ನೂರು ವರ್ಷ ಹಿಂದಕ್ಕೆ ಹಾಕುತ್ತವೆ. ಈ ಶಾಸನಗಳ ಮೌಲ್ಯದ

ಮತ್ತೊಂದು ಮಹತ್ವವೆಂದರೆ, ಮೊದಲು ಶಬ್ದದ ಆದಿಯ ಪಕಾರ ಹಕಾರ ವಾಯಿತೆಂಬ ನಂಬಿಕೆಯನ್ನು ಸಡಿಲಿಸಿರುವುದು. ಬಲ್ಲಹಗೆ ಎಂಬ ರೂಪ 862 ರಲ್ಲೂ, ಹಡಗಿಲೆ ಎಂಬ ರೂಪ 863 ರಲ್ಲೂ ಕಂಡು ಬಂದಿವೆ. ಆದರಿಂದ ಹೊರಡುವ ಅಂಶ ವೆಂದರೆ ಪ್ → ಹ್ ಪರಿವರ್ತನೆ ಶಬ್ದಾರಂಭ ಮತ್ತು ಶಬ್ದಮಧ್ಯೆ ಏಕಕಾಲದಲ್ಲಿ ಪ್ರಾರಂಭವಾಗಿರಬಹುದೆಂಬುದು. ಒಂಬತ್ತನೆಯ ಶತಮಾನದ ನಡುಗಾಲದ ಶಾಸನಗಳಲ್ಲಿ ಪ್ → ಹ್ ಕಂಡುಬಂದಿದೆ. ಈಗಾಗಲೇ ಮೇಲೆ ವ್ಯಕ್ತಪಡಿಸಿರುವಂತೆ, ಬರವಣಿಗೆಗೆ ಇಳಿಯುವುದಕ್ಕೂ ಕೆಲವು ದಶಕಗಳ ಪೂರ್ವದಲ್ಲಿ ಈ ವ್ಯತ್ಯಾಸ ಜನಭಾಷೆಯಲ್ಲಿ ಕಾಣಿಸಿಕೊಂಡಿರಬೇಕು. ಆದ್ದರಿಂದ ಕನ್ನಡ ಭಾಷೆಯಲ್ಲಿನ ದೇಶ್ಯ ಶಬ್ದಗಳಲ್ಲಿ ಹಕಾರ ತಲೆಹಾಕಿದ್ದು ಒಂಬತ್ತನೆಯ ಶತಮಾನದ ಆರಂಭದ ದಶಕ ಗಳಲ್ಲಿರಬಹುದು.

ಈ ಆಧಾರಗಳನ್ನು ಆಶ್ರಯಿಸಿ ತಳೆಯುವ ತೀರ್ಮಾನದಂತೆ ಕನ್ನಡ ಭಾಷೆ ಯಲ್ಲಿ ಹಕಾರದ ಅಂಕುರಾರ್ಪಣೆ ನಡುಗನ್ನಡದಲ್ಲಿ ಅಲ್ಲ, ಹಳಗನ್ನಡದಲ್ಲಿ; ಹಳಗನ್ನಡದಲ್ಲೂ ಅದರ ಮುಗಿತಾಯದ ಘಟ್ಟದಲ್ಲಿ ಅಲ್ಲ, ಹಳಗನ್ನಡದ ನಡು ಗಾಲದಲ್ಲಿ, ಸುಮಾರು 830 ರ ಹಿಂದು ಮುಂದು ಎಂದು ಆಗುತ್ತದೆ.

ಗ್ರಂಥಸ್ಥ ಸಾಹಿತ್ಯದಲ್ಲಿ ಈ ವ್ಯತ್ಯಾಸ ಪಡೆದ ರೂಪಗಳು ಕಾಣಿಸಿಕೊಂಡುದು ಹನ್ನೊಂದನೆಯ ಶತಮಾನದ ಆಚೆಗೆ. ಇದಕ್ಕೆ ಎರಡು ಅಪವಾದಗಳಿರುವಂತೆ ಕಾಣುತ್ತದೆ. ಶ್ರೀವಿಜಯನ ಕವಿರಾಜಮಾರ್ಗದಲ್ಲಿನ ಒಂದು ಅರ್ಥಕ್ಲಿಷ್ಟ ಪದ್ಯದಲ್ಲಿ ಹಕಾರದ ರೂಪವನ್ನು ದೇಶ್ಯವೆಂದು ತಿಳಿಯಲು ಅವಕಾಶವಿದೆ :

ಪೊಡವಿಪತಿ ಗೊರವನೆನೆ ಪೇ
ಱ್ವಡೆಯದುವದೆಕರಿಸಿ ಕಬ್ಬಿಗದೂರ್ಜಿತನೆಯುಂ ।
ಹಡುವಸುಮುಱ ಸೆಟ್ಟಿಸುಗೆಂ
ಮುಡಿಯೊಳಮಾರ್ಗೆಂದು ನುಡಿವ ಪಟಿಗನ್ನಡಮಂ ॥ ೧-೪೯

ಇಲ್ಲಿನ ಹಕಾರಾದಿಯಾದ ಶಬ್ದವನ್ನು ದೇಶ್ಯವೆಂದು ಭಾವಿಸುವ ಸಾಧ್ಯತೆಯಿದೆ. ಹಾಗಿದ್ದಲ್ಲಿ ಗ್ರಂಥಸ್ಥ ಸಾಹಿತ್ಯದಲ್ಲೂ ನಮಗೆ ಒಂಬತ್ತನೆಯ ಶತಮಾನದ ನಡುಗಾಲದ ಕವಿರಾಜಮಾರ್ಗದಲ್ಲೇ ಹಕಾರದ ಪ್ರಥಮ ದರ್ಶನವಾಗುತ್ತದೆ. ಎರಡನೆಯ ಗ್ರಂಥಸ್ಥ ಪ್ರಾಚೀನ ಪ್ರಯೋಗವೆಂದರೆ ಹತ್ತನೆಯ ಶತಮಾನದ ಉತ್ತರಾರ್ಧದ ಕೃತಿಯಾದ ಚಾವುಂಡರಾಯ ಪುರಾಣದ್ದು. ಅದರಲ್ಲಿನ ವರ್ಧಮಾನಸ್ವಾಮಿ ಪುರಾಣದಲ್ಲಿ ಒಂದು ಕಡೆ "ಪುರೋಹಿತಂ ಕಾಷ್ಠಾಂಗಾರಿಕನ ಮನೆಗೆ ದಿನಕರೋದಯ ದೊಳ್ಪೋಗಿ ಪಾಪಬುದ್ಧಿಯನೇಕಾಂತಕ್ಕೆ ಕರೆದು ನಿನಗೆ ಭುವನರಾಜ್ಯಮಾದಪ್ಪು ದರಸನುಂ ಮರಣ ಪೂರ್ವಕಂ ಹಾನಿಗೆ ಸಲಿಸೆಂಬುದುಮುದಂ ಕೇಳ್ದು ಮಂತ್ರಿಯೆಂದಂ ಪುಳ್ಳಿಯುಂ ಪುಲ್ಲುಮನಡಕಿ ಬಾಳ್ವಾತನಂ ತನ್ನೊಳ್ಸಮೌನಮಾಗೆ ನಡಪಿದಾತಂಗೆಂತು ಪೊಲ್ಲದಂ ಬಗೆವೆಸೆ ರುದ್ರದತ್ತಾ ನೀನಪ್ಪೊಡೆ ಬುದ್ಧಿಯೊಡೆಯ ನಿನಗೀ ನುಡಿವುದ

ಯುಕ್ತಯೆಂದು ತನ್ನೆರಡು ಕಿವಿಯುಮನೆರಡು ಕೈಯೊಳ್ ಮುಚ್ಚಿಕೊಳ್ವುದುಮುರ ಸಂಗೆ ಹುಟ್ಟಿದ ಮಗಂ ನಿನಗವಶ್ಯಂ ಮರಣಹೇತುವಕ್ಕುಮದಱಿಂ (ಸಂಪಾದಕರು : ಕಮಲಾಹಂಪನಾ, ಚಾವುಂಡರಾಯ ಪುರಾಣ, ಹಸ್ತಪ್ರತಿ). ಕವಿರಾಜಮಾರ್ಗದ (?) ಮತ್ತು ಚಾವುಂಡರಾಯ ಪುರಾಣದ ಪ್ರಯೋಗಗಳು ಅನಂತರ ಕಾಲದ ಸಂಪ್ರತಿ ಕಾರರ ಕೈವಾಡದ ಅಥವಾ ಅವರ ಸಮಕಾಲೀನ ಪ್ರಜ್ಞೆಯ ಪರಿಣಾಮದ ಪ್ರಯೋಗ ಗಳಾಗಿರದೆ ಅವರು ಪ್ರತಿಯೆತ್ತುವಾಗ ಮೂಲದಲ್ಲೇ ಇದ್ದುವಾದರೆ ನಿಜಕ್ಕೂ ಇವು ವಿಶ್ವಸನೀಯ ಪ್ರಾಚೀನ ಗ್ರಂಥಸ್ಥ ಸಾಕ್ಷಿಗಳಾಗುತ್ತವೆ. ಕವಿರಾಜಮಾರ್ಗದ ಕಾಲಕ್ಕೂ ಹಕಾರ ಪ್ರಯೋಗದ ಆರಂಭದ ಎರಡು ಶಾಸನಗಳ ಕಾಲಕ್ಕೂ ಇರುವ ಹೊಂದಾಣಿಕೆ ತೀರ ಆಕಸ್ಮಿಕವಾಗಿರಲಾರದು. ಅಂತೆಯೇ ಚಾವುಂಡರಾಯಪುರಾಣದ ಪ್ರಯೋಗ ಅಸಂಭಾವ್ಯವಲ್ಲ.

2.01 ಕನ್ನಡ ಭಾಷೆಯಲ್ಲಿ ಕಾಕಲ್ಯಘರ್ಷಧ್ವನಿಯ ಬೆಳವಣಿಗೆಗೆ ಇನ್ನೊಂದು ಮುಖ್ಯ ಮುಖವಿದೆ. ಕನ್ನಡನಾಡಿನ, ಪ್ರಧಾನವಾಗಿ ದಕ್ಷಿಣಭಾಗದ ಶಿಷ್ಟೇತರರ (ಅವಿದ್ಯಾವಂತ) ಕನ್ನಡ ಭಾಷೆಯಲ್ಲಿ ಹಕಾರ ಮರೆಯಾಗುತ್ತದೆ. ಅದರಿಂದ ಹಕಾರದ ಇರುವಿಕೆ ಇಲ್ಲವೇ ಇಲ್ಲದಿರುವಿಕೆ ಸಾಮಾಜಿಕ ವರ್ಗವ್ಯತ್ಯಾಸ ಸೂಚಿ ಯಾಗಿದೆ. ಅವಿದ್ಯಾವಂತರ ಉಚ್ಚಾರದಲ್ಲಿ, ವಿಶೇಷವಾಗಿ ಶಬ್ದಾದಿಯಲ್ಲಿ ಈ ಲೋಪಪ್ರವೃತ್ತಿ ಕಂಡುಬರುತ್ತದೆ ; ಜತೆಗೆ ವಿರಳವಾಗಿ ಶಬ್ದದ ನಡುವೆಯೂ ಹಕಾರ ತಿರೋಹಿತವಾಗುತ್ತದೆ. ಕಾಕಲ್ಯಘರ್ಷ ಧ್ವನಿ ಉಚ್ಚಾರದಲ್ಲಿ, ವ್ಯವಹಾರ ಭಾಷೆಯಲ್ಲಿ ಕಣ್ಮರೆಯಾದರೂ, ಬರವಣಿಗೆಯ ಭಾಷೆಯಲ್ಲಿ ಮಾತ್ರ ಬಹುವಾಗಿ ಉಳಿದುಕೊಂಡು ಬಂದಿದೆ. ಹಕಾರಲೋಪ, ದೇಶ್ಯ ಅಥವಾ ಅನ್ಯದೇಶ್ಯ ಶಬ್ದ ವೆಂಬ ವ್ಯತ್ಯಾಸವಿಲ್ಲದೆ ಸಾರ್ವತ್ರಿಕವಾಗಿ ನಡೆದಿದೆ.

2.02 ಈ ಧ್ವನಿ ವ್ಯತ್ಯಾಸದ ಹಿಂದೆ ಪ್ರವರ್ತಿಸುವ ಧ್ವನಿನಿಯಮವನ್ನು ಕಂಡು ಕೊಳ್ಳುವುದು ಅಗತ್ಯ. ಯಾವುದೇ ವ್ಯತ್ಯಾಸ ಒಂದು ವ್ಯವಸ್ಥೆಗೆ ಹೇಗೆ ಒಳಪಟ್ಟಿದೆ ಯೆಂಬುದನ್ನು ಗುರುತಿಸಬೇಕಾದರೆ ಹಲವಾರು ಉದಾಹರಣೆಗಳನ್ನು ಪರಿಶೀಲಿಸ ಬೇಕಾಗುತ್ತದೆ. ಅದರಂತೆ ಇಲ್ಲಿ ಕೇವಲ ಕೆಲವು ನಿದರ್ಶನಗಳನ್ನು ಗಮನಿಸಿದೆ.

ಏಕಾಕ್ಷರಿಗಳು ; ಹಾ → ಆ, ಹೂ → ಊ/ವೂ, ಹೊ͠ → ಊ͠

ಹ್ರಸ್ವ ದ್ವ್ಯಕ್ಷರಿ ರೂಪಗಳು ;
ಕಹಿ → ಕಯಿ, ಕಯ್, ಬಹು → ಬವು / ಬೋ / ಬವ್–,
ಸಿಹಿ → ಸೀ, ಸಹಿ → ಸಯಿ, ಹಗೆ → ಅಗೆ, ಹಣ → ಅಣ,
ಹಬೆ → ಅಬೆ, ಹರಿ → ಅರಿ, ಹಳೆ → ಅಳೆ, ಹಿಡಿ → ಯಿಡಿ,
ಹಿಂಡು → ಯಿಂಡು, ಹೀರೆ → ಯೀರೆ, ಹೆಣ → ಯೆಣ, ಹೊಗೆ → ವೊಗೆ,
ಹೊಳೆ → ವೊಳೆ, ಹೊರು → ವೊರು, ಹೌದು → ಅವ್ದು/ಔದು.

ಹ್ರಸ್ವ ತ್ರ್ಯಕ್ಷರಿ ರೂಪಗಳು :

ಕಹಳೆ → ಕಾಳೆ, ಪಹಣಿ → ಪಾಣಿ (ಕಲ್ಲು), ಬರ (ರೆ) ಹ → ಬರಾ (ಓದುಬರಾ), ಬಹಳ → ಬಾಳ ಬಹುದು → ಬೋದು/ಬೌದು/ಬೈದು (ಇರಬೈದು), ಬಹುಳ → ಬೌಳ, ಮರ (ರೆ) ಹು → ಮರ್ವು, ಮಹಡಿ → ಮಾಡಿ, ಮಹಿಮೆ → ಮೈಮೆ, ಮಹಿಳೆ → ಮಯಿಳೆ → ಮೈಳೆ, ಸಹಜ → ಸಾಜ, ಹರಹು → ಹರವು → ಅರವು, ಹಲವು → ಅಲವು / ಅಲ್ವು, ಹರದ → ಅರದ, ಹುಡುಗ → ವುಡ್ಗ, ಹುಡುಗಿ → ವುಡ್ಗಿ, ಹೆಸರು → ಯೆಸ್ರು, ಹುಣಸೆ → ವುಣ್ಸೆ

ಎರಡಕ್ಷರದ ದೀರ್ಘಸ್ವರಯುಕ್ತ ರೂಪಗಳು :

ಗೇಹ, ದಾಹ → ದಾವ, ದೇಹ, ಸೇಹ, ಬಾಹ್ಯ, ಮೋಹ, ಸ್ನೇಹ, ಹಾಗೆ → ಆಗೆ, ಹಾರ → ಆರ, ಹೇಗೆ → ಯೇಗೆ, ಹೇನು → ಯೇನು, ಹೇಲು → ಯೇಲು, ಹೇಮ → ಯೇಮ.

ಎರಡಕ್ಷರದ ಆದೀರ್ಘ ಸಂಯುಕ್ತಾಕ್ಷರಗಳು :

ಗ್ರಹ→ಗರ, ಬ್ರಹ್ಮ→ಬೊಮ್ಮ/ಬಮ್ಮ, ಹರ್ಷ→ಅಚ್ಚ, ಚಿಹ್ನೆ→ಚಿನ್ನೆ, ಹೆಣ್ಣು→ಯೆಣ್ಣು, ಹದ್ದು→ಅದ್ದು, ಹೈದ→ಅಯ್ದು/ಐದ

ಮೂರಕ್ಷರದ ದೀರ್ಘಸ್ವರಯುಕ್ತ ರೂಪಗಳು :

ಆಹಾರ, ಕಾಯಿಲೆ → ಕಾಯಿಲೆ → ಕಾಯ್ಲೆ, ನೇಹಿಗ, ಬ್ರಾಹ್ಮಣ → ಬ್ರಾಮ್ಣ, ಮುಹೂರ್ತ → ಮೂರ್ತ, ವರಾಹ → ವರಾ (=4 ರೂಪಾಯಿ), ವಿಹಾರ, ಸಹಾಯ/ಸಾಹಯ್ಯ, ಸ್ನೆಹೀತ → ಸ್ನೇಯ್ತ, ಸಾಹಸ → ಸಾಸ, ಸಾಹಿತ್ಯ → ಸಾಯಿತ್ಯ, ಹಾದರ → ಆದ್ರ, ಹಾರುವ → ಆರ್ವ ಹಾಯಾಗಿ → ಆಯಾಗಿ, ಹೆಂಡತಿ → ಹೆಂಡ್ತಿ → ಹೆಣ್ತಿ → ಯೆಣ್ತಿ.

ಅನುನಾಸಿಕ ಯುಕ್ತ ಮೂರಕ್ಷರದ ರೂಪಗಳು :

ಸಂಹಾರ→ಸಮ್ಮಾರ, ಸಂಹಿತೆ→ಸಮ್ಮಿತೆ, ಸಿಂಹ→ಸಿಮ್ಮ(ನರಸಿಮ್ಮ)–ಸುಮ್ಮ.

ಬಹ್ವಕ್ಷರೀ ರೂಪಗಳು :

ಕಳುಹಿಸು → ಕಳ್ಸು, ಕುತೂಹಲ, ಗ್ರಹಚಾರ → ಗಾಚಾರ / ಗಾಸಾರ, ಗೃಹಸ್ಥ → ಗ್ರಾಸ್ತ, ತಿಳಿಹಿಸು → ತಿಳ್ಸು, ಫಲಾಹರ → ಫಲಾ (ಳಾ) ರ, ಬಹುಮಾನ → ಬೌ (ವು) ಮಾನ, ಬ್ರಾಹ್ಮಣರು → ಬ್ರಾಂಬ್ರು, ಮಹಾಮನೆ → ಮಾಮನೆ, ಮಹಾಬಲ → ಮಾಬಲ, ಮಹಾರಾಯ → ಮಾರಾಯ, ಮಹಾಲಕ್ಷ್ಮಿ → ಮಾಲಕ್ಷ್ಮಿ / ಮಾಲಕುಮಿ, ಮಹಾಸತಿ → ಮಾಸತಿ → ಮಾಸ್ತಿ, ಸಹ

ಧರ್ಮಿಣಿ → ಸಧರ್ಮಿಣಿ, ಸಹವಾಸ → ಸಾವಾಸ, ಸಹೋಧರ → ಸೋದರ (ಮಕ್ಕಳ ಭಾಷೆಯಲ್ಲೂ ; ಮಹಾವೀರ → ಮಾಮಿ).

2.03 ಈ ಎಲ್ಲ ಬಗೆಯ ಉದಾಹರಣೆಗಳಿಂದ ಸ್ಪಷ್ಟವಾಗುವ ಸಂಗತಿಗಳನ್ನು ಧ್ವನಿ ನಿಯಮಕ್ಕೆ ಅಳವಡಿಸಿ ಹೀಗೆ ಹೇಳಬಹುದು : ಒಂದು, ಎರಡು, ಮೂರು ಮತ್ತು ಅನೇಕಾಕ್ಷರ ಶಬ್ದಗಳಲ್ಲಿ ಹಕಾರಲೋಪ ಎಲ್ಲೆಡೆಯಲ್ಲೂ ಕಂಡುಬರುತ್ತದೆ. ಏಕಾಕ್ಷರಿ ದ್ವಕ್ಷರಿ ಮತ್ತು ತ್ರ್ಯಕ್ಷರಿಗಳಲ್ಲಿ ಶಬ್ದಾದಿಯಲ್ಲಿ ವ್ಯತ್ಯಾಸ ಸಾರ್ವತ್ರಿಕ. ಶಬ್ದದ ನಡುವೆ ದೀರ್ಘ ಸ್ವರಯುಕ್ತವಾಗಿದ್ದಾಗ (ಆಹಾರ, ವಿಹಾರ) ಹಕಾರಲೋಪ ಅಪರೂಪ ; ದಾಹ, ಮುಹೂರ್ತ, ವರಾಹ, ಸಾಹಸ → ದಾವ, ಮೂರ್ತ, ವರಾ, ಸಾಸ – ಇವುಗಳಲ್ಲಿ ಕೆಲವು ಸಾದೃಶ್ಯ ವಿಧಾನದ ಫಲವಾಗಿ ಏರ್ಪಟ್ಟ ರೂಪಗಳಿರ ಬಹುದು. ಪೂರ್ತ (← ಪೂರ್ತಿ), (ಓದು) ಬರಾ, ಸಾವಾಸ ಎಂಬ ರೂಪಗಳ ಸಾಮ್ಯದಿಂದ ಮೂರ್ತ, ವರಾ, ಸಾಸ ಎಂಬ ರೂಪಗಳು ಸಿದ್ಧಿಸಿರಬಹುದು ; ದಾಹ → ದಾವ ಎಂಬುದು ತೆಲುಗು ಭಾಷೆಯಿಂದ ಕನ್ನಡಕ್ಕೆ ಬಂದ ಸ್ವೀಕರಣರೂಪ ವಿರಬಹುದು. ಹೀಗಿದ್ದಲ್ಲಿ ದೀರ್ಘಸ್ವರಯುಕ್ತ ಶಬ್ದಗಳ ನಡುವೆ ಹಕಾರ ಲೋಪ ವಾಗುವುದಿಲ್ಲವೆನ್ನಬಹುದು. ಶಬ್ದದ ನಡುವಿನ ಹಕಾರ ಲೋಪವಾದಾಗ ಅದರ ಲೋಪ ಪರಿಹಾರ ರೂಪವಾಗಿ ಶಬ್ದದ ಹ್ರಸ್ವ ಸ್ವರವೊಂದು ದೀರ್ಘವಾಗುತ್ತದೆ, ದೀರ್ಘ ಸ್ವರವಿದ್ದರೆ ಏನೂ ವ್ಯತ್ಯಾಸವಾಗುವುದಿಲ್ಲ. ಸ$_1$ + ಸ$_2$ ಸೇರಿ ಸಂಧ್ಯಕ್ಷರ ವಾಗುವುದೂ ಉಂಟು.

2.04 ದೇಶ್ಯ ಶಬ್ದಗಳಲ್ಲಿ ಅನುಸ್ವಾರಾನಂತರ (ಅನುನಾಸಿಕಾನಂತರ) ಹಕಾರ ಬರುವುದಿಲ್ಲ. ಈ ಪ್ರಬಲ ಕಾರಣದಿಂದ ಕಂಪು ಗುಣ್ಪು ತಂಪು ಪಂಪ ಪೆಂಪು ಬಿಣ್ಪು ಸೊಂಪು ಮುಂತಾದ ರೂಪಗಳಲ್ಲಿನ –ಪ್– → –ಹ್– ಆಗಲಿಲ್ಲ. ಇಜುಂಪೆ, ನೋಂಪಿ ಎಂಬೆರಡು ರೂಪಗಳು ಇರುಹೆ/ಇರುವೆ, ನೋಹಿ ಎಂದು ಆದಾಗಲೂ ನಿರನುನಾಸಿಕಗಳಾಗಿ ವ್ಯತ್ಯಾಸ ಮಾಡಿಕೊಂಡಿವೆ. ಪಂಪ ಎಂಬ ರೂಪ ಕೂಡ ಹಂಪ ಎಂದಾಯಿತೇ ಹೊರತು ಹಂಹ ಎಂದು ಆಗಲಿಲ್ಲವೆಂಬುದನ್ನು ಗಮನಿಸಬೇಕು. ಅನ್ಯ ದೇಶ್ಯ ಶಬ್ದಗಳಲ್ಲಿ ಅನುನಾಸಿಕ ಧ್ವನಿಯಾದ ಮೇಲೂ –ಹ್– ಬರುತ್ತದೆ ; ಸಂಹಾರ, ಸಿಂಹ.

ಬಹ್ವಕ್ಷರಗಳಲ್ಲಿ –ಹ್– ಲೋಪವಾದಾಗ ಅದಕ್ಕೆ ಪರಿಹಾರ ದೀರ್ಘಸ್ವರ ಬರಬೇಕೆಂಬ ನಿರ್ಬಂಧವಿಲ್ಲ, ಪರಿಹಾರ ದೀರ್ಘ ಐಚ್ಛಿಕ ; ಅ. ಕಳುಹಿಸು, ತಿಳುಹಿಸು ಸಹಧರ್ಮಿಣಿ→ಕಳ್ಸು, ತಿಳ್ಸು, ಸಧರ್ಮಿಣಿ ; ಆ. ಗ್ರಹಚಾರ, ಗೃಹಸ್ಥ, ಸಹವಾಸ→ಗ್ರಾಸಾ(ಚಾ)ರ, ಗ್ರಾಸ್ತ, ಸವಾಸ. ದೀರ್ಘ ಸ್ವರಯುಕ್ತಗಳು ತಮ್ಮ ದೀರ್ಘತ್ವವನ್ನು ಉಳಿಸಿಕೊಳ್ಳುತ್ತವೆ ; ಸಹೋದರ, ಬ್ರಾಹ್ಮಣರು, ಮಹಾಬಲ→

ಸೋದರ, ಬ್ರಾಂಬ್ರು, ಮಾಬಲ. ಮಹತ್ – /ಮಹಾ – ಎಂಬ ಆಕೃತಿಗಳಿಗೆ ಹಕಾರ ಲೋಪವಾದಾಗ ಮಾ – ಎಂಬ ಆದಿ ಪ್ರಕೃತಿ ರೂಪ ಏರ್ಪಡುತ್ತದೆ; ಮಹಾರಾಜ, – ರಾಯ, -- ಸತಿ→ಮಾರಾಜ, ಮಾರಾಯ, ಮಾಸತಿ (→ಮಾಸ್ತಿ).

2.05 ಈ ಪರಿವರ್ತನ ನಿಯಮಗಳಿಗೆ ಕೆಲವು ಅಪವಾದಗಳಿವೆ : ದ್ವ್ಯಕ್ಷರಿಗಳಲ್ಲಿ ; ಇಹ, ಬಹ್ವಕ್ಷರಿಗಳಲ್ಲಿ ; ಕುತೂಹಲ, ನಿಯಮದಂತೆ ಸಹಕಾರ→ಸಾಕಾರ ಎಂದಾಗಬೇಕು. ಆದರೆ ಸಾಕಾರ ಎಂಬ ಇನ್ನೊಂದು ರೂಪ ಮೊದಲಿಂದ ಭಾಷೆಯಲ್ಲಿ ಬಳಕೆಯಲ್ಲಿದೆ – ಸಾಕಾರವಾಗಿ, ಸಾಕಾರಗೊಂಡು. ಆದ್ದರಿಂದ ಸಹಕಾರ ಅಬಾಧಿತವಾಗಿರಬಹುದು. ಇಹ ಎಂಬ ರೂಪ ಹಕಾರ ಲೋಪ ಮಾಡಿಕೊಂಡರೆ 'ಈ' ಎಂದಾಗಬೇಕಾಗುತ್ತದೆ. ಆದರೆ ಕನ್ನಡ ಭಾಷೆಯಲ್ಲಿ 'ಈ' ಎಂಬ ನಿರ್ದೇಶಕ ಸರ್ವನಾಮ ಮೊದಲಿಂದ ಪ್ರಯೋಗದಲ್ಲಿದೆ. ಹೀಗೆ ಅಪವಾದಗಳಿಗೆ ಬೇರೆ ಕಾರಣಗಳಿರುವುದರಿಂದ ಧ್ವನಿ ನಿಯಮದ ಕ್ರಮಪ್ರಾಪ್ತ ವ್ಯತ್ಯಾಸ ವಿಧಾನವನ್ನು ಒಪ್ಪಲು ಸಾಧಕಗಳಿವೆ.

2.06 ಕಾಕಲ್ಯಘರ್ಷಧ್ವನಿ ಲೋಪವಾಗುವ ಪ್ರಕ್ರಿಯೆ ಕನ್ನಡ ಭಾಷೆಯಲ್ಲಿ ಯಾವಾಗ ಪ್ರಾರಂಭವಾಯಿತೆಂಬುದನ್ನು ಚಾರಿತ್ರಿಕವಾಗಿ ಗುರುತಿಸಲು ಆಧಾರಗಳಿವೆ. ಕನ್ನಡ ಭಾಷೆಗೆ ಕಾಕಲ್ಯ ಘರ್ಷಧ್ವನಿ ಹೊರಗಿನಿಂದ ಪ್ರವೇಶಿಸಿತು. ಮೊದಲು ಭಾಷಾ ಸ್ವೀಕರಣ ರೂಪಗಳಲ್ಲಷ್ಟೇ ಕಾಣಿಸಿಕೊಂಡಿತು. ಅನಂತರ ದೇಶ್ಯ ಶಬ್ದಗಳಲ್ಲಿ ಅಘೋಷ ಓಷ್ಠ್ಯಸ್ಪರ್ಶಧ್ವನಿ ಪರಿವರ್ತಿತವಾದ ಫಲವಾಗಿ ಅದರ ಸ್ಥಾನದಲ್ಲಿ ಕಾಕಲ್ಯ ಘರ್ಷ ಕಾಣಿಸಿಕೊಂಡಿತು. ದೇಶ್ಯ ಶಬ್ದಗಳಲ್ಲಿ ಕಾಕಲ್ಯ ಘರ್ಷಧ್ವನಿಯ ಅವತಾರ ಹಾಗೂ ಅದೃಶ್ಯ ತಡವಾಗಿ ನಡೆದಿದೆ :

ಅ) ಅಹಿತ, ಆಹವ, ಬಹು, ಭಟಹರಪ್ಪೋರ್, ಮಹಾಪಾತಕ – ಎಂಬ ರೂಪಗಳು ಕನ್ನಡದ ಪ್ರಾಚೀನ ಶಾಸನಗಳಲ್ಲೇ ಸಿಗುತ್ತವೆ. ಶ್ರೀವಿಜಯ, ಪಂಪ, ರನ್ನ ಪೊನ್ನರ ಕಾಲಕ್ಕೆ ಹಕಾರಯುಕ್ತ ಭಾಷಾ ಸ್ವೀಕರಣ ರೂಪಗಳು ನೂರಾರು ಸಿಗುತ್ತವೆ.

ಆ) ಹಕಾರ ಮರೆಯಾದ ಕೆಲವು ರೂಪಗಳು ಕೂಡ ಹತ್ತನೆಯ ಶತಮಾನದ ಕೃತಿಗಳಲ್ಲಿ ಕಾಣುತ್ತವೆ.

i) ಅಂಚೆ←ಹಂಸೆ←ಸಂ. ಹಂಸ
ಅನುಪಲಬ್ಧ ಶೂದ್ರಕದಲ್ಲೂ (ಕಾವ್ಯಸಾರ 1044)
ಪಂಪ ಭಾರತದಲ್ಲೂ (7–69) ಕಾವ್ಯಾವಲೋಕನದಲ್ಲೂ (18)
ಇದರ ಪ್ರಯೋಗಗಳಿವೆ.

ii) ಅಣುಮ/ಅಣುವ/ಅಣುಮಂತ←ಸಂ. ಹನುಮಾನ್.
ಅಣಿ ಚೆಲ್ವನಣುಮ ಪರಾಕ್ರಮನ್ (ಎಪಿಗ್ರಾಫಿಯಾ ಕರ್ನಾಟಕಾ ×, ಶ್ರೀನಿವಾಸಪುರ 6–4, 780)
ಕಂಡನಣುವನಾ ರಾಘವನಂ (ಕವಿರಾಜಮಾರ್ಗ 2–36)
ಕಲಿಯುಗದಣುವ (ಎಕ, IX, ಬೆಂಗಳೂರು 79_3, 870)
ಪಂಪ ಭಾರತದಲ್ಲೂ (8_33 ವ) ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲೂ (10–146) ಇದರ ಪ್ರಯೋಗವಿದೆ.

iii) ಆರ←ಸಂ. ಹಾರ. ಪಂಪನಲ್ಲೇ (941) ಇದರ ಪ್ರಯೋಗಗಳಿವೆ.
ಆರಮಿಲ್ಲದ ಕುಚಮಂಡಳಂ...ಒಪ್ಪಿದುದು (3–48)
ತುಂಗಸ್ತನ ದ್ವಂದ್ವದೊಳ್ ಪೊಳೆಯುತ್ತಾರದವೊಲ್ (12_40)
ಪಂಪಭಾರತ (2-16) ಪೊನ್ನನ (940) ಶಾಂತಿಪುರಾಣ (10-58 ವ) ನೇಮಿಚಂದ್ರನ (1170) ಅರ್ಧನೇಮಿ ಪುರಾಣ (1–102) ಶಾಸನ (ಕಇಆ 7–2–48; 1058)—ಹೀಗೆ ಹಲವು ಪ್ರಯೋಗಗಳಿವೆ.

iv) ಎರ್ದೆ ← ಸಂ. ಹೃದಯ.

ಹಕಾರ ಲೋಪಿಸಿಕೊಂಡ ಪ್ರಾಚೀನ ಪ್ರಯೋಗಗಳಲ್ಲಿ ಒಂದಾದ ಎರ್ದೆ ಶಬ್ದ ಸಂಸ್ಕೃತದ ಹೃದಯ ಶಬ್ದದ ತದ್ಭವ. (ವಿವರಗಳಿಗೆ ನೋಡಿ: ಹಂಪನಾ, ಎರ್ದೆಶಬ್ದ ಜಿಜ್ಞಾಸೆ, ಕ.ಸಾ.ಪ.ಪ.) (ಹೃದಯ →) ಎರ್ದೆ (→ ಎದೆ) ಶಬ್ದ ದೇಶ್ಯ ಶಬ್ದಗಳಲ್ಲಿ ಎಷ್ಟರಮಟ್ಟಿಗೆ ಖಚಿತವಾಗಿ ಹೋಯಿತೆಂದರೆ, ಕೆಲವರು ಇದನ್ನು ದೇಶ್ಯವೆಂದೇ ಭ್ರಮಿಸಿದರು; ಕಟ್ಟಿ→ ಕರ್ತೆ→ಕತ್ತೆ ರೂಪ ವ್ಯತ್ಯಾಸದ ಸಾಮ್ಯದಮೇಲೆ ಎರ್ದೆ → ಎದೆ (ಎದ್ದೆ ಎಂದಾಗಲಿಲ್ಲ) ವ್ಯತ್ಯಾಸವನ್ನು ನೋಡಿ, ಎರ್ದೆ ಶಬ್ದಕ್ಕೆ *ಎಟ್ಟಿ ಎಂಬುದು ಮೂಲವಿರಬೇಕೆಂದು ಭಾವಿಸಿದರು. ಹಾಗೆ ಕಲ್ಪಿಸಿಕೊಂಡ ಎರಡು ಪ್ರಯೋಗಗಳೂ ಇವೆ. ಎಟ್ಟಿ ಎಂಬುದು ಪಶ್ಚಗಾಮಿ ರಚನೆ. ಇಂಥ ಪಶ್ಚಗಾಮಿ ರಚನೆ ಸಾಮಾನ್ಯವಾಗಿ ಎಲ್ಲ ಭಾಷೆಯಲ್ಲೂ ನಡೆಯುವ ಒಂದು ಕ್ರಿಯೆ.

iv ಅ) ಏರಣಿಗ←ಸಂ. ಹೈರಣ್ಯಕ→ಪಾಲಿ ಹೇರಣಿಕ (=ಅಕ್ಕಸಾಲೆ) ಇದಕ್ಕೆ ವಡ್ಡಾರಾಧನೆ, ಅಜಿತ ಪುರಾಣ ಮೊದಲಾದ ಕೃತಿಗಳಲ್ಲಿ ಪ್ರಯೋಗಗಳಿವೆ.

v) ಮೈಂದ (ವಾಟಿ) ← ಸಂ. ಮಹೇಂದ್ರ.
ಇದರ ಹಕಾರ ಲೋಪಿಸಿಕೊಂಡ ರೂಪದ ಪ್ರಯೋಗ ಪಂಪನಲ್ಲೇ ಇದೆ. ಪಂಪಭಾರತ 5 – 6 ವ

vi) ಮೈಮೆ ← ಸಂ. ಮಹಿಮೆ : ಪಂಪಭಾರತ ೬ – 67

vii) ಸಾಜ → ಸಂ. ಸಹಜ : ಪಂಪನಲ್ಲಿ ಪ್ರಯೋಗವಿದೆ :

viii) ಮಾಸಾದಿ ← ಮಹಾಸಾದಿ : ಪಂಪಭಾರತ 8 – 54 ವ

ix) ಸಿಂಗ್ ← ಸಿಂಹ ; ನರಸಿಂಹ → ನರಸಿಂಗ : ಪಂಪಭಾರತ ; 1 – 23
ನರಗ : ಪಂಪಭಾರತ ; 1 – 35, 37

ಭದ್ರದೇವ → ಬದ್ದೆಗ, ಅರಿಕೇಸರಿ → ಅರಿಗ ಎಂಬ ರೂಪ ಸಾಮ್ಯದ ಪರಿಣಾಮ ವಿರಬಹುದು ನರಸಿಂಹ → ನರಗ ಎಂದಾಗಿದೆ,

2.07 ಮೇಲಿನ ನಿದರ್ಶನಗಳ ಆಧಾರದಿಂದ ಪಂಪನ ಕಾಲಕ್ಕೇ, ಭಾಷಾ ಸ್ವೀಕರಣ ರೂಪಗಳಲ್ಲಿ ಕಾಕಲ್ಯ ಘರ್ಷಧ್ವನಿ ಶಬ್ದಾದಿಯಲ್ಲೂ (ಹೃದಯ → ಎರ್ದೆ. ಹಾರ → ಆರ) ಶಬ್ದದ ನಡುವೆಯೂ (ಸಹಜ → ಸಾಜ, ಮಹಿಮೆ → ಮೈಮೆ) ಲೋಪವಾಗತೊಡಗಿತ್ತೆಂಬ ಸಂಗತಿ ಸ್ಪಷ್ಟವಾಗುತ್ತದೆ. ಸುಮಾರು ಎಂಟನೆಯ ಶತಮಾನದ ವೇಳೆಗೆ ಈ ಲೋಪ ಪ್ರವೃತ್ತಿ ಪ್ರಾರಂಭವಾಗಿದೆ.

ನಿಯಮಗಳು ಮತ್ತು ಸಾರಾಂಶ :

1 ಎರಡು ಹಕಾರಗಳಿವೆ ; ಅ. ದೇಶ್ಯ ಶಬ್ದಗಳಲ್ಲಿ ; ಇದು ಮೂಲ ದ್ರಾವಿಡ *ಪ್ → ಹ್ ಆಗಿರುವುದು. ಈಪ್ (ಶಬ್ದಾದಿ ಮತ್ತು ಶಬ್ದದ ನಡುವೆ) ಎರಡೂ ಕಡೆ ಹ್ ಆಗಿದೆ. ಇದರ ವಿವರ ಇಲ್ಲಿ ಅನಗತ್ಯವಾದರೂ ಹೆಚ್ಚಿನ ಸಂಗತಿಗಳಿಗೆ, ಪಕಾರದ ಚರಿತ್ರೆಗೆ ನೋಡಿ ; ಹಂಪನಾ, ದ್ರಾವಿಡ ಭಾಷಾ ವಿಜ್ಞಾನ . 1966

ಆ. ಅನ್ಯದೇಶ್ಯಗಳಲ್ಲಿ : ಇದು ಎರಡು ರೀತಿಯಲ್ಲಿ ವಿವರಣೆ ಬಯಸುತ್ತದೆ ;

i) ತತ್ಸಮಗಳಲ್ಲಿ — ಮೂಲದಿಂದಲೇ ಬಂದ ಹ್ ಇರುವ ರೂಪಗಳು

ii) ತದ್ಭವಗಳಲ್ಲಿ — ಮೂಲದ ಪ್ ಧ್ವನಿಗೆ ಬದಲಾಗಿ ಬಂದ, ಅಂದರೆ ಇಲ್ಲಿನ ಪ್ರಕಾರ ಹಕಾರದ ಸ್ಸ್ಯಾಮದಿಂದ ಘಟಿಸಿದ, ಹಕಾರ

2 ಮೂಲದ್ರಾವಿಡದಲ್ಲಿ *ಹ್ ಇರಲಿಲ್ಲವಾದರೂ ಕನ್ನಡ ಭಾಷೆಯ ಆರಂಭಕಾಲಕ್ಕೆ ಈ ಧ್ವನಿ ಕಾಣಿಸಿಕೊಂಡಿದೆ. ಇದು ಸಂಸ್ಕೃತದಿಂದ ಕನ್ನಡಕ್ಕೆ ಬಂದ ಸ್ವೀಕರಣ.

3 ಹ್ರಸ್ವರೂಪಗಳಲ್ಲಿ ಕಾಣಿಸುವಷ್ಟು ವ್ಯಾಪಕ ಲೋಪಗುಣ ದೀರ್ಘಾಕ್ಷರ ರೂಪಗಳಲ್ಲಿ ಕಾಣುವುದಿಲ್ಲ.

4 ಶಿಷ್ಟ ಮತ್ತು ಅಶಿಷ್ಟ ವ್ಯತ್ಯಾಸಗಳನ್ನು ಕನ್ನಡ ಭಾಷೆಯಲ್ಲಿ ಗುರುತಿಸುವಲ್ಲಿ ಈ ಹಕಾರ ಒಂದು ಸಾಮಾಜಿಕ ಸೂಚಿಯಾಗಿ, ಸಾಧನವಾಗಿ ಪರಿಣಮಿಸಿದೆ.

5 ಶಬ್ದಾದಿಯಲ್ಲಿ ಇದರ ಲೋಪದ ಹರಹು ಹೆಚ್ಚು, ಹ್ – → ϕ – ; ಶಬ್ದದ ನಡುವೆಯೂ ಲೋಪವುಂಟು, – ಹ್ – → – ϕ –.

6 ಶಬ್ದದ ನಡುವಣ (ವ$_2$) ಹಕಾರ ಲೋಪದ ಪರಿಣಾಮವಾಗಿ ಶಬ್ದದ ಮೊದಲಿನ ಹ್ರಸ್ವಸ್ವರ (ಸ$_1$) ದೀರ್ಘವಾಗುವುದುಂಟು, ಇದನ್ನು ಪರಿಹಾರ ದೀರ್ಘವೆನ್ನಬಹುದು. ಸ$_1$ ದೀರ್ಘವಾಗದಿರುವುದೂ ಉಂಟು. ವ$_3$ ರ ಸ್ಥಾನದಲ್ಲಿ ಹಕಾರವಿದ್ದು ಲೋಪವಾದಾಗ ವ$_2$ ರ ಸ್ಥಾನದಲ್ಲಿನ ಅಲ್ಪಪ್ರಾಣ ವರ್ಣ ಸಜಾತೀಯ (ಅದೇ ವರ್ಗದ) ಮಹಾಪ್ರಾಣವಾಗುವುದೂ ಉಂಟು : ಅಂಥ, ಇಂಥ, ಎಂಥ.

7 ಛಂದಸ್ಸಿನ ಪರಿಭಾಷೆಯಲ್ಲಿ ಇದನ್ನು ಹೇಳುವುದಾದರೆ ಮೂರು ಲಘು ಅಕ್ಷರಗಳು ಬರುವ (◡◡◡) ಶಬ್ದಗಳಲ್ಲಿ ಶಬ್ದಾದಿಗಿಂತ ಶಬ್ದದ ನಡುವೆಯಿರುವ –ಹ್–ಲೋಪವಾಗುವುದು ಅಧಿಕವಾಗಿ ಕಾಣುತ್ತದೆ; ಆದರೆ ಆಗಲೂ ಮಾತ್ರೆಯ ಸಂಖ್ಯೆಯ ದೃಷ್ಟಿಯಿಂದ ಲೋಪವಿರುವುದಿಲ್ಲ, ಮೂರು ಮಾತ್ರೆ ಉಳಿದೇ ಇರುತ್ತದೆ, ಮತ್ತು ◡◡◡ ಬದಲು – ◡ ಎಂಬ ವ್ಯವಸ್ಥೆ ಏರ್ಪಡುತ್ತದೆ.

8 ವರ್ಣಗಳ ದೃಷ್ಟಿಯಿಂದ (ವ$_1$) ಸ̆$_1$ ವ$_2$ ಸ$_2$ ವ$_3$ ಸ$_3$ ಎಂಬ ರಚನೆಯಲ್ಲಿ ವ$_2$ 'ಹ್' ಆಗಿದ್ದಾಗ ಅದು (ವ$_2$) ಹಾಗೂ ಅದರೊತ್ತಿನ ಸ$_2$ ಲೋಪವಾಗುತ್ತವೆ, ಮತ್ತು ಸ$_1$ ಹ್ರಸ್ವವಾಗಿದ್ದುದು ದೀರ್ಘವಾಗುತ್ತದೆ ; ವ$_1$ ಸ̆$_1$ ವ$_2$ ಸ̆$_2$ ವ$_3$ ಸ$_3$ → ವ$_1$ ಸ̄$_1$ ವ$_2$ ಸ$_2$ (←ವ$_3$ ಸ$_3$).

9 ದೇಶ್ಯ ಶಬ್ದಗಳಲ್ಲಿ (ವ$_1$) ಸ$_1$ ವ$_2$ ಸ$_2$ ಮಾದರಿಯಲ್ಲಿ ವ$_1$, ವ$_2$, ವ$_3$ ಇವುಗಳ ಸ್ಥಾನಗಳಲ್ಲಿ ಹಕಾರ ಬರಬಲ್ಲುದು, ಲೋಪವಾಗಬಲ್ಲುದು. ಆದರೆ ಅನುನಾಸಿಕ ವ್ಯಂಜನ ವರ್ಣನಾನಂತರ ಹಕಾರ ಬರುವುದಿಲ್ಲ. ಸ್ವೀಕರಣ ಶಬ್ದಗಳಲ್ಲಿ ಅನುನಾಸಿಕದ ಜತೆಯಲ್ಲೂ ಹಕಾರ ಬರುತ್ತದೆ, ಮತ್ತು ಕನ್ನಡದಲ್ಲಿ

ಅದೂ ಲೋಪವಾಗಬಲ್ಲುದು ; ಸಿಂಹ → ಸಿಮ್ಮ / ಸಿಂಗ – ವಿಜಾತೀಯ ಸಂಯುಕ್ತಾಕ್ಷರ ಸಜಾತೀಯವಾಗುತ್ತದೆ, ಆಗದೆಯೂ ಇರುತ್ತದೆ.

2.08 ಶಬ್ದದ ಆರಂಭದಲ್ಲಿ ಹಕಾರ ಲೋಪವಾಗುವುದನ್ನು ಕವಿಗಳು ಮಾನ್ಯಮಾಡಿರುವುದಕ್ಕೆ ಉದಾಹರಣೆಗಳನ್ನು ನೋಡಿದೆವು 2.06 ರಲ್ಲಿ. ಈ ಬಗೆಯ ಲಬ್ಧ ಕಾವ್ಯಪ್ರಯೋಗಗಳು ಹಕಾರ ಮರೆಯಾದ ರೂಪಗಳಿಗೆ ಕವಿಮನ್ನಣೆಯನ್ನು ಸಾರುವಂತೆ, ಸಿಗುವ ವ್ಯಾಕರಣ–ನಿಘಂಟುಗಳು ಶಾಸ್ತ್ರಕಾರರ ದೃಷ್ಟಿಯನ್ನು ತಿಳಿಸುತ್ತವೆ. ಕರ್ನಾಟಕ ಶಬ್ದಸಾರದಲ್ಲಿ (ಸು. 1400) ಆರಮೆಂದು ಹಾರಂ (20–410) ಎಂದೂ, ಶಬ್ದಾನುಶಾಸನದಲ್ಲಿ (1604) ಹಾರ-ಆರ ಎಂದೂ (160ರ ಪ್ರಯೋಗ), ಕರ್ನಾಟಕ ನಿಘಂಟಿನಲ್ಲಿ (ಸು. 1400) ಹಾರಮಾರಮೆನಲ್ಕೆ (72) ಎಂದೂ ಇವೆ; ಇವೆಲ್ಲ ಶಾಸ್ತ್ರಕಾರರ ಸಮ್ಮತಿಗೆ ಸಾಕ್ಷಿಗಳು. ವಿಪರ್ಯಾಸದ ಸಂಗತಿಯೆಂದರೆ, ಹಕಾರ ಲೋಪಪ್ರವೃತ್ತಿ ವಿದ್ಯಾವಂತರ ಶಿಷ್ಟವರ್ಗದಲ್ಲೇ ಮೊದಲಿಟ್ಟಿರುವುದು ಮತ್ತು ಈಗ ಮಾತ್ರ ಅದು ಶಿಷ್ಟ–ಶಿಷ್ಟೇತರರ ಭಾಷೆಗೆ ವಿಪರೀತ ದಿಕ್ಕಿನಲ್ಲಿ ಮಾನವಾಗಿರುವುದು.

2.09 ಕನ್ನಡ ಭಾಷೆಯ ಹಕಾರದ ಚರಿತ್ರೆಯಲ್ಲಿ ಹೇಳಲೇಬೇಕಾದ ಮತ್ತೊಂದು ಮಾತಿದೆ: ಹಕಾರವಿಲ್ಲದ ಸರಾದಿಯಾದ ಕೇವಲ ಕೆಲವು ಶಬ್ದಗಳ ಆದಿಯಲ್ಲಿ, ಭ್ರಾಂತಿಜನ್ಯವಾಗಿಯೊ ಏನೊ ತಿಳಿಯದು, ($ಸ_1$) ಸ್ವರಪೂರ್ವದಲ್ಲಿ ಹಕಾರ ಸೇರಿಸಿ ಉಚ್ಚರಿಸುವುದುಂಟು.

ಉದಾ : ಸಂ. ಅಗ್ನಿ→ತ್ಭ. ಅಗ್ಗಿ→ಹಗ್ಗಿ
ಅನಾಥೆ→(ಬಯಲಾಟಗಳಲ್ಲಿ) ಹನಾಥೆ
ಅಯ್ಯೋ→ಹಯ್ಯೋ

ಈ ಮೂರು ಉದಾಹರಣೆಗಳಲ್ಲಿ ಕಡೆಯ ಎರಡು ಶಬ್ದಗಳು ಶಿಷ್ಟೇತರ ಕನ್ನಡದಲ್ಲಿ ಬಳಕೆಯಾಗುತ್ತಿವೆ ; ಹಗ್ಗಿ ಎಂಬ ರೂಪ ಮಾತ್ರ ಕವಿ ಪ್ರಯೋಗಗಳನ್ನೂ ಪಡೆದಿದೆ, ರಾಘವಾಂಕನ (ಸು. 1200), ಹರಿಶ್ಚಂದ್ರ ಕಾವ್ಯದಲ್ಲೂ ಸಾಳ್ವಕವಿಯ ನೇಮಿನಾಥ ಚರಿತೆಯಲ್ಲೂ (ಸಂಪಾದಕರು, ಹಂಪನಾ, ಹಸ್ತಪ್ರತಿ) ಹಗ್ಗಿ ಬಳಕೆಯಾಗಿದೆ. ಇದು ಗ್ರಾಮ್ಯ ಭಾಷೆಯಲ್ಲೇ ಮೊದಲು ಕಾಣಿಸಿಕೊಂಡು ಅನಂತರ ವಿದ್ಯಾವಂತ ವರ್ಗಕ್ಕೆ ಹಬ್ಬಿರಬಹುದು ; ಹಾಗಿದ್ದಲ್ಲಿ ಹಳ್ಳಿಯ ಮುಕ್ಕರ ಭಾಷೆ ಬಲ್ಲಿದರಮೇಲೆ ಸಾಧಿಸಿದ ಗೆಲುವಿಗೆ ಅಗ್ನಿ→ಅಗ್ಗಿ→ಹಗ್ಗಿ ಒಂದು ಉತ್ತಮ ಉದಾಹರಣೆಯಾಗಿ ನಿಲ್ಲುತ್ತದೆ. ಇಲ್ಲಿ ಇನ್ನೊಂದು ಸ್ವಾರಸ್ಯವೆಂದರೆ ಅಗ್ಗಿಷ್ಟಿಕೆ→ಹಗ್ಗಿಷ್ಟಿಕೆ ಆಗಿಲ್ಲದಿರುವುದು.

2.10 ಹೊಸಗನ್ನಡದಲ್ಲಿ ಪ್→ಹ್- ಆಗಿದ್ದ ರೂಪಗಳಲ್ಲಿ ಹಲವು ಮತ್ತೆ ಪಕಾರಕ್ಕೇ ಹಿಂತಿರುಗಿವೆ. ಇದಕ್ಕೆ ತೆಲುಗು, ತಮಿಳು ಭಾಷೆಗಳಿಂದ ಬಂದ ಭಾಷಾ ಸ್ವೀಕರಣ ರೂಪಗಳು ಕಾರಣವಿರಬಹುದು. ಅಲ್ಲದೆ ಹಡುವಣ, ಹಂಜರದಂತಹ ರೂಪಗಳು ಹೆಚ್ಚು ಪ್ರಚಾರ ಪಡೆಯಲೂ ಇಲ್ಲ. ಪಕಾರ→ಹಕಾರವಾದ ಕೆಲವು ವಿಶಿಷ್ಟವಾದ ಉದಾಹರಣೆಗಳಿಗೆ ದುರ್ಗಸಿಂಹನ (1031) ಪಂಚತಂತ್ರದಲ್ಲಿ ಸಂಸ್ಕೃತ ಪದ್ಯಗಳಿಗೆ ಕನ್ನಡ ಟೀಕು ಬರೆಯುವಾಗ ಪ್ರಯೋಗವಾಗಿರುವ ರೂಪಗಳನ್ನು ಗಮನಿಸಬಹುದು. ಪ್ ಮತ್ತು ಹ್ ಗಳು ಹೊಸಗನ್ನಡದಲ್ಲಿ ಸಾರ್ಥಕ ವ್ಯತ್ಯಾಸ ಪಡೆದ ಧ್ವನಿಮಾಗಳಾಗಿ ಉಳಿದಿವೆ.

ಸರ್ವಜ್ಞ ಕವಿಯ ಸರ್ವಕಾಲೀನ ದೃಷ್ಟಿ

ಸಂಗಮನಾಥ ಜಿ. ಹಂಡಿ

ಅಪಾರ ಲೋಕಾನುಭವ, ಅಗಾಧ ಪಾಂಡಿತ್ಯ ಮತ್ತು ಪರಮ ಪ್ರತಿಭೆಗಳ ತ್ರಿವೇಣಿ ಸಂಗಮದ ಸಾಕಾರಮೂರ್ತಿಯಾದ ಸರ್ವಜ್ಞನು ಕೇವಲ ಮಹಾಕವಿಯಲ್ಲ; ವಿಶ್ವಕವಿಯಾಗಿದ್ದಾನೆ. ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆಯ ಪರ್ವತವೆ ಆದ ಅವನು ಸಾಮಾಜಿಕ ಮಹಾಮಹೋಪಾಧ್ಯಾಯನಾಗಿದ್ದಾನೆ. ಎಲ್ಲ ಬಲ್ಲವರಿಲ್ಲ। ಬಲ್ಲವರು ಬಹಳಿಲ್ಲ। ಬಲ್ಲವರು ಇದ್ದು ಬಲವಿಲ್ಲ ಸಾಹಿತ್ಯ। ವೆಲ್ಲರಿಗು ಇಲ್ಲ ಎಂದು ಅಪರೋಕ್ಷವಾಗಿ ತನ್ನ ನಾಡೋಜತೆಯ ಹಿರಿಮೆಯನ್ನು ಸಾರಿಕೊಂಡಿದ್ದಾನೆ. ಕಲಿತವರಿಗೆ ಬಿಳಿಬತ್ತಿಯಂತಿದ್ದರೆ ಕಲಿಯದವರಿಗೆ ಎಕ್ಕಿಲಿಬತ್ತಿ ಯಂತಿದ್ದಾನೆ. ಹೆಂಗೆಳೆಯರ ಹಿತರಕ್ಷಕನಾಗಿದ್ದಂತೆ ಗಂಡಸರ ಕಲ್ಯಾಣಕಾರಕ ನಾಗಿದ್ದಾನೆ. ಮಕ್ಕಳ ಮನಕ್ಕೆ ಹತ್ತಿರದವನಾಗಿದ್ದರೆ ಮುದುಕರ ಸ್ವಭಾವಕ್ಕೆ ಸಮೀಪವರ್ತಿಯಾಗಿದ್ದಾನೆ. ವಿನೋದ ಪ್ರಕೃತಿಯವರಿಗೆ ವಿಹಿತನಾಗಿದ್ದಂತೆ, ಗಂಭೀರ ಚಿತ್ತರಿಗೆ ಅತಿಹಿತನಾಗಿದ್ದಾನೆ. ಎಲ್ಲರಿಗೂ ಬೇಕಾದ ಕವಿ ಸರ್ವಜ್ಞನು ಎಲ್ಲ ಕಾಲಕ್ಕೂ ಎಲ್ಲರಿಗೂ ಬೇಕಾದ ಎಲ್ಲ ವಿಷಯಗಳನ್ನೂ ಬಲ್ಲವನಾಗಿ ಹಾಡಿ ಕೃತಾರ್ಥನಾಗಿದ್ದಾನೆ. ಕಾಡಿನಲ್ಲಿ ಹೊಕ್ಕ ಆಡು ಕಂಡದ್ದನ್ನೆಲ್ಲ ತಿಂದು ತೇಗುವಂತೆ ಸರ್ವಜ್ಞನು ನಾಡಿನಲ್ಲಿ ಅಲೆದಾಡಿ ಕಂಡದ್ದನ್ನೆಲ್ಲಾ ಕಂಡು ಅಂದು ಭೂಮಂಡಲ ಮುನಿದರೂ ಕಂಡಂತೆ ಸತ್ಯವನ್ನೇ ನುಡಿದು ಭೂಮಂಡಲಪ್ರಿಯನಾಗಿದ್ದಾನೆ, ಇಂದು. ಪ್ರತಿಯೊಂದು ಮತದಲ್ಲಿಯ ದೋಷಗಳನ್ನೆತ್ತಿ ಹಳಿದಿದ್ದರೂ ಆ ಮತದಲ್ಲಿಯ ಗುಣಗಳನ್ನು ಹೊಗಳಿದ್ದರಿಂದ ವಿಶ್ವಮತಪ್ರೇಮಿಯಾಗಿದ್ದಾನೆ. ಸ್ವಮತ-ಸ್ವದೇಶ -ಸ್ವಜನರೆಂಬ ಸ್ವಾರ್ಥಸಂಕುಚಿತ ಸ್ವಭಾವದ ಸೀಮೆಯಲ್ಲಿ ಸುಳಿದಾಡದೆ ಅಖಂಡ ಭೂಮಂಡಲವೇ ಒಪ್ಪಿ ಅಪ್ಪುವ ವಿಚಾರಗಳ ಪ್ರತಿಪಾದಕನಾಗಿ ಪರಾರ್ಥದ ವಿಸ್ತೃತ ವಿಶ್ವವಿಹಾರಿಯಾಗಿದ್ದಾನೆ. ಅಂತೆಯೇ ಅವನ ವಚನಗಳಲ್ಲಿ ಮತದೇಶ ಕಾಲಗಳಲ್ಲಿ ಬಂಧಿತನಾದ ವ್ಯಕ್ತಿಚಿತ್ರವನ್ನು ಕಾಣದೆ ವಿಶ್ವಮಾನವ ವ್ಯಕ್ತಿಚಿತ್ರವನ್ನು ಕಾಣುತ್ತೇವೆ. ವೇಶ್ಯೆಯಿಂದ ವೇದಾಂತಿಯವರೆಗೆ, ಮಕ್ಕಳಿಂದ ಮುದುಕರವರೆಗೆ, ಪಾಮರರಿಂದ ಪಂಡಿತರವರೆಗೆ, ಸಂಸಾರಿಗಳಿಂದ ಸನ್ಯಾಸಿಗಳವರೆಗೆ, ಓಜನಿಂದ ರಾಜನವರೆಗೆ, ಭೂಗೋಲದಿಂದ ಖಗೋಲದವರೆಗೆ, ಮೋಟೆಯಿಂದ ರಾಟೆಯವರೆಗೆ, ಊರಗುಡಿಯ ವಿದ್ಯೆಯಿಂದ ವಿಶ್ವವಿದ್ಯಾಲಯದ ವಿದ್ಯೆಯವರೆಗೆ, ಮನೆಯ ಸುಖ ಸಂಸಾರದ ಚಿತ್ರದಿಂದ ವಿಶ್ವಸಂತೋಷದ ಚಿತ್ರದವರೆಗೆ, ಆರೋಗ್ಯಶಾಸ್ತ್ರದಿಂದ

ರಸಶಾಸ್ತ್ರದವರೆಗೆ ಆತನ ಸಾಹಿತ್ಯದಲ್ಲಿ ಪ್ರಸ್ತಾಪವಿದೆ. ಅಂತೆಯೇ "ಆಡು ಮುಟ್ಟದ ಗಿಡವಿಲ್ಲ, ಸರ್ವಜ್ಞ ಹೇಳದ ವಿಷಯವಿಲ್ಲ" ಎಂಬ ಪ್ರಶಸ್ತಿಗೆ ಪಾತ್ರನಾಗಿದ್ದಾನೆ. ನಾಡಿನಲ್ಲಿ ಅಲೆದಾಡುವಾಗ ಅರುಹುತ್ತ ತಿರುಗಿದುದರಿಂದ ಸರ್ವಜ್ಞನು ಸಂಚಾರಿ ವಿಶ್ವಕೋಶವಿಹಾರಿ ವಿಶ್ವವಿದ್ಯಾಲಯನಾಗಿದ್ದಾನೆ. ಸರ್ವಸಂಗ ಪರಿತ್ಯಾಗಿಯಾದ ಸರ್ವಜ್ಞನು ನಿಜವಾಗಿಯೂ ಮಹಾಋಷಿಯಾದುದರಿಂದ ಅವನು ಮಾತನಾಡಿದುದೆಲ್ಲ ಪವಿತ್ರ ಮಂತ್ರಶಕ್ತಿಯನ್ನು ಪಡೆದು "ನಾನೃಷಿಃ ಕುರುತೇ ಕಾವ್ಯಂ" ಎಂಬ ಭಾರತೀಯ ತತ್ವಕ್ಕೆ ಪ್ರಾಣದಾನ ನೀಡಿದೆ. ರಸಿಕ ಕವಿ ಮಾತನಾಡಿದುದೆಲ್ಲ ಶಶಿಯುದಿಸಿ ಬಂದ ಆನಂದವನ್ನುಂಟುಮಾಡಿದೆಯಷ್ಟೇ ಅಲ್ಲ, "ಲಿಂಗ ಮೆಚ್ಚಿ ಅಹುದಹುದು" ಎನಿಸಿದೆ; ಮಾತು ಬಲ್ಲ ಆತನ ಮಾತು ಮಾಣಿಕದ ಬೆಲೆಯನ್ನು ಪಡೆದಿದೆ. ಶ್ರೀಸಾಮಾನ್ಯರ ಕವಿಯಾಗಿದ್ದರೂ ಅಸಾಮಾನ್ಯ ಕವಿಯಾದುದರಿಂದ ಅವನ ಸಾಹಿತ್ಯವು ಏತ ನೀರು ಸುರಿದಂತೆ ಧುಮಿಕಿಕ್ಕುತ್ತದೆ. ಇಂಥ ಕವಿಯ ಉಕ್ತಿ-ವಿಚಾರಗಳು ಯಾರಿಗೆ ತಾನೆ ಬೇಕಿಲ್ಲ ? ಸ್ವಮತ-ಸ್ವದೇಶ-ಸ್ವಕಾಲ-ಸ್ವಜನ ಬಂಧಿತನಾಗದ ಕವಿಯ ವಿಚಾರಗಳು ಸರ್ವಕಾಲೀನವಾಗಿರಲಾರವೇ ? ಕವಿ ಸರ್ವಜ್ಞನ ಹುಟ್ಟು, ಹೆಸರು, ಕಾಲ, ಮತ, ಊರು, ಸಂಸಾರಗಳ ವಿಷಯಗಳು ಯಾರ ಹಿಡಿತಕ್ಕೂ ಸಿಗದೆ ಸಂಶೋಧಕರಿಗೆ ಆಹ್ವಾನವನ್ನೊಡ್ಡಿ ನಿಂತಿರುವುದೇ ಅವನ ಸಾರ್ವಕಾಲಿಕ ವಿಚಾರಗಳ ಪ್ರತಿಪಾದನ ಶಕ್ತಿಗೆ ಸಾಕ್ಷಿಯಾಗಿ ನಿಂತಿವೆ. ಬಹುಮುಖ ಪ್ರತಿಭೆಯ ಕವಿಯ ದೃಷ್ಟಿಯು ಸ್ವಕಾಲಮುಖಿಯಾಗದೆ ಸರ್ವಕಾಲಮುಖಿಯಾಗಿರುತ್ತದೆ. ನ್ಯಾಯ ನಿಷ್ಠುರ ನಿರ್ದಾಕ್ಷಿಣ್ಯಪರ ಕವಿಯ ಸಾಹಿತ್ಯ ನಿತ್ಯಸತ್ಯವಾಗಿರುವುದು ನಿಸರ್ಗ ಧರ್ಮವಾಗಿದೆ. ಅಂಥ ಸರ್ವಕಾಲೀನದೃಷ್ಟಿಯ ಕವಿಗಳು ಸಾಹಿತ್ಯ ಶರೀರಿಗಳಾಗಿ ಸರ್ವಕಾಲದಲ್ಲಿಯೂ ಬಾಳಿ ಸರ್ವಾದರಣೀಯರಾಗುತ್ತಾರೆ. ಅಂಥವರಲ್ಲಿ ನಮ್ಮ ಸರ್ವಜ್ಞನು ಅಗ್ರಗಣ್ಯನಾಗಿದ್ದಾನೆ.

ಬಹುಶಃ ಕರ್ನಾಟಕ ದೇಶ ಸಸ್ಯಸಂಪತ್ತುಗಳ ಸಮೃದ್ಧಿಯಿಂದ ಕೂಡಿ ಬೀದಿಯಲ್ಲಿ ಬಯಲಿಗೆ ಕುಳಿತು ಮುತ್ತು ರತ್ನಗಳನ್ನು ಅಳೆದು ಮಾರಾಟ ಮಾಡುವ ಸುಭಿಕ್ಷ ಕಾಲದಲ್ಲಿ ಸರ್ವಜ್ಞ ಬದುಕಿದವ. ಬೇಕಾದಷ್ಟು ಪಾಂಡಿತ್ಯ ಪ್ರತಿಭೆಗಳಿದ್ದ ಕವಿ. ಆ ಕಾಲದ ವೈಭವಗಳನ್ನು ಬಣ್ಣಿಸಿ ತಣಿಯುವುದು ಸಾಮಾನ್ಯ ಕವಿಗಳ ದೃಷ್ಟಿಯಿಂದ ಸಾಮಾನ್ಯ ನಿಯಮವಾಗಿದ್ದರೆ ಅಸಾಮಾನ್ಯ ಕವಿಗಳಿಗೆ ಸಂಬಂಧಿಸಿ, ತನ್ನ ಕಾಲದ ಸ್ಥಿತಿ-ಗತಿಗಳನ್ನು ಮೀರಿ ಎಂದೆಂದಿಗೂ ಅನ್ವಯಿಸುವ ವಿಚಾರಗಳನ್ನು ಕುರಿತು ಚಿಂತಿಸುವುದು ಸಾಮಾನ್ಯ ನಿಯಮವಾಗಿದೆ. ಅಸಾಮಾನ್ಯ ಕವಿಯಾದ ಸರ್ವಜ್ಞನು ಅನ್ನದ ಅಭಾವವಿಲ್ಲದ ಸುಕಾಲದಲ್ಲಿ ಅನ್ನವನ್ನು ಕುರಿತು ವಿಚಾರಿಸಿದುದು ಆತನ ಸಾರ್ವಕಾಲಿಕ ದೃಷ್ಟಿಗೆ ಅವುಗಳ ಸಾಕ್ಷಿಯಾಗಿದೆ. ಇಂದು ನಾವು ಅನ್ನವಿಲ್ಲದೆ ನರಳುತ್ತಿದ್ದೇವೆ. ದುಷ್ಕಾಲದ ದವಡೆಯಲ್ಲಿ ಸಿಕ್ಕು ನುಗ್ಗಾಗುತ್ತಿದ್ದೇವೆ. ಮತ್ತೆ

ಕಿತ್ತಿ ಒಗೆದ ಮೇಟಿ, ಕಳಚಿ ಬಿಸುಟ ರೆಂಟೆ-ಕುಂಟೆಗಳನ್ನು ಶೋಧಿಸಿ ಸಂಗ್ರಹಿಸ ತೊಡಗಿದ್ದೇವೆ. ಬಹುಶಃ ಹದಿನೈದನೆಯ ಶತಮಾನದಲ್ಲಿದ್ದ ಕವಿ ಇಪ್ಪತ್ತನೆಯ ಶತಮಾನದ ಅನ್ನದ ಹಿರಿಮೆ, ಒಕ್ಕಲುತನದ ಅವಶ್ಯಕತೆಗಳನ್ನು ಕುರಿತು ವಿಚಾರಿಸಿರುವುದು ಅವನ ಸಾರ್ವಕಾಲಿಕ ದೃಷ್ಟಿಯಾಗಿದ್ದರೆ ಇಂದು ಸಮಗ್ರ ಪ್ರಪಂಚವೇ ಆಹಾರ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಗಮನಿಸಿದರೆ ಕವಿಯ ಸಾರ್ವಕಾಲಿಕ ದೃಷ್ಟಿಯೊಂದಿಗೆ ಸಾರ್ವದೇಶಿಕ ಹಾಗೂ ಸಾರ್ವಜನಿಕ ದೃಷ್ಟಿಗಳೂ ಎದ್ದು ತೋರುತ್ತವೆ. ಕವಿಯು ತನ್ನ ಕಾಲದ ಆಗಂತುಕ ವಿಚಾರಗಳನ್ನು ಮಾತ್ರ ಗಮನಿಸದೆ ನಿರಂತರವಾಗಿರುವ ಸಮಸ್ಯೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡಿದ್ದಾನೆಂಬುದು ಹೊಳೆಯುತ್ತದೆ. ಮನುಷ್ಯನಿಗೆ ಮುದ್ದೆ-ನಿದ್ದೆ-ಬುದ್ಧಿಗಳು ಮುಖ್ಯವಾದರೂ ಈ ಮೂರರಲ್ಲಿ ಮುದ್ದೆ (ಅನ್ನ) ಅತಿ ಮುಖ್ಯ. ಮುದ್ದೆ ಇಲ್ಲದಿದ್ದರೆ ನಿದ್ದೆ ಇಲ್ಲ; ನಿದ್ದೆ ತಪ್ಪಿದರೆ ಶಕ್ತಿಯಿಲ್ಲ; ಶಕ್ತಿಹೀನಂಗೆ ಜ್ಞಾನಸಂಪಾದನೆ ಅಸಾಧ್ಯ. ಅಂತೆಯೇ ಸರ್ವಜ್ಞನು, —

ಅನ್ನದೇವರ ಮುಂದೆ ಇನ್ನು ದೇವರು ಉಂಟೆ
ಅನ್ನವುಂಟಾದರುಣಉಂಟು ಜಗಕೆಲ್ಲ
ಅನ್ನವೇ ಪ್ರಾಣ ಸರ್ವಜ್ಞ

—ಎಂದು ಹೇಳಿದ್ದಾನೆ. ಜಗದ ಪ್ರಾಣಕ್ಕೆ ಪ್ರಾಣವಾದ ಅನ್ನವನ್ನು ಒದಗಿಸುವವ ಒಕ್ಕಲಿಗ. ನಿಜವಾಗಿಯೂ ಊರಿಗೆ ಒಕ್ಕಲಿಗನೇ ದೊಡ್ಡವನು. ಅಧಿಕಾರ, ಆರ್ಥಿಕಸ್ಥಿತಿ, ವೇಷ-ಭಾಷೆಗಳ ಹಿನ್ನೆಲೆಯಲ್ಲಿ ವ್ಯಕ್ತಿಯನ್ನು ಗುರುತಿಸಿ ಗೌರವಿಸದೆ ಮೂಲಭೂತ ಆಧಾರದಿಂದ ಸಂಶೋಧಿಸಿ ಸತ್ಕರಿಸಿದ್ದಾನೆ.

ಬೆಕ್ಕುಮನೆಯೊಳು ಲೇಸು । ಮುಕ್ಕು ಕಲ್ಲಿಗೆ ಲೇಸು ।
ನಕ್ಕುನಗಿಸುವ ನುಡಿಲೇಸು, ಊರಿಂಗೆ ।
ಒಕ್ಕಲಿಗ ಲೇಸು ಸರ್ವಜ್ಞ ॥

ಒಕ್ಕಲುತನ ಮಾಡುವನೆಂದು ತಿರಸ್ಕರಿಸುವ ಕಾಲ ಕಳೆದು ಆದೇಕಾರಣದಿಂದ ಪುರಸ್ಕರಿಸುವ ಇಂದಿನಕಾಲಕ್ಕೆ ಸರ್ವಜ್ಞಕವಿಯ ಈ ಮಾತು ಅದೆಷ್ಟು ಸತ್ಯ! ಈಗಿನ ಕಾಲದಲ್ಲಿ ನಮ್ಮದೇಶದ ಪ್ರಧಾನಮಂತ್ರಿಗಳಿಂದ "ಜೈಕಿಸಾನ್" ಎಂದು ಹೊಗಳಿಸಿ ಕೊಂಡ ಒಕ್ಕಲಿಗ ಸರ್ವಜ್ಞನಿಂದ ಎಂದೋ ಪ್ರಶಸ್ತಿ ಪತ್ರ ಪಡೆದಿದ್ದಾನೆ. ಆದುದರಿಂದ ಎಲ್ಲ ವಿದ್ಯೆಗಳಲ್ಲಿ ಸರ್ವಶ್ರೇಷ್ಠನಾದ ಒಕ್ಕಲಿಗನ ಮೇಟಿವಿದ್ಯೆ ಮಿಗಿಲಾಗಿದೆ—

ಕೋಟಿವಿದ್ಯೆಗಳಲ್ಲಿ ಮೇಟಿವಿದ್ಯವೇ ಮೇಲು ।
ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ ।
ದಾಟವೆ ಕೆಡುಗು ಸರ್ವಜ್ಞ ॥

— ಎಂದು ಮೇಟಿವಿದ್ಯೆಯ ಮೇಲ್ಮೆಯನ್ನು ಮನಂಬುಗುವಂತೆ ಸರ್ವಕಾಲಕ್ಕೂ ಸಂಬಂಧಿಸುವಂತೆ ಹೇಳಿದ್ದಾನೆ. ಇಂದು ನಾನಾವಿದ್ಯೆಗಳನ್ನು ಕಲಿತವರೆಲ್ಲ

ಮಣ್ಣಿನ ವಿದ್ಯೆಗೆ ಮಾರುಹೋಗಿ ಮಣ್ಣಿನ ಮಕ್ಕಳಾಗತೊಡಗಿದ್ದಾರೆ. ಒಕ್ಕಲಿಗನ ಹಿರಿಮೆಯನ್ನು ಗುರುತಿಸಿದ ಕವಿ ಸರ್ವಜ್ಞನಿಗೆ ಆತನ ಸುಖ ಸಂಸಾರದ ಬಗ್ಗೆ ಕಳಕಳಿ ಇದೆ.

ಎತ್ತುಗಳು ಎರಡಾಗಿ । ಬತ್ತದ ಹಯನಾಗಿ ।
ಪುತ್ರರಯ್ದಾಗಿ ಸತಿಯೊಬ್ಬಳಾದರೆ ।
ನಿತ್ಯದಲಿ ಸುಖವು ಸರ್ವಜ್ಞ ॥

ಇಲ್ಲಿ ಒಕ್ಕಲಿಗನ ಸುಖಸಂಸಾರದ ಚಿತ್ರದೊಂದಿಗೆ ಸರ್ವರ ಚಿತ್ರವೂ ಇದೆ. ಸರ್ವಜ್ಞಕವಿಯ ಕಾಲವು "ಅಷ್ಟಪುತ್ರ ಸೌಭಾಗ್ಯವತೀಭವ" ಎಂದು ಹರಕೆಯನ್ನು ಹೊಂದುವ ಕಾಲ. ಇಂದು ಮಿತಸಂತಾನದ ಕಾಲ. ಕವಿಯು ಆ ಕಾಲದಲ್ಲಿಯೇ ಎಂಟು ಮಕ್ಕಳ ಸಂಖ್ಯೆಯನ್ನು ಐದಕ್ಕೆ ಇಳಿಸಿದುದನ್ನು ನೋಡಿದರೆ ಕವಿಯ ದೂರ ದೃಷ್ಟಿ ತೋರದಿರದು. ಅವನು ಹೇಳಿದ ಅಂಕಿಯಲ್ಲಿ ಅಪಾರ ಅರ್ಥ ಅಡಗಿ ದಂತಿತೆ. "ಜಾತಸ್ಯ ಮರಣಂ ಧ್ರುವಂ" ಆದುದರಿಂದ ಹುಟ್ಟಿದ ತಂದೆ ಸಾಯಲೇ ಬೇಕಾದುದರಿಂದ ಈ ಐವರು ಮಕ್ಕಳು, ಸತ್ತಾಗ ಅತ್ಯವಶ್ಯವೆಂದು ತೋರುತ್ತದೆ. ಅದರಂತೆ ಹಲವು ಹೆಂಡಿರ ಗಂಡನೆಂಬ ಹಿರಿಮೆಯಿಂದ ಮುಖ ಮೇಲೆಮಾಡಿ ತಿರುಗುವ ಕಾಲದಲ್ಲಿ ಕವಿ ಬಾಳಿದ್ದರೂ ಇಂದಿನ ದ್ವಿಪತ್ನೀವಿವಾಹ ನಿರ್ಬಂಧವನ್ನು ಅಂದೇ ನಿರ್ಧರಿಸಿದ್ದು ಅವನ ಸಾರ್ವಕಾಲಿಕ ದೃಷ್ಟಿಗೆ ಸುವರ್ಣ ಸಾಕ್ಷಿಯಾಗಿದೆ. ಇಂದು ಸರಕಾರವು ಶಾಸನದಿಂದ ತರುತ್ತಿರುವುದನ್ನು ಅಂದು ಕವಿಯು 'ಸತಿ-ಯೊಬ್ಬಳಾದರೆ' ಎಂದು ಕಾಂತಾಸಮ್ಮಿತಾತ್ಮಕವಾದ ಸಾಹಿತ್ಯದಿಂದ ಬೋಧಿಸಿದ್ದಾನೆ.

ಸರ್ವಜ್ಞಕವಿಯು ಬಹುಶ್ರುತ ಜ್ಞಾನಿ. ಕೃಷಿಪ್ರಧಾನವಾಗಿ ಅಕ್ಷರಜ್ಞಾನದ ಕಡೆಗೆ ಲಕ್ಷ್ಯವಿಲ್ಲದೆ ಬಾಳುತ್ತಿರುವ ಸಮಾಜದಲ್ಲಿ ಬದುಕಿದ ಕವಿ ಅಕ್ಷರವಿದ್ಯೆಯ ಅಂತಃಸ್ಸತ್ವವನ್ನೂ ಅರಿತವನಾಗಿದ್ದಾನೆ. ಇಂದು ಕಡ್ಡಾಯ – ಒತ್ತಾಯ ಶಿಕ್ಷಣ ವೆಂದು ಶಾಸನದ ಜಾರಿಮಾಡಿ ಅಕ್ಷರಜ್ಞಾನವನ್ನು ಕಲಿಸುತ್ತಿರುವ ಕಾರ್ಯದ ಭವಿಷ್ಯ ವನ್ನು ಕವಿ ಅಂದೇ ಕಂಡಿದ್ದಾನೆ. ಇಂದಿನ ಬಾಲವಾಡಿ - ಪ್ರೌಢಶಾಲೆ - ಮಹಿಳಾ ಶಿಕ್ಷಣ–ಮೊದಲಾದವುಗಳ ಮೂಲಕ ಮಾಡುತ್ತಿರುವ ವಿದ್ಯೆಯ ಹಿರಿಮೆ ಕವಿಗೆ ಮನದಟ್ಟಾಗಿದೆ. ಅಂತೆಯೇ "ವಿದ್ಯೆವುಳ್ಳವನ ಮುಖ ಮುದ್ದು ಬರುವಂತಿಕ್ಕು ; ವಿದ್ಯೆಯಿಲ್ಲದವನ ಮುಖ ಹಾಳೂರ ಹದ್ದಿನಂತಿಕ್ಕು" – ಎಂದು ಮೊದಲಾಗಿ ಸಾರಿ ದ್ದಾನೆ. ಇಂಥ ವಿದ್ಯೆಯನ್ನು ಕೊಡಲಾರದ ಗುರು - ತಂದೆಗಳ ನಿಂದೆಯನ್ನು ಅಂದೇಮಾಡಿದ್ದಾನೆ.

"ವಿದ್ಯೆ ಕಲಿಸದ ತಂದೆ ಬುದ್ಧಿಹೇಳದ ಗುರುವು ।
………………… ಶುದ್ಧ ವೈರಿಗಳು "—

ಎಂದು ನಿರ್ಭಯವಾಗಿ ಉಸುರಿದ್ದಾನೆ. ಇಂದು ಸರಕಾರದೊಂದಿಗೆ ತಂದೆಗಳೂ ತಮ್ಮ ಮಕ್ಕಳಿಗೆ ವಿದ್ಯೆ ಕೊಡಿಸುವಲ್ಲಿ ಉತ್ಸುಕರಾಗಿರುವದು ಬಹುಶಃ ಕವಿಯ ಗೇಲಿಯ

ಫಲವೆಂದು ತೋರುತ್ತದೆ. ಪಶುಪ್ರಾಣಿಗಳಿಂದ ಮಾನವನನ್ನು ಬೇರ್ಪಡಿಸಿದುದು ಭಾಷೆಯೇ. ಭಾವನೆಗಳು ಪಶು-ಪಕ್ಷಿ-ಮಾನವರಿಗೆಲ್ಲ ಸಮಾನವಾಗಿವೆ ; ಆದರೆ ಭಾವನೆಗಳನ್ನು ಅಭಿವ್ಯಕ್ತಿಗೊಳಿಸುವ ಶಕ್ತಿಯಾದ ಭಾಷೆಯು ಮಾನವನಿಗೆ ಸಾಧಿಸಿದೆ. ಈ ಭಾಷೆ ಪರಿಶುದ್ಧವಾಗಿರಬೇಕು. ಸ್ವಕಾರ್ಯಸಿದ್ಧಿಗೆ ಸಾಧನವಾಗಿರಬೇಕು ; ಪರರ ಮನ ನೋಯದಂತೆ ಇರಬೇಕು. ಬಹುಶಃ ಮಾತು ಜ್ಯೋತಿರ್ಲಿಂಗವಾಗುವುದಕ್ಕೆ ವಿದ್ಯೆ ಪೋಷಕವಾಗುತ್ತದೆ. ವಿದ್ಯೆಯಿಂದ ಪೋಷಣೆಗೊಂಡ ಮಾತು ಸಂಸ್ಕಾರಗೊಳ್ಳುತ್ತದೆ. ಮಾತು ಮಾನವನಿಗೆ ಅತಿ ಮುಖ್ಯವಾದ ಅಂಗ. ಆದುದರಿಂದ ಕವಿಯು ಮಾತನ್ನು ಕುರಿತು ಎಲ್ಲ ಹೊತ್ತಿಗೂ ಹತ್ತಿರವಾಗುವಂತೆ ಹಲವಾರು ಮಾತುಗಳನ್ನು ಹೇಳುತ್ತಾನೆ –

ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು ।
ಮಾತಾಡಲರಿಯದಧಮಂಗೆ ಮಾಣಿಕವು ।
ತೂತು ಬಿದ್ದಂತೆ ಸರ್ವಜ್ಞ ॥

ಕಂಡುದನು ಆಡೆ ಭೂಮಂಡಲವು ಮುನಿಯುವುದು ।
ಕೊಂಡಾಡುತಿಚ್ಚೆ ನುಡಿದಿಹರೆ ಜಗವೆಲ್ಲ ।
ಮುಂಡಾಡುತಿಹುದು ಸರ್ವಜ್ಞ ॥

ಮಾತಿನಿಂ ನಗೆನುಡಿಯು ಮಾತಿನಿಂ ಹಗೆಹೊಲೆಯು ।
ಮಾತಿನಿಂ ಸರ್ವಸಂಪದವು ಲೋಕಕ್ಕೆ ।
ಮಾತೇ ಮಾಣಿಕವು ಸರ್ವಜ್ಞ ॥

ಹೊತ್ತಿಗೊದಗಿದ ಮಾತು ಸತ್ತವನು ಎದ್ದಂತೆ ।
ಹೊತ್ತಾಗಿ ನುಡಿದ ಮಾತು ಕೈಜಾರಿದ ।
ಮುತ್ತಿನಂತಿಹುದು ಸರ್ವಜ್ಞ ॥

ರಸಿಕತಾನಾಡಿದ ಮಾತು ಶಶಿಯುದಿಸಿ ಬಂದಂತೆ ।
ರಸಿಕನಲ್ಲದನ ಬರಿಮಾತು ಕಿವಿಗೆ ಕೂರ್ ।
ದಸಿಯ ಬಡಿದಂತೆ ಸರ್ವಜ್ಞ ॥

ಈ ವಚನಗಳಲ್ಲಿ ಮಾತುಗಾರಿಕೆಯ ಸಮಗ್ರಶಾಸ್ತ್ರವೇ ಅಡಗಿದೆ. ಇಂಥ ಮಾತುಗಳ ಬಳಕೆ ಯಾವ ಕಾಲದ ಜನರಿಗೆ ಬೇಕಾಗಿರಲಿಕ್ಕಿಲ್ಲ ? ಕಲಿತವರೊಂದಿಗೆ ವೈರತ್ವವಿರಕೂಡದು ಎಂಬುದು ಕವಿಯ ನಿತ್ಯಸತ್ಯ ಅಭಿಪ್ರಾಯವಾಗಿದೆ. 'ಬರೆವವರ ಕೂಡ ಹಗೆ ಬೇಡ' ಎಂದು ಹೇಳುವ ಅವನ ವಿಚಾರ ಎಂದೆಂದಿಗೂ ಸದಾಚಾರ ಸ್ಮೃತಿಯಾಗಿದೆ. ಅದರಂತೆ 'ಓದದಲೆ ಬರೆವವನ ಕರೆದು ...... ಹೊಡೆ' ಎಂಬ ಹೇಳಿಕೆ ಇಂದಿನ ವಿದ್ಯಾರ್ಜಕರು ಶ್ರಮತಾಳದೆ ಅಶುದ್ಧವಾಗಿ ಬರೆಯುತ್ತಿರುವ ಸ್ಥಿತಿಗೆ ಎತ್ತಿಹಿಡಿದ ಕನ್ನಡಿಯಾಗಿದೆ. ಅಧಿಕಾರಿಗಳೊಡನೆ ಹಗೆತನವಿರಬಾರದೆಂದು

ಕವಿಯು ಹೇಳುವ "ಗವುಡನೊಳು ಹಗೆತನವು .... ಹಸಿದೆದ್ದು ತೌಡು ತಿಂದಂತೆ", "ಕರಣಿಕನೊಡನೆ ಹಗೆ ಹೊಲ್ಲ" ಮೊದಲಾದ ಮಾತುಗಳು ಸ್ವಯಂ ಸತ್ಯಪೂರ್ಣವಾಗಿವೆ.

ಸಾಮಾನ್ಯವಾಗಿ ವಿಶ್ವದಲ್ಲಿ, ವಿಶೇಷವಾಗಿ ಭಾರತದಲ್ಲಿ ಅತಿ ವಿಶೇಷವಾಗಿ ಕರ್ನಾಟಕದಲ್ಲಿ ಜಾತಿಯ ಭೂತ ಕಾಡುತ್ತದೆ. ಕೈಕೊಂಡ ವೃತ್ತಿ ಮತಸೂಚಕವಾಗಿ ಭೂತಕ್ಕೆ ಸೆರೆಕುಡಿಸಿದಂತಾಗಿ ಎಲ್ಲರನ್ನೂ ಬಡಕೊಂಡು ತನ್ನಂತೆ ಸರ್ವರನ್ನೂ ಮರುಳರನ್ನಾಗಿ ಮಾಡಿದೆ. ಜಾತಿನಿವಾರಣೆಗಾಗಿ ಹುಟ್ಟಿದ ಕಾರಣಿಕ ಪುರುಷರೆಲ್ಲರೂ ತಮ್ಮದೊಂದು ಜಾತಿ ನಿರ್ಮಿಸಿ ಆ ಸಂಖ್ಯೆಯನ್ನು ಇನ್ನೂ ದೊಡ್ಡದನ್ನಾಗಿ ಮಾಡಿದ್ದಾರೆ. ಇದು ಎಲ್ಲ ದೇಶಗಳಲ್ಲಿ, ಎಲ್ಲ ಕಾಲದಲ್ಲಿ, ಉದ್ಭೂತವಾದ ಜ್ವಲಂತ ಸಮಸ್ಯೆ. ಸಾರ್ವಕಾಲಿಕ ದೃಷ್ಟಿಯ ಸರ್ವಜ್ಞ ಕವಿ ಈ ವಿಷಯದಲ್ಲಿ ನೆನಪಿಡ ಲಾಗದಷ್ಟು ವಿಚಾರಗಳನ್ನು ಹೇಳಿದ್ದರೂ ಅವನ ಖಚಿತವಾದ ಅಭಿಪ್ರಾಯ ಮತ್ತು ಉಚಿತವಾದ ಉದಾಹರಣೆಗಳು ಅವುಗಳಲ್ಲಿ ಕೆಲವನ್ನಾದರೂ ಮನದಲ್ಲಿ ಹೆಪ್ಪು ಹಾಕುತ್ತವೆ :–

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು ।
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ।
ನಡುವೆ ಎತ್ತಣದು ಸರ್ವಜ್ಞ ॥

ಯಾತರದು ಹೂವೇನು ನಾತರದು ಸಾಲದೆ ।
ಜಾತಿ-ವಿಜಾತಿಯೆನಬೇಡ ದೇವನೊಲಿ ।
ದಾತನೆ ಜಾತ ಸರ್ವಜ್ಞ ॥

ಕುಲವಿಲ್ಲ ಯೋಗಿಗೆ ಛಲವಿಲ್ಲ ಜಾನಿಗೆ ।
ತೊಲೆಕಂಬವಿಲ್ಲ ಗಗನಕ್ಕೆ ಸ್ವರ್ಗಕ್ಕೆ ।
ಹೊಲಗೇರಿಯಿಲ್ಲ ಸರ್ವಜ್ಞ ॥

ಎಲುವಿಲ್ಲ ನಾಲಿಗೆಗೆ ಬಲವಿಲ್ಲ ಬಡವಂಗೆ ।
ತೊಲೆಕಂಭವಿಲ್ಲ ಗಗನಕ್ಕೆ ದೇವರಲಿ ।
ಕುಲಭೇದವಿಲ್ಲ ಸರ್ವಜ್ಞ ॥

ಹೀಗೆ ವಿಚಾರಪೂರ್ವಕವಾಗಿ ಹೇಳುತ್ತಾನೆ. ಸೂಕ್ಷ್ಮವಾಗಿ ಹೇಳಿದರೂ ತಿಳಿಯದಿದ್ದಾಗ ಸರ್ವಜ್ಞ ಸ್ಪಷ್ಟವಾಗಿ ಹೇಳಲು ಸದಾಸಿದ್ಧ. ಕುಲ ಮನುಷ್ಯನಿಗೆ ಹುಟ್ಟಿನಿಂದ ಬರಲಾರದು. ಹುಟ್ಟು ದೈವಾಧೀನ. ಆದರೆ ಹುಟ್ಟಿದ ಮೇಲೆ ವ್ಯಕ್ತಿಯ ಆಚಾರ ವರ್ತನೆ-ಗುಣಗಳ ಆಧಾರದ ಮೇಲೆ ಆತನ ಮತ ನಿರ್ಣಯ ವಾಗುತ್ತದೆ. ಅವನ ವೃತ್ತಿ ಕುಲಸೂಚಕವಾಗದೆ ಪ್ರವೃತ್ತಿ ಮತನಿರ್ಧಾರಕ ವಾಗುತ್ತದೆ. ಹುಟ್ಟಿನಿಂದ ಹೊಲೆಮಾದಿಗರಾದವರು ಗುಣವಂತರಾಗಿದ್ದರೆ

ಜಂಗಮ-ಬ್ರಾಹ್ಮಣರಾಗುತ್ತಾರೆ. ಅದರಂತೆ ಜನ್ಮದಿಂದ ಬ್ರಾಹ್ಮಣ-ಜಂಗಮ ರಾದವರು ಗುಣಹೀನರಾಗಿದ್ದರೆ ಅವರು ಹೊಲೆ-ಮಾದಿಗರಾಗುತ್ತಾರೆ-ಎಂಬುದನ್ನು ಸರ್ವಜ್ಞನು ಬಹು ಸ್ವಾರಸ್ಯವಾಗಿ ಹೇಳಿದ್ದಾನೆ.

ಸತ್ತಕತ್ತೆಯ ಹೊತ್ತರೆತ್ತಣದು ಹೊಲೆಯನು ।
ಉತ್ತಮನೆಂದು ಹೆರರೊಡವೆ ಹೊತ್ತರವ ।
ನಿತ್ಯವೂ ಹೊಲೆಯ ಸರ್ವಜ್ಞ ॥

ಹೊಲಗೇರಿಯಲಿ ಹುಟ್ಟು ಎಲುವಿನ ಗೃಹವಾಸ ।
ಸಲೆಧರ್ಮಿ ದಾನಿ ಎನಿಸದೆ ಹಾರುವನು ।
ಕುಲಕ್ಕೆ ಹೋರಿಹನು ಸರ್ವಜ್ಞ ॥

ದೇವನಿರ್ಮಿತವಲ್ಲದ, ಮಾನವ ನಿರ್ಮಿತ ಈ ಜಾತಿಭಾವ ಕೃತಕವಾದುದೆಂದು ಅರುಹಿದ ಸರ್ವಜ್ಞ ಕವಿಯ ಅಭಿಮತ ಸರ್ವಕಾಲ ಸಮ್ಮತವಾಗಿದೆ.

ಹಸಿವು ತೃಷೆ ನಿದ್ರೆಗಳು, ವಿಷಯ ಮೈಥುನ ಬಯಕೆ ।
ಪಶುಪಕ್ಷಿ ನರರಿಗೆ ಸವನಿರಲು ಕುಲವೆಂಬ ।
ಘುಸಣೆ ಎತ್ತಣದು ಸರ್ವಜ್ಞ ॥

ಅವಯುವಗಳೆಲ್ಲರಿಗೆ ಸವನಾಗಿ ಇರುತಿರಲು ।
ಭವಿ, ಭಕ್ತ, ಶ್ವಪಚ, ಶೂದ್ರರಿವರಿಂತೆಂಬ ।
ಕದನವೆತ್ತಣದು ಸರ್ವಜ್ಞ ॥

ಈ ಕೃತಕಜಾತಿಯು ಅನುಕೂಲಸ್ಥರಿಂದ ಹುಟ್ಟಿದುದು ಅನನುಕೂಲವಿದ್ದವನಿಗೆ ಹೊಟ್ಟೆಯ ಪ್ರಶ್ನೆಯಲ್ಲದೆ ಕುಲದ ಪ್ರಶ್ನೆಬರಲಾರದೆಂದು ಸರ್ವಜ್ಞನು ಮನೋಜ್ಞ ವಾಗಿ ತಿಳಿಸಿದ್ದಾನೆ.

ಕೂಳಿಂದ ಕುಲ ಬೆಳೆದು ಬಾಳಿಂದ ಬಲ ಬೆಳೆದು ।
ಕೂಳು ನೀರುಗಳು ನೀಗಿದರೆ ಕುಲಗಳನು ।
ಕೇಳಬೇಡೆಂದ ಸರ್ವಜ್ಞ ॥

ಕುಲದ ಹೆಸರಿನಲ್ಲಿ ಬಾಹ್ಯಾಡಂಬರ, ಭಕ್ತಿಯ ಸೋಗು ಹಾಕುವದು – ಸಮಾಜದಲ್ಲಿ ಎಂದಿನಿಂದಲೂ ಬೆಳೆದು ಬಂದ ಮಹಾರೋಗವಾಗಿದೆ. ದೂರಾಲೋಚ ನೆಯ ಕವಿಯಾದ ಸರ್ವಜ್ಞನು ಇದು ಐನೂರು ವರ್ಷಗಳವರೆಗೆ ಮುಂದುವರೆವು ದನ್ನು ಕಂಡುಕೊಂಡಿದ್ದಾನೆ. ಅಶಾಸ್ತ್ರೀಯ ಹಾಗೂ ಅನಿತ್ಯದ ಆಚರಣೆಯನ್ನು ಕಂಡು ಸಶಾಸ್ತ್ರೀಯವಾಗಿ ಹಾಗೂ ಸಮರ್ಪಕವಾಗಿ ಖಂಡಿಸಿದ್ದಾನೆ. ಬಾಹ್ಯಾ ಚರಣೆ ಜನಮೆಚ್ಚುಗೆಗಲ್ಲದೆ ಶಿವನ ಮೆಚ್ಚುಗೆಗಲ್ಲ. ನಿರ್ಮಲ ಅಂತರಂಗ ಸರೋ ವರದಲ್ಲಿ ಸದಾ ಶಿವ ತೇಲುತ್ತಿರುತ್ತಾನೆ—ಎಂಬಾಶಯವನ್ನು ಖಂಡತುಂಡವಾಗಿ ಹೇಳುತ್ತಾನೆ.

ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು ।
ಎತ್ತುಗಾಣವನು ಹೊತ್ತು ತಾ ನಿತ್ಯದಿ ।
ಸುತ್ತಿ ಬಂದಂತೆ ಸರ್ವಜ್ಞ ॥

ಮೂರೆಳೆಯನುಟ್ಟಾತ ಹಾರುವಡೆ ಸ್ವರ್ಗಕ್ಕೆ ।
ನೂರೆಂಟು ಎಳೆಯ ಕವುದಿಯ ಹೊದ್ದಾತ ।
ಹಾರನೇಕಯ್ಯ ಸರ್ವಜ್ಞ ॥

ಅನ್ಯರ ಕಣ್ಣಲ್ಲಿ ಭಕ್ತನೆಂದು ನಟಿಸುವದಕ್ಕಿಂತ ತನ್ನಲ್ಲಿರುವ ದೇವನನ್ನು ಕಾಣುವ ಸಾರ್ವಕಾಲಿಕ ಸತ್ಯಸ್ವರೂಪವನ್ನು ಕಾವ್ಯಮಯವಾಗಿ ಹೀಗೆ ಹೇಳುತ್ತಾನೆ.

ಕಾಯಕಮಲವೆ ಸಜ್ಜೆ ಜೀವರತುನವೆ ಲಿಂಗ ।
ಭಾವಪುಷ್ಪದಿ ಶಿವಪೂಜೆ ಮಾಡುವನ ।
ದೇವನೆಂದೆಂಬೆ ಸರ್ವಜ್ಞ ॥

ಸ್ತ್ರೀ ಸರ್ವಕ್ಕೂ ಮೂಲಮಾತೆ. ಕಾರ್ಯಸಮತೆ-ವಿಷಮತೆಗಳಿಗೆಲ್ಲ ಸ್ತ್ರೀಯೇ ಕಾರಣೀಭೂತೆ. ಸರ್ವಜ್ಞ ಕವಿಯು ಆದಿಯಿಂದ ಆಧುನಿಕದವರೆಗೆ ಇರುವ ಸ್ತ್ರೀ ದ್ವಿಮುಖಗಳನ್ನು ಚೆನ್ನಾಗಿ ಮನಗಂಡವನಾಗಿದ್ದಾನೆ. ಇದ್ದುದನ್ನು ಇದ್ದಂತೆ ಹೇಳುವಲ್ಲಿ ಸಿದ್ಧಕವಿಯಾದ ಸರ್ವಜ್ಞ ಸ್ತ್ರೀಯ ಇಬ್ಬಗೆಗಳನ್ನೂ ಮರೆಮಾಚದೆ ಹೇಳಿದ್ದಾನೆ. ಆದರೂ ಸ್ತ್ರೀ ಸಮಾಜ ಪೂಜಿತೆ. ಅವಳಿಗೆ ಧರ್ಮದೃಷ್ಟಿಯಿಂದ ಹಿರಿದಾದ ಗೌರವವಿದೆ. ಅಂತೆಯೇ ಸನ್ಯಾಸಿಯಾದ ಸರ್ವಜ್ಞನು ಸ್ತ್ರೀಯ ಬಗೆಗೆ ಅಪಾರ ಗೌರವವನ್ನು ಹೊಂದಿದ್ದಾನೆ.

ನಲ್ಲೆಯೊಲ್ಲೆಂಬುವರಾ ಸೊಲ್ಲು ನಾಲಗೆ ಹೊಲೆಯು ।
ಬಲ್ಲಿದ ಶ್ರವಣ ಸನ್ಯಾಸಿಯಿವರುಗಳು ।
ಎಲ್ಲಿ ಉದಿಸಿದರು ಸರ್ವಜ್ಞ ॥

ಮನೆಯ ಕಣ್ಣಾದ ಹೆಣ್ಣಿನ ಬಗೆಗೆ ಸರ್ವಜ್ಞನಿಗೆ ತುಂಬು ಶ್ರದ್ಧೆಯಿದೆ. ಅಂತೆಯೇ "ಹೆಣ್ಣಿನಿಂದಲೇ ಇಹವು ಹೆಣ್ಣಿನಿಂದಲೇ ಪರವು ಹೆಣ್ಣಿಂದ ಸಕಲ ಸಂಪದವು"—ಎಂದು ಹೆಣ್ಣನ್ನು ವರಲಕ್ಷ್ಮಿಯಾಗಿ ಗಣಿಸಿದ್ದಾನೆ.

ಸುಣ್ಣವಿಲ್ಲದ ವೀಳ್ಯ ಬಣ್ಣವಿಲ್ಲದ ಮದುವೆ ।
ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ ।
ಎಣ್ಣೆಹೊಯ್ದಂತೆ ಸರ್ವಜ್ಞ ॥

ಬೆಚ್ಚನಾ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ ।
ಇಚ್ಛೆಯನ್ನರಿವ ಸತಿಯಾಗಿ ಸ್ವರ್ಗಕ್ಕೆ ।
ಕಿಚ್ಚು ಹಚ್ಚೆಂದ ಸರ್ವಜ್ಞ ॥

ಇಂಥ ಸತಿಯೊಂದಿಗಿನ ಒಡನಾಟ ಜೇನು ತೊಡೆದ ಹಲಸಿನ ತೊಳೆಯನ್ನು ತಿಂದಂತೆ ಹೆಂಗಳೆಯರ ಸದ್ಗುಣಗಳನ್ನು ಕಂಡು ಸತ್ಕರಿಸಿದ ಸರ್ವಜ್ಞ ಮರುಗಳಿಗೆಯಲ್ಲಿಯೇ ಅವರ ದುರ್ಗುಣಗಳನ್ನು ಕಂಡು ಸಿಡಿದೇಳುತ್ತಾನೆ.

ಅಡಕೆಯಿಲ್ಲದ ವೀಳ್ಯ ಕಿಡಕಿಯಿಲ್ಲದ ಮನೆಯು ।
ಒಡಕು ಬಾಯವಳ ಮನೆವಾರ್ತೆ ಎಣ್ಣಿಯ ।
ಕುಡಿಕೆಯೊಡೆದಂತೆ ಸರ್ವಜ್ಞ ॥

ಚುಚ್ಚುವಾ ಕೆರದಿಂದ ಕಚ್ಚುವಾ ಶುನಿ ಲೇಸು
ನಿಚ್ಚಲು ಉಲಿವ ಸತಿಯಿಂದ ಉರಿದಿರ್ದ
ಕಿಚ್ಚು ತಾ ಲೇಸು ಸರ್ವಜ್ಞ

ಒಟ್ಟಿನಲ್ಲಿ ಹೆಣ್ಣು ಅನುಕೂಲಳಾದರೆ ಭಾಗ್ಯಲಕ್ಷ್ಮಿ; ಪ್ರತಿಕೂಲೆಯಾದರೆ ವಿಧಿಲಕ್ಷ್ಮಿ—ಎಂಬ ಅಮರ ತತ್ವವನ್ನು ಪ್ರತಿಪಾದಿಸುತ್ತಾನೆ.

ನಾರಿ ಪರರುಪಕಾರಿ ನಾರಿ ಸ್ವರ್ಗಕೆ ದಾರಿ ।
ನಾರಿ ಸಕಲರಿಗೆ ಹಿತಕಾರಿ ಮುನಿದರೆ ।
ನಾರಿಯೇ ಮಾರಿ ಸರ್ವಜ್ಞ ॥

ಒಂದೂ ವಿಷಯ ಬಿಡದೆ ಪ್ರತಿಯೊಂದು ವಿಷಯದ ಮೇಲೆ ಹಾಡುತ್ತ ಅಲೆದಾಡಿದ ಆಶುಕವಿ ಸರ್ವಜ್ಞನ ಸಾರ್ವಕಾಲಿಕ ಉಕ್ತಿಗಳನ್ನು ಪಟ್ಟಿಮಾಡಿ ಹೇಳುವದು ಕಷ್ಟಪಟ್ಟರೂ ಆಗದು. ನಿಶಿತಮತಿಯಾದ ಸರ್ವಜ್ಞ ಸಾರ್ವಕಾಲಿಕ ಸತ್ಯಪೂರ್ಣವಾದ ಹಲವಾರು ವಿಷಯಗಳನ್ನು ಹೇಳಿದ್ದಾನೆ. ಮತ-ಧರ್ಮ, ಕರ್ತವ್ಯ—ಕರ್ಮ, ಶ್ರದ್ಧೆ—ಕ್ರಮ, ಮಹಿಳೆ—ಸನ್ಯಾಸಿ ಮುಂತಾದವರ ವಿಷಯದಲ್ಲಿ ಕಾಲಕರಾಳಛಾಯೆಯಿಂದ ಅಳಿಯದೆ ನಿಚ್ಚಳವಾಗಿ ಉಳಿಯುವ ನಿಶ್ಚಿತ ವಿಚಾರ ಗಳನ್ನು ವ್ಯಕ್ತಪಡಿಸಿದ್ದಾನೆ. ಆತನ ಅಭಿಪ್ರಾಯಗಳು ಕಾಲ—ದೇಶ—ಭಾಷೆಗಳನ್ನು ಮೀರಿ ನಿಲ್ಲಬಲ್ಲವು. ಅಂತೆಯೇ ಬರಲಿರುವ ಸಮಾಜದಲ್ಲಿಯೂ, ಬರಲಿರುವ ಕಾಲದಲ್ಲಿಯೂ ಆತನ ಅಭಿಪ್ರಾಯಗಳು ಬದುಕಿನ ಮೌಲ್ಯಗಳು ಬದಲಾಗವು. ಆದ್ದರಿಂದಲೇ ಸರ್ವಜ್ಞ ವಿಶ್ವಕವಿಯಾಗಿದ್ದಾನೆ; ಸಾರ್ವಕಾಲಿಕ ವಿಶ್ವಕವಿಯಾಗಿ ದ್ದಾನೆ.

ಮಂಥನ

ಗೋಜಾಗತ

'ಗೋಜಾಗತ' ಈ ಶಬ್ದವು ಹಳೆಯ ಕನ್ನಡ ಸಾಹಿತ್ಯದಲ್ಲಿ ಅಪರೂಪವಾಗಿ ಕಂಡು ಬಂದಿದೆ. ಅದು ಹರಿಹರನ ಬಸವರಾಜದೇವರ ರಗಳೆಯಲ್ಲಿ ಮತ್ತು ಅವನದೇ ಆದ ಆನಾಯನಾರರು ಈ ರಗಳೆಯಲ್ಲಿ ಹೀಗೆ ಎರಡು ಕಡೆ ಮಾತ್ರ ಪ್ರಯೋಗವಾಗಿದೆ. ಬೇರೆಲ್ಲಿಯೂ ಅದು ಬಂದಂತಿಲ್ಲ. ಬಸವರಾಜದೇವರ ರಗಳೆಯಲ್ಲಿ ಬಂದಿರುವ ಪ್ರಯೋಗ ಹೀಗಿದೆ: 'ಅಲ್ಲಿಗೆ ಜಂಗಮದಶಾವಸ್ಥಂ ಜಂಗಮಪ್ರಾಣಿಯೆನಿಪ ಸಂಗನ ಬಸವಂ ಬಂದು ನಿಂದಿರೆ, ಬಿಜ್ಜಳಂ ಕಂಡು—ಎಲೆ ಬಸವಣ್ಣ, ಸುವರ್ಣಂ ಕಮ್ಮಿತಾದಂತೆ ವಿಪ್ರಕುಲಮನುಕೂಲಮಪ್ಪ ಶಿವಭಕ್ತಿ ಪೊದ್ದಿರ್ದು ಸದಾಚಾರದಿಂ ಸುಖಿಯಾಗಿರ್ಪುದನೊಲ್ಲದೆ, ಅತಿ ಭಕ್ತಿ ತಲೆಗೇಱಿ ಹಿರಿಯ ಮಾಹೇಶ್ವರರೆಂದು ಪೊಲೆಗಲಸಿ ಅವರ ಮನೆಯೊಳುಂಡುದಲ್ಲದೆ ಇಲ್ಲಿ ಬಂದು ಎಲ್ಲರಂ ಗೋಜಾಗತಂ ಮಾಳ್ಪುದು ಮಾರ್ಗವಲ್ಲ' (ಬ.ದೇ. ರಗಳೆ 40-41): 'ಆನಾಯನಾರರು' ರಗಳೆಯಲ್ಲಿ 'ಗೋಜನ್ಮಮಂ ಕಳಿದೆವೀ ನಿಮ್ಮ ಭಕ್ತನಿಂ, ಗೋಜಾಗತಂ ಮಾಣ್ದುದಭವ ನಿಜಭಕ್ತನಿಂ' (ಶರಣ ಚರಿತ ಮಾನಸ ಪು. 186) ಎಂದು ಪ್ರಯೋಗವಿದೆ. ಆದರೆ ಫ. ಗು. ಹಳಕಟ್ಟಿಯವರಿಂದ ಸಂಪಾದಿತವಾದ ಸಮಗ್ರ ರಗಳೆಗಳ ಸಂಕಲನದಲ್ಲಿ 'ಗೋಜನ್ಮಮಂ, ಕಳಿದೆವೀ ನಿಮ್ಮ ಭಕ್ತನಿಂ, ಗೋಜಾತಮುಂ ಪಾಣ್ದುದಭವ ನಿಜಭಕ್ತನಿಂ' (ಪು. 134) ಎಂಬ ಪಾಠಾಂತರವಿದೆ.

ಈ ಶಬ್ದದ ಅರ್ಥ ಮತ್ತು ನಿಷ್ಪತ್ತಿಯೇನು ? ಬ. ದೇ. ರಗಳೆಯ ಕೊನೆಗೆ ಕೊಟ್ಟಿರುವ ಕಠಿನ ಪದಗಳ ಅರ್ಥ ಎಂಬಲ್ಲಿ ಗೋಜಾಗತ ಎಂದರೆ ಸಿಕ್ಕು ತೊಡರು (?) ಎಂದು ಸೂಚಿಸಲಾಗಿದೆ. ಬಹುಶಃ 'ಗೋಜು' ಶಬ್ದಕ್ಕೆ ಇರುವ ಅದೇ ಅರ್ಥದಿಂದ ಈ ಸೂಚನೆ ಪ್ರೇರಿತವಾಗಿರಬೇಕು, ಆದರೆ 'ಗೋಜಾಗತ' ಈ ಶಬ್ದಕ್ಕೂ 'ಗೋಜು' ಶಬ್ದಕ್ಕೂ ಅಕ್ಷರಸಾಮ್ಯವೊಂದನ್ನು ಬಿಟ್ಟರೆ ಬೇರೆ ಯಾವ ಸಂಬಂಧವೂ ಇದ್ದಂತೆ ತೋರುವುದಿಲ್ಲ. 'ಗೋಜಾಗತ' ಇದು ಗೋಜು ಎಂಬುದನ್ನು ಪೂರ್ವ ಪದವಾಗಿ ಒಳಗೊಂಡಿದೆ ಎನ್ನುವುದಾದರೆ ಉತ್ತರ ಪದವಾವುದು, ಅದರ ಅರ್ಥವೇನು ಎಂಬ ಪ್ರಶ್ನೆ ಉಳಿಯುತ್ತದೆ. ಸಾಂದರ್ಭಿಕವಾಗಿ ನೋಡಿದರೆ ಬ. ದೇ. ರಗಳೆಯಲ್ಲಿ 'ಗೋಜಾಗತ'ಕ್ಕೆ 'ಸಿಕ್ಕು, ತೊಡರು'ಎಂಬ ಅರ್ಥದ ಬದಲು 'ಜಾತಿಭ್ರಷ್ಟ ಅಥವಾ ದೂಷಿತ' ಎಂಬುದು ಸರಿಹೋಗುತ್ತದೆ. ಬಸವಣ್ಣನು

ಕಂಬಳಿಯ ನಾಗಿದೇವನೆಂಬ ಹಿರಿಯ ಮಾಹೇಶ್ವರನ ಮನೆ ಹೊಕ್ಕು ಪ್ರಸಾದವನ್ನು ಕೈಕೊಂಡುದನ್ನು ತಿಳಿದು ನಾರಣಕ್ರಮಿತ ಮುಂತಾದ ಸಾಂಪ್ರದಾಯಿಕರು ಬಿಜ್ಜಳನಲ್ಲಿಗೆ ಬಂದು 'ಬಸವನು ಹೊಲಗೇರಿಯಲ್ಲಿ ಒಬ್ಬ ಹೊಲೆಯನ ಮನೆಯಲ್ಲಿ ಉಂಡುದಲ್ಲದೆ ನಿನ್ನ ಓಲಗದೊಳಗೆ ಹೊಲೆಗಲಸಲು ಬರುತ್ತಾನೆ' ಎಂದುದನ್ನು ಕೇಳಿದ ಮೇಲೆ ಬಸವಣ್ಣನನ್ನು ಕುರಿತು ಬಿಜ್ಜಳನು ಆಡಿದ ಮಾತುಗಳಲ್ಲಿ 'ಗೋಜಾಗತ' ಪ್ರಯೋಗ ಬಂದಿದೆ. ಈ ಸಂದರ್ಭದಲ್ಲಿ ಆ ಸಾಂಪ್ರದಾಯಿಕರ ಮತ್ತು ಬಿಜ್ಜಳನ ದೃಷ್ಟಿಯಿಂದ ವಿಪ್ರನೊಬ್ಬನು ಹೊಲೆಯನೊಬ್ಬನ ಮನೆಯಲ್ಲಿ ಊಟ ಮಾಡಿದ್ದರಿಂದ ಹೊಲೆಗಲಸುವಿಕೆ ಉಂಟಾಗಿ ಜಾತಿಭ್ರಷ್ಟತೆ ಅಥವಾ ದೂಷಿತತೆ ವಿಪ್ರನು ಹೋದಲ್ಲೆಲ್ಲ ಹಬ್ಬುವುದೆಂದು ಭಾವಿಸಲಾಗಿದೆ. ಇದು ಆ ಸಮಯದ ಮಟ್ಟಿಗೆ ಬರುವ ಮೈಲಿಗೆಯಲ್ಲ, ಸುಲಭವಾಗಿ ತೊಡೆಯಲಾರದ ಕಲಂಕ ಎಂಬ ಸೂಚನೆ ಸ್ಪಷ್ಟವಾಗಿದೆ. ಎರಡನೆಯ ಪ್ರಯೋಗದಲ್ಲಿ ಜಾತಿಭ್ರಷ್ಟತೆ ಎಂಬ ಅರ್ಥದ ವಿಸ್ತರಣೆಯೆಂಬಂತೆ 'ಮೇಲ್ಮಟ್ಟದ ಜನ್ಮದಿಂದ ಕೆಳಮಟ್ಟದ ಜನ್ಮ ಹೊಂದಿರುವಿಕೆ' ಎಂದು 'ಗೋಜಾಗತ'ಕ್ಕೆ ಅರ್ಥಬಂದಿದೆ. ಆನಾಯನಾರರ ಕೊಳಲನ್ನು ಕೇಳುತ್ತ, ಗೋಜನ್ಮಪಡೆದ ಋಷಿಗಳು ಆ ಭಕ್ತನಿಗೆ ಒಲಿದು ಕಾಣಿಸಿಕೊಂಡ ಈಶ್ವರನ ದರ್ಶನದಿಂದ ಗೋಜನ್ಮವನ್ನು ಕಳೆದುಕೊಂಡು ಮತ್ತೆ ಋಷಿಗಳಾಗಿ ಮಾರ್ಪಟ್ಟರು ಎಂದು ಬಣ್ಣಿಸಲಾಗಿದೆ. ಇಲ್ಲಿ 'ಗೋಜಾಗತಂ ಮಾಣ್ದುದು' ಎಂದರೆ ಗೋರೂಪು ಬಿಟ್ಟುಹೋಯಿತು ಎಂದು ಮಾತ್ರವಲ್ಲ, ಋಷಿಗಳಿಗೆ ಒದಗಿದ ಜನ್ಮಭ್ರಷ್ಟತೆ ಕಳೆಯಿತು ಎಂಬುದು ಮುಖ್ಯಾರ್ಥ. 'ಗೋಜಾತಮುಂ ಮಾಣ್ದುದು' ಎಂಬ ಪಾಠಾಂತರದಲ್ಲಿಯೂ ಅದೇ ಅರ್ಥ ಸೂಚನೆಯಿದೆ. ಹಾಗಿರದಿದ್ದರೆ ಮೊದಲನೆಯ ಸಾಲಿನಲ್ಲಿಯ 'ಗೋಜನ್ಮ,' ಎರಡನೆಯ ಸಾಲಿನಲ್ಲಿಯ 'ಗೋಜಾತ' ಎರಡಕ್ಕೂ ವ್ಯತ್ಯಾಸವಿಲ್ಲದೆ ಪುನರುಕ್ತಿ ದೋಷ ಉಂಟಾಗುತ್ತದೆ.

ಇನ್ನು 'ಗೋಜಾಗತ' ಶಬ್ದದ ನಿಷ್ಪತ್ತಿ ಹೇಗೆಂಬುದು ಅದರ ಅರ್ಥದಷ್ಟು ಖಚಿತವಾಗಿ ತಿಳಿಯುವಂತಿಲ್ಲ. ಒಂದೆರಡು ಊಹೆಗಳನ್ನು ಮಾಡಬಹುದು. ಎರಡನೆಯ ಸಂದರ್ಭದಲ್ಲಿ 'ಗೋಜಾತ' ಎಂಬುದಕ್ಕೆ ಋಷಿಗಳಿಗೆ ಒದಗಿದ ಗೋಜನ್ಮದಿಂದ ಬಂದ ಕೆಳಮಟ್ಟ, ಕಲಂಕ ಎಂಬ ಅರ್ಥವು 'ಗೋಜಾಗತ' ಎಂಬುದಕ್ಕೂ ಪಸರಿಸಿರಬೇಕು. 'ಗೋವಿನ ಜನ್ಮಕ್ಕೆ ಆಗತ ಅಂದರೆ ಬಂದವನು' ಎಂದು ಅದನ್ನು ವಿವರಿಸಬಹುದು. ಹೀಗಾಗಿ ಜನ್ಮಭ್ರಷ್ಟತೆ, ಜಾತಿಭ್ರಷ್ಟತೆ ಎಂಬ ಅರ್ಥಗಳು 'ಗೋಜಾಗತ'ಕ್ಕೆ ರೂಢವಾಗಿರಬೇಕು. ಜನ್ಮ, ಜಾತಿ ಎರಡೂ ಮೂಲತಃ ಸಮಾನಾರ್ಥಕ ಎಂಬುದನ್ನು ಇಲ್ಲಿ ಗಮನಿಸಬೇಕು. ಅಥವಾ ಗೋಜಲ ಅಂದರೆ ಗೋಮೂತ್ರ, ಗೋಜಲಾಗತ ಅಂದರೆ ಗೋಮೂತ್ರವು ನಿಂತ ನೆಲೆ

ಎಂದರ್ಥ ಆಗಬಹುದು. ಇಂಥಲ್ಲಿ ದುರ್ವ್ಯಾಸನೆ, ದೂಷಣೆ ತೀರ ಸಹಜ. ಗೋಜಲಾಗತವು 'ವಿನಾಯಕ' 'ಬೆನಕ' ಆದಂತೆ ಸಂಕೋಚಗೊಂಡು ಗೋಜಾಗತ ವಾಗಿರಬಹುದು. ಇನ್ನೂ ಚಿಕ್ಕದಾಗಿ ಗೋಜಾತ, ಗೋತ ಆಗಿರಬಹುದು. ಗೋತ ಇದಕ್ಕೆ 'ದನಕರುಗಳ ಮೂತ್ರ, ಗಂಜಳ' ಎಂಬ ಅರ್ಥ ರೂಢಿಯಲ್ಲಿರುವುದನ್ನು ಗಮನಿಸಬೇಕು. ಗೋಜಾಗತಕ್ಕೆ ಬಂದ ರೂಪಸಂಕೋಚದೊಡನೆ ಅರ್ಥ ಸಂಕೋಚವೂ ಒದಗಿರುವ ಸಂಭವವಿದೆ. ಈ ಊಹೆಗಳಲ್ಲಿ ಯಾವುದು ಸರಿ, ಬೇರೆ ಊಹೆ ಇರುವುದೇ ಎಂಬ ಬಗ್ಗೆ ಪರಿಶೀಲನೆ ಆಗುವುದು ಅವಶ್ಯ.

—**ರಂ. ಶ್ರೀ. ಮುಗಳಿ**

ಎರಡು ಶಾಸನೋಕ್ತ ಸೇರಿ ಒಟ್ಟು ಐದು ತ್ರಿಪದಿಗಳು

ಶಾಸನಗಳಲ್ಲಿ ದೊರಕುವ ಕೆಲವು ತ್ರಿಪದಿಗಳನ್ನು ಹಿಂದೆ "ವಚನ ಸಾಹಿತ್ಯದ ಉಗಮ"[1] ಎಂಬ ನನ್ನ ಲೇಖನದ ಅನುಬಂಧವಾಗಿ ಕೊಟ್ಟಿದ್ದೆ. ಈಗ ನನ್ನ ಗಮನಕ್ಕೆ ಬಂದಿರುವ ಎರಡು ತ್ರಿಪದಿಗಳು ಹೀಗಿವೆ.

(1) ಇದು ನಾಗಮಂಗಲ ತಾಲೂಕಿನ ಕ್ರಿ. ಶ. 1199ರ ಶಾಸನದಲ್ಲಿದೆ.[2] ಇದನ್ನು 'ತೃಪದಿ' ಎಂದು ಶಾಸನದಲ್ಲೇ ಕರೆದಿದೆ.

ತೃಪದಿ ॥ ಆರಣಿಯೊಳು... ಬೆಳ್ಳೂರೊಳು ದೇವಾಲಯ-
ಮೂರಮುಂದೆಸೆವ ಕೆಱೆ ಪೆಸರ್ವಡೆದುವು
ದಾರಿಮಂಡಲನ ಪೆಸರಿಂದಂ ॥

ಇದು ಅಂಶಗಣಘಟಿತವಾಗಿದೆ. 'ದೇವಾಲಯ' ಎಂಬ ರುದ್ರಗಣವು ಬಂದಿರುವುದು ಗಮನಾರ್ಹ.

(2) ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕಿನ ಕಲ್ಲೂರು ಗ್ರಾಮದ ಕ್ರಿ. ಶ. 1138ರ ಶಾಸನದಲ್ಲಿ ಕೆಳಗಿನ ತ್ರಿಪದಿಯಿದೆ.[3] ಈಪದ್ಯ ಜಾತಿಯನ್ನು ಹೆಸರಿಸಿಲ್ಲವಾದರೂ ಪ್ರಾಸದ ಸಹಾಯದಿಂದ ಇದೊಂದು ತ್ರಿಪದಿಯೆಂಬುದನ್ನು ಸುಲಭವಾಗಿ ಗುರುತಿಸಬಹುದು.

ಜೀರ್ಣ್ಣೋ ಮಾರ್ಮ್ಮಲವನ ತೀರ್ಣ್ಣಮಾ ತಳವಾರ
ಪುಣ್ಣ ನೆತ್ತರಲು ನೆಲನಾಲೆಯಿಱಿಯಲು ಬೇ
ಳಣ್ಣನೆ ಬಲ್ಲ ಭುವನದಲು ॥

---

1 ಸಂಶೋಧನ ತರಂಗ (ಮೈಸೂರು, 1966).
2 Epigraphia Carnatica, IV. Nagamangala, 47.
3 Epigraphia Carnatica, VIII. Sorab. 289.

ಇದೂ ಅಂಶ ತ್ರಿಪದಿಯೇ. 'ಯಿಜಿಯುಯುಲು ಬೇ', 'ಭುವನದಲು' ಇವು ರುದ್ರ ಗಣಗಳು.

ಕ್ರಿ. ಶ. 1042ರಲ್ಲಿದ್ದ ಇಮ್ಮಡಿ ನಾಗವರ್ಮನ ವರ್ಧಮಾನಪುರಾಣ ದಲ್ಲಿ[4] ಮೂರು ತ್ರಿಪದಿಗಳಿವೆ. ಅವುಗಳಲ್ಲಿ ಒಂದನ್ನು 'ತ್ರಿವಿಧಿ' ಎಂದು ಕರೆದಿರುವುದು ಗಮನಾರ್ಹ. (ತ್ರಿಪದಿಯನ್ನು ತ್ರಿವಿಧಿ ಎಂದು ಕರೆದಿರುವವರಲ್ಲಿ ಇವನೇ ಅತ್ಯಂತ ಪ್ರಾಚೀನ). ಅವು ಹೀಗಿವೆ.

ಆಶ್ವಾಸ 3, ಪದ್ಯ 9

ತ್ರಿವಿಧಿ ॥ ಬಳನೇಕ ಕುಂಡನಂ ಬಳಿ ತಾಳಕೇತನಂ
ಹಳಹಸ್ತ ನೀಳವಹನಂ ಸಂಕರ್ಷಣಂ
ಬಳಭದ್ರಂ ರಾಮನೆನೆ ಸಂದಂ ॥

(2) ಆಶ್ವಾಸ 7, ಪದ್ಯ 35

ತ್ರಿಪದಿ ॥ ಕುಲಮಂ ಸುಪುತ್ರಂ ದಿಗ್ವಲಯಮಂ ದಿನಪನು-
ಜ್ವಳಮಾಗೆ ನಿಶೆಯನಮೃತಾಂಶು ಬೆಳಪಂತೆ
ಬೆಳಗುಗುಂ ಧರ್ಮಂ ಜಗಕೆಲ್ಲಂ ॥

ಇಲ್ಲಿಯ ಕೊನೆಯ ಪದ ಮೂಲತಃ ''ಜಗಕ್ಕೆಲ್ಲಂ'' ಎಂದೇ ಇತ್ತೆಂಬುದರ ಬಗ್ಗೆ ಅನುಮಾನವಿಲ್ಲ.

(3) ಆಶ್ವಾಸ 8, ಪದ್ಯ 18.

ತ್ರಿಪದಿ ॥ ಪರಿಣಾಮದೇಱ್ಗೆಯಿಂ ದುರಿತಾನು ಬಂಧಮಾ
ದುರಿತಾನು ಬಂಧದೊದವಿನಿಂ ಪರಿಣಾಮಂ
ದೊರೆಕೊಳ್ಗುಂ ದೇಹಿಗನುರೂಪಂ ॥

ಈ ಮೂರೂ ತ್ರಿಪದಿಗಳು ಅಂಶ ತ್ರಿಪದಿಗಳು. ಇದೇ ಕವಿಯ 'ಅಭಿಧಾನ ವಸ್ತು ಕೋಶ'ದಲ್ಲಿನ ತ್ರಿಪದಿಗಳೂ ಅಂಶಗಣ ಘಟಿತಗಳೇ.

ತ್ರಿಪದಿಯ ಇತಿಹಾಸವನ್ನು ಕುರಿತು ಚರ್ಚಿಸುವವರು ಬಳಸಿಕೊಳ್ಳಲಿಯೆಂದು ಇವನ್ನು ಚಿಕ್ಕ ಟಿಪ್ಪಣಿ ರೂಪದಲ್ಲಿ ಇಲ್ಲಿ ಕೊಟ್ಟಿದೆ.

ಎಂ. ಚಿದಾನಂದಮೂರ್ತಿ

---

4 ಇದನ್ನು ಶ್ರೀ ಬಿ. ಎಸ್. ಸಣ್ಣಯ್ಯನವರು ಸಂಪಾದಿಸಿದ್ದಾರೆ

ಸನ್ಯಂಗ ಎಂದರೇನು ?

ರಾಘವಾಂಕ ಕವಿಯು ಹರಿಶ್ಚಂದ್ರಕಾವ್ಯದ ಒಂದು ಪದ್ಯ ಹೀಗಿದೆ–

ಎನ್ನನಿವರಾಡಿಸಿದಡೇನನಾಡುವನೆಂದು
ತನ್ನ ಮನದೊಳು ತಾನೆ ತಿಳಿದು ನಿಶ್ಚಯಿಸಿದಳು
ಮುನ್ನೇಗಳಾವಾವ ದುಃಖವುಂಟವನೆಯ್ದೆ ಕಂಡೆನುಂಡೆನು ತಣಿದೆನು ।
ಇನ್ನೇನಕಾಣಲಿರ್ದಪೆನರಸಕೇಳಿದಡೆ
ನಿನ್ನ ಮಗನಂ ಕೊಂದ ಪಾಪಿಯಾನೆಂದಾಡಿ
[1]ಅನ್ಯಾಯದಿಂ[1] ಸಾವೆನೆನುತ ಬರಲೋಲಗದ ಗಜಬಜವನೇವೊಗಳ್ವೆನು ॥

ಈ ಪದ್ಯದಲ್ಲಿ ಬರುವ 'ಅನ್ಯಾಯ' ಎಂದಿರುವ ಶಬ್ದಕ್ಕೆ ಸನ್ಯಾಂಗ (ಕ) ಸನ್ಯಂಗ (ಖಗಘ) ಎಂಬ ಪಾಠಾಂತರಗಳಿವೆ. ಇದರ ಬಗ್ಗೆ ಪ್ರೊ॥ ಡಿ. ಎಲ್. ನರಸಿಂಹಾಚಾರ್ಯರು ಈ ರೀತಿ ಹೇಳಿದ್ದಾರೆ–"ಇದಕ್ಕೆ ಅರ್ಥವೇನೋ ಗೊತ್ತಾಗುವುದಿಲ್ಲ, ಖಚಿತವಾಗಿ. 'ಸನ್ಯಂಗ' ಎಂಬೊಂದು ಶಬ್ದ ಕನ್ನಡ ಕವಿಗಳಿಂದ ಪ್ರಯುಕ್ತವಾಗಿರುವುದಕ್ಕೆ ದುರ್ಗಸಿಂಹನ 'ಪಂಚತಂತ್ರ'ದಲ್ಲಿ ಆಧಾರವಿದೆ. 'ಅರಸನಾ ಕೃತಕ ತಪೋಧಾರಿಯ ಗುಹೆಯಂ ಶೋಧಿಸೆ ಮುನ್ನ ತನ್ನ ಪೊಟಲೊಳ್ ಪೋದ ಪಲವು ವಸ್ತುಗಳಂ ಸನ್ಯಂಗವೆರಸಿ ಕಂಡಾ ತಸ್ಕರನ ತಪಸ್ಸಿಗೆ ತಕ್ಕುದಂ ಮಾಡಿ' (ಪುಟ 232) ಎಂಬ ಪ್ರಯೋಗವಿದೆ; ಸಂಪಾದಕರು ಈ ಶಬ್ದದ ಅರ್ಥಕ್ಕೆ ಪ್ರಶ್ನಚಿಹ್ನೆಯನ್ನು ಹಾಕಿದ್ದಾರೆ. ಎರಡೂ ಸಂದರ್ಭಗಳನ್ನು ನೋಡಿದರೆ ಕದ್ದಮಾಲಿನ ಸಮೇತ ಕಳ್ಳನು ಸಿಕ್ಕಿಕೊಳ್ಳುವುದು ಕಾಣುತ್ತದೆ. ಕಳ್ಳರು ಕೊಂದ ರಾಜಕುಮಾರನ ದೇಹವನ್ನು ತನ್ನ ಮಗನ ದೇಹವೆಂದೇ ಚಂದ್ರಮತಿ ಎತ್ತಿಕೊಂಡಿದ್ದಾಳೆ; ಕಳ್ಳನಾದ ಕಪಟ ತಪಸ್ವಿ ಅರಮನೆಯಲ್ಲಿ ಕಳ್ಳತನ ಮಾಡುವಾಗ ತಳವಾರರ ಕೈಗೆ ಸಿಕ್ಕುವುದರಲ್ಲಿ ಹೇಗೋ ತಪ್ಪಿಸಿಕೊಂಡು ಕನ್ನಕೊರೆಯುವ ಮುಟ್ಟುಗಳನ್ನು ಮಲಗಿ ನಿದ್ರಿಸುತ್ತಿದ್ದ ನಾರಾಯಣ ಭಟ್ಟನ ಬಳಿಯಲ್ಲಿಟ್ಟು ಹೊರಟು ಹೋಗುತ್ತಾನೆ. ತಳವಾರರು ಇವನೇ ಕಳ್ಳನೆಂದು ತಿಳಿದು ರಾಜನ ಬಳಿಗೆ ಕರೆದುಕೊಂಡು ಹೋದಾಗ ನಾರಾಯಣ ಭಟ್ಟನು ನಿಜಸ್ಥಿತಿಯನ್ನು ತಿಳಿಸಿ ಆ ಕಪಟ ತಪಸ್ವಿಯ ಗುಹೆಯ ಶೋಧನೆಗೆ ಕಾರಣನಾಗುತ್ತಾನೆ. ಅಲ್ಲಿ ಹುಡುಕಿದಾಗ ತಳವಾರರಿಗೆ ಕದ್ದ ವಸ್ತುಗಳೆಲ್ಲ ಸಿಕ್ಕುತ್ತವೆ. ಕದ್ದಮಾಲಿನ ಸಮೇತ ಕಳ್ಳನನ್ನು ಹಿಡಿದರೆ, ಅದಕ್ಕಿಂತ ಬೇರೆ ಪ್ರಮಾಣಬೇಕಿಲ್ಲ, ಅವನು ಅಪರಾಧಿಯೆಂಬುದಕ್ಕೆ. 'ಕದ್ದಮಾಲು' ಎಂಬರ್ಥದಲ್ಲಿ ಬಹುಶಃ 'ಸನ್ಯಂಗ' ಶಬ್ದ ಇರಬಹುದು. ಇದು ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ಶಬ್ದವಿರ

[1] ಹರಿಶ್ಚಂದ್ರ ಕಾವ್ಯ ಸಂಗ್ರಹ– 8–50 ಸಂ। ಟಿ. ಎಸ್. ವೆಂಕಣ್ಣಯ್ಯ, ಎಂ. ಎ. : ಎ. ಆರ್. ಕೃಷ್ಣಶಾಸ್ತ್ರೀ, ಎಂ. ಎ., ಆರನೆಯ ಮುದ್ರಣ. 1959, ಮೈಸೂರು ವಿಶ್ವವಿದ್ಯಾಲಯ.

ಬೇಕೆಂದು ಕಾಣುತ್ತದೆ. ಈ ವಿಷಯವಾಗಿ ಮಹಾಮಹೋಪಾಧ್ಯಾಯ ಡಾ. ಪಿ. ವಿ. ಕಾಣೆಯವರಿಗೆ, ಧರ್ಮಶಾಸ್ತ್ರ ಪಾರಂಗತರಿಗೆ, ಪತ್ರ ಬರೆದಾಗ ಅವರು ಅದಕ್ಕೆ ಉತ್ತರವಾಗಿ, 'ಈ ಶಬ್ದವನ್ನು ನಾನು ಧರ್ಮಶಾಸ್ತ್ರದಲ್ಲಿ ಎಲ್ಲಿಯೂ ನೋಡಿಲ್ಲ; ಅಲ್ಲದೆ ಬೇರಾವ ಸಂಸ್ಕೃತ ಗ್ರಂಥದಲ್ಲೂ ಅದನ್ನು ಕಂಡಿಲ್ಲ; ನೀವು ಸೂಚಿಸಿರುವ ಅರ್ಥದಲ್ಲಿ ಅಂಥ ಶಬ್ದವೊಂದಿರುವಂತೆ ನಾನು ಯಾವ ಆಧಾರವನ್ನೂ ಹೇಳಲಾರೆ; ತಿಳಿದಾಗ ಬರೆಯುತ್ತೇನೆ'– ಎಂಬರ್ಥದ ಒಂದು ಪತ್ರವನ್ನು ಬರೆದರು. ಇಂಥ ಸಂದರ್ಭಗಳಲ್ಲಿ ಸಂಪಾದಕನು ಏನು ಮಾಡಬೇಕು? ಪಾಠಾಂತರಗಳನ್ನೆಲ್ಲ ಸೂಚಿಸಿ ಅರ್ಥವಾಗದ ಪದವನ್ನು ಕೈಬಿಡದೆ ನೋಡಿಕೊಳ್ಳಬೇಕು. ಶ್ರೀ ಎನ್. ಬಸವಾರಾಧ್ಯರ 'ಹರಿಶ್ಚಂದ್ರಕಾವ್ಯ'ದ ಈಚಿನ ಮುದ್ರಣದಲ್ಲಿ (1955) ಈ ಪಾಠವನ್ನು ಉಳಿಸಿಕೊಂಡು ಉಳಿದುದನ್ನು ಪಾಠಾಂತರವಾಗಿ ಕಾಣಿಸಿದೆ; ಅರ್ಥಕೋಶದಲ್ಲಿ ಮಾತ್ರ ಇದಕ್ಕೆ 'ಕದ್ದಮಾಲು' ಎಂದರ್ಥ ಹೇಳಿದೆ; ಇದಕ್ಕೆ ಒಂದಲ್ಲ, ಹಲವು ಪ್ರಶ್ನಚಿಹ್ನೆಗಳಿರಬೇಕು".[2]

ಪ್ರೊ|| ಡಿ. ಎಲ್. ನರಸಿಂಹಾಚಾರ್ಯರ ಹೇಳಿಕೆಯ ಅರ್ಥ ಇಷ್ಟೆ—ಈ ಶಬ್ದದ, ಅರ್ಥ ಸ್ಪಷ್ಟವಾಗಿ ಆಗುವುದಿಲ್ಲ ಎಂಬುದು. ಆದರೆ ಅದು ಅರ್ಥವಾಗದ ಶಬ್ದವಲ್ಲ ಅದಕ್ಕೂ ಒಂದು ಅರ್ಥವಿದೆ. ಮುಖ್ಯವಾಗಿ ಅವರು ಅದನ್ನು ಅರ್ಥೈಸುವಾಗ ಆ ಶಬ್ದಕ್ಕೆ 'ಕದ್ದಮಾಲು' ಎಂಬರ್ಥವಿರಬಹುದು ಎಂದು ಎಣಿಸುವಲ್ಲಿಯೇ ತಪ್ಪಿಬಿಟ್ಟಿದ್ದಾರೆ–ಈ ಶಬ್ದ ಪ್ರಯೋಗವಾಗಿರುವ ಎರಡೂ ಸಂದರ್ಭಗಳನ್ನು ಅವಲೋಕಿಸಿದಾಗ ಗಮನಕ್ಕೆ ಬರುವ ಸಂಗತಿ ಇಷ್ಟು–ರಾಜಕುಮಾರನನ್ನು ಕಳ್ಳರು ಕೊಲ್ಲಲು, ಆ ಕುಮಾರನ ಹೆಣವನ್ನು ತನ್ನ ಮಗನದೆಂದು ಚಂದ್ರಮತಿ ಎತ್ತಿಕೊಂಡಾಗ ಅವಳನ್ನು ತಳವಾರರು ಹಿಡಿದರು. ಕೊಂದವರು ಬೇರೆ, ಬಂಧಿತರಾದವರು ಬೇರೆ; ಅಂದರೆ ತಪ್ಪುಮಾಡದವಳು ತಪ್ಪಿತಸ್ಥಳು ಎಂದೆನಿಸಲ್ಪಟ್ಟಳು. ಆ ಸಮಯದಲ್ಲಿ ಅವಳು 'ಸನ್ಯಂಗದಿಂಸಾವೆನು' ಎಂದು ನಿರ್ಣಯಿಸಿಕೊಳ್ಳುತ್ತಾಳೆ. ಹೀಗಿರುವಾಗ ಇಲ್ಲಿ 'ಕದ್ದಮಾಲು' ಎಂದರ್ಥ ಇಟ್ಟುಕೊಂಡರೆ 'ಕದ್ದಮಾಲಿನೊಂದಿಗೆ ಸಾಯುವೆನು' ಎಂದು ಚಂದ್ರಮತಿ ನಿರ್ಣಯಿಸಿದಳು ಎಂಬರ್ಥಮಾಡಿಕೊಂಡರೆ ಅದು ಸಂದರ್ಭಕ್ಕೆ ಸರಿಹೊಂದುವುದಿಲ್ಲ. ಆದುದರಿಂದ ಪ್ರಕೃತ ಸಂದರ್ಭದಲ್ಲಿ ಈ ಅರ್ಥ ಸುತರಾಂ ಸಾಧುವಲ್ಲ.

ಇನ್ನು ಪಂಚತಂತ್ರದಲ್ಲಿಯೂ ಇದೇ ರೀತಿ. "ರಾಜನು ಆ ಕೃತಕ ತಪೋಧಾರಿಯ ಗುಹೆಯನ್ನು ಶೋಧಿಸಲು ಈ ಮೊದಲು ತನ್ನ ಪಟ್ಟಣದಿಂದ ಹೋದ ಪಲವು ವಸ್ತುಗಳನ್ನು ಸನ್ಯಂಗವೆರಸಿಕಂಡು ಆ ತಸ್ಕರನ ತಪಸ್ಸಿಗೆ ತಕ್ಕುದನ್ನು ಮಾಡಿ" ಎನ್ನುವಲ್ಲಿಯೂ "ಮುನ್ನಪೋದ ಪಲವು ವಸ್ತುಗಳಂ" ಎಂದು ಹೇಳಿದ

2 ಕನ್ನಡ ಗ್ರಂಥ ಸಂಪಾದನೆ. ಪು. 171-172 ಮೊದಲ ಮುದ್ರಣ, 1964.

ಮೇಲೆ ಪುನಃ ಕದ್ದಮಾಲಿನೊಂದಿಗೆ ಎಂದು ಹೇಳುವುದೂ ಉಚಿತವಲ್ಲ. ಹೀಗಾಗಿ ಇಲ್ಲಿಯೂ 'ಸನ್ಯಂಗ' ಎಂಬುದಕ್ಕೆ 'ಕದ್ದಮಾಲು' ಎಂಬರ್ಥ ಹೊಂದಿಕೆಯಾಗುವುದಿಲ್ಲ ಎಂಬುದೂ ಸ್ಪಷ್ಟವಲ್ಲವೆ! ಅಂದ ಮೇಲೆ ಅದಕ್ಕೆ ಬೇರೊಂದು ಅರ್ಥ ಇರಬೇಕು. ಹಾಗಾದರೆ ಆ ಅರ್ಥ ಏನು ಎಂಬುದನ್ನು ತಿಳಿಯುವುದಕ್ಕಾಗಿ ಆ ಶಬ್ದ ಇನ್ನೆಲ್ಲಿಯಾದರೂ ಪ್ರಯೋಗವಾಗಿದೆಯೇ ಎಂದು ನೋಡೋಣ.

ಭಾಸ ಕವಿಯ ನಾಟಕಗಳಲ್ಲಿ 'ನ್ಯಂಗ' ಎಂಬ ಶಬ್ದವೊಂದರ ಪ್ರಯೋಗವೊಂದರ ಪ್ರಯೋಗವಾಗಿರುವುದು ಸಿಗುತ್ತದೆ– "ಏತತ್ ತನ್ನ್ಯಂಗಮಸ್ಮಾಕಂ"[2]— ಇದು ನಮಗೆ ಕಳಂಕಪ್ರಾಯ (ಅಪಮಾನಕರ) ವಾದುದು ಎಂಬರ್ಥದಲ್ಲಿ ಯೌಗಂಧರಾಯಣನು ಹೇಳುವಲ್ಲಿ 'ತನ್ನ್ಯಂಗ' ಎಂಬ ಶಬ್ದ ಪ್ರಯೋಗವಾಗಿದೆ. ಹಾಗೆಯೇ "ಇಕ್ಷ್ವಾಕು ಕುಲ ನ್ಯಂಗಭೂತಃ – ಇಕ್ಷ್ವಾಕು ಕುಲಕ್ಕೆ ಕಳಂಕಪ್ರಾಯನಾದ ಎಂದು ಭರತನು ಹೇಳುವಲ್ಲಿ 'ನ್ಯಂಗ' ಎಂಬ ಶಬ್ದ ಕಳಂಕ ಎಂಬರ್ಥದಲ್ಲಿ ಪ್ರಯೋಗವಾಗಿರುವುದು ಸಿಗುತ್ತದೆ. ಈ ಶಬ್ದದ ನಿಷ್ಪತ್ತಿ ಹೀಗೆ-ಅಂಗೇ ನಿಕೃಷ್ಟಂ=ನ್ಯಂಗಮ್, ಅಂಗಗಳಲ್ಲಿರುವ ನ್ಯೂನತೆ ಅರ್ಥಾತ್ ಕಳಂಕ ಎಂದು. ಈ ಕಳಂಕ ಎಂಬರ್ಥದ 'ನ್ಯಂಗ' ಶಬ್ದವೇ ಸಹಿತಾರ್ಥದೊಂದಿಗೆ ಕೂಡಿದರೆ 'ಸನ್ಯಂಗ' ಎಂಬುದಾಗಿ 'ಕಳಂಕದೊಂದಿಗೆ' ಎಂದು ಅರ್ಥವಾಗುತ್ತದೆ. ಹೀಗಾಗಿ 'ಸನ್ಯಂಗವೆರಸಿ' ಎಂದರೆ 'ಕಳಂಕದೊಂದಿಗೆ ಕೂಡಿ ಎಂದರ್ಥ. ಈ ಅರ್ಥ ಕನ್ನಡ ಕವಿಗಳು ಪ್ರಯೋಗಿಸಿದ ಸಂದರ್ಭಗಳಲ್ಲಿ ಹೊಂದಿಕೊಳ್ಳುತ್ತಿದೆಯೇ ಎಂಬುದು ಮುಂದೆ ವಿವೇಚಿಸಬೇಕಾದ ವಿಷಯ.

ಸನ್ಯಂಗ ಎಂಬ ಶಬ್ದ ಪ್ರಯೋಗವಿರುವ ರಾಘವಾಂಕನ ಪದ್ಯದ ಸಾರಾಂಶ ಇಷ್ಟು–ರಾಜಕುಮಾರನ ದೇಹವನ್ನು ತನ್ನ ಮಗನ ದೇಹವೆಂದೇ ಚಂದ್ರಮತಿ ಅಪ್ಪಿಕೊಂಡಿದ್ದಾಗ ಅಲ್ಲಿಗೆ ಬಂದ ತಳವಾರರು ಇವಳೇ ರಾಜಕುಮಾರನನ್ನು ಕೊಂದವಳೆಂದು ತಿಳಿದು ಅವಳನ್ನು ಹಿಡಿದಿದ್ದಾರೆ. ಆಗ ಅವಳು–ನನ್ನನ್ನು ಇವರು ನುಡಿಸಿದರೆ ಏನು ಉತ್ತರ ಕೊಡಲಿ ಎಂದು ತನ್ನ ಮನಸ್ಸಿನಲ್ಲಿ ತಾನೇ ಯೋಚಿಸಿ ಹೀಗೆ ನಿಶ್ಚಯಿಸಿದಳು. ಈ ಹಿಂದೆ ಯಾವ ಯಾವ ದುಃಖಗಳಿವೆಯೋ ಅವುಗಳನ್ನೆಲ್ಲ ಚೆನ್ನಾಗಿ ಕಂಡೆನು, ಉಂಡೆನು, ತಣಿದೆನು. ಹಾಗಿರುವಾಗ ಇನ್ನೇನು ಕಾಣಲು ಉಳಿದಿದೆ? ಆದುದರಿಂದ ಈಗ ಅರಸನು ಕೇಳಿದರೆ ನಿನ್ನ ಮಗನನ್ನು ಕೊಂದ ಪಾಪಿ ನಾನೇ ಎಂದು ಹೇಳಿ ಸನ್ಯಂಗದಿಂ ಸಾಯುವೆನು ಎಂದುಕೊಂಡು ಓಲಗಕ್ಕೆ ಬರುತ್ತಾಳೆ ಎಂದೆನ್ನುವ ಈ ಭಾಗದಲ್ಲಿ 'ಸನ್ಯಂಗ' ಎಂಬುದಕ್ಕೆ 'ಕಳಂಕಸಹಿತ' ಎಂದರ್ಥ ಮಾಡಿಕೊಂಡರೆ ಸಂದರ್ಭೋಚಿತವಾಗಿಯೇ ಇರುತ್ತದೆ. ಏಕೆಂದರೆ ತನ್ನ ಸರ್ವ ಸುಖಗಳನ್ನೂ ಪತಿಯ ಸತ್ಯ ರಕ್ಷಣೆಗಾಗಿ ತ್ಯಾಗ ಮಾಡಿ, ಪತಿಗೆ ಬೆಂಬಲಿಗಳಾಗಿ ನಿಂತ ಆ ಚಂದ್ರಮತಿ

3 ಪ್ರತಿಜ್ಞಾ ಯೌಗಂಧರಾಯಣಂ. 1-10. ಪೂನಾ ಓರಿಯಂಟಲ್ ಬುಕ್ ಏಜನ್ಸಿ 1939.

4 ಪ್ರತಿಮಾ ನಾಟಕಂ, ಅಂಕ 4, ಪುಟ 103, ಚೌಕಮ್ಬಾ ಸಂಸ್ಕೃತ ಸೀರೀಜ್, ವಾರಣಾಸಿ.

ತನ್ನ ಪತಿಯು ಸ್ಮಶಾನ ಕಾಯುವವನಾಗಿರುವುದನ್ನು ನೋಡಬೇಕಾಗಿ ಬಂದಿತು. ಅದೂ ಮಗನ ಮರಣವಾಗಲು, ಆ ಪುತ್ರನ ಹೆಣವನ್ನು ಸುಡಲು ಸ್ಮಶಾನಕ್ಕೆ ಹೋದಾಗ. ಇಂತಹ ದಾರುಣ ಸ್ಥಿತಿಯಲ್ಲಿ ಅವಳಿಗೆ ಮತಿವಿಭ್ರಮವಾಗುವುದಂತೂ ಸಹಜ. ಹೀಗಾಗಿ ಸುಂಕದ ಹಣವನ್ನು ತರಲು ಹೊರಟ ಅವಳಿಗೆ ದಾರಿಯಲ್ಲಿ ಶಿಶು ರೋಧನ ಕೇಳಿ ಬರಲು ತಾಯ್ತನದ ಸಹಜ ಹಂಬಲದಿಂದ ಓಡಿ ಹೋಗಿ ಸತ್ತು ಬಿದ್ದ ರಾಜಕುಮಾರನ ದೇಹವನ್ನು ತನ್ನ ಮಗನ ದೇಹವೆಂದೇ ಅಪ್ಪಿ ಹಿಡಿದಳು. ಆಗಲೇ ಅಲ್ಲಿಗೆ ಬಂದ ತಳವಾರರು ಅವಳೇ ಕೊಲೆಪಾತಕಿ ಎಂದು ಅವಳನ್ನು ಹಿಡಿಯುತ್ತಾರೆ. ಅಂತಹ ಸಂದರ್ಭದಲ್ಲಿ ಅವಳು "ಅನುಭವಿಸಬಾರದುದನ್ನೆಲ್ಲ ಅನುಭವಿಸುವಂತಾದ ಮೇಲೆ ಇನ್ನು ಈ ಒಂದು 'ಕೊಲೆಪಾತಕಿ' ಎಂಬ **ಕಳಂಕದ** ನ್ಯೂನತೆಯಾದರೂ ಏಕುಳಿಯಬೇಕು ? ಅದೂ ಆಗಿ ಹೋಗಲಿ ಎಂದುಕೊಂಡು ರಾಜನು ವಿಚಾರಿಸಿದರೆ "ನಿನ್ನ ಮಗನನ್ನು ಕೊಂದ ಪಾಪಿ ನಾನೇ" ಎಂದುತ್ತರಿಸಿ ಈ ಕಳಂಕದೊಂದಿಗೆ ಸಾಯುವೆನು ಎಂದು ನಿಶ್ಚಯಿಸಿಕೊಂಡಳು ಎಂದರೆ ಅರ್ಥವೂ ಭಾವವೂ ಸ್ಪಷ್ಟವಾಗುತ್ತದೆ. ರಾಜಕುಮಾರನನ್ನು ಕೊಲೆ ಮಾಡದೆ, ಕೊಲೆ ಮಾಡಿದವಳು ಎಂದುಕೊಂಡು ಸಾಯುವುದು ನಿಜವಾಗಿಯೂ ಕಳಂಕದೊಂದಿಗೆ ಸಾಯುವುದಲ್ಲದೆ ಮತ್ತೇನು ! ಹೀಗಾಗಿ ಪ್ರಕೃತ ಸಂದರ್ಭದಲ್ಲಿ 'ಸನ್ಯಂಗದಿಂ' ಎಂಬ ಶಬ್ದವನ್ನು ರಾಘವಾಂಕ 'ಕಳಂಕಸಹಿತ' ಎಂಬರ್ಥದಲ್ಲಿಯೇ ಪ್ರಯೋಗಿಸಿದ್ದಾನೆ. ಹರಿಶ್ಚಂದ್ರ ಕಾವ್ಯದ ಲಿಪಿಕಾರ 'ಸನ್ಯಂಗದಿಂ' ಎಂಬ ಕ್ಲಿಷ್ಟಪದವನ್ನು 'ಅನ್ಯಾಯದಿಂ' ಎಂದು ಹಗುರಾಗಿಸಿದ್ದಾನೆಂಬುದಂತೂ ಸ್ಪಷ್ಟ.

ಇನ್ನು ಪಂಚತಂತ್ರದಲ್ಲಿ ಈ ಶಬ್ದವನ್ನು ಹೇಗೆ ಅರ್ಥೈಸಬಹುದೆಂದು ನೋಡೋಣ. ರಾಜನು ಕಪಟ ತಪಸ್ವಿಯ ಗುಹೆಯನ್ನು ಶೋಧಿಸಿದಾಗ ಅಲ್ಲಿ ಅವನು ಕಂಡುದೇನು ? "ಮುನ್ನ ತನ್ನ ಪೊಜಲೊಳೆ ಪೋದ ಪಲವು ವಸ್ತುಗಳಂ"– ಈ ಹಿಂದೆ ತನ್ನ ಪಟ್ಟಣದಿಂದ ಕದ್ದು ಹೋದ ಹಲವು ವಸ್ತುಗಳನ್ನು. ಅಷ್ಟೇ ಅಲ್ಲ, ಅವುಗಳನ್ನು ಸನ್ಯಂಗವೆರಸಿ ಕಂಡನು–ನಿಕೃಷ್ಟವಾದ ಅಂಗಗಳೊಂದಿಗೆ ಬೆರಸಿ ಕಂಡನು. ಅಂದರೆ ಕಳ್ಳತನಕ್ಕಾಗಿ ಉಪಯೋಗಿಸಬಹುದಾದ ಸಾಧನಗಳೊಂದಿಗೆ ಕಂಡನು ಎಂದು ಅರ್ಥೈಸಿಕೊಂಡರೆ ಶಬ್ದದ ಅರ್ಥ ಸ್ಪಷ್ಟವಾಗುತ್ತದೆ.

'ಅಂಗ' ಎಂಬ ಶಬ್ದಕ್ಕೆ ಪ್ರತೀಕ (=ನೀಚತ್ವ) ಸಾಧನೋಪಾಯ ಎಂಬರ್ಥಗ ಳಿರುವುದನ್ನು ಗಮನಿಸಬೇಕು—"ಅಂಗಂಗಾತ್ರೇ ಪ್ರತೀಕೋಪಾಯೋಃ[5] ಇತಿ ಮೇದಿನೀ ಎಂದು ಕೋಶದಲ್ಲಿ ಹೇಳಿರುವುದುಂಟು. ಹೀಗಾಗಿ ನಿಃ + ಅಂಗ = ನಿಕೃಷ್ಟವಾದ ಅಂಗ (=ಸಾಧನ) ಎಂಬ ಅರ್ಥವನ್ನು ಪ್ರಕೃತ ಸಂದರ್ಭದಲ್ಲಿ ಮಾಡಿ ಕೊಳ್ಳಬೇಕು. ಅಂಗಂ ಎಂಬ ಶಬ್ದಕ್ಕೆ ನೀಚತ್ವ ಎಂಬ ಅರ್ಥವೂ ಇದೆ. ಈ ಅರ್ಥದಲ್ಲಿ

---

5 ತ್ರಿಕಾಂಡ ಶೇಷ ವ್ಯಾಖ್ಯಾನ, ಪುಟ 321.

ನಯಸೇನ ಪ್ರಯೋಗಿಸಿದ್ದಾನೆ– ವಿಮಳನೆಂಬ ಶಿಶುವನ್ನು ಕೊಂದು ಆಭರಣಗಳನ್ನು ಕದ್ದ ನೆರೆಮನೆಯಾಕೆಯನ್ನು ಬಂದಿಸುವ ಸಂದರ್ಭದಲ್ಲಿ "ಅಂತು ಕಳ್ಳಿಯಂ ಪಿಡಿದಂಗಂ ಬೆರಸು ತಂದು ಪ್ರಜೆಗೊಪ್ಪಿಸುವುದುಂ"[6] ಎಂದು ಹೇಳುವಲ್ಲಿ 'ಅಂಗಂಬೆರಸು' ಎಂದು ಪ್ರಯೋಗಿಸಿರುವುದು ಸಿಗತ್ತದೆ.

ಈ ಸಂದರ್ಭದಲ್ಲಿಯೇ ಇನ್ನೊಂದು ಅಂಶವನ್ನು ವಿವೇಚಿಸಬಹುದು. ಈ 'ಸನ್ಯಂಗ' ಎಂಬ ಶಬ್ದ ಹರಿಶ್ಚಂದ್ರ ಕಾವ್ಯದಲ್ಲಿ ಎರಡು ಬಾರಿ ಪ್ರಯೋಗವಾಗಿದೆ. ಅದು ಪ್ರಯೋಗವಾದ ಒಂದು ಪದ್ಯವನ್ನು ಈಗಾಗಲೇ ವಿವೇಚಿಸಿದ್ದೇವೆ. ಮತ್ತೊಂದು ಪದ್ಯ ಹೀಗಿದೆ—

ಎಲೆಲೆ ರಕ್ಕಸಿಯಾಗದಿರಳಿವಳು ನಾವಿಲ್ಲಿ
ಕೊಲಬೇಡ ಸನ್ಯಂಗವೆರಸಿ ಕೊಂಡೊಯ್ದು ಭೂ
ತಲಪತಿಗೆ ಕೊಡುವೆವೆಂದಸುವಳಿದ ಹಸುಳೆಯಂ ಹೋಜಿಸಲಾಗೊಸರ್ವರಕುತ |
ತಲೆಯಿಂದ ಸುರಿದುಟ್ಟ ಸೀರೆ ತೊಪ್ಪನೆ ತೋಯೆ
ಲಲನೆಯಂ ಕಿತ್ತಲಗುಗಳ ನಡುವೆ ಹೆಡಗೈಯ
ಬಲಿದ ನೇಣಂ ಪಿಡಿದು ಬಡಿ ಬಡಿದು ನಡಸಿ ತಂದರು ರಾಜ ಬೀದಿಯೊಳಗೆ ||[7]

ಇಲ್ಲಿ 'ಸನ್ಯಂ' ಎಂಬುದಕ್ಕೆ 'ವೀಯಂ' ಎಂಬ 'ರಾ' ಪ್ರತಿಯ ಪಾಠವನ್ನು ಸ್ವೀಕರಿಸಿದರೆ "...ಕೊಲಬೇಡ ವೀಯಂಗವೆರಸಿ" ಎಂದಾಗುತ್ತದೆ ಮತ್ತು ಇದೇ ಸರಿಯಾದ ಪಾಠವಾಗಿದೆ. ಇಲ್ಲಿ ಸನ್ಯಂಗವೆರಸಿ ಎಂದು ಹೇಳಿದರೆ ಅಷ್ಟು ಸಮಂಜಸ ವಾಗಿ ಕಾಣುವುದಿಲ್ಲ. ಅಲ್ಲದೆ ಹರಿಶ್ಚಂದ್ರ ಕಾವ್ಯ ಸಂಗ್ರಹದಲ್ಲಿ ಅದರ ಸಂಪಾದಕರು ಉಪಯೋಗಿಸಿದ ಹಸ್ತ ಪ್ರತಿಗಳಲ್ಲಿ 'ಕ' 'ಖ' ಪ್ರತಿಗಳ ಪಾಠ ಪ್ರಾಚೀನವೆಂದು ಗುರುತಿಸಿ 'ವೀಯಂಗವೆರಸಿ'[8] ಎಂಬುದನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಹರಿಶ್ಚಂದ್ರ ಕಾವ್ಯದ ಸಂಪಾದಕರು 'ವೀಯಂ' ಎಂಬುದನ್ನು ಪಾಠಾಂತರದಲ್ಲಿ ತೋರಿಸಿ 'ರಾ' (ರಾಮಾನುಜ ಅಯ್ಯಂಗಾರರ ಮುದ್ರಿತ ಪ್ರತಿ) ಪ್ರತಿಯ ಪಾಠ ಎಂದಿದ್ದಾರಷ್ಟೆ. ಇದರಿಂದ ಉಳಿದ ಪ್ರತಿಗಳಲ್ಲಿ 'ಸನ್ಯಂಗವೆಂದಿದೆ ಎಂಬ ಅಭಿಪ್ರಾಯ ಮೂಡುತ್ತದೆ. ಆದರೆ ಹರಿಶ್ಚಂದ್ರ ಕಾವ್ಯ ಸಂಗ್ರಹದ ಸಂಪಾದಕರು ಪ್ರಕೃತ ಸಂದರ್ಭದಲ್ಲಿ ಅದಕ್ಕೆ ಯಾವ ಪಾಠಾಂತರವೂ ಇರುವುದನ್ನು ಗುರುತಿಸಲಿಲ್ಲ. ಇದರಿಂದ ಅವರು ಸ್ವೀಕರಿಸಿದ 'ವೀಯಂಗ'ವೆಂಬುದು ಎಲ್ಲ ಪ್ರತಿಗಳಲ್ಲಿಯೂ ಇದ್ದ ಪಾಠ ಎಂಬುದು ಸ್ಪಷ್ಟವಾಗುತ್ತದೆ. ಇನ್ನು ಅರ್ಥದ ದೃಷ್ಟಿಯಲ್ಲಿಯೂ ಸನ್ಯಂಗ

6 ನಯಸೇನ-ಧರ್ಮಾಮೃತಂ 12–122.

7 ಹರಿಶ್ಚಂದ್ರಕಾವ್ಯ, 13-3. ಸಂ। ಎನ್. ಬಸವಾರಾಧ್ಯ, ಎಂ.ಎ. ಮತ್ತು ಪಂಡಿತ ಎಸ್. ಬಸಪ್ಪ. 2ನೆ ಮುದ್ರಣ 1969.

8 ಹರಿಶ್ಚಂದ್ರ ಕಾವ್ಯ ಸಂಗ್ರಹ 8-49. ಸಂ। ಟಿ. ಎಸ್. ವೆಂಕಣ್ಣಯ್ಯ, ಎಂ. ಎ. ; ಎ.ಆರ್. ಕೃಷ್ಣಶಾಸ್ತ್ರೀ ಎಂ.ಎ., ಆರನೆಯ ಮುದ್ರಣ 1959 ಮೈಸೂರು ವಿಶ್ವವಿದ್ಯಾಲಯ.

ವೆರಸಿ (=ಕಳಂಕದೊಂದಿಗೆ ಕೂಡಿ) ಎಂಬುದಕ್ಕಿಂತ 'ಈಯುಂಗ' (=ರಾಜಕುಮಾರನ ಮೃತದೇಹ) ವೆರಸಿ ಕೊಂಡೊಯ್ದು ಭೂತಲಪತಿಗೆ ಕೊಡುವೆವು ಎಂಬುದು ಸಂದರ್ಭೋಚಿತವಾಗುತ್ತದೆ. ಏಕೆಂದರೆ ಮುಂದೆ "ಅಸುವಳಿದ ಹಸುಳೆಯಂ ಹೊಱಿಸಿ" ಎಂದಿರುವುದು ಅರ್ಥಪುಷ್ಟಿಗೆ ಸಹಾಯಕವಾಗಿದೆ.

ಎಂ. ಮಾಧವ ಪೈ

ಸುಗಂಧಪಾರಿಜಾತ ಒಂದು ಟಿಪ್ಪಣಿ

ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರ 'ಕರ್ಣಾಟಕ ಕವಿಚರಿತೆ' (ತೃತೀಯ ಸಂಪುಟ) [1929], ಪು. 308ರಲ್ಲಿ 'ಸುಗಂಧಪಾರಿಜಾತ' ಎಂಬ 64 ಕಂದಗಳ ಕೃತಿಯೊಂದರ ಉಲ್ಲೇಖವಿದ್ದು ಅದರ ಕಾಲ ಸು. 1700 ಎಂದಿದೆ. ಕೃತಿಯಿಂದ ಕಂದವೊಂದನ್ನು ಉದಾಹರಿಸಲಾಗಿದ್ದು ಕೃತಿಕಾರನ ಬಗೆಗೆ ಏನನ್ನೂ ತಿಳಿಸಿಲ್ಲ.

ಉದಾಹೃತ ಕಂದ ಹೀಗಿದೆ–

ಪರಿಪಕ್ವಮಾತುಲುಂಗೋ
ತ್ಕರಮಂ ಪೊಱಗಾಗಿ ಮಾಡಿಪುಟದಿಂಸುಡೆ ಒಂ
ಧುರಗಂಧಂ ಮೆರಡೆ ಕ
ಪ್ಪುರಮಾಸುವಡೆದು ಲೇಸೆಸಿನಿಸಿ ತಾನಿರ್ಕುಂ (?)

'ಕವಿಚರಿತೆ'ಯಲ್ಲಿನ ಉಲ್ಲೇಖಿತ ಕಂದ ಚಾವುಂಡರಾಯ (ಕ್ರಿ.ಶ. 1025) ವಿರಚಿತ 'ಲೋಕೋಪಕಾರಂ'ದಲ್ಲಿನ 'ಗಂಧ ಯುಕ್ತಿ ಕ್ರಮಂ' ಎಂಬ ಸಪ್ತಮಾಧಿಕಾರದ ಕ್ರಮಾಂಕ 53ನೆಯ ಪದ್ಯವಾಗಿದೆ.[1] ಪ್ರಕಟಿತ 'ಲೋಕೋಪಕಾರಂ'ನಲ್ಲಿನ ಕಂದದ ಪರಿಷ್ಕೃತ ರೂಪ ಹೀಗಿದೆ–

ಪರಿಪಕ್ವ ಮಾತುಲುಂಗೋ
ತ್ಕರಮಂ ಪೊಱಗಾಗೆಮಾಡಿ ಪುಟದಿಂಸುಡೆಬಂ
ದುರ ಗಂಧಂ ಮೆಲ್ವೊಡೆ ಕ
ಪ್ಪುರ ಪೂಸು*ವೊಡದುವೆ ಸಾದೆನಿಸಿರ್ಕುಂ*
[*ವುದದು ಸಾಧನಿಸಿ ತಾನಿರ್ಕ್ಕುಂ*]

'ಲೋಕೋಪಕಾರಂ'ನ ಸಪ್ತಮಾಧಿಕಾರದಲ್ಲಿ 71 ಕಂದ ವೃತ್ತಗಳಿವೆ. ಇವುಗಳಲ್ಲಿ 6 ವೃತ್ತಗಳಾಗಿದ್ದು ಉಳಿದ 65 ಕಂದಗಳಾಗಿವೆ. ಕವಿಚರಿತೆಕಾರರು ಕೊಟ್ಟಿರುವ

1 ಲೋಕೋಪಕಾರಂ (ಟೀಕಾಸಹಿತ) ಸಂ. ಎಚ್. ಶೇಷಯ್ಯಂಗಾರ್, Madras Government Oriental Series, XXV (1950.)

ಕಂದದ ಸಂಖ್ಯೆಗೂ ಪ್ರಕಟಿತ ಕೃತಿಯಲ್ಲಿರುವ ಕಂದಗಳ ಸಂಖ್ಯೆಗೂ ಒಂದು ಕಂದ ಸಂಖ್ಯೆಯ ವ್ಯತ್ಯಾಸವಿದೆ. ಅಲ್ಲದೆ ಎರಡರ ವಸ್ತುವೂ ಒಂದೇ. ಹೀಗಾಗಿ ವಸ್ತು, ಪದ್ಯಗಳ ಸಂಖ್ಯಾಪ್ರಮಾಣ ಹಾಗೂ ಉಲ್ಲೇಖಿತ ಕಂದದ ಆಕರ ನಿರ್ದೇಶನದ ಆಂತರಿಕ ಸಾಕ್ಷಿಗಳನ್ನು ಪರಿಶೀಲಿಸಿದಾಗ 'ಸುಗಂಧಪಾರಿಜಾತ'– ಕವಿಚರಿತೆಕಾರರು ಭಾವಿಸಿದ ರೀತಿಯಲ್ಲಿ – ಸ್ವತಂತ್ರ ಕೃತಿಯಾಗಿರದೆ, ಚಾವುಂಡರಾಯನ 'ಲೋಕೋಪಕಾರ'ದ ಸಪ್ತಮಾಧಿಕಾರವೆಂಬ ಅಂಶ ಖಚಿತವಾಗುವುದು.

ಚಾವುಂಡರಾಯನ 'ಲೋಕೋಪಕಾರ'ದ ಎಂಟನೆಯ ಅಧಿಕಾರವಾದ 'ಸೂಪಶಾಸ್ತ್ರ'ವನ್ನು ಪ್ರತ್ಯೇಕವಾಗಿ[2] ಲೇಖಕರು ಬರೆದುಕೊಂಡಂತೆ 'ಗಂಧಯುಕ್ತಿಕ್ರಮ'ದ ವಿವರವನ್ನುಳ್ಳ 'ಸುಗಂಧಪಾರಿಜಾತ' ವನ್ನು ಪ್ರತ್ಯೇಕವಾಗಿ ಬರೆದುಕೊಂಡಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ.

ಹೀಗಾಗಿ 'ಸುಗಂಧಪಾರಿಜಾತ' ಎಂಬ ಪ್ರತ್ಯೇಕ ಉಲ್ಲೇಖವನ್ನು 'ಕವಿಚರಿತೆ'ಯ ಸಂಪುಟಗಳಿಂದ ಕೈಬಿಡಬಹುದು.

ಎಸ್. ಶಿವಣ್ಣ

---

2 ವಿವರಗಳಿಗೆ ನೋಡಿ 'ಲೋಕೋಪಕಾರ' : ಎನ್. ಅನಂತರಂಗಾಚಾರ್, ಪ್ರಬುದ್ಧ ಕರ್ನಾಟಕ, 18–2 (ಪು. 59-76)

ಸಂಪಾದಕೀಯ

ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರನ್ನು ಪಿ. ಇ. ಎನ್. ಸಂಸ್ಥೆಯ ಭಾರತೀಯ ಶಾಖೆಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ಕನ್ನಡಿಗರೆಲ್ಲರಿಗೆ ಸಂತೋಷದ ವಿಚಾರ. ಈ ಸಂದರ್ಭದಲ್ಲಿ 'ಸಾಧನೆ'ಯು ತನ್ನ ಹಾರ್ದಿಕವಾದ ಅಭಿನಂದನೆಗಳನ್ನು ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಗೆ ಸಲ್ಲಿಸುತ್ತದೆ. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಕನ್ನಡ ಸಾಹಿತ್ಯದಲ್ಲಿ ಸಣ್ಣ ಕಥೆ, ಕವನ, ಕಥನ ಕವನ, ವಿಮರ್ಶೆ, ನಾಟಕ, ಕಾದಂಬರಿ ಮೊದಲಾದುವನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅವರಿಂದ ಕನ್ನಡಕ್ಕೂ ಮತ್ತು ಇತರ ಭಾರತೀಯ ಭಾಷೆಗಳಿಗೂ ಇನ್ನೂ ಹೆಚ್ಚಿನ ಸೇವೆ ಸಲ್ಲಲೆಂದು ಈ ಸಂದರ್ಭದಲ್ಲಿ ಹಾರೈಸುತ್ತೇವೆ.

ಈ ಸಂಚಿಕೆಯ ಲೇಖಕರು

ಜಯಸುದರ್ಶನ	769, 5ನೇ ವಿಭಾಗ ರಾಜಾಜಿನಗರ ಬೆಂಗಳೂರು 560010
ಬರಗೂರು ರಾಮಚಂದ್ರಪ್ಪ	ಅಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಡಾ. ಆರ್. ಎನ್. ಗುರವ	ಸಂಶೋಧನ ಸಹಾಯಕರು ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 560003
ಎ. ಕೃಷ್ಣಮೂರ್ತಿ	ಕನ್ನಡ ಅಧ್ಯಾಪಕರು ಸರ್ಕಾರಿ ಕಾಲೇಜು ಚಿತ್ರದುರ್ಗ
ಡಾ. ಎಂ. ಬಸವರಾಜೇ ಅರಸು	131, 7ನೇ ಮುಖ್ಯರಸ್ತೆ ನಾಲ್ಕನೆ ವಿಭಾಗ, ಜಯನಗರ ಬೆಂಗಳೂರು 560011
ಲಿಂಗದೇವರು ಹಳೆಮನೆ	ಭಾರತೀಯ ಭಾಷಾ ಸಂಸ್ಥಾನ ಮಾನಸ ಗಂಗೋತ್ರಿ ಮೈಸೂರು 570006
ಭಾರತಾದ್ರಿ	ನಂ. 53, ಹದಿನೈದನೇ ಕ್ರಾಸ್ ವಿ. ವಿ. ಮೊಹಲ್ಲಾ ಮೈಸೂರು

ದಾ. ಕೃ. ಪೋತುವಲ್	ಅಧ್ಯಾಪಕರು ವಾಣಿಜ್ಯ ವಿಭಾಗ ಮಂಗಳ ಗಂಗೋತ್ರಿ ಮಂಗಳೂರು 574152
ಸಿ. ಆರ್. ಅಣಜಿ	ಅಧ್ಯಾಪಕರು ಅರುಣೋದಯ ಪ್ರೌಢಶಾಲಾ, ದುಮ್ಮಿ ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ
ಬಿ. ಕೆ. ಕರಿಗೌಡ	ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಎಸ್. ಸುಂದರರಾಜನ್	ಸಸ್ಯಶಾಸ್ತ್ರ ವಿಭಾಗ ಸೆಂಟ್ ಜೋಸೆಫ್ಸ್ ಕಾಲೇಜು ಬೆಂಗಳೂರು 560001
ಎಸ್. ಉಮಾಪತಿ	ಎ. ಆರ್. ಜಿ. ಕಾಲೇಜು ದಾವಣಗೆರೆ
ಟಿ. ಶ್ರೀವೆಂಕಟರಮಣ	ಉಪನ್ಯಾಸಕರು ಸಂಖ್ಯಾಕಲನ ವಿಜ್ಞಾನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560009
ಹಂಪ. ನಾಗರಾಜಯ್ಯ	1079, 5ನೇ ವಿಭಾಗ ರಾಜಾಜಿನಗರ ಬೆಂಗಳೂರು 560010
ಪ್ರೊ. ಸಂಗಮನಾಥ ಜಿ. ಹೆಂಡಿ	ನ್ಯೂ ಆರ್ಟ್ಸ್ ಕಾಲೇಜ್ ವಿಜಾಪುರ

ಡಾ. ರಂ. ಶ್ರೀ. ಮುಗಳಿ	ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ ಬೆಂಗಳೂರು 560056
ಡಾ. ಎಂ. ಚಿದಾನಂದಮೂರ್ತಿ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ ಬೆಂಗಳೂರು 560056
ಎಂ. ಮಾಧವ ಪೈ	ಆರನೇ ಅಡ್ಡ ರಸ್ತೆ ರವೀಂದ್ರ ನಗರ ಶಿವಮೊಗ್ಗ
ಎಸ್. ಶಿವಣ್ಣ	ಸಂಪಾದಕರು ಹಸ್ತಪ್ರತಿ ವಿಭಾಗ ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ ಬೆಂಗಳೂರು 560056
ಆರ್. ರಾಚಪ್ಪ	ಕನ್ನಡ ವಿಭಾಗದ ಮುಖ್ಯಸ್ಥರು ಶ್ರೀ ರೇಣುಕಾಚಾರ್ಯ ವಿಜ್ಞಾನ ಕಾಲೇಜು ಬೆಂಗಳೂರು 560009
ಶ್ರೀನಾಥ್ ರಾಯಸಂ	104/II, ಕಾಳಮ್ಮ ಬೀದಿ ಬಳ್ಳಾರಿ
ಎನ್. ಆರ್. ಶಾಸ್ತ್ರಿ	ರೀಡರ್ ಇಂಗ್ಲೀಷ್ ವಿಭಾಗ ಉಸ್ಮಾನಿಯ ವಿಶ್ವವಿದ್ಯಾಲಯ ಹೈದರಾಬಾದ್ 7
ಪ್ರೊ. ಎಚ್. ಎಸ್. ಭೀಮನಗೌಡ	ಕಲಾ ಮತ್ತು ವಿಜ್ಞಾನ ಕಾಲೇಜು ಸಂಕೇಶ್ವರ ಬೆಳಗಾಂ ಜಿಲ್ಲೆ

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ

ಸಂಪುಟ 1	ಕನ್ನಡ ಸಾಹಿತ್ಯ ಸಮೀಕ್ಷೆ	...	ಜಿ. ಎಸ್. ಶಿವರುದ್ರಪ್ಪ
ಸಂಪುಟ 2	ಶಾಸನ ಮತ್ತು ಗದ್ಯ	...	ಹು. ಕಾ. ಜಯದೇವ್
ಸಂಪುಟ 3	ಶಾಸ್ತ್ರ ಸಾಹಿತ್ಯ	...	ಎಂ. ವಿ. ಸೀತಾರಾಮಯ್ಯ
ಸಂಪುಟ 4	ಚಂಪೂ ಕವಿಗಳು	...	ಓ. ವಿ. ನಾರಾಯಣ
ಸಂಪುಟ 5	ವಚನ ಸಾಹಿತ್ಯ	...	ಎಂ. ಚಿದಾನಂದ ಮೂರ್ತಿ
ಸಂಪುಟ 6	ಷಟ್ಪದಿ ಸಾಹಿತ್ಯ	...	ಕೆ. ಮರುಳಸಿದ್ದಪ್ಪ
ಸಂಪುಟ 7	ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ	...	ಕಾಳೇಗೌಡ ನಾಗವಾರ
ಸಂಪುಟ 8	ಕೀರ್ತನಕಾರರು	...	ಎಚ್. ಎಸ್. ವೆಂಕಟೇಶ ಮೂರ್ತಿ
ಸಂಪುಟ 9	ಸಾಂಗತ್ಯ ಕವಿಗಳು	...	ಹಂಪ. ನಾಗರಾಜಯ್ಯ
ಸಂಪುಟ 10	ಹೊಸಗನ್ನಡ ಸಾಹಿತ್ಯ	...	ಎಲ್. ಎಸ್. ಶೇಷಗಿರಿ ರಾವ್

ಪ್ರತಿ ಸಂಪುಟದ ಬೆಲೆ : ರೂ. 4-00

ವಿವರಗಳಿಗೆ ವ್ಯವಹರಿಸಿ :

ಉಪ-ನಿರ್ದೇಶಕ
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560056

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು